








ಚಿತ್ರಕಲಾ ದರ್ಶನ

ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು

ಚಿತ್ರಕಲಾ ದರ್ಪಣ

ಪ್ರಧಾನ ಸಂಪಾದಕರು

ಪಿ. ಆರ್. ತಿಪ್ಪೇಸ್ವಾಮಿ

ಲೇಖಕರು

ಎ. ಟಿ. ಕಾಳೆ

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು ೫೬೦ ೦೦೨

CHITRAKALA DARPANA - By V. T. Kale, published by K. Mukundan, Registrar, Karnataka Lalithakala Academy, Nrupathunga Road, Bangalore -560 002

First Edition : 1994

Price : Rs. 20-00

ಪ್ರಧಾನ ಸಂಪಾದಕರು

ಶ್ರೀ ಪಿ. ಆರ್. ತಿಪ್ಪೇಸ್ವಾಮಿ

ಪ್ರಕಟಣಾ ಸಮಿತಿ

ಶ್ರೀ ವಿ. ಟಿ. ಕಾಳೆ

ಶ್ರೀಮತಿ ಎಸ್. ಧನಲಕ್ಷ್ಮಿ

ಡಾ॥ ಬಿ. ಕೆ. ಹಿರೇಮಠ

ಶ್ರೀ ರಘುಪತಿಭಟ್

ಶ್ರೀ ವೈ. ಹೆಚ್. ಸುಗೂರ್

Printed at
Lakshmi Mudranalaya
Chamarajpet, Bangalore -18
Phone : 6613123

ಪ್ರಧಾನ ಸಂಪಾದಕರ ನುಡಿ

"ಚಿತ್ರಕಲಾ ದರ್ಪಣ" ಕೃತಿಯನ್ನು ಕಲಾವಿದ ಶ್ರೀ ವಿ. ಟಿ. ಕಾಳೆಯವರು ಬಹಳ ಶ್ರಮದಿಂದ ರಚಿಸಿ ನಮಗೆ ನೀಡಿದ್ದಾರೆ. ಪ್ರಾಚೀನ ಚಿತ್ರಕಲೆಯ ಜೊತೆಗೆ ಆಧುನಿಕ ಚಿತ್ರಕಲೆಯನ್ನು ತುಲನಾತ್ಮಕ ದೃಷ್ಟಿಕೋನದಿಂದ ರಚಿಸಿ ಕಲಾ ಸಂಶೋಧಕರಿಗೆ ಹಾಗೂ ಶ್ರೀ ಸಾಮಾನ್ಯನಿಗೂ ಉಪಯುಕ್ತವಾಗುವಂತೆ ಬಹು ಜಾಗರೂಕತೆಯಿಂದ ವಿವರಗಳನ್ನು ನೀಡಿದ್ದಾರೆ.

ಸಾವಿರಾರು ವರ್ಷಗಳಿಂದ ಮಾನವ ಜನಾಂಗಗಳ ಬೆಳವಣಿಗೆಯೊಂದಿಗೆ ಜೊತೆ ಜೊತೆಯಾಗಿ, ಅವರ ಬದುಕಿನ ಪ್ರಮುಖ ಅಂಗವಾಗಿ ಕಲಾ ಸಂಸ್ಕೃತಿಯಾಗಿ ವಿವಿಧ ಕಲಾ ಪರಂಪರೆಗಳು ನಾನಾ ದೇಶ ವಿದೇಶಗಳಲ್ಲಿ ಹೀಗೆ ಬೆಳೆದು ಬಂದಿತು ಎಂಬುದನ್ನು ವಿವರವಾಗಿ ನಾವು ಕಾಣಬಹುದು.

ಇಲ್ಲಿ ಬರುವ ವಿವರಗಳು ಇಂತಿವೆ- ಕಲೆ ಎಂದರೇನು?- ಇತಿಹಾಸ ಪೂರ್ವದ ಕಲೆ ಆದಿ ಮಾನವನ ಚಿತ್ರಕಲೆಯ ತಂತ್ರ, ನೂತನ ಶಿಲಾಯುಗ ಮತ್ತು ಕಂಚಿನ ಯುಗ, ಭಾರತದಲ್ಲಿ ಆದಿ ಮಾನವ ಚಿತ್ರಕಲೆಯ ಮೇಲೆ ಬೆಳಕು ಚೆಲ್ಲುವ ವಿವರಗಳು ಸಿಗುತ್ತವೆ. ಪ್ರಾಚೀನ ಕಲಾ ಸಂಸ್ಕೃತಿಗಳು ವಿಭಾಗದಲ್ಲಿ- ಸುಮೇರಿಯನ್, ಬ್ಯಾಬಿಲೋನಿಯನ್, ಅಸ್ಸಿರಿಯನ್ ಹಿರೈತ್, ಮಿನೋಯನ್ ಅಥವಾ ಕ್ರೀಟ್, ಹಿಬ್ರೂ(ಯಹೂದಿ) ಚೈನಾ ಹಾಗೂ ಚೈನಾ ದೇಶದ ಕಲಾ ಸಂಸ್ಕೃತಿಯ ಐದು ವಿವಿಧ ಕಾಲಗಳಲ್ಲಿ ವಿಕಾಸಗೊಂಡ ಬಗ್ಗೆ ಗ್ರೀಕ್, ಪರ್ಷಿಯನ್, ಪ್ರಾಚೀನ ಪರ್ಷಿಯ, ಮುಸ್ಲಿಮ್ ಕಾಲ ಮತ್ತು ರೋಮನ್ ಇಲ್ಲಿಯ ಪ್ರಥಮ ಕಾಲ, ದ್ವಿತಿಯ ಕಾಲ, ಮೂರನೆಯ ಕಾಲ, ವರ್ಣಚಿತ್ರಕಲೆ, ಹಾಗೂ ಈಜಿಪ್ಶಿಯನ್ ಸಿಂಧೂ ಹರಪ್ಪ, ಕುವೈಟ್ ಸಂಸ್ಕೃತಿ ಹಾಗೂ ಭಾರತೀಯ ಕಲಾ ಪರಂಪರೆಗಳು ಹೀಗೆ ನಾನಾ ರಾಷ್ಟ್ರಗಳಲ್ಲಿ ಚಿತ್ರಕಲೆ ಬೆಳೆದು ಬಂದ ಬಗೆಯ ವಿವರಗಳು ನಮಗೆ ದೊರಕುತ್ತವೆ.

ಇಲ್ಲಿ ಭಿತ್ತಿಚಿತ್ರಗಳ ಬಗ್ಗೆ ನೀಡುವ ಮುಖ್ಯವಾಗಿ ಭಾರತದ ವಿವಿಧ ಭಾಗಗಳಲ್ಲಿ ಭಿತ್ತಿಚಿತ್ರಗಳ ಮೇಲೆ ಬೆಳಕು ಚೆಲ್ಲುವ ವಿಷಯಗಳನ್ನು

ಕಾಣಬಹುದಾಗಿದೆ. ಮುಖ್ಯವಾಗಿ ಅಜಂತಾ, ಎಲ್ಲೋರ, ಬಾದಾಮಿ, ಸಿತ್ತನ್ನವಾಶಲ್ ಕಾಂಚಿಪುರಂ, ತಿರುಮಲೈಪುರಂ, ಗಾಂಧಾರ ವರ್ಣಚಿತ್ರಕಲೆ, ಗುಪ್ತ ಅರಸರ ಕಾಲದ ವರ್ಣಚಿತ್ರಕಲೆ, ಪಾಲ ಅರಸರ ವರ್ಣಚಿತ್ರ ಕಲಾಶೈಲಿ, ಸೂಕ್ಷ್ಮಾಕಾರ ಇಲ್ಲವೆ ಕಿರುವರ್ಣ ಚಿತ್ರಗಳು, ಮೊಗಲ್ ಕಿರುವರ್ಣ ಚಿತ್ರಗಳು, ರಜಪೂತ ಕಿರುವರ್ಣ ಚಿತ್ರಗಳು, ಕಿಷನ್‌ಗಡ, ಪಹಾಡಿ ಕಿರುಚಿತ್ರಗಳು, ಸುಲ್ತಾನಿ ಕಿರುವರ್ಣ ಚಿತ್ರಗಳು, ಡೆಖನೀ ಕಿರುಚಿತ್ರಗಳು ಇವೆಲ್ಲವೂ ಉತ್ತರ ಭಾರತದಿಂದ ರೂಢಿಗೆ ಬಂದ ಕಿರುವರ್ಣ ಶೈಲಿಗಳು. ಇನ್ನು ದಕ್ಷಿಣ ಭಾರತದ ಚಿತ್ರಕಲೆಯ ಶೈಲಿ ಗಮನಿಸುವುದಾದರೆ- ವಿಜಯನಗರ ಕಾಲದ ಚಿತ್ರಕಲೆ, ಹಂಪೆ ಲೇಪಾಕ್ಷಿಯಲ್ಲೂ ಮೈಸೂರಿನಲ್ಲಿ ಶೈಲಿಯನ್ನು, ತಂಜಾವೂರಿನಲ್ಲಿ ತಂಜಾವೂರು ಶೈಲಿಯನ್ನು ಟಿಪ್ಪುಸುಲ್ತಾನರ ಕಾಲದ ಚಿತ್ರಕಲೆ ಶ್ರೀರಂಗಪಟ್ಟಣದಲ್ಲೂ ಈ ವಿವಿಧ ಕಾಲದ ಹೀಗೆ ಕಲಾಶೈಲಿಗಳನ್ನು ನೋಡಬಹುದಾಗಿದೆ.

ಭಿತ್ತಿಚಿತ್ರ ವಿಭಾಗದಲ್ಲಿ ಅಜಂತ-ಎಲ್ಲೋರ ಪ್ರಮುಖವಾದವು. ಇತ್ತೀಚೆಗೆ ನಾನು ನಮ್ಮ ಅಕಾಡೆಮಿ ರಿಜಿಸ್ಟ್ರಾರ್ ಕೆ. ಮುಕುಂದನ್ ಅವರು ಈ ಎರಡು ಕಲಾಕೇಂದ್ರಗಳನ್ನು ಸಂದರ್ಶಿಸಿ ಬಂದಿದ್ದೆವು. ಎಲ್ಲೋರದಲ್ಲಿಯ ಚಿತ್ರಗಳು ಲೇಖಕರು ತಿಳಿಸುವಂತೆ ಕೇವಲ ಪೌರಾಣಿಕ ದೇವತೆಗಳನ್ನು ಮಾತ್ರ ಗುರುತಿಸುವಷ್ಟು ಮಸುಕಾಗಿ ಕಾಣುತ್ತವೆ. ಅದೇ ಅಜಂತಾದ ಗುಹೆಗಳಲ್ಲಿನ ಚಿತ್ರಗಳು ಕೆಲವು ಸ್ಪಷ್ಟವಾಗಿಯು, ಬಹುಪಾಲು ಅಸ್ಪಷ್ಟವಾಗಿಯೂ ಕಾಣುತ್ತವೆ. ಒಂದು ಸಾವಿರ ವರ್ಷಗಳಷ್ಟು ಹಳೆಯವು. ಒಂದು ಮತ್ತು ಎರಡನೆಯ ಗುಹೆಯ ಚಿತ್ರಗಳು ಕನ್ನಡ ಅರಸ ಎರಡನೆಯ ಪುಲಿಕೇಶಿ ಕಾಲದಲ್ಲಿ ರಚಿತವಾದುವು ಎನ್ನಲಾಗುತ್ತದೆ. ಇದು ಹೆಮ್ಮೆ ತರಿಸುವ ಸಂಗತಿ. ಬುದ್ಧನ ಜೀವನ ಚರಿತ್ರೆ ಹಾಗೂ ಜಾತಕ ಕಥಾ ವಸ್ತುವಿನಿಂದ ಕೂಡಿದ ಚಿತ್ರಗಳಾಗಿವೆ.

ವಿಜಯನಗರಕ್ಕೆ ಸೇರಿದ ಲೇಪಾಕ್ಷಿಯಲ್ಲಿ ಕನ್ನಡ ಸಾಮಂತರಾಜ ವಿಡುವಣ್ಣ ಶ್ರೀ ವೀರಭದ್ರಸ್ವಾಮಿ ದೇವಾಲಯವನ್ನು ನಿರ್ಮಿಸಿದ. ಇಲ್ಲಿ ಚಿತ್ರಕಲೆ ಶಿಲ್ಪ ಕಲೆಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಇಲ್ಲಿಯ ಭಾವಣಿಯ(ಸೀಲಿಂಗ್)ಲ್ಲಿ ಸಾವಿರಾರು ಚಿತ್ರಗಳಿದ್ದು ಇಂದಿಗೂ 'ಲೇಪಾಕ್ಷಿ ಶೈಲಿ' ಎಂದೇ ಪ್ರಸಿದ್ಧವಾಗಿದೆ. ಲೇಪಾಕ್ಷಿ ಈಗ ಆಂಧ್ರ ರಾಜ್ಯಕ್ಕೆ ಸೇರಿದ್ದರೂ ಹಿಂದೆ ಅದು ಕರ್ನಾಟಕದ ನೆಲೆಯೆಂಬುದೇ ಸರಿ. ಹಳೇ ಮೈಸೂರಿನ ಅರಸರಲ್ಲಿ ಮುಮ್ಮಡಿ ಕೃಷ್ಣರಾಜರು, ಟಿಪ್ಪುಸುಲ್ತಾನ್

ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರು ಚಿತ್ರಕಲೆಗೆ ಕೊಟ್ಟ ಪ್ರೋತ್ಸಾಹವನ್ನು ಈ ಕೃತಿಯಲ್ಲಿ ಸ್ಮರಿಸಲಾಗಿದೆ.

ನಮ್ಮ ಅಕಾಡೆಮಿ ಈ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದ ಬಹುಪಾಲು ದೇವಾಲಯ, ಮಠ, ಅರಮನೆಗಳಲ್ಲಿರುವ ಭಿತ್ತಿಚಿತ್ರಗಳನ್ನು ವಿಡಿಯೋ ತೆಗೆಸಲಾಗಿದೆ. ಪಾರದರ್ಶಕ ಛಾಯಾ ಚಿತ್ರಗಳನ್ನು ತೆಗೆಸಲಾಗಿದೆ. ಈ ಹಿಂದೆ ಮುಖ್ಯವಾಗಿ ಶ್ರವಣಬೆಳಗೊಳ, ಹಿರಿಯೂರು, ನರಗುಂದ(ಅರಮನೆ)- ನಿಪ್ಪಾಣಿ (ವಾಡೆ) ಮೈಸೂರು, ಚಾಮರಾಜನಗರ, ಮುಡುಕುತೊರೆ, ಹರದನಹಳ್ಳಿ, ಚೆನ್ನಪಟ್ಟಣ, ಮಂಗಳೂರು ಮೊದಲಾದ ಕಡೆಯ ದೇವಾಲಯ ಚರ್ಚ್‌ಗಳಲ್ಲಿ ಭಿತ್ತಿಚಿತ್ರಗಳನ್ನು ವಿಡಿಯೋ ತೆಗೆಸಿಡಲಾಗಿದೆ. ಇದೊಂದು ಸಾರ್ಥಕ ಕೆಲಸ ಎಂದೇ ನನ್ನ ಭಾವನೆ. ಇನ್ನು ಕೆಲವು ವರ್ಷಗಳಲ್ಲಿ ಬಿಸಿಲಿನ ತಾಪಕ್ಕೆ ಮಳೆ, ಗಾಳಿಗೆ ಮಸಕಾಗಬಹುದಾದ ಈ ಭಿತ್ತಿಚಿತ್ರಗಳ ಸಂರಕ್ಷಣೆ ಆದುದು ಒಂದು ದೊಡ್ಡ ಕೆಲಸ ಎನ್ನಬಹುದಾಗಿದೆ. ಹಿಂದೆ ಕೆಲವು ಕಡೆಯ ಭಿತ್ತಿಚಿತ್ರಗಳನ್ನು ಕಲಾವಿದರಿಂದ ಮಾಡಿಸಿಟ್ಟಿದೆ. ಈ ಕೆಲಸ ಕಲಾ ವಿದ್ಯಾರ್ಥಿಗಳಿಗೆ ಸಂಶೋಧಕರಿಗೆ ಉತ್ತಮ ಕೆಲಸ ಮಾಡಿದಂತಾಗುತ್ತದೆ.

ಡಾ।। ಅ. ಸುಂದರ ಅವರು ಕರ್ನಾಟಕ "ಪ್ರಾಚೀನ ಪ್ರಾಗತಿಹಾಸ ಕಾಲದ ಕಲೆ" ಕುರಿತ ಒಂದು ಅಪೂರ್ವ ಕೃತಿಯನ್ನು ನಮ್ಮ ಅಕಾಡೆಮಿ ಪ್ರಕಟಿಸಿದೆ. ಇಲ್ಲಿ ಉತ್ತರ ಕರ್ನಾಟಕದ ಪ್ರಾಗಿತಿಹಾಸ ಕಾಲದ ಬಂಡೆ ಗವಿ ಚಿತ್ರಗಳ ಬಗ್ಗೆ ಸಂಶೋಧನೆ ನಡೆಸಿದ ಒಂದು ಕಿರುನೋಟವನ್ನು ನಾವು ಕಾಣಬಹುದು.

ಪಾಶ್ಚಾತ್ಯ ಕಲಾ ಸಂಪ್ರದಾಯಗಳಿಗೇ ಒಂದು ಪ್ರತ್ಯೇಕ ವಿಭಾಗವನ್ನು ಇಲ್ಲಿ ಕೊಡಲಾಗಿದೆ. ರೇನಾಯ್ಸಾನ್ಸ್ ಅಥವಾ ಪುನರುತ್ಥಾನ ಕಲೆ, ಬರೋಕ್ ಅಥವಾ ಅಸಮಾಲಾಕೃತ ಕಲಾಶೈಲಿ, ರೋಕೊಕೊ ಅಥವಾ ಅತ್ಯಲಂಕಾರ ಕಲೆ, ರೋಮ್ಯಾಂಟಿಕ್ ಅಥವಾ ರಮ್ಯ ಶೈಲಿ, ಜಪಾನೀ ಚಿತ್ರಕಲೆ, ಪ್ರಿ-ರಾಫೆಲೈಟ್ ಕಲೆ, ಅಮೇರಿಕದ ಕಲೆ ಈ ವಿವಿಧ ಕಲಾಶೈಲಿಗಳ ವಿವರ ನಮಗೆ ಸಿಗುತ್ತದೆ.

ಮತ್ತೊಂದು ಮಹತ್ವದ ವಿಭಾಗ ಎಂದರೆ ಆಧುನಿಕ ಕಲೆ-ಪಂಥಗಳು ಎನ್ನವುದು ಇಲ್ಲಿ ರಿಯಾಲಿಜಂ (ವಾಸ್ತವವಾದ) ಸರ್ರಿಯಾಲಿಜಂ, ಎಕ್ಸ್‌ಪ್ರೇಶನಿಸಂ (ಅಭಿವ್ಯಕ್ತವಾದ) ಇಂಪ್ರೆಶನಿಸಂ (ಪರಿಣಾಮವಾದ), (ಈ ಎರಡು ವಿಷಯಗಳ ಮೇಲೆ ನಮ್ಮ ಅಕಾಡೆಮಿ ಈಗಾಗಲೇ

ಕೃತಿಗಳನ್ನು ಪ್ರಕಟಿಸಿದೆ) ಅಬ್‌ಸ್ಟ್ರಾಕ್ಟ್ ಕಲೆ (ಅಮೂರ್ತ ಕಲೆ) ಫಾವಿಜಂ (ಒರಟು ಕಲಾಪಂಥ) ಕ್ಯೂಬಿಜಂ (ಘನಾಕೃತಿ ಕಲೆ) ಪರಿಣಾಮೋತ್ತರ ಪಂಥ (Pre- Impressionism)ಪ್ಯೂಚರಿಸಂ (ಸ್ವೇಚಾ ಸಂಕೇತಾನು ಕಲಾ ಪಂಥ), ಭೈಝಂಟಾಯಿನ್ ಕಲೆ, ಆಫ್ರಿಕನ್ ಕಲೆ, ಗೋಥಿಕ್‌ಕಲೆ, ಜರ್ಮನ್ ಕಲೆ- ಹೀಗೆ ವಿದೇಶಿಯ ವಿವಿಧ ಕಲಾ ಶೈಲಿಗಳ ವಿವರಗಳ ಮೇಲಿನ ವಿಭಾಗದಲ್ಲಿ ಸಿಗುತ್ತವೆ. ಈ ವಿದೇಶಿ ಶೈಲಿಗಳ ಬಗ್ಗೆ ಗೊಂದಲಮಯವಾಗಿರುವ ನಮ್ಮ ಕಲಾ ವಿದ್ಯಾರ್ಥಿಗಳು ಹಾಗೂ ಕಲಾ ಅಧ್ಯಾಪಕರು ಅರ್ಥ ಮಾಡಿಕೊಳ್ಳಲು ತುಂಬ ಸಹಕಾರಿ ಎಂದು ನನ್ನ ಭಾವನೆ.

ಭಾರತೀಯ ಕಲೆಯ ಪ್ರಮುಖ ಕಲಾಕೃತಿಗಳು - ವಾಸ್ತುಶಿಲ್ಪ ಪ್ರತಿಮಾ ಕಲಾ ನಿರ್ಮಾಣ ಹಾಗೂ ಆಧುನಿಕ ಭಾರತದ ಚಿತ್ರಕಲೆ -ಎಂಬ ವಿಭಾಗದಲ್ಲಿ ಭಾರತೀಯ ಕಲಾ ಸಂಸ್ಕೃತಿಯ ಕಾಲಮಾನವನ್ನು ನಿಖರವಾಗಿ ಲೇಖಕರು ನೀಡಿದ್ದಾರೆ. ಸಿಂಧೂ ರೋಮನರ ಸುಂಗರ ಕಾಲ ಆಂಧ್ರ ವಂಶ, ಕುಶಾನರ, ಗುಪ್ತ ಅರಸರ, ಚಾಲುಕ್ಯರ ಮತ್ತು ರಾಷ್ಟ್ರಕೂಟರು, ಪಲ್ಲವರು, ಚೋಳರು, ಹೋಯ್ಸಳರು, ಪಾಲರು, ಸೇನರು ಮತ್ತು ಗಂಗರು, ಚಂದೇಲರ, ಹಿಂದೂ-ಮುಸಲ್ಮಾನರ ವಾಸ್ತುಶಿಲ್ಪ - ಪ್ರತಿಮಾ ನಿರ್ಮಾಣ ಕಲೆ-ವರ್ಣಚಿತ್ರಕಲೆ ಹಾಗೂ ಆಧುನಿಕ ಭಾರತದಲ್ಲಿನ ಚಿತ್ರಕಲೆಗಳ ಪ್ರಸಂಗಗಳನ್ನು ಇಲ್ಲಿ ಗಮನಿಸಬಹಾದಾಗಿದೆ.

ಮುಂದೆ ಕಲಾ ವಿದ್ಯಾರ್ಥಿಗಳಿಗೆ ತಮ್ಮ ಕಲಾಭ್ಯಾಸಕ್ಕೆ ಅಗತ್ಯವೂ ಉಪಯುಕ್ತವೂ ಆದ ಸಂಗತಿಗಳನ್ನು ವಿವರಿಸಲಾಗಿದೆ. ವರ್ಣಗಳು ಮತ್ತು ವರ್ಣಚಿತ್ರ, ಮೇಲವರ್ಣ ಚಿತ್ರಣ, ಫ್ರೆಸ್ಕೋ ಭಿತ್ತಿಚಿತ್ರ, ತೈಲವರ್ಣ, ಜಲವರ್ಣ, ಗ್ವಾಷ್(Gonache) ಪೋಸ್ಟರ್ ವರ್ಣ ಇವೇ ಅಲ್ಲದೆ ಪ್ರಾರಂಭಿಕ ಪಾಠಗಳ ವಿಷಯಗಳು, ವಿಧಾನಗಳು, ಭಾವಬೋಧಕ ಚಿತ್ರ, ಸ್ಮರಣ ಚಿತ್ರ ಕಲ್ಪನಾ ಚಿತ್ರ, ನಿಸರ್ಗ ಚಿತ್ರ ಮುಕ್ತಹಸ್ತ ಚಿತ್ರ, ವಸ್ತುಚಿತ್ರ ನಕ್ಷಾ ಮತ್ತು ಮಾದರಿ ವಿವಿಧ ನಮೂನೆಯ ಚಿತ್ರ ಲೇಖನಗಳನ್ನು ಇವೇ ಅಲ್ಲದೆ ಬಣ್ಣಗಳಲ್ಲಿ ನೀಲಿ, ಕೆಂಪು, ಹಳದಿ ಪ್ರಥಮ ವರ್ಗದವು; ಜಾಂಬಳಿ, ಕೇಸರಿ ಮತ್ತು ಹಸಿರು ಬಣ್ಣಗಳು ದ್ವಿತೀಯ ವರ್ಗಕ್ಕೆ ಸೇರಿದ ವರ್ಣಗಳ ವಿವರಗಳನ್ನು ನೀಡಲಾಗಿದೆ. ಕಂದುಗೆಂಪು, ಇಪ್ಪೆ ಎಲೆ ಬಣ್ಣ ಹಾಗೂ ವಾಚೆಯ ಬಣ್ಣಗಳು ತೃತೀಯ ವರ್ಗಕ್ಕೆ ಸೇರಿದ ಬಣ್ಣಗಳು ಮಿಶ್ರಣದಿಂದ ಹೇಗೆ ಹುಟ್ಟಿಕೊಳ್ಳುತ್ತವೆ

ಎಂಬ ಪ್ರಾಥಮಿಕ ಸಂಗತಿಗಳನ್ನು ಮನಗಾಣಬಹುದು. ವರ್ಣಗಳಲ್ಲಿ ಪ್ರಖರ ವರ್ಣಗಳು ಮತ್ತು ಸೌಮ್ಯವರ್ಣಗಳೆಂಬ ಎರಡು ಬಗೆಯನ್ನು ಉದಾಹರಣೆಯೊಂದಿಗೆ ವಿವರಿಸಲಾಗಿದೆ. ಇಲ್ಲಿ ಪಾರದರ್ಶಕ ವರ್ಣಗಳು-ಅಪಾರದರ್ಶಕ ವರ್ಣಗಳು ಹೀಗೆ ತರಬಹುದು ಎಂಬ ಸಂಗತಿಯೂ ಇಲ್ಲಿ ದೊರೆಯುತ್ತದೆ. ವಿರೋಧ ಪೂರಕ, ಸಾದೃಶ್ಯ ವರ್ಣಗಳು ಇವೆಲ್ಲದರ ವಿವರಗಳನ್ನು ಸೊಗಸಾಗಿ ವರ್ಣಿಸಿದ್ದಾರೆ. ಅಲ್ಲದೆ ಛಾಯ(Tone)ಗಳಲ್ಲಿನ ವರ್ಣಗಳ ಬಳಕೆಯಲ್ಲೂ ಅವುಗಳ ಮಿಶ್ರಣದಿಂದ ಐದು ತಾರತಮ್ಯವನ್ನು ತೋರಿಸಿದ್ದಾರೆ.

ಚಿತ್ರಕಲೆಯಲ್ಲಿ ಸಾಂಪ್ರದಾಯಿಕ ಕಲೆ, ವಾಸ್ತವ ಕಲೆ ಹಾಗೂ ಸಮಕಾಲೀನ ಕಲೆ ಎಂದು ಮೂರು ಭಾಗಗಳನ್ನು ಕಾಣಬಹುದಾಗಿದೆ. ಒಟ್ಟಾರೆ ಮುಖ್ಯವಾಗಿ ಭಾರತೀಯ ಹಾಗೂ ಪಾಶ್ಚಾತ್ಯ ಪದ್ಧತಿಯ ಎರಡು ಬಗೆಯ ಕಲೆ ನಮ್ಮಲ್ಲಿ ರೂಢಿಯಲ್ಲಿದೆ.

ಸಾಂಪ್ರದಾಯಿಕ ಕಲೆಯಲ್ಲಿ ವೈ. ಸುಬ್ರಮ್ಮಣ್ಯರಾಜ್, ವಿಶ್ವೇಶ್ವರ ರಾಜು, ಟಿ. ನರಸೀಪುರದ ಸೀತಾರಾಂ, ಶ್ರೀಹರಿ, ಸರಸ್ವತಿ ಬಸವರಾಜ್, ವಿಜಯ ಹಾಗರಗುಂಡಿಗಿ, ಗಂಜೀಫ ಕಲಾವಿದ ರಘುಪತಿಭಟ್ಟ, ಎಂ. ಬಿ. ಬಸವರಾಜ್, ಎಂ. ವಿ. ಕಂಬಾರ್. ಎನ್. ರಾಮನರಸಯ್ಯ, ವಿನೋದ, ನೀಲಾಪಂಚ್, ಪ್ರಭಾ ಮಲ್ಲೇಶ್, ಇಂದಿರಾ ಬಾಲಕೃಷ್ಣ, ಕಾನ್‌ಫೇಟ, ಕಿಶೋರ್ ಕುಮಾರ್ ನಾಗೋರೆ ಮುಂತಾದವರು ಉಳಿಸಿಕೊಂಡು ಬಂದಿದ್ದಾರೆ.

ಬ್ರಿಟಿಷನವರು ಭಾರತಕ್ಕೆ ಬರುವ ಮುಂಚೆ ನಮ್ಮ ಪ್ರಾದೇಶಿಕ ಕಲಾಪರಂಪರೆಯನ್ನು, ಶೈಲಿಗಳನ್ನು ಉಳಿಸಿಕೊಂಡು ಬಂದಿದ್ದೆವು. ಅವರು ಭಾರತಕ್ಕೆ ಬಂದ ನಂತರ ಅವರು ಬೊಂಬಾಯಿಯಲ್ಲಿ ಕಲಕತ್ತದಲ್ಲಿ ಕಲಾಶಾಲೆಗಳನ್ನು ತೆಗೆದರು. ಅವರ ಕಲಾಪದ್ಧತಿಯನ್ನು ನಾವು ಅಭ್ಯಾಸ ಮಾಡುವಂತಾಯಿತು. ಸ್ಥಿರ ಚಿತ್ರ, ಭಾವಚಿತ್ರ, ಸಂಯೋಜನೆ ಚಿತ್ರ ಹಾಗೂ ನಿಸರ್ಗ ಚಿತ್ರಣದಲ್ಲಿ ನಮ್ಮ ಪತನವನ್ನು ನಾವು ಕಳೆದುಕೊಂಡೆವು. ಅಲ್ಲದೆ ವಿದೇಶಿಯದೇ ಆದ ವರ್ಗಗಳನ್ನು ಹಾಗೂ ಬ್ರಷ್‌ಗಳನ್ನು ಕ್ಯಾನುವಾಸ್-ಕಾಗದಗಳನ್ನು ಬಳಸ ತೊಡಗಿದೆವು. ಅವರ ಚಿತ್ರ ರಚನಾ ಶೈಲಿ ನಮ್ಮ ಮೇಲೆ ಅತಿಯಾಗಿ ಪ್ರಭಾವ ಬೀರಿತು. ಇದನ್ನು ಮನಗಂಡ ಕೆಲವು ಪ್ರತಿಭಾವಂತ ಬಂಗಾಳಿಯರು ಎಚ್ಚೆತ್ತರು. ತಮ್ಮದೇ ಆದ ಭಾರತೀಯ ಶೈಲಿಯನ್ನು ರೂಢಿಸಿಕೊಂಡು ಬಂದರು. ಮತ್ತೆ ಈಗ ಸಮಕಾಲೀನ ಶೈಲಿ ಎಂಬ ಸ್ವತಂತ್ರ ಪ್ರವೃತ್ತಿಯ ಕಲಾ ಶಾಲೆಗಳು

ಬರೋಡ, ಶಾಂತಿನಿಕೇತನ, ಮದರಾಸು, ದೆಹಲಿ ಮೊದಲಾದ ಕಡೆ ತಲೆ ಎತ್ತಿದವು. ಇಲ್ಲಿ ನಮ್ಮ ಕಲಾವಿದರು ತಮ್ಮದೇ ಆದ ಸೃಜನಾತ್ಮಕ ಶೈಲಿಗಳಲ್ಲಿ ಚಿತ್ರ ರಚಿಸುತ್ತಾ ವಿದೇಶಿಯ ಕಲೆಗೆ ಸರಿಸಾಟಿಯಾಗಿ ನಿಂತಿದ್ದಾರೆ. ಇದು ಶುಭ ಸೂಚನೆ.

ನಿಸರ್ಗ ಚಿತ್ರ ರಚನೆ ಬಗ್ಗೆ ಒಂದು ಸ್ಪಷ್ಟತೆ ಅಗತ್ಯ ಎನಿಸುತ್ತದೆ. ನಿಸರ್ಗ ಚಿತ್ರ ರಚಿಸುವುದೆಂದರೆ ಅದು ಕ್ಯಾಮರಾ ಮಾಡುವ ಕೆಲಸ ಎಂದೇ ಕೆಲವರು ಬಹಳ ಲಘುವಾಗಿ ಭಾವಿಸಿ ಮಾತನಾಡುತ್ತಾರೆ. ಅದು ತಪ್ಪು. ಕ್ಯಾಮರಾವು ನಿಸರ್ಗದ ಗಿಡ ಮರಗಳ ಪ್ರತಿಯೊಂದು ಎಲೆ, ಕೊಂಬೆಗಳನ್ನು ಯಥಾವತ್ತಾಗಿ ಛಾಯಾಚಿತ್ರದಲ್ಲಿ ತಂದು ಕೊಡುತ್ತದೆ. ಆದರೆ ಕಲಾವಿದ ಹಾಗೆ ಎಂದೂ ಮಾಡುವುದಿಲ್ಲ. ಅನಗತ್ಯವನ್ನು ಬಿಟ್ಟು ತನಗೆ ತೋಚಿದಷ್ಟನ್ನು ಮಾತ್ರ ಚಿತ್ರಿಸುತ್ತಾನೆ. ಎಲೆ ಎಲೆಯನ್ನೂ ಬಿಡಿಸುವುದಿಲ್ಲ. ಒಟ್ಟು ಒಂದು ಸುಂದರ ದೃಶ್ಯವನ್ನು ಸಹಜವಾಗಿ ಮೂಡಿಸುತ್ತಾನೆ. ಅದು ಅವನ ಸೃಷ್ಟಿ ಮತ್ತು ಅವನ ಸ್ವಂತಿಕೆಯಾಗಿರುತ್ತದೆ. ಇದನ್ನು ಕ್ಯಾಮರಾ ಎಂದೂ ಮಾಡುವುದಿಲ್ಲ. ನಿಸರ್ಗ ಚಿತ್ರ ರಚಿಸುವ ಕಲಾವಿದರ ಬಗ್ಗೆ ತಾತ್ಸಾರ ಭಾವಸಲ್ಲದು. ಇದೇ ಅಭಿಪ್ರಾಯ ರೂಪ ಚಿತ್ರಣದ ಬಗ್ಗೆಯೂ ಭಾವಿಸಬೇಕು. ಇಲ್ಲವಾದಲ್ಲಿ ಛಾಯಾಚಿತ್ರಕಾರನ ಕ್ಯಾಮರಾಕ್ಕೂ ಚಿತ್ರಕಾರನ ಕುಂಚ ಚಮತ್ಕಾರಕ್ಕು ವ್ಯತ್ಯಾಸ ಇದೆ ಎಂಬುದು ನೋಡಲಾಗುವುದಿಲ್ಲ. ಈ ಚಿತ್ರಕಲಾ ದರ್ಪಣಾ ಗ್ರಂಥದ ಓದುಗರಿಗೆ ಕನ್ನಡ ನಾಡಿನ ಕೆಲವು ಹಿರಿಯ ಕಲಾವಿದರ ಹೆಸರುಗಳನ್ನು ನೆನೆಯುವುದು ಮುಂದಿನ ಪೀಳಿಗೆಯ ಯುವಕರ ದೃಷ್ಟಿಯಿಂದ ಒಳ್ಳೆಯದು. ಇದು ಅಗತ್ಯವೂ ಕೂಡ ಎಂಬ ಭಾವನೆ ನನ್ನದು. ಹಿಂದಿನ ರಾಜರ ಆಸ್ಥಾನದಲ್ಲಿ ಕಲಾವಿದರಾಗಿದ್ದವರು. ಕಲೆಯನ್ನು ವೃತ್ತಿಮಾಡಿಕೊಂಡ ಕಲಾವಿದರು, ರಾಜ್ಯ ಪ್ರಶಸ್ತಿ, ಅಕಾಡೆಮಿ ಪ್ರಶಸ್ತಿಗಳಿಸಿದವರು, ಕಲಾಶಾಲೆಗಳನ್ನು ಸ್ಥಾಪಿಸಿ ಶಿಕ್ಷಣ ನೀಡಿದವರು, ಕಲಾಶಿಕ್ಷಕರಾಗಿದ್ದವರು. ತಾವು ಅಭ್ಯಾಸಿಸಿದ ನಿಯಮ ಬದ್ಧವಾದ ಕಲೆಯಲ್ಲಿ ಮುಂದುವರಿಯುವುದೇ ಹೊಸತನ್ನು ಕಲಿಯುವುದೇ ಬಿಡುವುದೇ ಎಂಬ ಜಿಜ್ಞಾಸೆಗೆ ಒಳಗಾದವರು. ತಾವು ಕಲೆತುದನ್ನು ಬಿಡದೆ ಅದನ್ನೇ ಮುಂದುವರೆಸಿಕೊಂಡು ಹೋದವರು ಅವರು ರೂಡಿಸಿಕೊಂಡು ಬಂದ ಕಲೆಯಲ್ಲೇ ತನ್ಮಯತೆ, ಗೌರವ ಶಾಂತಿ ಕಂಡುಕೊಂಡರು. ಅಂಥವರಲ್ಲಿ ಕೆ. ವೆಂಕಟಪ್ಪ, ಕೆ. ಕೇಶವಯ್ಯ ಟಂಕಸಾಲಿ, ಪಾವಂಜೆ, ವೀರಪ್ಪ, ಮಿಣಜಗಿ, ದಂಡಾವತಿಮಠ ನಂಜುಂಡಸ್ವಾಮಿ, ಎಸ್. ಎನ್. ಸ್ವಾಮಿ, ಎಸ್. ಎಂ. ಪಂಡಿತ್

ವೈ. ನಾಗರಾಜು, ವೈ ಸುಬ್ರಹ್ಮಣ್ಯರಾಜು, ಆರ್. ಎಸ್.ನಾಯಿಡು, ಕಮಡೋಳಿ, ಎಂ. ಎ. ಚೆಟ್ಟಿ, ಎಸ್.ಆರ್. ಅಯ್ಯಂಗಾರ್, ಹಾಲಭಾವಿ, ಸೂಫಿ, ಎನ್. ಹನುಮಯ್ಯ, ಎಸ್.ಎಸ್. ಕುಕ್ಕೆ ಎಂ. ಜೆ. ಶುದ್ಧೋದನ, ಎಸ್. ಆರ್. ಸ್ವಾಮಿ, ಇನಾಮತಿ, ಬಿ. ಹೆಚ್. ರಾಮಚಂದ್ರ, ಸೋಮಸುಂದರ, ಮಧುಗಿರಿ ರಾಮು, ಟಿ. ಪಿ. ಅಕ್ಕಿ, ಶಾಕತ್ತಾಲಿ, ಹಲಜೋಳ, ಪಿ. ಆರ್. ತಿಪ್ಪೇಸ್ವಾಮಿ. ಕಾಳಪ್ಪ, ರಾಮನರಸಯ್ಯ ಗುರು, ಎಂ. ಎಸ್. ನಂಜುಂಡರಾವ್, ಬಾಯಿರಿ, ಮೊದಲಾದ ಹಿರಿಯರನ್ನು ಇಲ್ಲಿ ಗುರುತಿಸಬಹುದಾಗಿದೆ. ಅಲ್ಲದೆ ಕೆ. ಕೆ. ಹೆಬ್ಬಾರರು ರಾಷ್ಟ್ರಮಟ್ಟದಲ್ಲದೇ, ಅಂತರರಾಷ್ಟ್ರೀಯ ಮಟ್ಟದಲ್ಲೂ ಹೆಸರು ಪಡೆದಿದ್ದಾರೆ.

ಸಮಕಾಲೀನ ಕಲೆಯ ಬಗ್ಗೆ ನಮ್ಮ ಜನರ ಕುತೂಹಲ ಈಗೀಗ ಹೆಚ್ಚಾಗುತ್ತಿದೆ. ಮೂವತ್ತು ವಯಸ್ಸಿನಿಂದ ಐವತ್ತು ವರ್ಷ ಮೀರಿದ ಕಲಾವಿದರು ಸಮಕಾಲೀನ ಕಲೆಯಲ್ಲಿ ಸಿದ್ಧ ಪ್ರಸಿದ್ಧರಾಗಿದ್ದಾರೆ. ಕರ್ನಾಟಕದ ಕೆಲವು ಯುವ ಕಲಾವಿದರು ರಾಷ್ಟ್ರ ಮತ್ತು ಅಂತರ್ರಾಷ್ಟ್ರೀಯ ಮಟ್ಟದ ಪ್ರಶಸ್ತಿ ಗಳಿಸಿದ್ದಾರೆ. ಕನ್ನಡ ನಾಡಿನ ಕಲಾ ಕ್ಷೇತ್ರಕ್ಕೆ ಅಪೂರ್ವ ಸ್ಥಾನ ತಂದು ಕೊಟ್ಟಿದ್ದಾರೆ. ವಿವಿಧ ಮಾಧ್ಯಮಗಳಲ್ಲಿ ನುರಿತವರಾಗಿದ್ದಾರೆ. ಸಂಶೋಧನೆ - ಪ್ರಯೋಗಗಳಲ್ಲಿ ನಿರತರಾಗಿದ್ದಾರೆ. ವಿಶೇಷ ಶೈಲಿಯ ಸಿದ್ಧಿಗಳಿಸಿದ್ದಾರೆ ಅಂಥವರಲ್ಲಿ ಕೆಲವನ್ನಾದರೂ ಹೆಸರಿಸಬಹುದಾಗಿದೆ.

ಎಸ್. ಜಿ. ವಾಸುದೇವ್, ಹಡಪದ್, ಪುಷ್ಪಮಾಲ, ವಿಜಯ ಸಿಂಧೂರ್, ಪೀಟರ್ ಲೂಯಿಸ್, ಯೂಸಫ್ ಅರಕ್ಕಲ್, ಆರ್. ಉಮೇಶ್, ಎಲ್. ಪಿ. ಅಂಚನ್, ಹುಬ್ಬೀಕರ್, ಖಂಡೇರಾವ್ ಡಿ। ಜಿ. ಎಸ್. ಶೆಣೈ, ವಿ. ಜಿ. ಅಂದಾನಿ, ಶಿವಪ್ರಸಾದ್, ಮನೋಳಿ, ಶೇರಿಗಾರ್, ಕಮಲಾಕ್ಷಿ, ಸಿ. ಚಂದ್ರಶೇಖರ್, ಹಿರೇಗೌಡರ್, ಕಾಳಿದಾಸ ಪತ್ತಾರ್, ಲೋಹರ್, ಚಂದ್ರನಾಥ್, ರಾಮದಾಸ್, ವೆಂಕಟಾಚಲಪತಿ, ವಿ. ಎ. ದೇಶಪಾಂಡೆ, ಬಸವರಾಜ ಮುಸವಾಳಗಿ, ಪ್ರದೀಪ್‌ಕುಮಾರ್, ಶಂಕರಪಾಟೀಲ್, ಧನಲಕ್ಷ್ಮಿ, ಕಮಲಾಕ್ಷಿ, ಶೀಲಾಗೌಡ, ಮರಿಶಾಮಾಚಾರ್, ವಿಜಯಬಾಗೋಡಿ, ಬಸವರಾಜ ಬುಳ್ಳ, ಮೋಹನ ಸಿತನೂರ, ಜನಾರ್ದನ, ಜಯ ಕುಮಾರ್, ಶ್ರೀನಿವಾಸಚಾರ್ಯ, ವಿ.ಆರ್.ಸಿ. ಶೇಖರ್, ಸೂಗೂರು, ಎಸ್. ಕೃಷ್ಣಪ್ಪ ಜೆ. ಎಂ.ಎಸ್.ಮಣಿ, ಎಚ್.ಎಸ್. ವೇಣುಗೋಪಾಲ, ಬಿ. ಜಯರಾಂ ವಿ. ವಲ್ಲೀಶ ಪ.ಸ. ಕುಮಾರ್, ಎಂ. ಸಿ. ಚೆಟ್ಟಿ, ರೇಣುಕಾಮಾಕಾಂಡೆ, ಗಾಯಿತ್ರಿಗೌಡರ್,

ಶಶಿರಾವ್, ಬಿರದಾರ, ಬಿ.ವಿ. ಸುರೇಶ್, ಕೆ. ಲಕ್ಷ್ಮಿ, ಟಿ. ಎಸ್. ಪ್ರತಿಭಾ, ರೇಣುಕಾ ಕೆಸರಮಡು, ವೀರೇಂದ್ರ ಶಾ, ರಾಘವೇಂದ್ರರಾವ್, ರವಿ, ಶ್ರೀಧರ್ ಇನ್ನೂ ಮೊದಲಾದ ಯುವಕರನ್ನೂ ಹೆಸರಿಸಬಹುದಾಗಿದೆ. ಇವರೆಲ್ಲರೂ ಒಂದಲ್ಲ ಒಂದು ಶೈಲಿಯಲ್ಲಿ ಪರಿಣಿತರಾಗಿ ಕರ್ನಾಟಕದಲ್ಲಿ ಹೆಸರು ಮಾಡುತ್ತಾ ಬಂದಿರುವುದು ಹೆಮ್ಮೆ ತರಿಸುವ ಸಂಗತಿ.

ಒಟ್ಟಾರೆ 'ಚಿತ್ರ ಕಲಾದರ್ಪಣ' ಒಂದು ಉಪಯುಕ್ತ ಸಚಿತ್ರ, ಚಿತ್ರಕಲಾ ಗ್ರಂಥವಾಗಿದೆ. ಇಲ್ಲಿಯ ವಿಷಯ ಸಂಶೋಧನಾತ್ಮಕವಾಗಿದೆ. ಭಾಷೆ ಸರಳವಾಗಿದೆ. ಇದನ್ನು ರಚಿಸಿಕೊಟ್ಟ ಶ್ರೀ ವಿ. ಟಿ. ಕಾಳೆ ಅವರನ್ನು ಮುಕ್ತ ಮನಸ್ಸಿನಿಂದ ಅಭಿನಂದಿಸುತ್ತೇನೆ. ಅಲ್ಲದೆ ಈ ಗ್ರಂಥವನ್ನು ಮುದ್ರಿಸಿಕೊಟ್ಟ ಲಕ್ಷ್ಮಿ ಮುದ್ರಣಾಲಯದವರಿಗೆ ಧನ್ಯವಾದಗಳು

ಪಿ. ಆರ್. ತಿಪ್ಪೇಸ್ವಾಮಿ

ಪ್ರದಾನ ಸಂಪಾದಕರು

ಚಿತ್ರಕಲಾ ದರ್ಪಣಕ್ಕೆ ಮೊದಲು

ಕರ್ನಾಟಕ ಲಲಿತಕಲಾ ಅಕಾಡೆಮಿಯು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಅಭ್ಯಾಸ ಯೋಗ್ಯವಾದ ಒಂದು ಪುಸ್ತಕವನ್ನು ಹೊರತರಬೇಕೆಂದು ತೀರ್ಮಾನಿಸಿತು. ಪುಸ್ತಕದ ರೂಪುರೇಷೆಗಳನ್ನು ಸಿದ್ಧಪಡಿಸಲು ಅಕಾಡೆಮಿಯು ನನಗೆ ಸೂಚಿಸಿತು. ಅಕಾಡೆಮಿಯ ಆದೇಶದಂತೆ ಪುಸ್ತಕದ ರೂಪುರೇಷೆಗಳನ್ನು ಸಿದ್ಧಪಡಿಸಿದೆ. ಮೊದಮೊದಲು ಈ ಪುಸ್ತಕದ ಸಂಪಾದನೆಯ ಹೊಣೆಯನ್ನು ಅಕಾಡೆಮಿಯು ನನಗೇ ವಹಿಸಿತು. ಕಾರಣಾಂತರಗಳಿಂದ "ಸಂಪೂರ್ಣ ಪುಸ್ತಕವನ್ನು ನೀವೆ ಬರೆಯಿರಿ" ಎಂದು ಅಕಾಡಮಿಯ ಅಧ್ಯಕ್ಷರು ಮತ್ತು ಕೆಲವು ಸದಸ್ಯರ ಸೂಚನೆಯ ಮೇರೆಗೆ ಪುಸ್ತಕ ಬರೆಯುವ ಸಾಹಸಕ್ಕೆ ಕೈ ಹಾಕಿದೆ. ಇದೀಗ ಮುಗಿದು ಓದುಗರ ಕೈಗೆ ಬರುತ್ತಿದೆ.

ಕಲೆಯ ಅಭ್ಯಾಸವು ಆಳವಾದುದೂ ವ್ಯಾಪಕವಾದದೂ ಆಗಿದ್ದು ವಿದ್ಯಾರ್ಥಿಗಳಿಗೆ ಅಭ್ಯಾಸಯೋಗ್ಯವಾದ ಗ್ರಾಂಥಿಕ ವ್ಯವಸ್ಥೆ ಕನ್ನಡದಲ್ಲಿಲ್ಲದ ಕೊರತೆಯನ್ನು "ಚಿತ್ರಕಲಾ ದರ್ಪಣ"ವು ಪೂರ್ಣ ಪ್ರಮಾಣದಲ್ಲಿ ಭರಿಸುತ್ತದೆ ಎಂದು ನಾನು ತಿಳಿದಿಲ್ಲವಾದರೂ ಕೆಲಮಟ್ಟಿಗಾದರೂ ಈ ಪುಸ್ತಕದ ಪ್ರಯೋಜನವಾದೀತೆಂದು ಭಾವಿಸಿದ್ದೇನೆ.

ಚಿತ್ರಕಲಾ ದರ್ಪಣದಲ್ಲಿ ಸಂಗ್ರಹಿಸಲಾದ ಕೆಲವು ವಿಷಯಗಳನ್ನು ಕನ್ನಡದಲ್ಲಿ ಬಿಡಿಬಿಡಿಯಾಗಿ ಅಲ್ಲಲ್ಲಿ ಪ್ರಕಟವಾಗಿವೆಯಾದರೂ "ಕಲಾಚರಿತ್ರೆ, ಮತ್ತು ಸೈದ್ಧಾಂತಿಕ ಅಭ್ಯಾಸಕ್ಕೆ" ಅನುಕೂಲವಾಗುವಂತೆ, ಒಂದೇ ಕಟ್ಟಿನಲ್ಲಿ ಗ್ರಂಥಸ್ಥವಾದ ಪುಸ್ತಕ ಕನ್ನಡದಲ್ಲಿ ಈವರೆಗೆ ಬಂದಿರಲಿಲ್ಲ. ವಿಶ್ವ ಪರಂಪರೆಯಾಗಿ ಬೆಳೆದು ಬಂದ ಕಲಾ ಚರಿತ್ರೆಯ ಬೃಹದ್ರೂಪವು ಅಗಾಧವಾಗಿದೆ. ಸಾವಿರಾರು ವರುಷಗಳ ಸುದೀರ್ಘವಾದ ದಾರಿಯನ್ನು ಕಲಾ ಚರಿತ್ರೆಯು ಕ್ರಮಿಸಿದೆ. ವಿಶ್ವ ಸಾಂಸ್ಕೃತಿಕ ವಿರಾಡ್ರೂಪ ದರ್ಶನಾಕಾಂಕ್ಷಿಗಳಿಗಾಗಿ ಇಂಗ್ಲೀಷಿನ ಕಲಾಸಾಹಿತ್ಯವು ಸಾಕಷ್ಟು ಪ್ರಮಾಣದಲ್ಲಿ ಬೆಳೆದು ಬಂದಿದೆ. ಕನ್ನಡದಲ್ಲಿ ಮಾತ್ರ ಈ ಕಲಾ ಸಾಹಿತ್ಯದ ಕೊರತೆ-ವಿಪುಲವಾಗಿದೆ. ಕಲಾ ಸಂಸ್ಕೃತಿ ಪ್ರಿಯರೆಲ್ಲ ಚಿಂತಿಸಬೇಕಾದುದು ಅಗತ್ಯವಾಗಿದೆ; ಅವರ ಹೊಣೆಯೂ ಆಗಿದೆ. ಈ ದಿಶೆಯಲ್ಲಿ ಇನ್ನೂ ಅನೇಕಾನೇಕ ವಿಮರ್ಶಾತ್ಮಕ ಕನ್ನಡ ಕಲಾಸಾಹಿತ್ಯದ ಪುಸ್ತಕಗಳು ಸೂಜ್ಞರಿಂದ ಹೊರಬರಬೇಕಿದೆ.

ಸಾವಿರಾರು ವರುಷಗಳಿಂದ ಬೆಳೆದುಬಂದ, ಬೆಳೆಯುತ್ತಲೇ ಇರುವ "ಕಲಾವೃಕ್ಷ" ಸಾವಿರಾರು ಕೊಂಬೆ-ರೆಂಬೆಗಳಿಂದ ಭೈರವ ಸದೃಶವಾಗಿ ನಿಂತಿದೆ. ಅನೇಕ ಕಲಾಪಂಥಗಳು, ವೈವಿಧ್ಯಪೂರ್ಣವಾದ ತಂತ್ರಗಳು ಬೆಳೆದು ಬಂದಿವೆ. ಇವೆಲ್ಲವುಗಳ ಬೆಳವಣಿಗೆಗಳನ್ನು ಕ್ರಮಬದ್ಧವಾಗಿ ಅಭ್ಯಸಿಸಿದಾಗ ಮಾತ್ರ ಕಲಾವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿ ಯಾದೀತು. ಕೇವಲ ಪ್ರಾಯೋಗಿಕ ಅಭ್ಯಾಸದಿಂದ ವಿದ್ಯಾರ್ಥಿಯು ಪರಿಪೂರ್ಣ ನಾಗಲಾರನೆಂಬುದನ್ನು ಗಮನಿಸಿಯೇ ಕಲಾಭ್ಯಾಸ ಕ್ರಮದಲ್ಲಿ "ಕಲಾಸಿದ್ಧಾಂತ"ದ ಅಭ್ಯಾಸವನ್ನೂ ಸೇರಿಸಲಾಗಿದೆ. ಈ ಗುರಿಯನ್ನು ಮುಂದಿರಿಸಿಕೊಂಡೇ "ಚಿತ್ರಕಲಾ ದರ್ಪಣ" ಸಿದ್ಧವಾಗಿದೆಯೇ ಹೊರತು ಇದೊಂದು ವಿಮರ್ಶಾತ್ಮಕವಾದ ಗ್ರಂಥವಲ್ಲ. ಸಾಧ್ಯವಾದ ಮಟ್ಟಿಗೆ "ಇದ್ದ ವಿಷಯಗಳನ್ನು ಇದ್ದಂತೆ" ಸಂಗ್ರಹಿಸಿದ ಚಿತ್ರಕಲಾದರ್ಪಣ ಕಲಾವಿದ್ಯಾರ್ಥಿಗಳಿಗೊಂದು ಮಾರ್ಗದರ್ಶಿಯಾದೀತೆಂಬ ಆಶಯ.

ಚಿತ್ರಕಲಾ ದರ್ಪಣದಲ್ಲಿ ಪ್ರಾಚೀನ ಕಲಾಸಂಸ್ಕೃತಿಗಳ, ಭಾರತೀಯ ಕಲಾ ಸಾಂಪ್ರದಾಯಗಳ, ಆಧುನಿಕ ಕಲಾಪಂಥಗಳ, ಚಿತ್ರಣ ವಿಧಾನಗಳ, ಪ್ರಾರಂಭಿಕ ಪಾಠಗಳ, ಕಲಾಶಾಲೆಗಳಲ್ಲಿ ಕಲಿಸುವ ಪಾಠಗಳ, ಗ್ರಾಫಿಕ್ ಕಲೆಗಳ ಸಂಕ್ಷಿಪ್ತ ಪರಿಚಯದೊಂದಿಗೆ ಅವುಗಳ ಚರಿತ್ರೆಯನ್ನೂ ಸಂಕ್ಷೇಪಿಸಿ "ಮುದ್ದೆ"ಗಳ ರೂಪದಲ್ಲಿ ಕೊಟ್ಟಿದೆಯಾದ್ದರಿಂದ ಕಲಾವಿದ್ಯಾರ್ಥಿಗಳಿಗೆ ಪರೀಕ್ಷೆಗಳಲ್ಲಿ ಉತ್ತರಿಸಲು ಸುಲಭರೂಪದ ಕೈಪಿಡಿಯಾದರೆ ನನ್ನ ಶ್ರಮ ಸಾರ್ಥಕ.

ಅನೇಕ ಗ್ರಂಥಗಳ ಅಧ್ಯಯನದಿಂದ ಸಿದ್ಧವಾದ ಚಿತ್ರಕಲಾ ದರ್ಪಣ ಆ ಎಲ್ಲಾ ಗ್ರಂಥಗಳಿಗೂ ಋಣಿಯಾಗಿದೆ.

ಈ ಪುಸ್ತಕವನ್ನು ಸಿದ್ಧಪಡಿಸಲು ನನ್ನ ಬೆನ್ನು ಚಪ್ಪರಿಸಿದವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರು ಮತ್ತು ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಕೆ. ಮುಕುಂದನ್ ಅವರುಗಳು. ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರು ಸ್ವತಃ ಚಿತ್ರಕಲಾವಿದರೂ, ಬರಹಗಾರರೂ, ಸತತಾಭ್ಯಾಸಿಗಳೂ ಆಗಿದ್ದು ಈ ಪುಸ್ತಕವನ್ನು ತಾವೇ ಬರೆಯಬಹುದಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಬೆಳೆಯುವ ಸಸಿಗೆ ನೀರೆರೆಯುವ ಬುದ್ಧಿಯ ತಿಪ್ಪೇಸ್ವಾಮಿಯವರ ಅಂತಃಕ್ಕರುಣೆಗೆ ನಾನು ಚಿರಋಣಿಯಾಗಿದ್ದೇನೆ.

"ಚಿತ್ರ ಕಲಾ ದರ್ಪಣ" ಕನ್ನಡಿಯಂತೆ ಥಳಥಳಿಸುವಂತೆ ಹೊರಬರಲು ಹಾಗೂ ಕರಡಚ್ಚುಗಳನ್ನು ತಿದ್ದುವಲ್ಲಿ ನನಗಿಂತ ಹೆಚ್ಚಾಗಿ

ಶ್ರಮಿಸಿ ಈ ಪುಸ್ತಕವು ಸರ್ವಾಂಗ ಸುಂದರವಾಗಿ ಹೊರಬರಲು ಅವಶ್ಯಕವಾದ ಚಿತ್ರಗಳನ್ನು ಸಂಗ್ರಹಿಸಿ ಪುಸ್ತಕದ ಪುಟಗಳನ್ನು ಅಂದಗೊಳಿಸಿದವರು ಲಲಿತಕಲಾ ಅಕಾಡೆಮಿಯ ಪ್ರದರ್ಶನ ಕಲಾವಿದರಾದ ಮಿತ್ರ ಶ್ರೀ ಎನ್. ಮರಿಶಾಮಾಚಾರ್‌ರವರಿಗೆ ಹಾಗೂ ಪುಸ್ತಕದ ರಚನೆಯಲ್ಲಿ ಸಹಕರಿಸಿದ ಮಿತ್ರ ಡಾ॥ ಅ. ಲ. ನರಸಿಂಹನ್ ಮತ್ತು ಸೋದರಿ ಶ್ರೀಮತಿ. ಎಸ್. ಧನಲಕ್ಷ್ಮಿ ಅವರಿಗೆ ನನ್ನ ನೆನಕೆಗಳು ಸಲ್ಲಲೇಬೇಕು. ಈ ಪುಸ್ತಕವನ್ನು ರಚಿಸಲು ಹುರಿದುಂಬಿಸಿದ ಅಕಾಡೆಮಿಯ ಸರ್ವಸದಸ್ಯರಿಗೂ ಪುಸ್ತಕವನ್ನು ಪ್ರಕಟಿಸಿದ ಅಕಾಡೆಮಿಗೂ ನನ್ನ ಅನಂತ ಕೃತಜ್ಞತೆಗಳು.

ಪುಸ್ತಕದಲ್ಲಿನ ಲೋಪದೋಷಗಳನ್ನು ಪ್ರಾಜ್ಞರು ತಿಳಿಸಿದಲ್ಲಿ ಮುಂದಿನ ಆವೃತ್ತಿಯಲ್ಲಿ ಅವುಗಳನ್ನು ತಿದ್ದಿ ಸರಿಪಡಿಸಲು ಯತ್ನಿಸುತ್ತೇನೆ.

ಸೊಂಡೂರು **ಎ. ಟಿ. ಕಾಳೆ.**

ಕಲೆ ಎಂದರೇನು?

ಕಲೆಯು ವಿಶ್ವವ್ಯಾಪಿಯಾದ ಒಂದು ಚಟುವಟಿಕೆಯಾಗಿದೆ. ಶತಮಾನಗಳಿಂದಲೂ ವಿದ್ವಾಂಸರು, ಕಲಾವಿದರು ಈ ಶಬ್ದವನ್ನು ಕುರಿತು ವ್ಯಾಖ್ಯೆಯನ್ನು ನೀಡಲು ವಾದಿಸುತ್ತ ಬಂದಿರುವರಾದರೂ ಈ ವರೆಗೆ ಅವರಲ್ಲಿ ಒಮ್ಮತ ಸಾಧ್ಯವಾಗಿಲ್ಲ. 'ಕಲೆ' ಮಾನವನ ದೈಹಿಕ ಇಲ್ಲವೆ ಬೌದ್ಧಿಕ ಜಾಣ್ಮೆ ಎಂದು ಸಾಮಾನ್ಯವಾಗಿ ಒಪ್ಪಬಹುದಾಗಿದೆ.

ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಮೂರ್ತಿಶಿಲ್ಪಕಲೆ ಮತ್ತು ವಾಸ್ತು ಶಿಲ್ಪಕಲೆಗಳು ಲಲಿತ ಕಲೆಗಳೆನ್ನಿಸಿಕೊಳ್ಳುತ್ತವೆ. ಇಂದು ಕಲೆಯು ಶ್ರವ್ಯ ಮತ್ತು 'ದೃಶ್ಯ' ಕಲೆಗಳಾಗಿ ವಿಭಾಗಿಸಲ್ಪಟ್ಟಿದೆ. ಸಾಹಿತ್ಯ, ಸಂಗೀತ ಕಲೆಗಳು ಶ್ರವ್ಯ ಕಲೆಗಳೆಂದೂ ವರ್ಣಚಿತ್ರ, ರೇಖಾಚಿತ್ರ, ಮೂರ್ತಿಶಿಲ್ಪ ಕೆತ್ತನೆ (Engravings) ಚಿತ್ರಗಳು ಮುಂತಾದವುಗಳನ್ನು ದೃಶ್ಯಕಲೆಗಳೆಂದೂ ಗುರುತಿಸಲಾಗುತ್ತದೆ.

ವಿಮರ್ಶಕರು ಬಹುಕಾಲದಿಂದಲೂ ಕಲೆಯ ವಸ್ತು ಇಲ್ಲವೆ ಕಲಾವಿದನ ಅಭಿವ್ಯಕ್ತಿ ಕೌಶಲವನ್ನು ಕುರಿತು ಬಹುವಾಗಿ ಚರ್ಚಿಸಿದ್ದಾರೆ. ಮೂರನೆಯ ದರ್ಜೆಯ ಕಲಾವಿದನು ಚಿತ್ರಿಸಿದ ಒಂದು ನಿಸರ್ಗ ದೃಶ್ಯ (Land Scape) ಮತ್ತು ಒಬ್ಬ ಪ್ರಥಮ ದರ್ಜೆಯ ಕಲಾವಿದನು ಚಿತ್ರಿಸಿದ ಗುಲಾಬಿ ಹೂವಿನ ಕರಡು ಚಿತ್ರ (Rough Sketch) ಇವುಗಳಲ್ಲಿ ಯಾವುದು ಕಲೆ, ಯಾವುದು ಕಲೆ ಅಲ್ಲ? ಒಂದು ವೇಳೆ ಸೌಂದರ್ಯವೇ ಕಲೆ ಎಂದು ಹೇಳಬಹುದಾದರೂ ಯಾವುದನ್ನು ಸೌಂದರ್ಯ ಎಂದು ಕರೆಯುವುದು? ಹದಿನಾರರ ಯುವತಿಯ ಭಾವಚಿತ್ರವಾಗಲೀ ಹಸಿರೆಲೆಗಳಿಂದಲೂ ಬಣ್ಣಬಣ್ಣದ ಪುಷ್ಪರಾಶಿಯಿಂದ ತುಂಬಿದ ವನರಾಜಿಯ ಚಿತ್ರವಾಗಲೀ ಸೌಂದರ್ಯಪೂರ್ಣ ಚಿತ್ರಗಳೆಂದು ಒಪ್ಪಿಕೊಂಡರೂ ಅತಿ ಕುರೂಪಿಯೂ, ಪಿಸುರು - ಪಿಚ್ಚುಗಣ್ಣಿನಿಂದ ಕೂಡಿದವಳೂ, ಹೊಲಸು ನಾರುವ ಹರಿದ ಬಟ್ಟೆಗಳನ್ನು ಧರಿಸಿದವಳೂ ಆದ ಭಿಕ್ಷುಕಿ ಮುದುಕಿಯೊಬ್ಬಳು ಕೊಳಚೆ ಗುಂಡಿಯ ಬದಿಯಲ್ಲಿ ಕುಳಿತುಕೊಂಡಿರುವಂತೆ ಚಿತ್ರಿಸಿದ ಅವಳ ಭಾವಚಿತ್ರವು ಸೌಂದರ್ಯಪೂರ್ಣ ಚಿತ್ರವಲ್ಲ ಎಂದು ಹೇಳಲಾದೀತೆ?

ವಿಶ್ವ ವಿಖ್ಯಾತ ಕಲಾಕೃತಿಗಳೆಲ್ಲ ಮೂಲತಃ ದುಃಖಾಂತ ಕೃತಿಗಳಾಗಿವೆ. ಗ್ರೀಕ್ ಕಾವ್ಯ ಮತ್ತು ನಾಟಕಗಳು - ಮಧ್ಯಕಾಲೀನ ಚರ್ಚುಗಳ ವಾಸ್ತುಶಿಲ್ಪ, ಮೂರ್ತಿಶಿಲ್ಪ ಮತ್ತು ಸಂಗೀತ-ಪ್ರಾಚೀನ ಇಟಾಲಿಯ ವರ್ಣಚಿತ್ರಗಳು-ಶೇಕ್ಸ್‌ಪಿಯರನ ಕೃತಿಗಳು-ಥಾಮಸ್

ಹಾರ್ಡಿಯ ಕಾವ್ಯ ಹಾಗೂ ಉಪನ್ಯಾಸಗಳು ಮೊದಲಾದ ಆಧುನಿಕ ಬರಹಗಳು ಮಾನವ ಜೀವನದ ಕ್ರೌರ್ಯಗಳನ್ನೂ ದುಃಖಮಯ ಸನ್ನಿವೇಶಗಳನ್ನೂ ಪ್ರತಿನಿಧಿಸುತ್ತವೆ. ಭಾರತೀಯರಾದ ಗುರುದೇವ ರವೀಂದ್ರನಾಥ ಟಾಗೋರ, ಕುವೆಂಪು, ಶಿವರಾಮ ಕಾರಂತ, ವಿ.ಕೃ.ಗೋಕಾಕ, ಅಂಬಿಕಾತನಯ ದತ್ತ, ಕೆ.ಕೆ.ಹೆಬ್ಬಾರ್, ಎಂ. ಎಫ್. ಹುಶೇನ್, ನಂದಲಾಲ ಬೋಸ, ಅವನೀಂದ್ರನಾಥ ಟಾಗೋರ, ಕೆ. ವೆಂಕಟಪ್ಪ, ಶಿವಾಕ್ಷ ಚಾವಡಾ ಮುಂತಾದ ಪ್ರಭೃತಿಗಳ ಕಾವ್ಯ, ಉಪನ್ಯಾಸ ಹಾಗೂ ಕಲಾಕೃತಿಗಳು ಸಹ ದುಃಖಮಯವಾದ ಕ್ರೂರವೂ ವಿಲಕ್ಷಣವೂ ಆದ ಜೀವನಕ್ಕೆ ಕನ್ನಡಿ ಹಿಡಿದು ಜೀವನದ ವಿರಾಟ್ ಸ್ವರೂಪವನ್ನೇ ತೋರಿಸುತ್ತವೆ. ಆರ್. ಕೆ. ಲಕ್ಷ್ಮಣ, ಶಂಕರ್, ಮಾರಿಯೋ, ಡಿಝಿ, ಅಬು, ಗೋರಕ್ಷಕ ಮೊದಲಾದ ವ್ಯಂಗ್ಯ ಚಿತ್ರಕಾರರಾಗಲೀ ಕಾತಾಹಾಧರಿಸಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅ.ರಾ. ಮಿತ್ರ, ಶ್ರೀರಂಗ, ಕೈಲಾಸಂ, ಬೀಚಿ ಮುಂತಾದ ವಿಡಂಬನ ಬರಹಗಾರರಾಗಲೀ ಜೀವನದ ಚಿತ್ರವನ್ನು ವಿಡಂಬನಾತ್ಮಕವಾಗಿ, ಯಥಾವತ್ತಾಗಿ ಚಿತ್ರಿಸುವ ರೀತಿ ನಮಗೆಲ್ಲ ವಿಚಿತ್ರವಾಗಿ ಕಂಡೀತು; ಅವರು ತಮ್ಮದ್ದೇ ಆದ ರೀತಿಯಲ್ಲಿ ಪಡೆಯಬಹುದಾದ ರಸಾನುಭೂತಿಯ ಅರಿವೂ ಆದೀತು. ಇದೆಲ್ಲವುಗಳ ಸ್ಥೂಲ ಅಭ್ಯಾಸದಿಂದ "ಕಲೆ ಎಂದರೇನು"-ಎಂಬುದರ ಅರ್ಥದ ಕಲ್ಪನೆ ನಮಗಾಗುತ್ತಿದೆಯೇ ಹೊರತು ಅದರ ವ್ಯಾಖ್ಯೆ(Definition)ಯನ್ನು ರೂಪಿಸುವುದು ಕಷ್ಟ ಸಾಧ್ಯ. ಇದೆಲ್ಲ ಮಾನವನ ಬುದ್ಧಿ ಮತ್ತೆಯನ್ನು ಕುರಿತಾಯಿತು.

ಇನ್ನು ಬಿದಿರನ್ನು ಸೀಳಿ ಬುಟ್ಟಿಯನ್ನು ಹೆಣೆಯುವದು, ಚಿತ್ರ ವಿಚಿತ್ರವಾದ ಮರಗೆಲಸಗಳನ್ನು(Wood work) ತಯಾರಿಸುವುದು, ದೊಡ್ಡ ದೊಡ್ಡ ಬಂಡೆಗಳನ್ನು ಕತ್ತರಿಸಿ ಪ್ರತಿಮೆಗಳನ್ನು ತಯಾರಿಸುವುದು, ಬಂಡೆಯ ಬೆಟ್ಟವನ್ನು ಕೊರೆದು ವಿಹಾರ, ಚೈತ್ಯಾಲಯ, ದೇವ ಮಂದಿರಗಳನ್ನು ನಿರ್ಮಿಸುವುದು. ವಿಮಾನ, ಹಡಗುಗಳನ್ನು ತಯಾರಿಸುವುದು, ಸೈಕಲ್ ಸವಾರಿ, ಈಜುವುದು, ಕುಸ್ತಿಯಾಡುವುದೇ ಮೊದಲಾದವುಗಳು ಮಾನವನ ದೈಹಿಕ ಪರಿಶ್ರಮ ಹಾಗೂ ಬುದ್ಧಿ ಮತ್ತೆಗಳಿಲ್ಲದೇ ಸಾಧ್ಯವಾಗಲಾರದು. ಈ ಎಲ್ಲ ವಿವೇಚನೆಗಳಿಂದ "ಅಭಿವ್ಯಕ್ತಿ ಕೌಶಲವೇ ಕಲೆ" ಎಂದು ಸಾಮಾನ್ಯವಾದ ಒಂದು ವ್ಯಾಖ್ಯೆಯನ್ನು ಕಂಡುಕೊಳ್ಳಬಹುದಾಗಿದೆ. ಕಲೆಯ ಪರಿಮಿತಿ ಕಲಾವಿದನ ಅಭಿವ್ಯಕ್ತಿ ಕೌಶಲ ಸಾಮರ್ಥ್ಯಕ್ಕನುಗುಣವಾಗಿರುತ್ತದೆ. ಕಲಾವಿದನು ತಾನು ಆರಿಸಿಕೊಂಡಿರುವ ವಸ್ತುವನ್ನು ಕುರಿತು "ತನ್ನ ವಿಚಾರ ಹಾಗೂ ಭಾವನೆಗಳನ್ನು ಅಭಿವ್ಯಕ್ತಿಸುವ ಚಮತ್ಕಾರವೇ ಕಲೆ". ಈ ಚಮತ್ಕೃತಿಯು ಚಿತ್ರರೇಖನ (Drawing), ವರ್ಣಚಿತ್ರ ನಿರ್ಮಾಣ (Painting), ಮೂರ್ತಿಶಿಲ್ಪ (Sculpture), ಸಂಗೀತ, ಸಾಹಿತ್ಯ ಹಾಗೂ ವಾಸ್ತುಶಿಲ್ಪ (Architecture) ರಚನೆಯಲ್ಲಿ ರೂಪಿತವಾಗುವಂತೆ ದೈಹಿಕ ಪರಿಶ್ರಮದ ಕೃತಿಯಲ್ಲಿ ರೂಪಿತವಾಗಲಾರದು. ಚಿತ್ರ, ಶಿಲ್ಪ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ ಕೃತಿಗಳಲ್ಲಿ ಮನುಷ್ಯನ ಭಾವನೆ ಹಾಗೂ ವಿಚಾರಗಳು ಅಭಿವ್ಯಕ್ತಿ ಮಾಧ್ಯಮಗಳಾಗುತ್ತವೆ. ರಸಾನುಭೂತಿಯ ಚಿಲುಮೆಗಳಾಗಿ ಚಿಮ್ಮುತ್ತವೆ. ಆದ್ದರಿಂದ ಅವುಗಳನ್ನು ಮಾತ್ರ ಲಲಿತಕಲೆಗಳು ಎಂದು ಕರೆಯಲಾಗುತ್ತದೆ. ಸುತ್ತಲಿನ ಪರಿಸರದ ವಿಷಯದಲ್ಲಿ

ತಿಯೊಬ್ಬ ವ್ಯಕ್ತಿಗೂ ತನ್ನದೆ ಆದ ಒಂದು ಆಂತರಿಕ ನೋಟವಿರುತ್ತದೆ. ತಾನು ೋಡುವ ವಸ್ತುವನ್ನು ಕುರಿತು. ತನ್ನದೇ ಆದ ಪರಿಕಲ್ಪನೆಯಿಂದ ತನ್ನ ಭಾವನೆಗಳನ್ನು ್ಯಕ್ತಪಡಿಸುತ್ತಾನೆ.ಯಾವುದೇ ಒಂದು ಕಲಾಕೃತಿಯು ಕಲಾವಿದನ ಕೇವಲ ಅನುಭವದಿಂದಾಗಲೀ ುದ್ಧಿಶಕ್ತಿಯಿಂದಾಗಲೀ ಸ್ಫೂರ್ತಿಗೊಂಡಿರದೇ ಸೀಮಿತ ವೇಳೆಯಲ್ಲಿ ನಿರ್ದಿಷ್ಟವಾದ ಾವನೆಗಳ ಒತ್ತಡದಿಂದ ಸ್ಫೂರ್ತಿಗೊಂಡಿರುತ್ತದೆ.

ಕಾಲದಿಂದ ಕಾಲಕ್ಕೆ ಬದುಕಿನ ರೀತಿ ಬದಲಾದಂತೆ ಕಲೆಯೂ ಬದಲಾವಣೆಯಾಗುತ್ತಲೇ ಂದಿದೆ ಎಂಬುದು ಸರ್ವವಿದಿತ. ಒಂದು ಕಾಲದ ಸಂಸ್ಕೃತಿಯಿಂದ ಇನ್ನೊಂದು ಾಲದ ಸಂಸ್ಕೃತಿಗೆ ಸಂಬಂಧವನ್ನು ಜೋಡಿಸುವ ಸಂಪರ್ಕ ಸಾಧನೆಯಾಗಿರುವ ಾಷೆಯಂತೆ ಕಲೆಯೂ ಸಂಪರ್ಕ ಮಾಧ್ಯಮವಾಗಿದೆ; ಸಂಪರ್ಕ ಸೇತುವೆಯಾಗಿದೆ. ಲೆಯು ಒಂದು ಸಾಮಾಜಿಕ, ಧಾರ್ಮಿಕ ಅಗತ್ಯವೂ ಆಗಿದೆ ಎಂಬುದಕ್ಕೆ ೇವಾಲಯಗಳ, ಚರ್ಚುಗಳ ನಿರ್ಮಾಣ ಹಾಗೂ ಅವುಗಳಲ್ಲಿ ಚಿತ್ರಿಸಲ್ಪಟ್ಟ ಚಿತ್ರಗಳು ಾಮಾಜಿಕ ಅಗತ್ಯವಾದ ಧರ್ಮದೊಂದಿಗೆ ಸಮನ್ವಯಗೊಂಡುದನ್ನು ಕಾಣುತ್ತೇವೆ. ಲ್ಲದಿದ್ದಲ್ಲಿ ಗುಹಾಂತರ್ದೇವಾಲಯಗಳಾಗಲೀ, ಪಿರಮಿಡ್ಡುಗಳಾಗಲೀ, ಚರ್ಚುಗಳಾಗಲೀ, ಲಾಪ್ರಪೂರ್ಣವಾದ ದೇವಮಂದಿರಗಳಾಗಲೀ ಹೇಗೆ ಬೆಳೆಯುತ್ತಿದ್ದವು?

ಕಲೆಯು ಮಾನವನ ಹುಟ್ಟಿನೊಂದಿಗೇ ದೈವದತ್ತವಾಗಿ ಬಂದ ಒಂದು ಮತ್ಕಾರವೇ ಸರಿ. ಸಾವಿರಾರು ವರುಷಗಳಿಂದ ಮಾನವ ಜನಾಂಗಗಳ ಬೆಳವಣಿಗೆಯೊಂದಿಗೆ ೂತೆ ಜೊತೆಯಾಗಿ ಅವನ ಬದುಕಿನ ಪ್ರಮುಖ ಅಂಗವಾಗಿ ಕಲಾ ಸಂಸ್ಕೃತಿಯೂ ಳವಣಿಗೆಯಾಗುತ್ತಲೇ ಬಂದಿದೆ.

ತಿಹಾಸ ಪೂರ್ವಕಾಲದ ಕಲೆ

ವಿಶ್ವದ ಮೊಟ್ಟ ಮೊದಲ ಚಿತ್ರಕಾರನು ೫೦,೦೦೦ ವರುಷಗಳ ಹಿಂದೆ ಜೀವಿಸಿದ್ದ ದಿ ಮಾನವನಾಗಿದ್ದನು. ಗುಡ್ಡ ಬೆಟ್ಟಗಳಲ್ಲಿರುವ ಬಂಡೆಗಳ ಮಾಡುಗಳೇ ಆದಿಮಾನವರು ಾಸಿಸುವ ಮನೆಗಳಾಗಿದ್ದವು. ಕಾಡು ಪ್ರಾಣಿಗಳೊಂದಿಗೆ ನಿತ್ಯ ಜೀವನವನ್ನು ಾಗಿಸುತ್ತಿದ್ದ ಮಾನವನೂ ಕಾಡುಪ್ರಾಣಿ ಜೀವನವನ್ನೇ ಸಾಗಿಸುತ್ತಿದ್ದನು. ಕಾಡುಪ್ರಾಣಿಗಳ ೇಟೆಯಾಡಿ ಹಸಿಮಾಂಸವನ್ನೇ ತಿನ್ನುತ್ತಿದ್ದ ಆದಿ ಮಾನವನು ಬರಬರುತ್ತ ತನ್ನ ೀವನವನ್ನು ಕ್ರಮಬದ್ಧ ಗೊಳಿಸಿಕೊಂಡನೆಂಬುದನ್ನು ನಾವು ಚರಿತ್ರೆಯ ಮೂಲಕ ಿದುಕೊಂಡಿದ್ದೇವೆ. ಈ ತರಕಷ್ಟವಾದ ಬದುಕಿನೊಂದಿಗೆ ಆದಿಮಾನವನು ಕಲೆಯನ್ನೂ ್ಯಗೂಡಿಸಿಕೊಂಡಿದ್ದನೆಂಬುದಕ್ಕೆ ಈ ಆದಿಮಾನವರು ವಾಸಿಸುತ್ತಿದ್ದ ಗುಡ್ಡ ಬೆಟ್ಟಗಳಲ್ಲಿರುವ ಂಡೆಗಳ ಸ್ವಾಭಾವಿಕವಾದ ಗುಹೆಗಳಲ್ಲಿ ಅವನು ಚಿತ್ರಿಸಿದ ಚಿತ್ರಗಳು ಉದಾಹರಣೆಗಳಾಗಿವೆ. ಶ್ವದ ಅನೇಕ ಕಡೆಗಳಲ್ಲಿ ಈ ಆದಿಮಾನವರು ವಾಸಿಸಿದ್ದ ಅಸಂಖ್ಯಾತ ಗುಹೆಗಳು ಮಗಿಂದು ದೊರಕಿವೆ.

ಪ್ರಾಚೀನ ಶಿಲಾಯುಗದ ಮಾನವರು ಚಿತ್ರಿಸಿದ ವರ್ಣಚಿತ್ರಗಳನ್ನೂ ಕೊರೆತದ ತ್ರಗಳನ್ನೂ ಪ್ರಪ್ರಥಮವಾಗಿ ಸ್ಪೇನಿನಲ್ಲಿಯೂ ಅನಂತರ ಫ್ರಾನ್ಸ್‌ನಲ್ಲಿಯೂ



೧) ಲಾಸ್‌ಕಾಕ್ಸ್

ಸಂಶೋಧಿಸಲಾಯಿತು. ಈ ಸಂಶೋಧನೆಗಳ ಫಲವಾಗಿ ಆದಿಮಾನವನ ಜೀವಿತದ ಕಲ್ಪನೆ ಬರುತ್ತದೆ. ಆದಿಮಾನವನಲ್ಲಿ ಕಲಾಸಂಸ್ಕೃತಿಯು ಅವನ ಬದುಕಿಗೆ ಅವಶ್ಯವಾದ ಒಂದು ಸಾಧನೆಯಾಗಿ, ಬದುಕಿನ ಅಂಗವಾಗಿ ಸೆಳೆದುಬಂದಿತು. ಅದೆಷ್ಟೋ ಕಾಲದವರೆಗೆ "ಚಿತ್ರವೇ ಆದಿಮಾನವನ" ಭಾಷೆಯಾಗಿತ್ತು ಎಂಬುದಕ್ಕೆ ಚೀನಾ, ಜಪಾನ್, ಗ್ರೀಸ, ಈಜಿಪ್ಟ್ ಹಾಗೂ ಸಿಂಧೂ ಸಂಸ್ಕೃತಿಗಳ "ಚಿತ್ರಲಿಪಿ" ನಿದರ್ಶನವಾಗಿದೆ.

ಈ ಆದಿಮಾನವನು ದೈವ ಭಕ್ತನೂ ಆಗಿದ್ದನಲ್ಲದೇ ಮೂರ್ತಿಕಲೆಯನ್ನೂ ತಿಳಿದಿದ್ದನೆಂಬುದನ್ನು ಕೆಲವು ಗವಿಗಳಲ್ಲಿ ದೊರೆತ ಕೆತ್ತನೆಯ ಕೃತಿಗಳಿಂದಲೂ ಮಿದುವಾದ ಮಣ್ಣಿನಿಂದ ತಯಾರಿಸಿದ ಚಿಕ್ಕ ಚಿಕ್ಕ ಪ್ರತಿಮೆಗಳಿಂದಲೂ, ಕಲ್ಲುಬಂಡೆಗಳ ಮೇಲೆ ಕೆತ್ತನೆ ಮಾಡಿದ ದೇವತೆಗಳ ಚಿತ್ರಗಳಿಂದಲೂ ನಾವು ತಿಳಿಯಬಹುದಾಗಿದೆ.

ಪ್ರಾಚೀನ ಶಿಲಾಯುಗದ ಮಾನವರು ತಮ್ಮ ಮನಸ್ಸನ್ನೂ ಬುದ್ಧಿಯನ್ನೂ ಬಹು ಕಷ್ಟಸಾಧ್ಯವಾದ ರೀತಿಯಲ್ಲಿ ಬಳಸುತ್ತಿದ್ದರೆಂಬುದನ್ನು ಅವರೇ ಚಿತ್ರಿಸಿದ ಚಿತ್ರಗಳಿಂದ ಕಂಡುಕೊಳ್ಳಬಹುದು. ತಮ್ಮ ಆಹಾರದ ಬೇಟೆಯ ಪ್ರಾಣಿಯ ಚಿತ್ರವನ್ನು ವಾಸದ ಗೋಡೆಗಳ ಮೇಲೆ ಚಿತ್ರಿಸಿ, ಕಲ್ಲಿನಿಂದ ತಯಾರಿಸಿದ ಭರ್ಚಿ, ಕೊಡಲಿ ಮುಂತಾದ ಶಿಲಾಯುಧಗಳಿಂದ ಆ ಪ್ರಾಣಿಯ ಚಿತ್ರದ ದೇಹದ ಮೇಲೆ ಚುಚ್ಚಿ, ಇರಿದು ಗುರಿಹೊಡೆಯುವ ಕಲೆಯನ್ನು ಅವರು ಅಭ್ಯಾಸ ಮಾಡುತ್ತಿದ್ದರು; ತಮ್ಮ ಮಕ್ಕಳಿಗೂ

ಲಿಸಿಕೊಡುತ್ತಿದ್ದರು. ಈ ಚಿತ್ರಗಳಲ್ಲಿ ಬಹುವಾಗಿ ಗಿಡಗಳ ಹಾಗೂ ಬಂಡೆಗಲ್ಲುಗಳ ಂದೆ ಅಡಗಿದ ಜಿಂಕೆ, ಕಾಡುಕೋಣ ಮೊದಲಾದ ಪ್ರಾಣಿಗಳನ್ನೂ ಅವುಗಳ ಬೇಟೆಯಾಡುತ್ತಿರುವ ಮಾನವರನ್ನೂ ಚಿತ್ರಿಸಲಾಗಿದೆ.

ಆದಿಮಾನವನ ಚಿತ್ರಕಲೆಯ ತಂತ್ರ

ಈ ಯುಗದ ಮಾನವರು ಚಿತ್ರಿಸಿದ, ಕೆತ್ತನೆ ಮಾಡಿದ ಇಲ್ಲವೇ ಕೊರೆತದ ಚಿತ್ರಗಳಲ್ಲಿ ವೈವಿಧ್ಯತೆ ವರ್ಣರೇಖಾವಿನ್ಯಾಸ ಇಲ್ಲವೇ ತುಂಬುಚಿತ್ರ(Filled in masses)ಗಳ ಬೆಳವಣಿಗೆಗಳನ್ನು ಕಾಣಬಹುದು. ಈ ಯುಗದ ಕಲಾಕಾರನು ತನ್ನ ಚಿತ್ರರಚನೆಯಲ್ಲಿ ಕೆಂಪು, ಹಳದಿ ಹಾಗೂ ಕಂದು ಬಣ್ಣಗಳನ್ನು ಕಾಡಿಗೆ ಕಪ್ಪು(Lamp black) ಇಲ್ಲವೇ ಇದ್ದಿಲಿನ ಪುಡಿಗಳೊಂದಿಗೆ ಬೆರೆಸಿ, ಕಲ್ಲನ್ನು ಕೊರೆಯುವದಕ್ಕಾಗಿ ಹರಿತವಾದ ಉಪಕರಣಗಳನ್ನು ಬಳಸಿ ತನ್ನ ಚಿತ್ರವನ್ನು ಪೂರ್ಣಗೊಳಿಸಿದ್ದಾನೆ. ಬಣ್ಣಗಳಲ್ಲಿ ಪ್ರಾಣಿಗಳ ಕೊಬ್ಬು ಇಲ್ಲವೇ ನೆಣವನ್ನು ಬೆರೆಸಿ ಪೊಳ್ಳಾದ ಎಲುಬುಗಳಲ್ಲಿ ಶೇಖರಿಸಿ ಇಡುತ್ತಿದ್ದರು. ಈ ಆದಿಮಾನವನು ತನ್ನ ಬಣ್ಣಗಳನ್ನು ದೊರಕಿಸಲು ಬಹುತರವಾಗಿ ಕಲ್ಲುಗಳನ್ನು ಕುಟ್ಟಿ ಪುಡಿಮಾಡಿ ನೀರಿನಲ್ಲಿಯೋ ಸಗಣಿಯಲ್ಲಿಯೋ ಬೆರೆಸಿ ದ್ರವವರ್ಣಗಳನ್ನು ಸಿದ್ಧಮಾಡಿಟ್ಟು ಕೊಂಡಿರಬೇಕು; ಕಟ್ಟಿಗೆಯನ್ನು ಕೆತ್ತಿ ಕುಂಚಗಳನ್ನು ಮಾಡಿಕೊಂಡಿರಬೇಕು ಎಂಬುದನ್ನು ಕ್ರಿ.ಪೂ.೨೦,೦೦೦ ವರುಷಗಳ ಹಿಂದಿನವೆಂದು ತಿಳಿಯಲಾದ ಮಣ್ಣಿನ ಪಾತ್ರೆ-ಪಡಗಗಳಿಂದ ತಿಳಿಯಬಹುದು. ಈ ಕಲಾವಿದನು ಬಹುತರವಾಗಿ ಬಿಳಿಯ ಬಣ್ಣವನ್ನು ಬಳಸಲೇ ಇಲ್ಲ. ಹಸಿರು ಮತ್ತು ನೀಲಿ ಬಣ್ಣಗಳ ಬಳಕೆ ಕ್ವಚಿತ್ತಾಗಿ ಕಂಡುಬರುತ್ತದೆ. ಸ್ಪೇನಿನ ಅಲ್ತಾಮಿರಾ ಗುಹೆಯಲ್ಲಿ ನೇರಿಳೆ(Violet)ಬಣ್ಣದ ಝುಳುಕುಗಳು ಕಂಡು ಬರುತ್ತವೆ. ಮೊದಮೊದಲು ಕಂದು ಮಿಶ್ರಿತ ಹಳದಿ(Yellow Ocher)ಬಣ್ಣದ ಹುಡಿಯಿಂದ ಲೇಪಗಳನ್ನು ಸಿದ್ಧಮಾಡಿಟ್ಟುಕೊಂಡು, ಅದನ್ನೇ ಕೆತ್ತಿ ಮೊನೆಗಳಿಸಿ ನಾವು ಬಣ್ಣದ ಕಡ್ಡಿಗಳನ್ನು(Pastels) ಬಳಸುವ ರೀತಿಯಲ್ಲಿ ಬಳಸುತ್ತಿದ್ದ. ಈ ಕಲಾವಿದನು ಕಾಲಾನಂತ ರದಲ್ಲಿ ಬಣ್ಣದ ಹುಡಿಯನ್ನು ಪ್ರಾಣಿಗಳ ಕೊಬ್ಬು ಮೊದಲಾದ ಸ್ನಿಗ್ಧ ಪದಾರ್ಥಗಳಲ್ಲಿ ಬಣ್ಣಗಳನ್ನು ಅಣುಗೊಳಿಸಿಕೊಂಡಿರಬೇಕು. ಕೆಲವು ಬಾರಿ ಬಣ್ಣದ ಹುಡಿಯಲ್ಲಿ ರಕ್ತವನ್ನು ಬೆರೆಸಿಕೊಂಡಿರುವುದೂ ನಮ್ಮ ಅನುಭವಕ್ಕೆ ಬರುತ್ತದೆ. ಅನೇಕ ಸಲ ಕೈಬೆರಳುಗಳನ್ನೂ ಪಕ್ಷಿಗಳ ಗರಿಗಳನ್ನೂ ಗೋಡೆಗಳ ಮೇಲಿಟ್ಟು ದ್ರವವರ್ಣಗಳನ್ನು ಬಾಯಿಯಿಂದ ಊದಿ (ಅವಿಂದು ಸ್ಪ್ರೇ ಮಾಡುವ ರೀತಿಯಲ್ಲಿ) ಸಿಂಪಡಿಸಿ ಚಿತ್ರಗಳನ್ನೂ ಪೂರ್ಣಗೊಳಿಸಿದ ರೀತಿ ಚೇತೋಹಾರಿಯಾಗಿರುತ್ತದೆ. ಆಸ್ಟ್ರೇಲಿಯದ ಮೂಲನಿವಾಸಿ ಕಲಾವಿದರು ಇಂದಿಗೂ ಈ ತಂತ್ರವನ್ನು ಬಳಸುತ್ತಿರುವುದನ್ನು ಕಾಣುತ್ತೇವೆ.

ಪ್ರಾಚೀನ ಶಿಲಾಯುಗದಲ್ಲಿ ಜೀವಿಸಿದ್ದ ಕಾಡುಕೋಣ, ರೇನಡಿಯರ, (ಹಿಮಸಾರಂಗ) ಕಾಡುಕುದುರೆಗಳು, ಮಮಾಥ್, ಕೂದಲುಳ್ಳ ಘೇಂಡಾಮೃಗ, ಗವಿಕರಡಿ, ಕಾಡು ಹಂದಿ, ತೋಳಗಳೇ ಮೊದಲಾದ ಕಾಡು ಪ್ರಾಣಿಗಳನ್ನೂ ಪಕ್ಷಿ ಮತ್ತು ಮೀನುಗಳನ್ನೂ ಗುಂಪು ಗುಂಪಾಗಿಯೂ ಒಂಟಿಯಾಗಿಯೂ ಗುಹೆಯ ಗೋಡೆ, ಒಳಮಾಳಿಗೆಗಳಲ್ಲಿ ಚಿತ್ರಿಸಲಾಗಿದ್ದು ಆದಿಮಾನವನ ಕಲಾಪ್ರಜ್ಞೆಗೆ ಸಾಕ್ಷಿಭೂತಗಳಾಗಿ ಇಂದಿಗೂ ಉಳಿದುಕೊಂಡಿರುತ್ತವೆ.

ಉದ್ದೇಶ ರಹಿತವಾದ ಈ ಚಿತ್ರಗಳು ಅಸಂಖ್ಯಾತವಾಗಿದ್ದು ಅಲ್ಲಲ್ಲಿ ಬಿಲ್ಲುಬಾಣಗಳೊಂದಿಗೆ ಜಿಂಕೆಗಳ ಬೇಟೆಯಾಡುತ್ತಿರುವ ಮಾನವರ ಚಿತ್ರಗಳೂ ಮರವನ್ನು ಹತ್ತಿ ಕಾಡುಜೇನನ್ನು ಬಿಡಿಸುತ್ತಿರುವ ಹೆಂಗಸು ಮತ್ತು ಅವಳ ಸುತ್ತ ಝೇಂಕರಿಸುತ್ತ ಹಾರಾಡುತ್ತಿರುವ ಪಾರಿವಾಳಗಳ ಗಾತ್ರದ ಜೇನು ಹುಳಗಳ ಚಿತ್ರ ಮುಂತಾದ ಉದ್ದೇಶಪೂರ್ಣ ಚಿತ್ರಗಳೂ ಈ ಪ್ರಾಕ್ತನ ಗುಹಾ ಚಿತ್ರಗಳಲ್ಲಿ ಕಂಡುಬರುತ್ತವೆ. ಕೆಲವು ಗುಹೆಗಳಲ್ಲಿ ಚಿತ್ರಿತವಾದ ಚಿತ್ರಗಳು, ಕೆತ್ತನೆಯ ಚಿತ್ರಗಳು ಒಂದು ರೀತಿಯ ಶೀಘ್ರಲಿಪಿ(Short hand)ಯಂತೆ ಚಿತ್ರಿಸಲ್ಪಟ್ಟಿದ್ದು ಬಹುತರವಾಗಿ ಅಭಿವ್ಯಕ್ತಿ ಮಾಧ್ಯಮದ ಭಾಷಾರೂಪದಲ್ಲಿ ಮುನ್ನಡೆದವುಗಳಾಗಿರಬೇಕು.

ಸ್ಪೇನಿನ ಆಲ್ತಾಮಿರಾ, ಫಾಂಟ್-ಡಿ-ಗಾಮ್, ಲೆಸ್ ಕಾಂಬರೆಲಸ್, ಲಾಸ್ಕೊ, ನಿಆಕ್ಸ್, ಪ್ರಾಯ್ಸ್ ಫ್ರೆರಸ್ ಮುಂತಾದ ಗುಹೆಗಳು ಶಿಲಾಯುಗದ ಮಾನವನ ಕಲೆಯನ್ನು ತೋರ್ಪಡಿಸುವ ಅತ್ಯುತ್ತಮ ಮಾದರಿಗಳಾಗಿವೆಯೆಂದು ಪರಿಗಣಿಸಲಾಗಿದೆ. ಈ ಗುಹೆಗಳಲ್ಲದೇ ಕೋವಾಲನಸ್, ಸ್ಯಾಕ್ಸೃನ್, ಎಲ್ ಕ್ಯಾಸ್ಟಿಲೋ, ಲಾ ಪಸೀಗಾ, ಪಿಂಡಾಲ, ಬುಕ್ಸು, ಪೆನಾ ಡಿ ಕ್ಯಾಂಡಮೋ, ಲಾಸ್ ಕ್ಯಾಸರೇಸ್, ಲಾ ಪಿಲೇಟಾ ಮೊದಲಾದ ಗವಿಗಳು ಸ್ಪೇನಿನ ಶಿಲಾಯುಗದ ಕಲೆಯ ಮಹತ್ವದ ಚಿತ್ರಶಾಲೆಗಳಾಗಿರುತ್ತವೆ.

ಫ್ರಾನ್ಸ್‌ನಲ್ಲಿ ಕಂಡು ಬಂದಿರುವ ಬಾಮ್ ಲಾತ್ರೋನ್, ಛಾಬಾಟ್, ಗರ್ಗಸ್, ಲೀ.ಪೋರ್ಟೆಲ್, ಮಾಂಟೆಸ್ಪ್ಯಾನ್, ಎಬೋ, ಇಸ್ತುರಿಟ್ಸ್, ಪೆಚ್‌ಮರ್ಲೆ, ಸೆರ್ಗಿಯಾಕ್, ರೆವ್ಡರ್‌ಡಿತ್, ಲಾಸೆಲ್, ಕ್ಯಾಪ್ ಬ್ಯಾಂಕ್, ಲಾಗ್ರೀಜ, ಬರಾಟೋತೇಯ್ಯುತ್, ಕೆಂಫಿಗ್ನ್ಯಾಕ್, ಪೇರ್ ನಾನ್ ಪೇರ್, ರಾತ್-ಡಿ-ಸರ್ಸ, ಲಾ ಲ್ಯಾಗ್ದಲ್ಯೆನ್ ಮುಂತಾದ ಗವಿಗಳು ಪ್ರಾಚೀನ ಶಿಲಾಯುಗದ ಮಾನವನಿಂದ ಚಿತ್ರಿಸಲ್ಪಟ್ಟ ಚಿತ್ರಗಳಿಂದ ತುಂಬಿಹೋಗಿವೆ.

ಇಟಾಲಿಯ ಲೆವಾಂಝೋ ರೋಮಾನೆಲಿ, ಅಡೌರಾ, ನಿಸ್ಸೇಮಿ ಮೊದಲಾದ ಗವಿಗಳ ಕಲಾಕೃತಿಗಳು ಉಲ್ಲೇಖನೀಯವಾದವುಗಳಾಗಿವೆ. ಅಲ್ಲದೇ ಸ್ಪೇನದ ಬಂಡೆಗಲ್ಲುಗಳ ಮೇಲೂ ಮಾಘುರೇಬ ಮತ್ತು ಸಹಾರಾಗಳ ಬಂಡೆಗಲ್ಲುಗಳ ಮೇಲೂ ಇತಿಹಾಸ ಪೂರ್ವಕಾಲದ ಯುರೋಪಿನಲ್ಲಿ ವಾಸಿಸಿದ್ದ ಆದಿಮಾನವನ ಚಿತ್ರಗಳು ಚಿತ್ರಿತವಾಗಿದ್ದು ಒಂದೊಂದೂ ಕಲಾಭಂಡಾರವೇ ಆಗಿರುತ್ತದೆ.

ದಕ್ಷಿಣ ಆಫ್ರಿಕೆಯಲ್ಲಿ ನೆಲೆಸಿದ್ದ ಆದಿಮಾನವರು ರಚಿಸಿದ ಅಸಂಖ್ಯಾತ ಕಲಾಕೃತಿಗಳು ಡ್ರೇಕನ್ಸ್ ಬರ್ಗ್ ಪರ್ವತ ಶ್ರೇಣಿಯಲ್ಲಿಯೂ, ಕೇವ ಪ್ರಾವಿನ್ಸ್, ಬಸುಟೋ ಲ್ಯಾಂಡ್, ಆರೇಂಜ ಫ್ರೀಸ್ಟೇಟ್, ನೈಋತ್ಯ ಆಫ್ರಿಕ, ಟ್ರಾನ್ಸ್‌ಲಾಲ, ಸ್ವಾಝೀಲ್ಯಾಂಡ್ ಮುಂತಾದ ಕಡೆಗಳಲ್ಲಿರುವ ಬಂಡೆಗಳ ಬೆಟ್ಟಗಳ ಶ್ರೇಣಿಯಲ್ಲಿಯೂ ದೊರಕಿವೆ. ಆಸ್ಟ್ರೇಲಿಯ ಖಂಡದಲ್ಲಿಯೂ ಇಂಥ ಅನೇಕ ನಿವೇಶನಗಳು ದೊರಕಿದ್ದು ಉತ್ತರ ಭಾಗದ ಆರ್ನ್ಹೆಮ್‌ಲ್ಯಾಂಡದಿಂದ ಹೊರಟು ಪಶ್ಚಿಮ ಆಸ್ಟ್ರೇಲಿಯ, ದಕ್ಷಿಣ ಆಸ್ಟ್ರೇಲಿಯ, ನ್ಯೂಸೌಥ್‌ವೇಲ್ಸ್, ವಿಕ್ಟೋರಿಯ ಹಾಗೂ ಕ್ವೀನ್ಸ್‌ಲ್ಯಾಂಡದ ಉತ್ತರದ

ತುದಿಯವರೆಗೂ ಸುಮಾರು ೧೦,೦೦೦ ಮೈಲು ಉದ್ದದ ಕರಾವಳಿಯ ಗುಂಟ ದೇಶದ ಒಳಭಾಗಕ್ಕೆ ಚಾಚಿಕೊಂಡಿರುವ ಪರ್ವತ ಶ್ರೇಣಿಗಳಲ್ಲಿ ಚಿತ್ರಿತವಾದ ಇತಿಹಾಸ ಪೂರ್ವಕಾಲದ ಕಲಾಕೃತಿಗಳು ಆಸ್ಟ್ರೇಲಿಯದ ಆದಿಮಾನವನ ಬದುಕಿನ ರೀತಿನೀತಿಗಳನ್ನು ಯಥಾವತ್ತಾಗಿ ತೋರಿಸುತ್ತವೆ. ಆಸ್ಟ್ರೇಲಿಯದ ಆದಿವಾಸಿ ಜನಾಂಗಗಳು ಇಂದಿಗೂ ಈ ಹಳೆಯ ಸಾಂಪ್ರದಾಯವನ್ನು ಬಳಸುತ್ತಿರುವದು ಕಂಡುಬಂದಿದೆ.

ನೂತನ ಶಿಲಾಯುಗ ಮತ್ತು ಕಂಚಿನ ಯುಗ

ನೂತನ ಶಿಲಾಯುಗದ ಮಾನವನು ಪ್ರಾಚೀನ ಶಿಲಾಯುಗದ ಮಾನವನಿಗಿಂತಲೂ ಹೆಚ್ಚು ಸುಧಾರಿಸಿದವನಾಗಿದ್ದನು. ಯುರೋಪಿನಲ್ಲಿ ಕ್ರಿ.ಪೂ.೫೦೦೦ ವರುಷಗಳ ಹಿಂದೇಯೇ ನೂತನ ಶಿಲಾಯುಗವು ಪ್ರಾರಂಭವಾಯಿತೆಂದು ಪರಿಗಣಿಸಲಾಗಿದೆ. ಈ ಯುಗದಲ್ಲಿ ವಸ್ತುವಿನ ಯಥಾವತ್ ಚಿತ್ರಣದ ಬದಲಾಗಿ ಸೂಕ್ಷ್ಮನಿರೂಪಣೆಯ ಆಕೃತಿಗಳನ್ನು ರೂಪಿಸುವ ರೂಢಿಯು ಬೆಳೆದು ಬಂದಿತು. ಮೆಡಿಟರೇನಿಯನ್ ಸಮುದ್ರದ ಪಶ್ಚಿಮ ಭಾಗದಲ್ಲಿಯೂ, ಸ್ಪೇನ್‌ದಿಂದ ಆಯರ್ಲಂಡ ಮತ್ತು ಆರ್ಕೈನ್ಸ್‌ವರೆಗಿನ ಅಟ್ಲಾಂಟಿಕ್ ಸಾಗರದ ದಂಡೆಯ ಭಾಗದಲ್ಲಿಯೂ ದೊರೆತ ಕಲ್ಲಿನ ಉಬ್ಬುಚಿತ್ರಗಳೂ, ಗಡಿಗೆ ಮಡಕೆಗಳ ಮೇಲಿನ ಕೆತ್ತನೆಯ ಚಿತ್ರಗಳೂ ಹಾಗೂ ಗುಹೆಗಳ ಗೋಡೆ ಮತ್ತು ಸ್ವಭಾವಿಕವಾದ ಕಲ್ಲಿನ ಚಪ್ಪರಗಳ ಕೆತ್ತಿದ ಅಥವಾ ಬಣ್ಣಗಳಿಂದ ಚಿತ್ರಿಸಲ್ಪಟ್ಟ ಕೃತಿಗಳು ಮಾತೃದೇವತೆಗೆ ಸಂಬಂಧಿಸಿದುವುಗಳಾಗಿದ್ದು ಸಾಂಪ್ರದಾಯಕ ಆಕೃತಿಗಳಾಗಿರುತ್ತವೆ ಸುರಳಿಯಾಕಾರದ(Spril) ವೃತ್ತಾಕಾರದ ಹಾಗೂ ಅಂಕುಡೊಂಕಾದ(Zig-Zag) ರೂಪಗಳಲ್ಲಿ ಚಿತ್ರಿತವಾದ ಈ ಸಾಂಪ್ರದಾಯಕ ಚಿತ್ರಗಳು ಪ್ರಾಚೀನ ಶಿಲಾಯುಗದ ಚಿತ್ರಗಳಿಂದ ಸ್ಫೂರ್ತಿಗೊಂಡವುಗಳಾಗಿರುತ್ತವೆ.

ಕ್ರಿ.ಪೂ.೨೦೦೦ ವರುಷಗಳೀಚಿನ ಕಂಚಿನ ಯುಗದಲ್ಲಿ ನಿರ್ಮಾಣಗೊಂಡ ಹಲವು ಚಿತ್ರಗಳು ಸ್ಕೆಂಡಿನೇವಿಯದ ಬಂಡೆಗಲ್ಲುಗಳ ಮೇಲೆ ಕಂಡುಬಂದಿವೆ. ಉದ್ದನೆಯ ದೋಣಿಗಳಲ್ಲಿ ಆವೇಶದಿಂದ ಹೊರಟ ಯೋಧರು, ರಣಕಹಳೆಗಳನ್ನು ಊದುತ್ತಿರುವ, ಬಂಡಿ ಹಾಗೂ ರಥಗಳನ್ನು ನಡೆಸುತ್ತಿರುವ ಮನುಷ್ಯರನ್ನು ಇಲ್ಲಿ ಚಿತ್ರಿಸಲಾಗಿದೆ. ಇದೇ ಕಾಲದಲ್ಲಿ ನಿರ್ಮಾಣಗೊಂಡ ಹೆಂಗಸು ಇಲ್ಲವೇ ಗಂಡಸಿನ ಚಿಕ್ಕ ಚಿಕ್ಕ ಕಂಚಿನ ಪ್ರತಿಮೆಗಳೂ ಕತ್ತಿ, ಗುರಾಣಿ, ಬಿಲ್ಲು-ಬಾಣಗಳನ್ನು ಧರಿಸಿದ ಯೋಧರುಗಳ ಪ್ರತಿಮೆಗಳೂ ಸಾರ್ಡೀನಿಯದಲ್ಲಿ ದೊರೆಕಿವೆ.


ಪ್ರಾಚೀನ ಕಬ್ಬಿಣ ಯುಗ

ಕ್ರಿ.ಪೂ.೧೦೦೦ ವರುಷಗಳ ಹಿಂದೆಯೇ ದಿನನಿತ್ಯದ ಬಳಕೆಯ ಉಪಕರಣಗಳನ್ನು ತಯಾರಿಸುವಲ್ಲಿ ಕಬ್ಬಿಣವು ಪ್ರಾಧಾನ್ಯತೆಯನ್ನು ಪಡೆಯಿತು; ಕಲಾಕೃತಿಗಳ ರಚನೆಗೆ ಸಾಧನವೂ ಆಯಿತು. ಉತ್ತರ ಯುರೋಪು ಹಾಗೂ ಏಷ್ಯದ ಸಂಚಾರೀ ಬೇಟೆಗಾರರು, ದನಗಾಹಿಗಳು ಪ್ರಾಚೀನ ಪ್ರಾಣಿಗಳ ಕಲೆಯನ್ನು ಹೊಸಮಾದರಿಯ ಕಲೆಯನ್ನಾಗಿ ಪರಿವರ್ತಿಸಿದರು. ಗ್ರೀಕರು ಸೀಥಿಯನ್ನರೆಂದು ಕರೆಯಲ್ಪಡುತ್ತಿದ್ದ ಈ ಸಂಚಾರೀ

ಕಲಾವಿದರು ಪ್ರವಾಸಯೋಗ್ಯವಾದ ವಸ್ತುಗಳ ಮೇಲೆಯೇ ತಮ್ಮ ಕಲಾಕೃತಿಗಳನ್ನು ರಚಿಸುತ್ತಿದ್ದರು. ಕುದುರೆಜೀನು, ಗುರಾಣಿಗಳ ಕವಚ, ಬತ್ತಳಿಕೆ ಮೊದಲಾದವುಗಳ ಮೇಲೆ ಅವರು ಕಲಾಪೂರ್ಣವಾದ ಕೃತಿಗಳನ್ನು ರಚಿಸಿದ್ದಾರೆ. ವಿಶ್ವವಿಖ್ಯಾತ ಚೀನದ ದೊಡ್ಡಗೋಡೆ(Great wall of China)ಯ ಪಶ್ಚಿಮದಿಂದ ಜರ್ಮನಿಯವರೆಗೆ ಈ ಸಂಚಾರೀ ಕಲಾವಿದರು ರಚಿಸಿದ ಸಾಂಪ್ರದಾಯಕ ಪ್ರಾಣಿಗಳ ಚಿತ್ರಗಳಿರುತ್ತವೆ.

ಭಾರತದಲ್ಲಿ ಆದಿಮಾನವ ಚಿತ್ರಕಲೆ-

ಭಾರತದಲ್ಲಿಯೂ ಪ್ರಾಚೀನ ಹಾಗೂ ನೂತನ ಶಿಲಾಯುಗಗಳ ಮಾನವ ನಿವೇಶನಗಳು ದೊರಕಿವೆ. ನರ್ಮದಾ ನದಿಯ ಕೊಳ್ಳದ ಗುಹೆಗಳಲ್ಲಿ ವಾಸಿಸಿದ್ದ ಮಾನವರು ಚಿತ್ರಿಸಿದ ಚಿತ್ರಗಳು ಕಂಡು ಬಂದಿದ್ದು ಪ್ರಾಚೀನ ಶಿಲಾಯುಗಕ್ಕೆ ಸೇರಿದವುಗಳಾಗಿವೆ. ಈ ಚಿತ್ರಗಳು ಸ್ಪೇನ ಮತ್ತು ಫ್ರಾನ್ಸ್‌ನಲ್ಲಿರುವ ಗುಹಾಚಿತ್ರಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಮಧ್ಯಪ್ರದೇಶದ ರಾಯಪುರ ಸಂಸ್ಥಾನದ ಸಿಂಘನಮರ ಮತ್ತು ಕೈಮೂರ್ ಬೆಟ್ಟಗಳಲ್ಲಿರುವ ಮಿರ್ಝಾಪುರ ಜಿಲ್ಲೆಯಲ್ಲಿಯೂ ಪ್ರಾಚೀನ ಶಿಲಾಯುಗದಲ್ಲಿ ಚಿತ್ರಿತವಾದ ಕಾಡುಪ್ರಾಣಿಗಳ, ಬೇಟೆಯ ಸನ್ನಿವೇಶದ, ಮನುಷ್ಯರ ವರ್ಣಚಿತ್ರಗಳೂ ರೇಖಾಚಿತ್ರಗಳೂ ಇರುತ್ತವೆ.



೨) ಆನೆಗೊಂದಿ

ದಕ್ಷಿಣ ಭಾರತದ ಮಧುರೆ, ತಂಜಾವೂರು, ಕಡೂರು, ನ್ಯಾಮತಿ ಮತ್ತು ತಾಳ್ಕ ಂತಾದ ಸ್ಥಳಗಳಲ್ಲಿಯೂ ಪ್ರಾಚೀನ ಶಿಲಾಯುಗದ ಕೆಲವು ಅವಶೇಷಗಳು ರಕಿವೆಯಲ್ಲದೇ ಆಂಧ್ರದ ಗುಂಟೂರು, ಗೋದಾವರಿ ಮತ್ತು ಕೃಷ್ಣಾ ಜಿಲ್ಲೆಗಳಲ್ಲಿಯೂ ರ್ನೂಲು ಜಿಲ್ಲೆಯಲ್ಲಿಯೂ ಕೆಲವು ಅವಶೇಷಗಳು ದೊರಕಿವೆ. ಬಂಗಾಲ, ಬಿಹಾರ, ಸಾಗಳಲ್ಲಿ ಪ್ರಾಚೀನ ಶಿಲಾಯುಗದ ಮಾನವರು ಬಳಸುತ್ತಿದ್ದ ಕೆಲವು ಉಪಕರಣಗಳು ಕುಬಂದಿವೆ. ಈ ಯುಗದ ಮಾನವರು ಚಿತ್ರಕಲೆಯನ್ನಲ್ಲದೇ ಮಣ್ಣಿನ ಪ್ರತಿಮೆಗಳನ್ನೂ ನ ಪ್ರತಿಮೆಗಳನ್ನೂ ತಯಾರಿಸುವ ಕಲೆಯನ್ನು ತಿಳಿದಿದ್ದರು. ಅಲ್ಲದೇ ತಮ್ಮ ಯುಧಗಳ ಹಿಡಿಕೆಗಳ ಮೇಲೆ ನಕ್ಷೆಗಳನ್ನು ಕೆತ್ತಿ ಅಲಂಕರಿಸುವ ಕಲೆಯನ್ನೂ ಸಹ ದಿದ್ದರು.

ನೂತನ ಶಿಲಾಯುಗದ ಮಾನವರು ಕಾವೇರಿ ನದಿಯ ದಕ್ಷಿಣ ಭಾಗವನ್ನು ರತುಪಡಿಸಿ ಭಾರತದ ಬಹುಭಾಗದಲ್ಲಿ ವಾಸವಾಗಿದ್ದರು. ಮಸ್ಕಿ ಮತ್ತು ವೆಲ್ಲಿಗಳಲ್ಲಿಯೂ ಸೇಲಂ ಜಿಲ್ಲೆಯಲ್ಲಿಯೂ ನೂತನ ಶಿಲಾಯುಗದ ಅವಶೇಷಗಳು ರಕಿದ್ದು ಉತ್ತರ ಭಾರತದ ಅವಶೇಷಗಳಲ್ಲಿ ಕಂಡು ಬರುವ ಕಲಾ ಕೃತಿಗಳಿಗಿಂತಲೂ ಗಾರಿಕೆಯಲ್ಲಿ ಉತ್ತಮವಾಗಿವೆ. ಮಲಬಾರಿನಲ್ಲಿ ದೊರೆತ ಗಡಿಗೆ-ಮಡಕೆಗಳೂ ಳ್ಳಾರಿ ಜಿಲ್ಲೆಯಲ್ಲಿ ಸಂಗನಕಲ್ಲು, ಕಪ್ಪಗಲ್ಲು, ತೆಕ್ಕಲಕೋಟ್, ರೂಪನಗುಡಿ, ಂಗನೂರು, ದರೋಜಿ ಮುಂತಾದ ಸ್ಥಳಗಳಲ್ಲಿ ಅತಿಸೂಕ್ಷ್ಮ ಕೃತಿಗಾರಿಕೆಯ ಕೆಂಪು ತ್ತು ಬಳೆಗಳ ಅವಶೇಷಗಳು ದೊರಕಿವೆಯಲ್ಲದೇ ರಾಯಚೂರು ಜಿಲ್ಲೆಯ ಬೆಣಕಲ್ಲು, ಗೊಂದಿ ಬಳಿಯ ರಾಮಪುರಗಳಲ್ಲಿ ಕಂಡುಬಂದ ಬಂಡೆಗಲ್ಲುಗಳ ಮೇಲಿನ ರ್ಣಚಿತ್ರಗಳು ನೂತನ ಶಿಲಾಯುಗಕ್ಕೆ ಸೇರಿದವುಗಳಾಗಿವೆ.

ಭಾರತದ ನೂತನ ಶಿಲಾಯುಗದ ಮಾನವನು ತಯಾರಿಸಿದ ಗಡಿಗೆ-ಮಡಿಕೆಗಳ ಲೆ ಅವನು ವಿವಿಧ ವರ್ಣಗಳನ್ನು ಬಳಸಿ ಚಿತ್ತಾರಗಳನ್ನು ಚಿತ್ರಿಸಿರುವುದನ್ನು ಕಂಡರೆ ನಿಗೆ ಬಣ್ಣಗಳ ವಿಷಯದಲ್ಲಿ ಅಪಾರವಾದ ತಿಳುವಳಿಕೆ ಇದ್ದಿತೆಂಬುದು ತಿಳಿದು ತ್ತದೆ. ಸಾಮಾನ್ಯವಾಗಿ ಅವನು ಕೆಂಪು, ಹಳದಿ ಮತ್ತು ಕಂದು ಬಣ್ಣಗಳನ್ನು ಹ್ಳಾಗಿ ಬಳಸಿದ್ದಾನೆ. ಈ ಚಿತ್ತಾರಗಳಲ್ಲಿ ಎಲೆ,ಹೂವುಗಳೇ ಪ್ರಧಾನವಾಗಿರುತ್ತಿದ್ದವಲ್ಲದೇ ನವಾಕೃತಿಗಳಲ್ಲಿ; ಪ್ರಾಣಿಗಳಲ್ಲಿ, ಉತ್ತರ ಪ್ರದೇಶದ ಮಿರ್ಝಾಪುರ ಜಿಲ್ಲೆಯ ಸೇನೆ ತಿ, ಬಂದಾ ಜಿಲ್ಲೆಯ ಪೂಣಕಪುರ ಕ್ಷೇತ್ರ, ರಾಮಪುರ. ಸಂಸ್ಥಾನದ ಸಿಂಘನಪುರ ತ್ತು ಹೊಶಂಗಾಬಾದ ಹಾಗೂ ಮಧ್ಯಪ್ರದೇಶದ ಪಾಚಮಾರ್ಹಿ ಮುಂತಾದವುಗಳು ತನ ಶಿಲಾಯುಗದ ಕಲಾಕೇಂದ್ರಗಳಾಗಿವೆ.

ಈಗಿನ ಪಾಕಿಸ್ತಾನಕ್ಕೆ ಸೇರಿದ ಸಿಂಧ ಪ್ರಾಂತದ ಅಮ್ರಿ ಮತ್ತು ಬಲೂಚಿಸ್ತಾನದ ನಂದನ, ರಣಗುಂಡೈ ಮತ್ತು ಕ್ವೆಟ್ಟಾಗಳಲ್ಲಿ ದೊರೆತ ಅವಶೇಷಗಳು ಪೊಟೇಮಿಯದ (ಈಗಿನ ಇರಾಕ್) ಉರುಕ್, ಬೆಮದೆತ್ ಮತ್ತು ಟೆಲ್-ಹಲಾಫ್‌ಗಳ ತಿಗೆ ತೀರ ಹತ್ತಿರದವಾಗಿ ಕಂಡು ಬರುತ್ತವೆ. ಮಣ್ಣನ್ನು ಮಡಕೆಗಳ ಮೇಲೆ

ಬಣ್ಣವನ್ನು ಹಚ್ಚಿ ಅಲಂಕರಿಸುವ, ನಗ್ನವಾಗಿರುವ 'ಉತ್ಕರ್ಷದೇವತೆ'ಯ ಪ್ರತಿಮೆಗಳ ತಯಾರಿಸುವದರೊಂದಿಗೆ ಫಲಕಗಳಲ್ಲಿ ಕೆತ್ತನೆ ಮಾಡುವ ಕಲೆಯನ್ನೂ ಇಲ್ಲಿನ ನೂತ ಶಿಲಾಯುಗದ ಮಾನವನು ತಿಳಿದಿದ್ದನು.ಕುಲ್ಲಿಯಲ್ಲಿ ದೊರೆತ ಮಡಕೆಗಳು, ಕರಂಡಕಗಳ ಚಂಚುಪಾತ್ರೆಗಳು, ಪೀಠಗಳು, ತಾಟು ಮತ್ತು ಅಗ್ಗಿಷ್ಟಿಕೆಗಳೇ ಮೊದಲಾದವುಗಳ ಮೇ ಕಪ್ಪು ಇಲ್ಲವೇ ಕೆಂಪು ಬಣ್ಣದಿಂದ ಅಲಂಕರಿಸಿ ಭೂಮಿತಿಯಾಕಾರಗಳಿಂದ(Geom Trical Forms) ಚಿತ್ರಿಸಲಾಗಿದ್ದು ಗ್ರೀಕಿನ ಕರಂಡಕಗಳಂತೆ ಕಾಣಿಸುತ್ತವೆ. ಈ ಪಾತ್ರೆಗ ಮೇಲೆ ಚಿತ್ರಿಸಿದ ಹೋರಿಗಳು, ಸಿಂಹಗಳು, ಕಾಡುಕುರಿಗಳು, ಪಕ್ಷಿಗಳು ಮತ ಮರಗಳು ಅಡ್ಡಡ್ಡವಾದ ನೇಯ್ಗೆಯ ಹಾಗೂ ವೃತ್ತಾಕಾರದ ರೇಖೆಗಳಿಂದ ಚಿತ್ರಿಸಲಾ ಕಾರ್ನಿಸಿನ ಅಲಂಕಾರಿಕ ಪಟ್ಟಿಗಳಂತೆ ಕಾಣುತ್ತದೆ. ರಣಗುಂಡೈನಲ್ಲಿ ದೊರೆತ ಅವಶೇಷಗಳ ಪ್ರಾಣಿಗಳನ್ನು ಬೇರೆ ಬೇರೆಯಾಗಿ ಬರೆಯುವ ಅವಸರದಲ್ಲಿ ಅಗಲವಾದ ಪಟ್ಟಿಗಳನ ಆಯತಾಕಾರದ ಮತ್ತು ಅಡ್ಡಾದಿಡ್ಡಿಯಾದ ಪುಟೀಪುಗಳನ್ನೂ ತ್ರಿಕೋಣಾಕೃತಿಗಳನ ಬಳಸಿರುವುದರಿಂದ ಪ್ರಾಣಿಗಳ ಚಿತ್ರಗಳು ಸ್ಫುಟವಾಗಿ ರೂಪುಗೊಂಡಿಲ್ಲ. ನಾಲನ ದೊರೆತ ಪಾತ್ರೆಗಳ ಮೇಲೆ ಚಿತ್ರಿತವಾದ ಪ್ರಾಣಿಗಳ ಮತ್ತು ಮೀನುಗಳ ಚಿತ್ರಗ ರೂಪ ಮತ್ತು ಆಕೃತಿಗಳಲ್ಲಿ ಹೆಚ್ಚು ನೈಜತೆಯನ್ನು ತುಂಬಿಕೊಂಡಿವೆ. ಆಮ್ರಿ ಮತ ನಂದನಗಳಲ್ಲಿ ದೊರೆತ ಪಾತ್ರೆಗಳು ಕುಲ್ಲಿ ಮತ್ತು ನಾಲಗಳ ಪಾತ್ರೆಗಳಂತೆಯ ನಕ್ಷಾರೂಪಗಳಿಂದ ಅಲಂಕೃತವಾಗಿರುತ್ತವೆ.

ಇಲ್ಲಿ ದೊರೆತ ಮಣ್ಣಿನ ಸಣ್ಣ ಸಣ್ಣ ಪ್ರತಿಮೆಗಳು ಸುಲಭವಾದ ಮತ್ತು ಒರಟ ರೀತಿಯಲ್ಲಿ ತಯಾರಿಸಿದವುಗಳಾಗಿದ್ದು ಮಾತೃದೇವತೆಯ ಪ್ರತಿಮೆಗಳಾಗಿವೆ. ಪ್ರತಿಮೆಗಳಲ್ಲಿ ಹೆಚ್ಚಾಗಿ ಹೆಂಗಸಿನ ಪ್ರತಿಮೆಗಳೇ ಇದ್ದು ನಗ್ನ ರೂಪದಲ್ಲಿ ಇಲ್ಲ ಅಂಗಿಯನ್ನು ತೊಟ್ಟು ತಲೆಯ ಮೇಲೆ ಶಾಲನ್ನು ಹೊದ್ದುಕೊಂಡು ಎದೆಯ ಮೇ ಅನೇಕ ಸರಗಳನ್ನೂ ಆಭರಣಗಳನ್ನೂ ಧರಿಸಿರುವಂತೆ ರಚಿಸಲ್ಪಟ್ಟಿವೆಯಲ್ಲದೇ ಇವುಗಳ ಬಹುತೇಕ ಪ್ರತಿಮೆಗಳು ಅರ್ಧಾಕೃತಿ(Bust)ಯುವಾಗಿರುತ್ತವೆ ಈ ಎಲ್ಲ ಪ್ರತಿಮೆಗಳನ ವರ್ಣಲೇಪನದಿಂದ ಅಲಂಕೃತಗೊಳಿಸಲಾಗಿದೆ.

ಪ್ರಾಚೀನ ಕಲಾ ಸಂಸ್ಕೃತಿಗಳು


ಸುಮೇರಿಯನ್ ಸಂಸ್ಕೃತಿ

ಕಾಲ-ಕ್ರಿ.ಪೂ.೩೫೦೦ ರಿಂದ ಕ್ರಿ. ಪೂ. ೨೦೦೦

ಮೆಸಪೊಟೇಮಿಯ ಅಥವಾ ಇರಾಕ್‌ನ ಟೈಗ್ರಿಸ್ ಮತ್ತು ಯೂಫ್ರೇಟೀಸ್ ನದಿಗಳ ಮಧ್ಯ ಪ್ರದೇಶದಲ್ಲಿ ಈ ಪ್ರಾಚೀನ ಸಂಸ್ಕೃತಿಯು ಬೆಳೆದು ಬಂದಿತ್ತು. ಮೆಸಪೊಟೇಮಿಯ ದೇಶವು ಸುಮೇರಿಯನ್, ಅಕ್ಕೇಡಿಯನ್, ಬ್ಯಾಬಿಲೋನಿಯನ್, ಹಿತ್ತಾಯಿತ್, ಅಸ್ಸೀರಿಯನ್ ಹಾಗೂ ಖಾಲ್ಡಿಯನ್ ಮೊದಲಾದ ಪ್ರಾಚೀನ ಸಂಸ್ಕೃತಿಗಳ ಜನ್ಮಭೂಮಿ ಸುಮೇರಿಯನ್, ಬ್ಯಾಬಿಲೋನಿಯನ್ ಮತ್ತು ಅಸ್ಸಿರೀಯನ್ ಸಂಸ್ಕೃತಿಗಳು ಪ್ರಪಂಚದ ಕಲಾಭಂಡಾರಕ್ಕೆ ಅದ್ವಿತೀಯವಾದ ಕೊಡುಗೆಗಳನ್ನು ನೀಡಿವೆ.

ಬ್ಯಾಬಿಲೋನಿಯನ್ ಮತ್ತು ಅಸ್ಸೀರಯನ್ನರಿಗಿಂತ ಸುಮೇರಿಯನ್ನರು ಪ್ರಾಚೀನರು. ಸುಮೇರಿಯನ್ನರ ರಾಜ್ಯಗಳು ನಗರ ರಾಜ್ಯಗಳಾಗಿದ್ದವು. ಕಿಶ್(Kish), ಎರೇಷ್(Erech), ಊರ್(Ur), ಇಸ್ಸಿನ್(Issin), ಲಾಗಾಷ್ ಮತ್ತು ನಿಪ್ಪೂರ್(Nippur) ಮೊದಲಾದ ಪಟ್ಟಣಗಳು ಸುಮೇರಿಯನ್ನರ ಪ್ರಮುಖ ಪಟ್ಟಣಗಳಾಗಿದ್ದವು. ಸುಮೇರಿಯದ ಪ್ರತಿಯೊಂದು ನಗರದಲ್ಲಿಯೂ ಪ್ರತ್ಯೇಕವಾದ ಒಂದು ದೇವತೆಯಿದ್ದು ಈ ದೇವತೆಗಾಗಿ 'ಗಾಲ್' ಎಂದು ಕರೆಯಲ್ಪಡುವ ದೇವಾಲಯವನ್ನು ಕಟ್ಟಾಲಾಗುತ್ತಿತ್ತು ಎರೆಷ್‌ನಲ್ಲಿ "ಇನ್ನಿನಾ" (Innina)ಎಂಬ ಮಾತೃದೇವತೆಯ ದೇವಾಲಯವಿದ್ದು ಈ ದೇವಾಲಯದಲ್ಲಿ ಸುಮೇರಿಯನ್ನರ ಲೇಖನ ಕಲೆಯ ಪ್ರಾಚೀನ ರೂಪವನ್ನು ಕಾಣಬಹುದು. ನಿಪ್ಪೂರ್‌ನಲ್ಲಿ ಎನ್-ಲಿಲ್(En-lil) ಎಂಬ ದೇವತೆಯ ದೇವಾಲಯವೂ ಎರಿಡೂ(Eridu) ಎಂಬ ಪಟ್ಟಣದಲ್ಲಿ "ಈ" ಅಥವಾ "ಈಸ್ಪರ್" ಎಂಬ ದೇವತೆಯ ದೇವಾಲಯವೂ ಇರುತ್ತವೆ.

ಸುಮೇರಿಯನ್ ನಗರಗಳಲ್ಲಿರುವ ಈ ದೇವಾಲಯಗಳ ಗೋಪುರಗಳನ್ನು "ಝಿಗ್ಗುರಾಟ್"(Ziggurat)ಗಳೆಂದು ಕರೆಯುತ್ತಾರೆ. ಮಣ್ಣಿನಿಂದ ತಯಾರಿಸಿದ ಇಟ್ಟಿಗೆಗಳನ್ನು ಬಿಸಿಲಿನಲ್ಲಿ ಒಣಗಿಸಿ ಇಲ್ಲವೆ ಆವಿಗೆಗಳಲ್ಲಿ ಸುಟ್ಟು ನಂತರ ರಾಳದ ಲೇಪದಿಂದ ನಯಗೊಳಿಸಿ ಈ ಝಿಗ್ಗುರಾಟ್‌ಗಳನ್ನು ಕಟ್ಟಲಾಗಿದೆ. ಈ ಇಟ್ಟಿಗೆಗಳ ಮೇಲೆ ಬಿಳಿ, ಕಪ್ಪು ನೇರಿಳೆ, ಕಡುನೀಲಿ, ಕೆಂಪು, ಬೆಳ್ಳಿ ಅಥವಾ ಚಿನ್ನದ ವರ್ಣಗಳನ್ನು ಲೇಪಿಸಿರುವದರಿಂದ ಮೂರರಿಂದ ಏಳು ಅಂತಸ್ತುಗಳ ಈ ಝಿಗ್ಗುರಾಟ್‌ಗಳ ಪ್ರತಿಯೊಂದು ಹಂತವೂ ಬೇರೆ ಬೇರೆ ಬಣ್ಣಗಳಿಂದ ಕಂಗೊಳಿಸುವಂತಿದ್ದವು.



೩) ಸುಮೇರಿಯನ್

ಸುಮೇರಿಯನ್ನರು ತಮ್ಮ ದೇವಾಲಯಗಳ ಮಹಾದ್ವಾರಗಳನ್ನು ಹವಳ,ಮುತ್ತು, ರತ್ನ ಮತ್ತು ಕಂದಣಗಳನ್ನಿರಿಸಿದ ಸ್ತಂಭಗಳಿಂದಲೂ ದಾಳ ಇಲ್ಲವೇ ಶಿಲಾಜಿತು ರಸದ ವರ್ಣಮಿಶ್ರಿತ ಪಟ್ಟಿಗಳಿಂದಲೂ ಅಲಂಕರಿಸಿದ್ದಾರೆ. ಅಲ್ಲದೇ ಮಣ್ಣು ಇಲ್ಲವೇ ರಾಳದ ಮೇಲೆ ವಿವಿಧ ಬಣ್ಣದ ಗಾಜು ಇಲ್ಲವೇ ಕಲ್ಲಿನ ತುಣುಕುಗಳನ್ನು ಒತ್ತಿ ಅತ್ಯುತ್ತಮವಾದ ಮೊಸಾಯಿಕ್ ಚಿತ್ರಗಳನ್ನೂ ತಯಾರಿಸಿದ್ದಾರೆ. ಈ ಮೊಸಾಯಿಕ್ ಚಿತ್ರಗಳನ್ನು ಪೆಟ್ಟಿಗೆಗಳ ಮೇಲೆಯೂ ಕಿನ್ನರಿ ವೀಣೆಗಳ ಮೇಲೆಯೂ ಆಟದ ಹಲಗೆಗಳ ಮೇಲೆಯೂ ತಯಾರಿಸಿರುವದನ್ನೂ ಕಾಣಬಹುದು. ಅವರು ತಯಾರಿಸಿದ ಚಿನ್ನ-ಬೆಳ್ಳಿಗಳ ಅತಿಸೂಕ್ಷ್ಮವಾದ ಕೆಲಸಗಳೂ, ತಾಮ್ರದಿಂದ ಹಾಗೂ ರಾಳದ ಮುದ್ದೆಯ ಮೇಲೆ ತಯಾರಿಸಿದ ಪ್ರಾಣಿಗಳ ಚಿತ್ರಗಳೂ ಉಲ್ಲೇಖನೀಯ ಕಲಾಕೃತಿಗಳಾಗಿವೆ. ಊರ್‌ನಲ್ಲಿರುವ ಅರಸು ಮನೆತನದವರ ಸಮಾಧಿಗಳಲ್ಲಿ ಅತ್ಯುತ್ತಮವಾದ ಕುಶಲ ಕಲೆಗಾರಿಕೆಯ ವಸ್ತುಗಳು ದೊರೆತಿವೆ.

ಸುಮೇರಿಯನ್ನರು ತಯಾರಿಸಿದ ಪಿಂಗಾಣಿ ಪಾತ್ರೆಗಳು ಭೂಮಿತಿಯಾಕೃತಿ(Geometrical forms)ಗಳಿಂದಲೂ ಬೇರೆ ಬೇರೆ ನಕ್ಷೆಯ ಆಕೃತಿಗಳಿಂದಲೂ ಕಂಗೊಳಿಸುತ್ತಿದ್ದು ಕಡು ನೇರಿಳೆಬಣ್ಣಗಳಿಂದ ಅಲಂಕರಿಸಿದವುಗಳಾಗಿವೆ. ಕಲ್ಲಿನ ಹಾಗೂ ಕಂಚಿನ ಪಾತ್ರೆಗಳ ಮೇಲೆ ಉಬ್ಬು ಚಿತ್ರಗಳಿಂದ ಅಲಂಕರಿಸಿರುವುದೂ ಕಂಡುಬರುತ್ತದೆ.

ಸುಮೇರಿಯನ್ನರು ಚಿತ್ರಿಸಿದ ಮಾನವಾಕೃತಿಗಳು ಸೆಟೆದು ನಿಂತ ನಿರ್ಜೀವ ೇಹಗಳಂತೆ ಗೋಚರಿಸುತ್ತವೆ. ಗಂಡಸರ ಆಕೃತಿಗಳನ್ನು ತಲೆ ಬೋಳಿಸಿಕೊಂಡಿರುವಂತೆಯೂ ೆಂಗಸರ ಆಕೃತಿಗಳನ್ನು ಬಲದೋಳು ಕಾಣಿಸುತ್ತಿರುವಂತೆ ಕುರಿಯ ಚರ್ಮದ ಅಂಗಿಯನ್ನೋ ಬಾಚಿದ ಉಣ್ಣೆಯಿಂದ ತಯಾರಿಸಿದ ಗಂಟೆಯಾಕಾರದ ಅಂಗಿಯನ್ನೋ ರಿಸಿರುವಂತೆಯೂ ಚಿತ್ರಿಸಲಾಗಿದೆ.

ಕ್ರಿ.ಪೂ.೩,೩೦೦ ರಲ್ಲಿಯೇ ಸುಮೇರಿಯನ್ನರು ಲೇಖನ ಕಲೆಯನ್ನು ತಿಳಿದಿದ್ದರು. ್ಯೂನಿಫಾರ್ಮ್(Cuniform) ಎಂದು ಕರೆಯಲ್ಪಡುವ ಈ ಲಿಪಿಯನ್ನು ಮಣ್ಣಿನಿಂದ ಯಾರಿಸಿದ ಇಟ್ಟಿಗೆಗಳ ಮೇಲೆ ತ್ರಿಕೋನಾಕಾರದಲ್ಲಿ ಬರೆದಿರುವುದನ್ನು ಕಾಣಬಹುದಾಗಿದೆ. ುಮೇರಿಯನ್ ಸಂಸ್ಕೃತಿಯ ತಳಹದಿಯ ಮೇಲೆಯೇ ಬ್ಯಾಬಿಲೋನಿಯನ್ ಸಂಸ್ಕೃತಿ ೂಪುಗೊಂಡಿತೆಂದು ಹೇಳಬಹುದು.

್ಯಾಬಿಲೋನಿಯನ್ ಸಂಸ್ಕೃತಿ

ಕಾಲ-ಕ್ರಿ.ಪೂ. ೧೯೫೦ ಕ್ರಿ.ಪೂ. ೧೬೫೦, ಕ್ರಿ.ಪೂ. ೬೧೨, ಕ್ರಿ.ಪೂ.೭೦

ಬ್ಯಾಬಿಲೋನಿಯನ್ ಸಂಸ್ಕೃತಿಯ ಎರಡು ಬೇರೆ ಬೇರೆ ಕಾಲಮಾನಗಳ ವಧಿಯಲ್ಲಿ ಪ್ರವರ್ಧಮಾನವಾಯಿತು. ಕ್ರಿ. ಪೂ. ೧೯೫೦ರಿಂದ ಕ್ರಿ. ಪೂ. ೧೬೫೦ರವರೆಗಿನ ಹಮ್ಮುರಬಿ(Hammarabi) ಎಂಬ ಅರಸನ ವಂಶಸ್ಥರ ಆಳ್ವಿಕೆಯ ಪ್ರಥಮ ಅಧ್ಯಾಯವೂ .ಪೂ. ೬೧೨ರಿಂದ ಸುಮಾರು ೭೦ ವರುಷಗಳವರೆಗಿನ ೨ನೆಯ ನೆಬುಚದ್ನೆಝರ (Nebuchadnezzer II) ಎಂಬ ಅರಸನ ವಂಶಸ್ಥರ ಆಳ್ವಿಕೆಯ ದ್ವಿತೀಯ ಅಧ್ಯಾಯವೂ ್ಯಾಬಿಲೋನಿಯನ್ ಕಲಾ ಸಂಸ್ಕೃತಿಗಳ ಬೃಹತ್ ಸಾಧನೆಗಳ ಅಧ್ಯಾಯಗಳಾಗಿವೆ.

ಹಮ್ಮುರಬಿಯ ಕಾಲದಲ್ಲಿ ರಚಿತವಾದ ಕಲ್ಲಿನ ಪ್ರತಿಮೆಗಳು ಕಲಾಪ್ರಪೂರ್ಣವಾದ ಟ್ಟಿಗೆಗಳು ಮತ್ತು ಉಬ್ಬು ಚಿತ್ರಗಳೇ ಮೊದಲಾದವುಗಳು ಸುಮೇರಿಯನ್ ಪ್ರಭಾವಕ್ಕೊಳ ಟ್ಟವುಗಳಾಗಿರುತ್ತವೆ. ಕಡುಗೆಂಪು ಮಿಶ್ರಿತ. ಕಪ್ಪು ಬಣ್ಣದ ಕಲ್ಲುಗಳನ್ನೂ ಹೀಮಾಟೈಟ್ (Haematite)ಎಂಬ ಒಂದು ತರಹದ ಕಬ್ಬಿಣದ ಅಸಿರು ಉಳ್ಳ ಕಲ್ಲುಗಳನ್ನೂ ಬಳಸಿ ೊಳವೆಯಾಕಾರದ ಮುದ್ರಿಕೆಗಳನ್ನು ತಯಾರಿಸಲಾಗಿದೆ. ಈ ಮುದ್ರಿಕೆಗಳ ಮೇಲೆ ುದ್ರಿಕೆಯ ಒಡೆಯನು ತನ್ನ ಆರಾಧ್ಯ ದೇವತೆಯನ್ನು ಕಂಡು ಪೂಜಿಸುತ್ತಿರುವಂತೆ-ಕೆತ್ತನೆ ಾಡಲಾಗಿದೆ.

ಬ್ಯಾಬಿಲೋನಿಯದ ಉತ್ತರದ ಗಡಿಯ ಮಾರಿ(Mari) ಎಂಬಲ್ಲಿ ದೊರೆತ ರಮನೆಯ ಗೋಡೆಗಳ ಅವಶೇಷಗಳಲ್ಲಿ ವಿವಿಧ ವರ್ಣಗಳಿಂದ ಚಿತ್ರಿಸಿದ ಅಪ್ರತಿಮವಾದ ತ್ತಿ ಚಿತ್ರಗಳು ಕಂಡುಬಂದಿವೆ. ಬಿಳಿಯ ಸುಣ್ಣವನ್ನು ಬಳಿದ ಗೋಡೆಗಳ ಮೇಲೆ ಜನ ಪಟ್ಟಾಭಿಷೇಕ ಸಮಾರಂಭದ ಚಿತ್ರಗಳೂ, ದೇವತಾರಾಧನೆಯ ಚಿತ್ರಗಳೂ, ್ಟರ್ ದೇವತೆಗೆ ಪ್ರಾಣಿಬಲಿಯನ್ನು ಅರ್ಪಿಸುತ್ತಿರುವ ಚಿತ್ರಗಳೂ ಚಿತ್ರಿಸಲ್ಪಟ್ಟಿವೆ. ಈ ತ್ರಗಳನ್ನು ದಪ್ಪವಾಗಿ ಕಪ್ಪು ಬಣ್ಣದ ರೇಖೆಗಳಿಂದ ಚಿತ್ರಿಸಿ ಕಡುಗೆಂಪು, ನೀಲಿ ಮತ್ತು

ಕಪ್ಪು ಬಣ್ಣ ತುಂಬಿ ಪೂರ್ಣಗೊಳಿಸಲಾಗಿದೆ. ಕಟುಕರ ಮನೆಗೆ ಕೊಂಡೊಯ್ಯುತ್ತಿರುವ ದನಗಳ ಚಿತ್ರಗಳಾಗಲೀ ಗಾಂಭೀರ್ಯದಿಂದ ರಾಜನ ಬಳಿಗೆ ಬರುತ್ತಿರುವ ಮಾನವರಾಗಲೀ ಸಜೀವ ಚಿತ್ರಗಳಾಗಿ ಕಾಣುತ್ತವೆ. ಎತ್ತರವಾಗಿ ಬೆಳೆದ ತಾಳೆಯ ಮರಗಳನ್ನು ಹತ್ತುತ್ತಿರುವ ಗುಲಾಮರನ್ನು ಆಳೆತ್ತರದಲ್ಲಿ ಚಿತ್ರಿಸಿದ ಚಿತ್ರವು ನೈಜ ಚಿತ್ರವಾಗಿದೆ. ಮಾರಿಯೊಂದರಲ್ಲಿಯೇ ಈ ಚಿತ್ರಗಳು ಕಂಡುಬಂದಿದ್ದು ಬ್ಯಾಬಿಲೋನದ ಇನ್ನಾವ ಭಾಗದಲ್ಲಿ ಕಂಡುಬಂದಿಲ್ಲ. ಆದ್ದರಿಂದ ಈ ಚಿತ್ರಗಳು ಬ್ಯಾಬಿಲೋನಿಯನ್ ಚಿತ್ರಕಲೆಯ ಅಪ್ರತಿಮ ಮಾದರಿಗಳಾಗಿರುತ್ತವೆ.

ಎರಡನೆಯ ನೆಬೂಚಡ್ನೆಝರನ ಕಾಲದಲ್ಲಿ ಬ್ಯಾಬಿಲೋನಿಯನ್ ಸಂಸ್ಕೃತಿಯು ವೈಭವದ ಪರಾಕಾಷ್ಠತೆಯನ್ನು ತಲುಪಿತ್ತು. ಈ ಅರಸು ಬ್ಯಾಬಿಲೋನ್ ಪಟ್ಟಣದ ಪುನರುಜ್ಜೀವನಗೊಳಿಸಿದನು. ಪಟ್ಟಣದ ಮಹಾದ್ವಾರಗಳನ್ನೂ ರಾಜಬೀದಿಗಳ ಬದಿಯ ಗೋಡೆಗಳನ್ನೂ ಕೆತ್ತನೆಯ ಹಾಗೂ ವರ್ಣಚಿತ್ರಗಳಿಂದ ಅಲಂಕರಿಸಿದ್ದನು. ಅರಮನೆಯ ಗೋಡೆಗಳನ್ನು ಪುನರಾವರ್ತಿಸಿದ ನಕ್ಷೆಗಳಿಂದ ಅಲಂಕಾರಗೊಳಿಸಿದ್ದನು. ಇಂಥ ಒಂದು ಮಹಾನ್ ಸಂಸ್ಕೃತಿಯು ಪರ್ಷಿಯನ್ನರ ಧಾಳಿಗೆ ತುತ್ತಾಗಿ ತತ್ತರಿಸಿತು.

ಅಸ್ಸೀರಿಯನ್ ಸಂಸ್ಕೃತಿ

ಕಾಲ-ಕ್ರಿ.ಪೂ. ೮೦೦-ಕ್ರಿ.ಪೂ. ೬೧೨

ಅಪ್ರತಿಮ ಹೋರಾಟಗಾರರಾಗಿದ್ದ ಅಸ್ಸೀರಿಯನ್ನರು ಯುದ್ಧ ಪ್ರವೃತ್ತಿಯೊಂದಿಗೆ ನೆರೆಯ ರಾಷ್ಟ್ರಗಳ ಕಲಾಸಂಸ್ಕೃತಿಯ ಸಂಪರ್ಕವನ್ನೂ ಬೆಳೆಸಿಕೊಂಡಿದ್ದರು. ಕ್ರಿ.ಪೂ.೮೭೯ರಲ್ಲಿ ಎರಡನೆಯ ಅಶುರ-ನಝೀರಪಾಲ ಎಂಬ ಅರಸನು ನಿ ಮ್ರೂಡ್ ಎಂಬ ಪಟ್ಟಣವನ್ನು ಕಟ್ಟಿಸಿದನಲ್ಲದೇ ಸಾರ್ವಜನಿಕ ಕೊಠಡಿಗಳನ್ನೂ ತನ್ನ ಅರಮನೆಗೆ ಹೊಂದಿ ಕೈಸಾಲೆಗಳನ್ನೂ ಕಟ್ಟಿಸಿ ತನ್ನ ವಿಜಯೋತ್ಸವದ ಸನ್ನಿವೇಶಗಳ ಚಿತ್ರಗಳನ್ನೂ ಧಾರ್ಮಿಕ ಪ್ರಸಂಗಗಳ ಚಿತ್ರಗಳನ್ನೂ ಗೃಹಕೃತ್ಯಕ್ಕೆ ಸಂಬಂಧಿಸಿದ ಚಿತ್ರಗಳನ್ನೂ ಕೆತ್ತನೆಯ ಅರೆ ಉಬ್ಬು(Low relief) ಶೈಲಿಯಲ್ಲಿ ಚಿತ್ರಿಸಿದ ಚಿತ್ರಗಳುಳ್ಳ ಕಲ್ಲಿನ ಹಲಗೆಗಳನ್ನು ಜೋಡಿಸಿದ್ದನು. ಈ ಆಕೃತಿಗಳು ದೇಹಪ್ರಮಾಣಕ್ಕಿಂತಲೂ ದೊಡ್ಡದಾಗಿ ಕೆತ್ತನೆ ಮಾಡಿಸಿದ್ದು ಸೆಟೆದು ನಿಂತಿರುವಂತೆಯೂ, ಬಿಗುವಾಗಿಯೂ ಕಾಣಸುತ್ತವೆ. ಅರಸನ ಹಾಗೂ ಅವನ ಸಭಾಸದರ ಆಕೃತಿಗಳಲ್ಲಿ ಯಾವ ವ್ಯತ್ಯಾಸವೂ ಕಂಡುಬರುವುದಿಲ್ಲ. ಪ್ರಾಣಿಗಳ ಹಾಗೂ ಮರದ ಕೆತ್ತನೆಯ ಚಿತ್ರಗಳನ್ನೂ ರಾಜೋಪಯೋಗಿ ಉಡುಪುಗಳ ಮೇಲಿನ ಹೂ, ಬಳ್ಳಿ ಅಥವಾ ನಕ್ಷೆಗಳ ಮಾದರಿಗಳನ್ನೂ ಅತ್ಯಂತ. ಮಾರ್ಮಿಕವಾಗಿ ಚಿತ್ರಿಸಲಾಗಿದೆ.

ಅಸ್ಸೀರಿಯನ್ನರು ಚಿತ್ರಿಸಿದ ಚಿತ್ರವಸ್ತುಗಳಲ್ಲಿ ಹೆಚ್ಚಾಗಿ ಯುದ್ಧದ ವಿವಿಧ ಸನ್ನಿವೇಶಗಳ ಚಿತ್ರಣವಿದ್ದು ಮುತ್ತಿಗೆ ಹಾಕಿರುವ ಯೋಧರು, ಯುದ್ಧ ಕೈದಿಗಳ ಸಾಲು, ಲೂಟಿಮಾಡಿ ತಂದ ಪದಾರ್ಥಗಳು ಮತ್ತು ಬಿಲ್ಲು, ಸಬಳ, ಬಾಕುಗಳ ಸಹಾಯದಿಂದ ಸಿಂಹ ಮುಂತಾದ ಪ್ರಾಣಿಗಳ ಬೇಟೆಯಾಡುತ್ತಿರುವ ದೃಶ್ಯಗಳ ಚಿತ್ರಗಳೇ ಇರುತ್ತವೆ. ಕಪ್ಪು, ಕೆಂಪು, ಮತ್ತು ಬಿಳಿ ಬಣ್ಣಗಳಿಂದ ಅಲಂಕರಿಸಿದ ಕೆಲವು ಕೆತ್ತನೆ ಚಿತ್ರಗಳನ್ನು

ದಿಗೂ ನೋಡಬಹುದು. ಕಟ್ಟೆಗೆಗಳ ಛಾವಣಿಯ ಒಳಭಾಗದಲ್ಲಿ ಗಾರೆಯನ್ನು ಲಿಸಿ ಆದರ ಮೇಲೆ ಭೂಮಿತಿಯ ನಕ್ಷಾಕೃತಿಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ.

ಅಸ್ಸೀರಿಯನ್ ಅರಮನೆಗಳು ಪೂರ್ವಯೋಜಿತವಾದ ನಿಯಮಿತ. ನಕ್ಷೆಯ ಾರದಿಂದ ಕಟ್ಟಲ್ಪಟ್ಟವುಗಳಾಗಿದ್ದವು. ಅರಮನೆಯ ಮಹಾದ್ವಾರಗಳಲ್ಲಿ ಹದಿನೈದು ಗಳಿಗಿಂತಲೂ ದೊಡ್ಡವಾದ ಮನುಷ್ಯ ಅಥವಾ ರೆಕ್ಕೆಗಳುಳ್ಳ ಸಿಂಹ ಇಲ್ಲವೇ ೀರಿಗಳ ಮುಖದ ಪ್ರತಿಮೆಗಳನ್ನು ನಿಲ್ಲಿಸಲಾಗುತ್ತಿತ್ತು. ದುಷ್ಟಶಕ್ತಿಗಳು ಅರಮನೆಯನ್ನು ೀಶಿಸಿದಂತೆ ತಡೆದು ಅರಮನೆಗೆ ರಕ್ಷಣೆಯನ್ನೊದಗಿಸುವುದೇ ಇಂಥ ಪ್ರತಿಮೆಗಳನ್ನು ಸುವ ಉದ್ದೇಶವಾಗಿತ್ತು. ಈ ಪ್ರತಿಮೆಗಳು ಸುಣ್ಣದ ಕಲ್ಲಿನ ಬಂಡೆಗಳಿಂದ ಾರಿಸಲ್ಪಟ್ಟಿದ್ದು ಇಪ್ಪತ್ತು ಟನ್ನುಗಳಿಗಿಂತಲೂ ಭಾರವಾದವುಗಳಾಗಿರುತ್ತಿದ್ದವು.

ಅಸ್ಸೀರಿಯನ್ ಅರಸರಲ್ಲಿ ಕ್ರಿ. ಪೂ. ೭೦೫ ರಿಂದ ೬೮೧ ರವರೆಗೆ ಆಳಿದ ್ನಚೆರಿಬ(Sennacherib) ಎಂಬ ಅರಸನೂ ಕ್ರಿ. ಪೂ. ೬೬೮ರಿಂದ ೬೨೬ರವರೆಗೆ ದ ಅಶುರ್-ಬನಿ-ಪಾಲ ಎಂಬ ಅರಸನೂ ಅತಿ ಪರಾಕ್ರಮಿಗಳಾಗಿದ್ದು ಕಲಾವಿಕಾಸಕ್ಕೆ ್ನ ಪ್ರೋತ್ಸಾಹ ನೀಡಿದ್ದರು. ಸೆನ್ನಾಚೆಂಬನು ನಿನೌವೆ(Nineveh) ಎಂಬ ಪಟ್ಟಣವನ್ನು ್ರಚಿಸಿ ಅದನ್ನು ವೈಭವಪೂರ್ಣ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ರ್-ಬನಿ-ಪಾಲನ ಅರಮನೆಯಲ್ಲಿ ಸಿಂಹದ ಬೇಟೆಯ ದೃಶ್ಯಗಳ ಉಬ್ಬುಚಿತ್ರವಿದ್ದು ೀರಿಯನ್ ಶಿಲ್ಪ ಕಲಾಕೃತಿಗಳಲ್ಲಿಯೇ ಅತ್ಯುತ್ತಮವಾದುದಾಗಿದೆ.

ಕ್ರಿ. ಪೂ. ೮೫೮ ರಲ್ಲಿ ಮೂರನೆ ಶಾಲ್ಮಾನೀಸರ್ ಎಂಬ ರಾಜನ ಕಾಲದಲ್ಲಿ ಮನೆಯ ಗೋಡೆಗಳ ಮೇಲಿನ ಉಬ್ಬುಚಿತ್ರಗಳು, ನಿಂತಿರುವ ಪ್ರತಿಮೆಗಳು, ಶಾಸನ ್ರಗಳು ಹಾಗೂ ಇತರ ಸ್ಮಾರಕಗಳಿಗೆ ಅಸ್ಸೀರಿಯನ್ನರು ಹೆಚ್ಚಾಗಿ ಕಲ್ಲನ್ನೇ ಬಳಸುತ್ತಿದ್ದರು. ದೇ ನಾಜೂಕಾದ ವಿವರಗಳನ್ನು ಕೆತ್ತನೆ ಮಾಡಿದ ಕಂಚಿನ ಕಲಾಕೃತಿಗಳೂ ಈ ಕಾಲದಲ್ಲಿ ಮ ಬಂದವು. ಶಾಲ್ಮಾನೀಸರ ದೊರೆಯ ಅರಮನೆಯ ಮಹಾದ್ವಾರವನ್ನು ಇಂಥ ಕಂಚಿನ ಕೃತಿಗಳಿಂದಲೇ ಅಲಂಕರಿಸಲಾಗಿತ್ತು. ಅಲ್ಲದೇ ಶ್ರೇಷ್ಠ ದರ್ಜೆಯ ಪೀಠೋಪಕರಣಗಳು, ಾಣೆ ಪಾತ್ರೆಗಳು, ಆಭರಣಗಳೇ ಮೊದಲಾದವುಗಳನ್ನು ಸಹ ಕಂಚಿನಿಂದಲೇ ಾರಿಸಿದವುಗಳಾಗಿದ್ದವು. ಪೀಠೋಪಕರಣಗಳ ಮೇಲೆ ನಾಜೂಕಾಗಿ ಕೆತ್ತನೆ ಮಾಡಿದ ಂತದ ಕಲಾಕೃತಿಗಳು ಶೋಭಿಸುತ್ತಿದ್ದವು. ಬೆಲೆಬಾಳುವ ಹರಳು ಕಲ್ಲುಗಳ ಮೇಲೆ ೀಯವಾದ ಕೆತ್ತನೆ ಕೆಲಸವನ್ನು ಮಾಡಿರುವುದೂ ಕಂಡು ಬರುತ್ತದೆ. ಅಶುರ್-ಬನಿ-ಪಾಲನು ಮನೆಯಲ್ಲಿ ೨೨೦೦೦೦ ಆವೆ ಮಣ್ಣಿನ ಫಲಕಗಳಲ್ಲಿ ಬರೆದ ಪುಸ್ತಕಗಳ ಬೃಹದ್ಗ್ರಂಥಾಲಯವನ್ನೇ ್ಣಿಸಿಕೊಂಡಿದ್ದನೆಂದು ತಿಳಿದು ಬಂದಿದೆ

ತ ಸಂಸ್ಕೃತಿ

ಕಾಲ ಕ್ರಿ. ಪೂ. ೧೮೦೦ ಕ್ರಿ. ಪೂ.೧೨೦೦

ಹಿತ್ತೈತ ಜನಾಂಗದವರು ಇಂದಿನ ಏಷ್ಯ ಮೈನರ ಭಾಗದಲ್ಲಿರುವ ಹ್ಯಾಲಿ ನದಿಗಳ

ಗುಂಟ ವಾಸವಾಗಿದ್ದರು. ಕ್ರಿ. ಪೂ. ೧೬೦೦ ಸುಮಾರಿಗೆ ಬ್ಯಾಬಿಲೋನ್ ಪತನ ನಂತರ ಬ್ಯಾಬಿಲೋನ್‌ದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿಕೊಂಡರು.

ಹಿತ್ತೈತ್ ಕಲಾ ಸಂಸ್ಕೃತಿಯು ಸಹ ಇನ್ನುಳಿದ ಮೆಸೋಪೊಟೇಮಿಯದ ಸಂಸ್ಕೃತಿಗಳಂತೆಯೇ ಧಾರ್ಮಿಕ ತಳಹದಿಯ ಮೇಲೆಯೇ ವಿಕಾಸಗೊಂಡಿತು. ಹಿತ್ತೈತರು ತಮ್ಮ ವಿಶಿಷ್ಟವಾದ "ತೇಶುಬ್" ಎಂಬ ದೇವತೆಯನ್ನು ಪವಿತ್ರವಾದ ಹೋರಿಗಳಿಂದ ಎಳೆಯಲ್ಪಡುವ ರಥದ ಮೇಲೆ ನಿಂತ ಕೈಯಲ್ಲಿ ಕೊಡಲಿಯನ್ನು ಹಿಡಿದು ತಿರುಗಿಸುತ್ತಿರುವ ರೀತಿಯಲ್ಲಿ ಬೆಟ್ಟಗಳ ಮೇಲೆ ಕೆತ್ತನೆಮಾಡಿ ಚಿತ್ರಿಸುತ್ತಿದ್ದರು ಕೊಡಲಿಯು ಮಿಂಚಿನ ಸಂಕೇತವಾಗಿತ್ತು.

ಹಿತ್ತೈತರು ಪ್ರಾಣಿಗಳ ಸಣ್ಣ ಸಣ್ಣ ಬೊಂಬೆ, ಹೂಜಿ, ಥಾಲಿ, ಆಭರಣಗಳು, ಕಲ್ಲಿನ ದೇವತಾ ವಿಗ್ರಹಗಳು, ಭೂಮಿತಿಯಾಕೃತಿಗಳ ನಕ್ಷೆಗಳನ್ನು ರೂಪಿಸಿ, ವಿವಿಧ ವರ್ಣಗಳಿಂದ ಅಲಂಕರಿಸಿದ ಪಾತ್ರೆಗಳೇ ಮೊದಲಾದ ಕಲಾಪೂರ್ಣವಾದ ವಸ್ತುಗಳನ್ನು ತಯಾರಿಸುತ್ತಿದ್ದರು. ಅವರಿಂದ ರಚಿತವಾದ ಸ್ಮಾರಕಗಳ ಮೇಲಿನ ಉಬ್ಬು ಚಿತ್ರಗಳು ಆಕರ್ಷಕವಾಗಿದ್ದು ಅಖ್ಯಾಯಿಕೆಗಳಂತೆ ಕಂಡು ಬರುತ್ತಿದ್ದವು. ಇವರು ನಿರ್ಮಿಸಿದ ಪೂರ್ಣಪರಿಮಾಣ (Round) ಮೂರ್ತಿಶಿಲ್ಪ ಕಲೆಯಿಂದಲೇ ಪ್ರಭಾವಿತರಾದ ಅಸ್ಸೀರಿಯನ್ನರು ರೆಕ್ಕೆಗಳುಳ್ಳ ಸಿಂಹ ಹಾಗೂ ಹೋರಿಗಳ ಪ್ರತಿಮೆಗಳನ್ನು ನಿರ್ಮಿಸಲು ಶಕ್ತರಾದರು.

ಮಿನೋಯನ್ ಅಥವಾ ಕ್ರೀಟ್ ಸಂಸ್ಕೃತಿ

ಕಾಲ-ಕ್ರಿ. ಪೂ. ೩,೦೦೦ ಕ್ರಿ. ಪೂ.೧,೧೦೦

ಕ್ರೀಟ್ ದೇಶದ ಅರಸನನ್ನು "ಮಿನೋ" ಎಂದು ಕರೆಯುತ್ತಿದ್ದ ಕಾರಣವಾಗಿ ಈ ಸಂಸ್ಕೃತಿಯನ್ನು "ಮಿನೋಯನ್ ಸಂಸ್ಕೃತಿ" ಎಂದು ಕರೆಯಲಾಗುತ್ತಿದೆ. ಭೂಮ ಸಮುದ್ರದ ದಂಡೆಗುಂಟ ಹಬ್ಬಿರುವ ಗುಡ್ಡ ಬೆಟ್ಟಗಳಿಂದ ತುಂಬಿದ ಪ್ರದೇಶದಲ್ಲಿ ವಿಕಾಸಗೊಂ ಈ ಸಂಸ್ಕೃತಿಯು ಉಜ್ವಲವಾಗಿ, ಪ್ರವರ್ಧಮಾನವಾಗಿ ಬೆಳೆದು ಬಂದಿತ್ತು.

ಕ್ರೀಟ್ ದೇಶದ ನೊಸ್ಸೋಸ್(Cnossos) ಎಂಬಲ್ಲಿ ಕ್ರೀಟ್ ಅರಮನೆಗಳ ಹಾಗು ಇತರ ಕಟ್ಟಡ ಅವಶೇಷಗಳು ಕಂಡುಬಂದಿದ್ದು ಈ ಜನರು ತಮ್ಮ ಮನೆ ಗೋಡೆಗಳನ್ನು ಆಕರ್ಷಣೀಯವಾದ ವರ್ಣಚಿತ್ರಗಳಿಂದ ಅಲಂಕರಿಸುತ್ತಿದ್ದರು. ಅವ ಆಭರಣಗಳು, ಲೋಹ ಕಲಾಕೃತಿಗಳು ಸುಂದರವಾಗಿರುತ್ತಿದ್ದವು ಕೊಠಡಿಗಳ ಗೋಡೆಗ ಮೇಲೆ ಪ್ರಭಾವಶಾಲಿ ಬಣ್ಣಗಳಿಂದ ಚಿತ್ರಿಸಿದ ಮನುಷ್ಯರು, ಪ್ರಾಣಿಗಳು, ಪಕ್ಷಿಗ ಮತ್ತು ಗಿಡಬಳ್ಳಿಗಳೇ ಮೊದಲಾದ ಚಿತ್ರಗಳಿರುತ್ತಿದ್ದವು. ಕ್ರೀಟ್ ದೇಶದ ಕಲಾವಿದ ಬೇರೆ ದೇಶಗಳ ಕಲಾವಿದರು ಬಳಸಿದ ತಂತ್ರಗಳಿಗಿಂತ ವಿಭಿನ್ನವಾದ ಶೈಲಿ ತಂತ್ರವನ್ನು ಬಳಸಿದ್ದರಿಂದ ಅವರದೇ ಆದ "ಮಿನೋಯನ್ ಕಲೆ" ಎಂದು ಸ್ಪಷ್ಟವಾ ಗೋಚರಿಸುತ್ತಿರುವದನ್ನು ಕಂಡುಕೊಳ್ಳಬಹುದು. ಅರಮನೆಯ ಅವಶೇಷಗಳಲ್ಲಿ ದೊರೆ ಚಿನ್ನ, ಬೆಳ್ಳಿ ಮತ್ತು ಕಂಚುಗಳಿಂದ ಸುಂದರವಾಗಿ ತಯಾರಿಸಲ್ಪಟ್ಟ ಪಿಂಗಾಣಿ ಪಾತ್ರೆಗ ಕಪ್ಪು ಬಣ್ಣದ ಹಿನ್ನೆಲೆಯಲ್ಲಿ ಪರಿಣಾಮಕಾರಿ ನಕ್ಷೆಗಳಿಂದ ಅಲಂಕರಿಸಲ್ಪಟ್ಟವುಗಳಾಗಿ

ಕುಶಲ ಕಲೆಗಾರರು ರತ್ನಗಳ ಮೇಲಿನ ಕೆತ್ತನೆಯ ಕೆಲಸ, ಆಭರಣಗಳು, ಹಸ್ತಿದಂತದ ಸಣ್ಣ ಸಣ್ಣ ಪ್ರತಿಮೆಗಳು ಮತ್ತು ಪಾತ್ರೆಗಳೇ ಮೊದಲಾದ ಸೂಕ್ಷ್ಮಾಕಾರ ಕೃತಿರಚನೆಗೆ ತಮ್ಮ ಾಣ್ಮೆಯನ್ನು ವಿಸ್ತರಿಸಿದರು. ಅಲ್ಲದೇ ಮದ್ಯ ತುಂಬುವ ಪ್ರಾತ್ರೆಗಳನ್ನು ಎತ್ತಿನ ತಲೆಯ ಆಕೃತಿಯಲ್ಲಿ ತಯಾರಿಸಿ ಮಧುಪಾತ್ರೆಗಳಿಗೆ ಸುರಿಯುತ್ತಿದ್ದರು. ಈ ಪಾತ್ರೆಗಳನ್ನು ತಯಾರಿಸಲು ಸ್ಥಳೀಯವಾಗಿ ದೊರಕುವ ಸ್ಲೀಟೈಟ್(Soap Stone) ಕಲ್ಲುಗಳನ್ನು ಉಪಯೋಗಿಸುತ್ತಿದ್ದರು.

ಕ್ರಿ. ಪೂ. ೧೬ನೆಯ ಶತಮಾನದಲ್ಲಿ ಸಂಭವಿಸಿದ ಭೀಕರ ಭೂಕಂಪದಲ್ಲಿ ನೊಸ್ಲೋಸ್ ಪಟ್ಟಣವು ಹಾಳಾಯಿತಾದರೂ ಅದನ್ನು ಕೂಡಲೇ ಮತ್ತಷ್ಟು ಸುಂದರವಾಗಿ ಕಟ್ಟಲಾಯಿತು. ಗೋಡೆಗಳ ಮೇಲೆ ಹೊಸಚಿತ್ರಗಳನ್ನು ಚಿತ್ರಿಸಿ ಅಲಂಕರಿಸಲಾಯಿತು. ಹೀಗೆ ಚಿತ್ರಿಸಿದ ಚಿತ್ರಗಳಲ್ಲಿ ವರ್ಣಲೇಪಿತ ಉಬ್ಬು ಚಿತ್ರಗಳೂ ಇದ್ದವು. ಪ್ರಭಾವಶಾಲೀ ಬಣ್ಣಗಳಿಂದ ಅಲಂಕೃತವಾದ ಪಾತ್ರೆಗಳೂ ಅತಿ ಸೂಕ್ಷ್ಮವಾದ ಮೊಟ್ಟೆಯ ಕವಚಗಳ ಬಟ್ಟಲುಗಳೂ ಪುನಃ ಸೃಷ್ಟಿಯಾದವು. ಈ ಬಾರಿಯ ಹೂಜಿ, ಪಿಂಗಾಣಿಗಳು ತೆಳುವಾದ ಹಿನ್ನೆಲೆಯಲ್ಲಿ ಕಂಡು ಕಂದು ಮತ್ತು ಕೆಂಪು ವಾರ್ನಿಷ್‌ಗಳಿಂದ ಸ್ವಾಭಾವಿಕವಾದ ನಕ್ಷೆಗಳಿಂದಲೂ ಸುರುಳಿಯಾಕಾರದ ನಕ್ಷೆಗಳಿಂದಲೂ ಅಲಂಕರಿಸಲ್ಪಟ್ಟವು. ಪಕ್ಷಿಗಳು ಬೆಕ್ಕುಗಳು ಮತ್ತು ಕಪಿಗಳಿಂದ ತುಂಬಿದ ಉದ್ಯಾನಗಳ ವರ್ಣ ಚಿತ್ರಗಳ ಬದಲಾಗಿ ಅರಸನಿಗೆ ಕಾಣಿಕೆಗಳನ್ನು ಅರ್ಪಿಸಲು ಹೊಗುತ್ತಿರುವ ಮಾನವರ ಮೆರವಣಿಗೆಗಳ ಚಿತ್ರಗಳನ್ನು ಈಜಿಪ್ಟಿಯನ್ ರೀತಿಯಲ್ಲಿ ಚಿತ್ರಿಸಿದ ಚಿತ್ರಗಳೂ ಮರೆತ ಗೂಳಿಯ ಕೊಂಬುಗಳನ್ನು ಹಿಡಿಯುವ ಭಯಾನಕವೂ ಭಯಂಕರವೂ ಆದ ಸ್ಪರ್ಧೆಯಲ್ಲಿ ತೊಡಗಿರುವ ಮನುಷ್ಯರ ಚಿತ್ರಗಳು ರೂಪಿತವಾದವು.

ಕ್ರಿ. ಪೂ. ೧೪೦೦ರಲ್ಲಿ ಮತ್ತೊಮ್ಮೆ ಭೀಕರ ಭೂಕಂಪವಾದಾಗ ನೊಸ್ಲೋಸ್ ಸಂಪೂರ್ಣವಾಗಿ ಹಾಳಾಯಿತು. ಮತ್ತೊಮ್ಮೆ ಈ ಪಟ್ಟಣವನ್ನು ಕಟ್ಟಲಾಯಿತಾದರೂ ಪರಕೀಯ ದಾಳಿಕಾರರು ಮಿನೋಯನ್ ಸಾಮ್ರಾಜ್ಯವನ್ನು ಸಂಪೂರ್ಣವಾಗಿ ಹಾಳುಗೆಡವಿದರು.

ಹಿಬ್ರ್ಯೂ(ಯಹೂದಿ) ಸಂಸ್ಕೃತಿ

ಕಾಲ-ಕ್ರಿ. ಪೂ. ೧೦೦೦ ಕ್ರಿ. ಪೂ. ೫೮೭

ಯಹೂದಿಗಳು ಮೂಲತಃ ಅಲೆಮಾರಿಗಳು. ಈಗಿನ ಇಸ್ರಾಯೇಲ ಮತ್ತು ಜೋರ್ಡಾನ ಪ್ರದೇಶಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ವಾಸವಾಗಿದ್ದರು. ಯಹೂದಿಯರ ಚರಿತ್ರೆಯನ್ನ ಮುಖ್ಯವಾಗಿ ಯಹೂದಿಯರ ಸಾಹಿತ್ಯ ಕೃತಿಯಾದ "ಹಳೆಯ ಒಡಂಬಡಿಕೆಗಳು"(Old Testaments) ಎಂಬ ಗ್ರಂಥದಿಂದ ತಿಳಿದುಕೊಳ್ಳಬಹುದಾಗಿದೆ. ಒಂದೆಡೆ ಶಾಶ್ವತವಾಗಿ ನೆಲೆಗೊಳ್ಳಲು ಯಹೂದಿಯರಿಗೆ ಅವಕಾಶವಿಲ್ಲವಾಗಿದ್ದರಿಂದ ಕಲೆಯ ವಿಕಾಸವು ಅಷ್ಟಾಗಿ ಅಭಿವೃದ್ಧಿಗೊಳ್ಳಲಿಲ್ಲ. ಈ ಜನಾಂಗದವರು ನೆಲೆಸಿದ್ದ ಭಾಗವನ್ನು "ಕನಾನ್ ಭೂಮಿ" ಎಂದೇ ಉಲ್ಲೇಖಿಸಲಾಗಿದೆ. ಯಹೂದಿಯರ ಜೀವಮಾನವೆಲ್ಲ ಯುದ್ಧಗಳಲ್ಲಿಯೇ ಕಳೆಯಿತು. ಆದ್ದರಿಂದ ಅವರ ಸಂಸ್ಕೃತಿಯ ಸ್ಪಷ್ಟವಾದ ಅವಶೇಷಗಳೇನೂ ನಮಗೆ ದೊರಕಿಲ್ಲ ಸಾಲ್(Saul) ದಾವೀದ(David)

ಮತ್ತು ಸೊಲೋಮನ್(Solomon) ಮುಂತಾದವರು ಯಹೂದಿಯರ ಪ್ರಮುಖ ಅರಸರಾಗಿದ್ದರು. "ಸುಮೇರಿಯನ್ ಹಸ್ತಿದಂತ ಕೃತಿ"ಗಳ ಮಾದರಿಯಲ್ಲಿಯೇ ಪೌರಾಣಿಕ ಸನ್ನಿವೇಶಗಳು, ಧಾರ್ಮಿಕ ಸಂಕೇತಗಳು ಮತ್ತು ಅಲಂಕಾರಿಕ ನಕ್ಷೆಗಳೇ ಮೊದಲಾದವುಗಳನ್ನು ಸೊಲೋಮನ್ ದೊರೆಯ ದೇವಾಲಯದಲ್ಲಿ ಕೆತ್ತನೆ ಮಾಡಿ ಚಿತ್ರಿಸಿ ಅಲಂಕರಿಸಲಾಗಿತ್ತು.

ಯಹೂದಿಯರ ಕಲಾಕೃತಿಗಳು ಸಂಪೂರ್ಣವಾಗಿ ಬ್ಯಾಬಿಲೋನ್, ಈಜಿಪ್ಟ ಮತ್ತು ಕನಾನ್‌ಗಳಿಂದ ಸ್ಪೂರ್ತಿಗೊಂಡಿದ್ದವು. ಯಹೂದಿಯರ ಪಾತ್ರೆಗಳು ಕನಾನೈಟ್ ಪಾತ್ರೆಗಳ ಮೇಲಿನ ನಕ್ಷೆಗಳಂತೆಯೇ ಚಿತ್ರಿಸಿದ ನಕ್ಷೆಗಳಿಂದಲೇ ಅಲಂಕೃತಗೊಂಡವುಗಳಾಗಿವೆ. ಸೋಲೇಮನ್ ದೊರೆಯು ತನ್ನ ದೇವಾಲಯವನ್ನು ಕಟ್ಟಿಸಲು ಫಿನೀಷಿಯದ ವಾಸ್ತುಶಿಲ್ಪಗಳನ್ನೂ ಕುಶಲ ಕಲಾಪ್ರವೀಣರನ್ನೂ ಕರೆಸಿಕೊಂಡಿದ್ದನು. ಪೌರ್ವಾತ್ಯ ದೇಶಗಳಲ್ಲಿ ಸಾಮಾನ್ಯವಾಗಿ ರೂಢಿಯಲ್ಲಿರುವ "ನಂದಿ ಪ್ರತಿಮೆ"ಯೇ ಯಹೂದಿಯರ ಪ್ರಧಾನ ದೇವತೆಯಾಗಿತ್ತು.

ಚೈನಾ ಸಂಸ್ಕೃತಿ

ಚೈನಾ ದೇಶದ ಸಂಸ್ಕೃತಿಯು ೩೦೦೦ ವರ್ಷಗಳಿಗಿಂತಲೂ ಹಿಂದಿನ ಸಂಸ್ಕೃತಿಯಾಗಿದ್ದು ಇಂದಿನವರೆಗೂ ಅವಿಚ್ಛಿನ್ನವಾಗಿ ಬೆಳೆದು ಬಂದಿದೆ.



೪) ಚೀನಾ ಕಲೆ

ಗ್ರೀಕ್ ಕಲಾ ಸಂಸ್ಕೃತಿಯಿಂದ ಪಾಶ್ಚಾತ್ಯ ಕಲಾಸಂಸ್ಕೃತಿಯು ಸ್ಫೂರ್ತಿಗೊಂಡರೆ ೈನಾ ದೇಶದ ಕಲೆಯು ಜಪಾನ, ಕೋರಿಯಾ, ಮಧ್ಯ ಏಷ್ಯ, ಟಿಬೇಟ, ಮಂಗೋಲಿಯ ಮತ್ತು ಅಣ್ಣಾಂ ಮೊದಲಾದ ಪೌರ್ವಾತ್ಯ ದೇಶಗಳ ಕಲಾಭಿವೃದ್ಧಿಗೆ ಸ್ಫೂರ್ತಿಯನ್ನು ನೀಡಿತು. ಅಷ್ಟೇ ಅಲ್ಲದೇ ಯುರೋಪ್ ದೇಶವು ಕೂಡ ಪಾತ್ರೆಗಳ ಕಲೆ ೇಯ್ಗೆಯ ಕಲೆ ಹಾಗೂ ವಾರ್ನಿಸ್ ಅನ್ನು ತೆಗೆಯುವ ಕಲೆ ಮೊದಲಾದ ಕಲಾತಂತ್ರ ಪುಣ್ಯತೆಯನ್ನು ಚೈನಾ ದೇಶದಿಂದಲೇ ಕಲಿತುಕೊಂಡಿತು.

ಚೈನಾ ದೇಶದ ಕಲೆಯಲ್ಲಿ ವರ್ಣಚಿತ್ರ ನಿರ್ಮಾಣ, ಮೂರ್ತಿಶಿಲ್ಪ, ಪಿಂಗಾಣಿ ಾತ್ರೆಗಳ ತಯಾರಿಕೆ, ನೇಯ್ಗೆಯ ಕಲೆಗಳೊಂದಿಗೆ ವಾಸ್ತು ಶಿಲ್ಪವೂ ಸಮಾವೇಶಗೊಂಡಿರುತ್ತದೆ. ಲ್ಲದೆ ಚೈನಾ ದೇಶದಲ್ಲಿ ಲೇಖನ ಕಲೆಯು ಅತೀ ಮಹತ್ವದ್ದೆಂದು ಪ್ರಾಚೀನ ಾಲದಿಂದಲೂ ಪರಿಗಣಿಸಲಾಗಿದೆ. ಪ್ರಪಂಚದ ಇತರ ಭಾಷೆಗಳ ಒಂದು ಅಕ್ಷರವು ೇವಲ ಒಂದು ಧ್ವನಿಯನ್ನು ಸೂಚಿಸಿದರೆ ಚೀನೀ ಲಿಪಿಯು ಒಂದು ವಸ್ತು ಅಥವಾ ಂದು ಅಭಿಪ್ರಾಯವನ್ನು ಸಂಪೂರ್ಣವಾಗಿ ಚಿತ್ರಿಸಿಬಿಡುವ ಚಿತ್ರಲಿಪಿಯಾಗಿದೆ. ನಾವು ಕ್ಕಣಿಕೆ ಇಲ್ಲವೆ ಪೆನ್ಸಿಲುಗಳನ್ನು ಹಿಡಿದು ಬರೆಯುವಷ್ಟೇ ಸುಲಭವಾಗಿಯೂ ಹಜವಾಗಿಯೂ ಚೀನೀಯರು ಕುಂಚವನ್ನು ಹಿಡಿದು ತಮ್ಮ ಚಿತ್ರಮಯವಾದ ಿಪಿಯನ್ನು ಬರೆಯುತ್ತಾರೆ. ಹಿಂದೆ ಚಿತ್ರಕಲೆಯು ಎರಡನೆಯ ಸ್ಥಾನವನ್ನು ಪಡೆದ ಲೆಯಾಗಿತ್ತು. ಚೀನೀಯರು ಲೇಖನ ಕಲೆ ಮತ್ತು ಚಿತ್ರಕಲೆಗಳೆರಡನ್ನೇ ಲಲಿತ ಲೆಗಳೆಂದು ತಿಳಿದಿದ್ದರು. ಉಳಿದ ಕಲೆಗಳನ್ನೆಲ್ಲ ಅವರು ಕುಶಲಕಲೆ(Handicraft)ಗಳೆಂದು ಪರಿಗಣಿಸುತ್ತಿದ್ದರು. ಚೀನೀ ವರ್ಣಚಿತ್ರಕಾರರು ಕ್ಯಾನವಾಸು ಇಲ್ಲವೆ ಕಟ್ಟಿಗೆಯ ಹಲಗೆಗಳನ್ನು ತೈಲವರ್ಣ ಚಿತ್ರಗಳನ್ನು ಚಿತ್ರಿಸಲು ಬಳಸುವ ಬದಲಾಗಿ ರೇಶ್ಮೆ ಬಟ್ಟೆ ಥವಾ ಕಾಗದಗಳ ಮೇಲೆ ಜಲವರ್ಣಗಳಿಂದ ಚಿತ್ರಿಸುತ್ತಾರೆ; ಹೆಚ್ಚಾಗಿ ಕಪ್ಪು ಂಡಿಯನ್ ಇಂಕ್‌ನಿಂದ ವಿವಿಧ ಸ್ವರಭೇದಗಳಿಂದ ಚಿತ್ರಗಳನ್ನು ಬರೆಯುವದೇ ಹೆಚ್ಚು. ಪಾನಿಯರು ಕಾಕೆಮಾನೋ(Kakemano)ಎಂದು ಕರೆಯುವ ಉದ್ದಾಕಾರದ ಚಿತ್ರಗಳನ್ನು ರೆದು ರೇಶಿಮೆ ಬಟ್ಟೆಗೆ ಅಂಟಿಸಿ ಗೋಡೆಗೆ ಇಳಿಬಿಡುತ್ತಾರೆ; ಇಲ್ಲವೆ ಅಡ್ಡವಾಗಿಟ್ಟು ಲ್ಪ ಸ್ವಲ್ಪ ಭಾಗವನ್ನು ಮಾತ್ರ ನೋಡಲು ಸಾಧ್ಯವಾಗುವಂತೆ ಇಡುತ್ತಾರೆ. ಚೀನೀ ತ್ರಕಾರನು ಬೆತ್ತಲೆ ಮಾನವರ ಭಾವಚಿತ್ರಗಳನ್ನಾಗಲೀ ಭೂಮಿತಿಯಂಥ ಯಥಾದರ್ಶಕ Perspective) ಚಿತ್ರಗಳನ್ನಾಗಲೀ ಚಿತ್ರಿಸಲು ಇಚ್ಛಿಸುವುದಿಲ್ಲ. ಚೀನೀಯರು ಪ್ರಕೃತಿ ತ್ರಣದಲ್ಲಿ ವಾಸ್ತವಿಕತೆಗಿಂತ ಅದರ ಗೂಢಾರ್ಥದ ಕಡೆಗೆ ಹೆಚ್ಚು ಗಮನ ನೀಡಿ ಕೃತಿಯ ವಿಷಯದಲ್ಲಿ ತಮಗುಂಟಾದ ಭಾವನೆಗಳನ್ನು ತಮ್ಮ ಚಿತ್ರ ಕಲಾಕೃತಿಗಳಲ್ಲಿ ಭಿವ್ಯಕ್ತಿಸಲು ಪ್ರಯತ್ನಿಸುತ್ತಿದ್ದರು.

ಚೀನೀ ಶಿಲ್ಪ ಕಲಾವಿದರು ಕಲ್ಲು, ಕಟ್ಟಿಗೆ ಇಲ್ಲವೆ ಕಂಚುಗಳನ್ನು ಮಾತ್ರವೇ ಉಪಯೋಗಿಸದೇ ಕೆಲವು ಬಾರಿ ಲ್ಯಾಕರ್ ಎಂಬ ವಾರ್ನಿಸನಂಥ ಜಿಗುಟು ತೈಲಗಳನ್ನೂ ಉಪಯೋಗಿಸಿ ಶಿಲ್ಪಕೃತಿಗಳನ್ನು ತಯಾರಿಸಿರುವುದು ಕಂಡು ಬರುತ್ತದೆ. ಈ ಲ್ಯಾಕರ್ ಂತ್ರವನ್ನು ಚೀನೀಯರು ಕ್ರಿ. ಪೂ. ೨೦೦೦ ವರ್ಷಗಳಿಗಿಂತಲೂ ಮುಂಚಿತವಾಗಿಯೇ

ಶೋಧಿಸಿದ್ದಾರೆ. "ಚೀನೀ ಮಣ್ಣಿನ ಪಾತ್ರೆಗಳೆಂದರೇನೇ ಚೀನಾದೇಶ" ಎನ್ನುವ ಮಟ್ಟಿಗೆ ಚೀನೀಯರಿಂದಲೇ ಪ್ರಪ್ರಥಮವಾಗಿ ತಯಾರಿಸಲ್ಪಟ್ಟ ಚೀನೀ ಮಣ್ಣಿನ ಪಾತ್ರೆಗಳು ಇಂದಿಗೂ ವಿಶ್ವ ವಿಖ್ಯಾತ. ಚೀನದಲ್ಲಿ ದೊರೆಯುವ ಜೇಡ್(Jade) ಎಂಬ ವಿಶಿಷ್ಟ ಗುಣವುಳ್ಳದ್ದೂ ಬಹು ಬೆಲೆಬಾಳುವಂಥದೂ ಆದ ತೆಳುಪಚ್ಚೆ(Light Emarald) ವರ್ಣದ ಕಲ್ಲಿನಿಂದ ಅಂದವಾದ ಪ್ರತಿಮೆಗಳನ್ನೂ ಆಭರಣಗಳನ್ನೂ ತಯಾರಿಸಲು ಉಪಯೋಗಿಸಲಾಗಿದೆ.

ಚೈನಾ ದೇಶದ ಕಲಾ ಸಂಸ್ಕೃತಿಯು ಐದು ವಿವಿಧ ಕಾಲಗಳಲ್ಲಿ ವಿಕಾಸಗೊಂಡಿತು.

ಮೊದಲನೆಯ ಕಾಲ-ಹ್ಸಿಯಾ, ಶಾಂಗ್‌ಇನ್ ಮತ್ತು ಚೌ ರಾಜಮನೆತನಗಳ ಕಾಲ. ಹ್ಸಿಯಾ ವಂಶಸ್ಥರ ಕಾಲದ ಕಲಾಸಂಸ್ಕೃತಿಯ ಬಗೆಗೆ ಅಷ್ಟೇನೂ ತಿಳಿದು ಬಂದಿಲ್ಲ. ಶಾಂಗ್‌ಇನ್ ವಂಶಸ್ಥರ ಕಾಲದ ಅತಿ ಮಹತ್ವದ ಕಲಾಕೃತಿಗಳೆಂದರೆ ಧಾರ್ಮಿಕ ಸಾಂಕೇತಿಕ ಬಲಿಪಾತ್ರೆಗಳು. ಈ ಬಲಿಪಾತ್ರೆಗಳ ಮೇಲೆ ಪ್ರಾಣಿಗಳ ಚಿತ್ರಗಳನ್ನೊಳಗೊಂಡಂತೆ ಚಿತ್ರಲಿಪಿಗಳನ್ನೂ ಕೆತ್ತನೆ ಮಾಡಿ ಅಲಂಕರಿಸಲಾಗಿದೆ.

ಎರಡನೆಯ ಕಾಲ- ಕ್ರಿ. ಪೂ. ೨೨೧ ರಲ್ಲಿ ಆಳುತ್ತಿದ್ದ ಹ್ವಾಂಗ್-ಟಿ ಎಂಬ ಚಕ್ರಿವರ್ತಿಯು ಪರಕೀಯ ಅಲೆಮಾರಿ ಜನಾಂಗಗಳ ದಾಳಿಗಳನ್ನು ತಡೆಗಟ್ಟಿ ದೇಶದ ರಕ್ಷಣೆಗಾಗಿ ಉತ್ತರದ ಗಡಿಯಲ್ಲಿ ದೇಶದ ಉದ್ದಕ್ಕೂ ಸುಮಾರು ೩೦೦೦ ಮೈಲು ಉದ್ದವಾದ ಗೋಡೆಯನ್ನು ಕಟ್ಟಿಸಿದನು. ಈ ಗೋಡೆಯು ಪ್ರಪಂಚದ ಏಳು ಕೌತುಕಗಳಲ್ಲಿ ಒಂದಾಗಿದೆ. ಕಂಚಿನ ಹಾಗೂ ಜೇಡ್ ಕಲ್ಲಿನ ಕಲಾಕೃತಿಗಳು, ನುಣುಪುಗೊಳಿಸಿದ ಮಣ್ಣಿನ ಪಾತ್ರೆಗಳು, ಮಣ್ಣಿನಿಂದ ತಯಾರಿಸಿದ ಸಮಾಧಿ ಪ್ರತಿಮೆಗಳು ಈ ಕಾಲದ ಅತ್ಯುತ್ತಮ ಕಲಾಕೃತಿಗಳಾಗಿವೆ. ಕ್ರಿ. ಪೂ. ೨ನೆಯ ಶತಮಾನದಿಂದ ಕ್ರಿ.ಶ. ೩ನೆಯ ಶತಮಾನಗಳವರೆಗೆ ಆಳಿದ "ಹಾನ್" ಅರಸರ ಕಾಲದ ರೇಷ್ಮೆ ವಸ್ತ್ರಗಳು, ಲ್ಯಾಕರ್ ಕಲಾಕೃತಿಗಳು, ವರ್ಣಚಿತ್ರಗಳು ಮುಂತಾದವುಗಳು ಕಲ್ಲಿನ ಕಲಾಕೃತಿಗಳಷ್ಟೇ ಸತ್ವಶಾಲಿ ಕಲಾಕೃತಿಗಳಾಗಿವೆ. ಇದೇ ಕಾಲದಲ್ಲಿಯೇ ಬೌದ್ಧ ಧರ್ಮವು ಚೈನಾ ದೇಶದಲ್ಲಿ ಹರಡಿಕೊಂಡ ಪರಿಣಾಮವಾಗಿ ಚೈನಾ ದೇಶದಲ್ಲಿಯೂ ಸಹ ಬೆಟ್ಟಗಳನ್ನು ಕೊರೆದು ನಿರ್ಮಿಸಿದ ಭಾರತೀಯ ರೀತಿಯ ಬೌದ್ಧ ದೇವಾಲಯಗಳೂ ಸಂಘರಾಮಗಳೂ ನಿರ್ಮಿತವಾದವು. ಅಲ್ಲದೇ ಮೂರ್ತಿಶಿಲ್ಪಗಳಿಂದಲೂ ಭಿತ್ತಿಚಿತ್ರಗಳಿಂದಲೂ ಅಲಂಕಾರಗೊಳಿಸಲ್ಪಟ್ಟವು.

ಮೂರನೆಯ ಕಾಲ- ಕ್ರಿ.ಶ. ೫೮೯ ರಿಂದ ಕ್ರಿ.ಶ. ೬೧೮ರವರೆಗೆ ಆಳಿದ "ಸುಯಿ" ಮತ್ತು ಕ್ರಿ.ಶ. ೬೧೮ ರಿಂದ ಕ್ರಿ.ಶ.೯೦೬ರ ವರೆಗೆ ಆಳಿದ "ಟಾಂಗ್" ವಂಶಸ್ಥರ ಕಾಲದಲ್ಲಿ ಚೈನಾ ಕಲಾ ಸಂಸ್ಕೃತಿಯು ವಿಕಾಸದ ಪರಾಕಾಷ್ಠೆಯನ್ನು ತಲುಪಿತು. ಬೌದ್ಧ ಧಾರ್ಮಿಕ ವರ್ಣಚಿತ್ರಗಳೊಂದಿಗೆ ಐತಿಹಾಸಿಕ ಘಟನೆಗಳ ರಾಜ ದರಬಾರಿನ ಚಿತ್ರಗಳೂ ಚಿತ್ರಿಸಲ್ಪಟ್ಟವು. ಈ ಕಾಲದ ಸಮಾಧಿಗಳಲ್ಲಿ ದೊರೆತ ಪಾತ್ರೆಗಳ ಮೇಲೆ ಚಿತ್ರಿತವಾದ ಚಿತ್ರಗಳು ಆ ಕಾಲದ ಜನ ಜೀವನ ಮತ್ತು ಚಟುವಟಿಕೆಗೆ ಯಥಾವತ್ ಕಲ್ಪನೆಯನ್ನುಂಟು ಮಾಡುತ್ತವೆ.

ನಾಲ್ಕನೆಯ ಕಾಲ- ಕ್ರಿ.ಶ. ೧೦ನೆಯ ಶತಮಾನದಲ್ಲಿ ಆಳುತ್ತಿದ್ದ "ಸುಂಗ್" ವಂಶಸ್ಥರ ಕಾಲದಲ್ಲಿ ಚೈನಾ ದೇಶದ ಕಲೆಯು ಯುರೋಪಿನ ಪುನರುತ್ಥಾನ ಕಾಲದ ಕಲೆಯಂತೆ ಪ್ರಗತಿಯ ಪರಾಕಾಷ್ಠೆಯನ್ನು ತಲುಪಿತ್ತು. "ಪ್ರಕೃತಿ ದೃಶ್ಯ ಚಿತ್ರಣ"(Land-scape painting) ಕಲೆಯು ಈ ಕಾಲದಲ್ಲಿ ಪ್ರವರ್ಧಮಾನವಾಗಿ ಬೆಳೆಯಿತು.

ಐದನೆಯ ಕಾಲ- ಕ್ರಿ.ಶ. ೧೩೬೮ ರಿಂದ ಕ್ರಿ.ಶ. ೧೬೪೪ರ ವರೆಗೆ ಆಳಿದ "ಮಿಂಗ್" ಮತ್ತು ಕ್ರಿ.ಶ. ೧೬೪೪ ರಿಂದ ಕ್ರಿ.ಶ. ೧೯೧೨ರ ವರೆಗೆ ಆಳಿದ ಚೈನಾದೇಶದ ಕೊನೆಯ "ಮಂಚು" ಅರಸು ಮನೆತನಗಳ ಕಾಲವು ಚೈನಾ ದೇಶದ ಕಲಾವಿಕಾಸದ ಘನವಂತಿಕೆಯ ಕಾಲವೆಂದು ಹೇಳಬಹುದು. ಅಸಂಖ್ಯಾತ ಕಲಾವಿದರು ಸ್ವತಂತ್ರವಾದ ಕಲಾಕೃತಿಗಳನ್ನು ರಚಿಸಿದರು, ಕಲಾಪ್ರಪೂರ್ಣವಾದ ವಾಸ್ತುಶಿಲ್ಪ, ಪಾತ್ರೆ, ಲ್ಯಾಕರ್ ಮತ್ತು ನೇಯ್ಗೆಯ ಕಲಾಕೃತಿಗಳೇ ಮುಂತಾದವುಗಳ ಸೃಷ್ಟಿಯಾಯಿತು. ತಾಂತ್ರಿಕ ನೈಪುಣ್ಯತೆಯೂ ಅಗಾಧವಾದ ರೀತಿಯಲ್ಲಿ ಬೆಳೆದು ಬಂದಿತು. ಹಸ್ತಿದಂತೆ ಮತ್ತು ಜೇಡ್ ಕಲ್ಲಿನ ಕೆತ್ತನೆಯ ಕಲಾಕೃತಿಗಳಲ್ಲಿ ಹೆಚ್ಚಿನ ನೈಪುಣ್ಯತೆ ಸಿದ್ಧಿಸಿತು. "ಮಿಂಗ್" ಅರಸರ ಕಾಲದ ಕಟ್ಟಡಗಳು ಚೈನಾ ದೇಶದ ವಾಸ್ತು ಶಿಲ್ಪ ಕಲೆಯ ಪರಮಾವಧಿ ಔನ್ನತ್ಯತೆಯನ್ನು ತೋರಿಸುವಂತೆ ಇಂದಿಗೂ ತಲೆ ಎತ್ತಿ ನಿಂತಿವೆ.

ಗ್ರೀಕ್ ಸಂಸ್ಕೃತಿ

ಕಾಲ-ಕ್ರಿ. ಪೂ. ೮೦೦-ಕ್ರಿ ಪೂ. ೧೯೭

ಗ್ರೀಕ ಸಾಂಪ್ರದಾಯದಲ್ಲಿ ಅಖೀಯನ್ನರು(Acheeans) ಡೋರಿಯನ್ನರು ಮತ್ತು ಅಯೋನಿಯನ್ನರು ಎಂದು ಮೂರು ಪಂಗಡಗಳಿದ್ದು ಈ ಮೂರು ಜನಾಂಗಗಳ ಸಂಸ್ಕೃತಿಗಳ ಒಟ್ಟುಗೂಡಿದ ಒಂದು ರೂಪವೇ ಗ್ರೀಕ್ ಸಂಸ್ಕೃತಿಯಾಗಿದೆ.

ಕ್ರಿ. ಪೂ. ಹನ್ನೆರಡು ಮತ್ತು ಎಂಟನೆಯ ಶತಮಾನಗಳ ಅವಧಿಯಲ್ಲಿ ತಯಾರಿಸಲ್ಪಟ್ಟ ಮಂಗಾಣಿ ಪಾತ್ರೆಗಳ ಮೇಲೆ ಚಿತ್ರಿತ ಭೂಮಿತಿಯಾಕೃತಿಗಳನ್ನು ಒಂದರ ಮೇಲೊಂದರಂತೆ ತೊಡಕು ತೊಡಕಾಗಿ ಚಿತ್ರಿಸಿ ಸಂಪೂರ್ಣ ಪಾತ್ರೆಯನ್ನು ಆವರಿಸಿ ಒಂದು ನಕ್ಷೆಯಂತೆ ಚಿತ್ರಿಸಿರುವುದು ಕಂಡುಬರುತ್ತದೆ. ಇವುಗಳಲ್ಲಿ ರೇಖಾಗಣಿತ ಪ್ರಧಾನವಾದ ಮಾನವರ, ಪ್ರಾಣಿಗಳ ಚಿತ್ರಗಳೂ ಶವಸಂಸ್ಕಾರದ ಮೆರವಣಿಗೆಯಲ್ಲಿ ನಿರತರಾದ ಮನುಷ್ಯರ, ರಥಗಳಲ್ಲಿರುವ ಮಾನವರ ಹಾಗೂ ನೃತ್ಯನಿರತ ಮಾನವರ ಚಿತ್ರಗಳೂ ಚಿತ್ರಿಸಲ್ಪಟ್ಟಿವೆ. ಸಾಮಾನ್ಯವಾಗಿ ಈ ಚಿತ್ರಗಳು ಕಂದು ಬಣ್ಣದಿಂದ ಚಿತ್ರಿಸಿದವುಗಳಾಗಿವೆ. ಮಾನವಾಕೃತಿಗಳ ದೇಹಗಳನ್ನು ತ್ರಿಭುಜಾಕೃತಿಯಲ್ಲಿಯೂ ಅವಯುವಗಳನ್ನು ದೇಹಕ್ಕೆ ಅಂಟಿಕೊಂಡಿರುವ ಚಿತ್ರಗಳಂತೆಯೂ ತಲೆಗಳನ್ನು ವೃತ್ತಾಕಾರದ ಬುಗುಟೆಗಳಂತೆಯೂ ಚಿತ್ರಿಸಲಾಗಿದೆಯಲ್ಲದೇ ಕಾಲು, ತಲೆಗಳು ಒಂದು ಬದಿಯಿಂದ ನೋಡಿದಂತೆಯೂ ದೇಹವನ್ನು ಎದುರಿನಿಂದ ನೋಡಿದಂತೆಯೂ ಚಿತ್ರಿಸಲಾಗಿದೆ. ಈ ಆಕೃತಿಗಳು ಬಹುತರವಾಗಿ ಈಜಿಪ್ಟಿನ ಮಾನವಾಕೃತಿಗಳಿಂದ ಪ್ರಭಾವಿತವಾಗಿವೆ. ಮಾನವರ ಹಾಗೂ ವಿಶೇಷವಾಗಿ ಕುದುರೆಗಳ

ಅಖಂಡ ಪ್ರತಿಮೆಗಳು ಇದೇ ಶೈಲಿಯಲ್ಲಿ ನಿರ್ಮಿಸಲ್ಪಟ್ಟಿದ್ದು ಗ್ರೀಸಿನ ಪುರಾತನ ಕಂಚಿನ ಶಿಲ್ಪಕಲಾಕೃತಿಗಳಾಗಿರುತ್ತವೆ. ಕ್ರಿ. ಪೂ. ೮ನೆಯ ಶತಮಾನದಲ್ಲಿ ಈಜಿಪ್ಟ ಮತ್ತು ಏಷ್ಯ ಮೈನರ್ ದೇಶಗಳಲ್ಲಿ ಸಂಚರಿಸಿದ ಗ್ರೀಕ್ ಯಾತ್ರಿಕರು ಅಲ್ಲಿನ ಕಥಾ ದೃಶ್ಯ ಶಿಲ್ಪ ಕಲಾಕೃತಿಗಳನ್ನೂ ಶೃಂಗಾರಪೂರ್ಣ ರಾಕ್ಷಸ ಸದೃಶ ಮಾನವರ ಸಾಲುಗಳನ್ನೂ ಕಂಡು ಪ್ರಭಾವಿತರಾಗಿ ಜೀವನವನ್ನು ಹೆಚ್ಚು ವಾಸ್ತವವಾಗಿ ರೂಪಿಸಿ ಚಿತ್ರಿಸಲೂ ಕಥಾದೃಶ್ಯ ಚಿತ್ರಗಳನ್ನು ಚಿತ್ರಿಸಲೂ ಹೆಚ್ಚು ಆಸಕ್ತಿಯನ್ನು ತಳೆದರು.



೫) ಗ್ರೀಕ್ ಕಲೆ

ಕ್ರಿ. ಪೂ. ೬೫೦ರಲ್ಲಿ ಪ್ರಪ್ರಥಮವಾಗಿ ಸಜೀವಗಾತ್ರದ ಪ್ರತಿಮೆಗಳು ತಯಾರಿಸಲ್ಪಟ್ಟವು ಈ ಕಾಲದಲ್ಲಿ ನಿರ್ಮಿತವಾದ ಪ್ರತಿಮೆಗಳು ಗಾಂಭೀರ್ಯ ಪೂರ್ಣವೂ ರಮ್ಯತೆಯ ಶೋಭಾಯಮಾನ ಪೂರ್ಣವೂ ಸಾಮರಸ್ಯಪೂರ್ಣವೂ ಆದವುಗಳಾಗಿದ್ದು ನಕ್ಷಾಬದ್ದವಾಗಿರುತ್ತಿದ್ದವು ಈ ಕಾಲದ ಶಿಲ್ಪಕಾರನು ತನ್ನ ಕೃತಿಗಳಲ್ಲಿ ಮಾನವನ ನೈಜ ಚಿತ್ರಣಕ್ಕಿಂತಲೂ ವಿಶೇಷವಾಗಿ ಅವುಗಳಲ್ಲಿ ದೈವೀಶಕ್ತಿಯನ್ನು ತುಂಬಲು ಪ್ರಯತ್ನಿಸುತ್ತಿದ್ದನು. ಕ್ರಿ.ಪೂ. ೬ ಮತ್ತು ೫ ನೆಯ ಶತಮಾನಗಳಲ್ಲಿ ಗ್ರೀಕ್ ಶಿಲ್ಪಕಾರರು ಮಾನವ ರೂಪಗಳನ್ನು ಭವ್ಯತೆಗೇರಿಸಿದರು. ದೇಹ ರಚನಾ ರೂಪ ಹಾಗೂ ಪ್ರಮಾಣಗಳ ಅಭ್ಯಾಸದಿಂದ ಮಾನವಾಕೃತಿಗಳನ್ನು ರಚಿಸತೊಡಗಿದರು ವಿಸ್ತಾರವಾದ ಮಾಂಸಖಂಡಗಳನ್ನೂ ದೇಹದಿಂದ ಪ್ರತ್ಯೇಕಗೊಂಡ (ಅಂಟಿಕೊಂಡಿರದ) ಅವಯವಗಳನ್ನೂ ದೇಹದ ಸಂಪೂರ್ಣ

ಭಾರವು ಒಂದೇ ಕಾಲಿನ ಮೇಲೆ ಬೀಳುವಂತಹ ಪ್ರತಿಮೆಗಳ ನಿರ್ಮಾಣವಾಯಿತು. ಸಾಮಾನ್ಯವಾಗಿ ಗಂಡಸಿನ ಪ್ರತಿಮೆಗಳನ್ನು ನಗ್ನವಾಗಿರುವಂತೆಯೂ ಹೆಂಗಸಿನ ಪ್ರತಿಮೆಗಳನ್ನು ಬಟ್ಟೆಗಳನ್ನು ಧರಿಸಿರುವಂತೆಯೂ ತಯಾರಿಸಿದವುಗಳಾಗಿದ್ದು ಯಾವುದೇ ಕೋನದಿಂದ ನೋಡಿದರೂ ಕೌತುಕಮಯವಾಗಿ ಕಾಣುವಂಥ ಪೂರ್ಣ ಪರಿಮಾಣದ ಪ್ರತಿಮೆಗಳಾಗಿರುತ್ತವೆ.ಈ ಎಲ್ಲ ಪ್ರತಿಮೆಗಳನ್ನೂ ವರ್ಣಲೇಪನದಿಂದ ಅಲಂಕರಿಸಲಾಗಿತ್ತು. ಈ ಪ್ರತಿಮೆಗಳ ತಲೆಗೂದಲನ್ನು ಹಳದಿ, ಕೆಂಪು ಮಿಶ್ರಿತ ಕಂದು, ಅಥವಾ ಕಪ್ಪು ಬಣ್ಣದಿಂದಲೂ ಕಣ್ಣುಗಳನ್ನು ಕಪ್ಪು ಬಣ್ಣದಿಂದಲೂ ಅಲಂಕರಿಸಲಾಗಿದೆ. ಬಟ್ಟೆಗಳು ವಿವಿಧ ವರ್ಣಗಳಿಂದಲೂ ಅತಿಸೂಕ್ಷ್ಮವಾದ ಅಂಚುಗಳ ರಚನೆಯಿಂದಲೂ ಶೃಂಗರಿಸಲ್ಪಟ್ಟಿವೆ.

ಗ್ರೀಕ್ ವಾಸ್ತುಶಿಲ್ಪಕಲೆಯು ಡೋರಿಕ್, ಇಯೋನಿಕ್ ಮತ್ತು ಕೊರಿಂಥಿಯನ್ ಮುಂತಾದ ಮೂರು ವಿವಿಧ ಶೈಲಿಗಳಲ್ಲಿ ಬೆಳೆದು ಬಂದಿದೆಯಲ್ಲದೆ ಸೊಗಸು ಹಾಗೂ ಗಾಂಭೀರ್ಯಗಳಿಗೆ ಹೆಸರಾಗಿದೆ. ಅಥೆನ್ಸ್‌ನಲ್ಲಿರುವ ವ್ಹರ್ಜಿನ್‌ದೇವತೆಯ ದೇವಾಲಯವು ಕ್ರಿ. ಪೂ.೪೪೭-೪೩೨ರ ಅವಧಿಯಲ್ಲಿ ಕಟ್ಟಲಾಗಿದ್ದು ಡೋರಿಕ್ ಶೈಲಿಯ ಅತ್ಯುತ್ತಮ ಉದಾಹರಣೆಯಾಗಿದೆ. ಆ ಕಾಲದ ಸುಪ್ರಸಿದ್ಧ ಶಿಲ್ಪಿ "ಫಿಡಿಯಾಸ್" ಎಂಬುವವನು ಈ ದೇವಾಲಯವನ್ನು ಮೂರ್ತಿಶಿಲ್ಪಗಳಿಂದ ಅಲಂಕರಿಸಿದ್ದಾನೆ ಇಯೇನಿಕ್ ವಾಸ್ತುಶಿಲ್ಪ ಕಲಾಸಾಂಪ್ರದಾಯವು ಡೋರಿಕ್ ಸಾಂಪ್ರದಾಯದ ನಂತರ ವಿಕಾಸಗೊಂಡುದಾಗಿದೆ. ಇಯೋಕ್ ಸಾಂಪ್ರದಾಯವು ಲಾಲಿತ್ಯ ಪ್ರಧಾನವಾದುದಾಗಿದ್ದು ಡೋರಿಕ್ ಕಟ್ಟಡಗಳಿಗಿಂತಲೂ ಹೆಚ್ಚು ಅಲಂಕಾರಯುಕ್ತವಾಗಿರುತ್ತವೆ. ಕೋರಿಂಥಿಯನ್ ಶೈಲಿಯ ಕಟ್ಟಡಗಳು ಡೋರಿಕ್ ಮತ್ತು ಇಯೋನಿಕ್ ಕಟ್ಟಡಗಳ ಶೈಲಿಗಿಂತಲೂ ನಯ, ನಾಜೂಕು ಮತ್ತು ಅಲಂಕಾರಗಳಿಗಿಂತಲೂ ಹೆಚ್ಚಾಗಿ ರೂಪುಗೊಂಡವುಗಳಾಗಿವೆ.

ಕ್ರಿ. ಪೂ. ೫ನೆಯ ಶತಮಾನದಲ್ಲಿ ಭವ್ಯವೂ, ಸುಂದರವೂ ಅಗಾಧವೂ ಆದ ಅತ್ಯುತ್ತಮ ಮಾದರಿಯ ಒಲಂಪಿಯದ ವಿಗ್ರಹದಂಥ ವಿಶಿಷ್ಟಗುಣಪೂರ್ಣವಾದ ವಿಗ್ರಹಗಳ ನಿರ್ಮಾಣದಲ್ಲಿ ಗ್ರೀಕ್ ಕಲಾವಿದನು ಅದ್ವಿತೀಯ ಚೈತನ್ಯವನ್ನು ಪಡೆದನು. ಕ್ರಿ. ಪೂ. ೪೫೦ರಲ್ಲಿ ಪ್ರತಿಭಾ ಸಂಪನ್ನ ಶಿಲ್ಪಿಯಾಗಿದ್ದ ಮೈರನ್ ನಿರ್ಮಿಸಿದ "ಎಸೆಚಕ್ರವನ್ನು ಬೀಸಿ ಒಗೆಯುತ್ತಿರುವ ಆಟಗಾರ"ನ ಕಂಚಿನ ಪ್ರತಿಮೆ ಚಿತ್ತಾಕರ್ಷಕವಾದುದಾಗಿದೆ. ಕ್ರಿ. ಪೂ. ೪೭೦-೪೬೦ರಲ್ಲಿ ನಿರ್ಮಿಸಲಾಯಿತೆಂದು ಹೇಳಲಾದ "ಸಿಡಿಲನ್ನು ಬೀಸಿ ಎಸೆಯುತ್ತಿರುವ ಜ್ಯೂಸ್ ದೇವತೆಯ"' ಪ್ರತಿಮೆಯ ಹರಡಿದ ಕೈಗಳು ಮತ್ತು ಕಾಲುಗಳು ಮನೋಹರವಾದ ಒಂದು ನಕ್ಷಾರೂಪವನ್ನು ರೂಪಿಸುತ್ತವೆ.ವಿಶ್ವ ವಿಖ್ಯಾತವಾದ ಪಾರ್ಥೆನಾನ್‌ನ "ಅಥೆನಾ" ಪ್ರತಿಮೆಯನ್ನೂ ಒಲಂಪಿಯದ "ಜ್ಯೂಸ್" ಪ್ರತಿಮೆಯನ್ನೂ ಕ್ರಿ. ಪೂ. ೪೫೦-೪೩೦ರ ಅವಧಿಯಲ್ಲಿ ಫಿಡಿಯಾಸ್‌ನು ಕಂಚಿನಿಂದ ನಿರ್ಮಿಸಿದನು. ಒಲಂಪಿಯದ ಜ್ಯೂಸ್ ಪ್ರತಿಮೆಯು ಪ್ರಪಂಚದ ಏಳು ಕೌತುಕಗಳಲ್ಲಿ ಪಾರ್ಥೆನಾನ್‌ರ ಮೂರ್ತಿಶಿಲ್ಪಗಳಿಂದ ಫಿಡಿಯಾಸನ ಶೈಲಿ, ನಕ್ಷೆ, ಪ್ರಶಂಶನೀಯ ಸಾಮರ್ಥ್ಯ, ಸೌಜನ್ಯಶೀಲತೆ. ಮತ್ತು ಗಹನವಾದ ವಿಚಾರಶೀಲತೆಗಳ ಘನತೆಯನ್ನು ಕಂಡುಕೊಳ್ಳಬಹುದಾಗಿದೆ. ಪೊಲಿಕ್ಲಿಂಟನ್(Polycletus)

ಎಂಬ ಪ್ರತಿಭಾಶಾಲಿಯಾದ ಇನ್ನೊಬ್ಬ ಶಿಲ್ಪಿಯು ಫಿಡಿಯಾಸನ ಸಮಾಕಾಲೀನ ಕಲಾವಿದನಾಗಿದ್ದು ಅವನು ಮಾನವಾಕೃತಿಯ ಆದರ್ಶನೀಯ ಪ್ರಮಾಣಗಳನ್ನು ಒಟ್ಟುಗೂಡಿಸಿ ಕ್ರಿ. ಪೂ.೪೪೦ರಲ್ಲಿ ನಿರ್ಮಿಸಿದ "ಸಂಬಳವನ್ನು ಹಿಡಿದು ನಿಂತಿರುವ ಯುವಕ"ನ ಪ್ರತಿಮೆ ಹಲವಾರು ರೀತಿಯ ಮೂರ್ತಿಶಿಲ್ಪಗಳಿಗೆ ಪ್ರೇರಕವಾಗಿತ್ತು. ಅಲ್ಲದೇ ಗ್ರೀಕರು ಮಲ್ಲಶಿಕ್ಷಣದಿಂದ ಶರೀರದ ಉತ್ಕೃಷ್ಟ ಸೌಷ್ಠವವನ್ನು ಸಾಧಿಸಿದ್ದರೆಂಬುದನ್ನೂ ತೋರಿಸುತ್ತದೆ. ಕ್ರಿ. ಪೂ. ೪ನೆ ಶತಮಾನದ ಸ್ಕೋಪಸ್(Scopas) ಎಂಬ ಮಹಾಶಿಲ್ಪಿಯಾದ ನಿರ್ಮಿತವಾದ ಭಾವಪೂರ್ಣ ಪ್ರತಿಮೆಗಳು, ಪ್ರಾಕ್ಸಿಟೇಲಸ್(Proxitelus) ಎಂಬ ಶಿಲ್ಪಿಯ ಕೋಮಲ ಹಾಗೂ ಲಾಲಿತ್ಯಪೂರ್ಣ ಶಿಲ್ಪಕಲಾಕೃತಿಗಳು ಅಮೋಘವಾಗಿವೆ.

ಕ್ರಿ. ಪೂ ೩ ಮತ್ತು ೨ ನೆಯ ಶತಮಾನಗಳಲ್ಲಿ ನಿರ್ಮಾಣಗೊಂಡ ವ್ಹೀನಸ್ ಡಿ ಮಿಲೋ(Venus de Milo), ಸಮೋಥ್ರೇಸನ ವಿಜಯ(Victory of Samothrace) ನಂತಹ ಕಲಾಕೃತಿಗಳು ಪ್ರಾಚೀನ ಸಾಂಪ್ರದಾಯವನ್ನೇ ಮುಂದುವರೆಸಿಕೊಂಡು ಬಂದವು. ತನ್ನ ಮಕ್ಕಳೊಂದಿಗೆ ಹಾವುಗಳ ಬಿಗಿತಗಳಲ್ಲಿ ಸಿಲುಕಿಕೊಂಡ ಲಾವೊಕೂನ್(Lascoon)ನ ಪ್ರತಿಮೆಗಳಂಥ ಪ್ರತಿಮೆಗಳ ನಿರ್ಮಾಣದಲ್ಲಿ ವಸ್ತುವಿನ ಭಯಾನಕ ಸನ್ನಿವೇಶಗಳನ್ನು ರೂಪಿಸುವುದರಲ್ಲಿ ಗ್ರೀಕಕಲಾವಿದರು ಅಗಾಧವಾದ ತಾಂತ್ರಿಕ ನೈಪುಣ್ಯತೆಯನ್ನು ಸಾಧಿಸಿದ್ದರೆಂಬುದನ್ನು ಕಂಡುಕೊಳ್ಳಬಹುದು.

ಈ ಕಾಲದಲ್ಲಿ ವರ್ಣಚಿತ್ರಕಲೆಯು ಕೂಡ ಸಾಕಷ್ಟು ಜನ ಪ್ರಿಯತೆಯೊಂದಿಗೆ ಪ್ರಸಿದ್ಧಿಯನ್ನೂ ಪಡೆದಿತ್ತು ಎಂಬುದಕ್ಕೆ ಪಾಂಫಿ(Pompeii) ಮತ್ತು ಹರ್ಕ್ಯುಲೇನಿಯಮ್ (Herculeneum)ಗಳಲ್ಲಿ ದೊರೆತ ವರ್ಣಚಿತ್ರಗಳು ಪ್ರತಿಗಳು ಉದಾಹರಣೆಯಾಗಿವೆ. ಯಥಾದೃಶ್ಯ ಚಿತ್ರಣ ಹಾಗೂ ಶ್ರಮಯುಕ್ತ ವರ್ಣಸಂಯೋಜನೆಗಳ ಅಭಿರುಚಿಯೊಂದಿಗೆ ಸ್ತಬ್ಧ ಚಿತ್ರ ಮತ್ತು ಪ್ರಕೃತಿ ದೃಶ್ಯಚಿತ್ರಣ(Land-Scape)ಗಳ ಅಭಿರುಚಿಯೂ ಹುಟ್ಟಿಕೊಂಡಿತು. ಮನಮೋಹಕವಾದ ಮತ್ತು ಅಲಂಕಾರಯುಕ್ತ ಮೊಸಾಯಿಕ್(Mosaic) ಚಿತ್ರಗಳೂ ಸಹ ಇದೇ ಕಾಲದಲ್ಲಿ ರಚಿಸಲ್ಪಟ್ಟವು. ಗ್ರೀಕ್ ವರ್ಣಚಿತ್ರಕಲೆಯು ದೊಡ್ಡ ಪ್ರಮಾಣದಲ್ಲಿ ವಿಕಾಸಗೊಂಡಿತ್ತಾದರೂ ಕೆಲವೇ ವರ್ಣಚಿತ್ರಗಳು ಮಾತ್ರ ದೊರಕಿವೆ. ಕ್ರಿ.ಪೂ. ೭ನೆಯ ಶತಮಾನದ ಕೊರಿಂಥ್ ಕರಂಡಕಗಳು ಅತ್ಯುತ್ತಮವಾಗಿದ್ದವು. ಕ್ರಿ.ಪೂ. ೬ನೆಯ ಶತಮಾನದಲ್ಲಿ ಅಥೆನ್ಸಿನ ಕರಂಡಕಗಳು ಆ ಸ್ಥಾನವನ್ನು ಆಕ್ರಮಿಸಿದವು. ಆ ನಂತರ ಈ ಕರಂಡಕಗಳ ಮೇಲೆ ಛಾಯಾರೂಪ ಚಿತ್ರ ಎಂಬ ಹೊಸ ಶೈಲಿಯೊಂದರ ಉದಯವಾಯಿತು. ಕ್ರಿ. ಪೂ.೬ನೇ ಶತಮಾನದ ಮಧ್ಯಕಾಲದಲ್ಲಿದ್ದ ಎಕ್ಸೆಕಿಯಾಸ್(Exekias) ಎಂಬ ಚಿತ್ರಕಾರನು ಇಂತ ಕಪ್ಪು ಬಣ್ಣದ ಛಾಯಾರೂಪ ಚಿತ್ರಗಳನ್ನು ಚಿತ್ರಿಸುವ ಸುಪ್ರಸಿದ್ಧ ಚಿತ್ರಕಾರನಾಗಿದ್ದನು. ಕ್ರಿ.ಪೂ ೫೨೫ರ ವೇಳೆಗೆ ಕಪ್ಪು ಬಣ್ಣದ ಬದಲಾಗಿ ಕೆಂಪುಬಣ್ಣವು ಬಳಕೆಯಲ್ಲಿ ಬಂದಿತು.

ರೋಮನ್ನರು ಗ್ರೀಸ್ ದೇಶವನ್ನು ವಶಪಡಿಸಿಕೊಂಡ ನಂತರವೂ ಸಹ ಗ್ರೀಕ್ ಕಲಾವಿಕಾಸಕ್ಕೆ ಯಾವ ಅಡತಡೆಗಳೂ ಬರಲಿಲ್ಲವಷ್ಟೇ ಅಲ್ಲ; ಪಶ್ಚಿಮ ಯುರೋಪ

ಂಡದ ಕಲಾಸಂಸ್ಕೃತಿಯ ಬೆಳವಣಿಗೆಗೆ ಬುನಾದಿಯಾಯಿತು. ಭಾರತದ ಗುಪ್ತ ಅರಸರ ಲದಲ್ಲಿ ಬೆಳೆದುಬಂದ ಗಾಂಧಾರ ಶೈಲಿಯ ಬುದ್ಧನ ಪ್ರತಿಮೆಗಳಲ್ಲಿ ಗ್ರೀಕ್ ಮೂರ್ತಿ ಲ್ಪಕಲೆಯ ಪ್ರಭಾವವನ್ನು ಗುರುತಿಸಬಹುದು. ಅಲ್ಲದೇ ಅನೇಕ ದೇಶಗಳ ವಾಸ್ತು ಶಿಲ್ಪ ಾಗೂ ಮೂರ್ತಿಶಿಲ್ಪಕಲೆಗಳಲ್ಲಿ ಗ್ರೀಕ್‌ಕಲೆಯ ಪ್ರಭಾವವಾಗಿರುವುದನ್ನೂ ಕಾಣಬಹುದು.

ರ್ಷಿಯನ್ ಸಂಸ್ಕೃತಿ

ಕಾಲ. ಕ್ರಿ.ಪೂ. ೨೫೦೦- ಕ್ರಿ.ಶ. ೧೭ನೆಯ ಶತಮಾನ

ಪರ್ಷಿಯನ್ನರು ಬಹು ಪ್ರಾಚೀನ ಕಾಲದಿಂದಲೂ ಕಲಾಕೃತಿಗಳ ಸೃಷ್ಟಿಯನ್ನು ಮಾಡುತ್ತ ಂದಿದ್ದಾರೆ ಪರ್ಷಿಯನ್ ಕಲೆಯ ಉಗಮವು ೨೫೦೦ ವರುಷಗಳ ಹಿಂದೆಯೇ ಿರಬೇಕೆಂಬುದನ್ನು ಅವರ ವಾಸ್ತುಶಿಲ್ಪ ಹಾಗೂ ಅಲಂಕಾರ ಶೈಲಿಗಳಿಂದ ಊಹಿಸಬಹುದಾಗಿದೆ.

್ರಾಚೀನ ಪರ್ಷಿಯ

ಈ ಕಾಲದ ಕಲಾಕೃತಿಗಳು ದೊರೆತಿದ್ದು ಅವುಗಳಲ್ಲಿ ಕೆಲವೇ ಕೆತ್ತನೆಯ ಉಬ್ಬು ತ್ರಗಳು ಮತ್ತು ಗೋರಿಗಳು ಮಾತ್ರ ಕಂಡು ಬಂದಿವೆ. ಡೇರಿಯಸ್(Darius)ಮತ್ತು ್‌ಕ್ಸಸ್(Xerxes) ಅರಸರ ಕಾಲದಲ್ಲಿ ಪರ್ಷಿಯವು ವೈಭವೋಪೇತವಾಗಿ ಬೆಳೆದಿತ್ತು. ದೇ ಕಾಲದ "ಪರ್ಸಿಮೊಲಿಸ್"(Persepolis) ಮತ್ತು "ಸೂಸ"ಗಳಲ್ಲಿನ ಅವಶೇಷಗಳಿಂದ ಲ್ಲಿ ಅನ್ಯಾದೃಶವಾದ ಕಲಾವಿಕಾಸವಾಗಿತ್ತೆಂಬುದನ್ನು ಕಂಡುಕೊಳ್ಳಬಹುದು. ಕ್ರಿ.ಪೂ. ೩೦ರಲ್ಲಿ ಅಲೆಕ್ಸಾಂಡರನು ಪರ್ಷಿಯವನ್ನು ವಶಪಡಿಸಿಕೊಂಡ ನಂತರ ಪರ್ಷಿಯನ್ನರು ೀಕ್ ಕಲೆಯ ರೂಪವನ್ನು ತಮ್ಮ ಕಲೆಗೆ ಪರಿವರ್ತಿಸಿಕೊಂಡರು. ಪರ್ಸೆಪೊಲಿಸ್ ರಮನೆಯ ಗೋಡೆಗಳ ಮೇಲಿರುವ ಹೆಚ್ಚು ಎತ್ತರವಿಲ್ಲದ ಉಬ್ಬುಚಿತ್ರಗಳು (Low elief) ಆಕರ್ಷಣೀಯವಾಗಿವೆ.

ಕ್ರಿ.ಶ. ೨೨೪ರಲ್ಲಿ ಅಧಿಕಾರಕ್ಕೆ ಬಂದ ಸಸೇನಿಯನ್ನರು ಪರ್ಷಿಯದ ಪುನರುತ್ಥಾನಕ್ಕಾಗಿ ಹುಮುಖವಾಗಿ ಶ್ರಮಿಸಿದುದರ ಪರಿಣಾಮವಾಗಿ ಕೆತ್ತನೆಯ ಚಿತ್ರಗಳಿಂದಲಂಕೃತವಾದ ವ್ಯ ಅರಮನೆಗಳೂ ಸೌಧಗಳೂ ನಿರ್ಮಾಣಗೊಂಡವು. "ವಿಜಯೀ ಅರಸನು ರ್ವಜನಿಕರಿಂದ ಸನ್ಮಾನವನ್ನು ಸ್ವೀಕರಿಸುತ್ತಿರುವ", ವಿಧಿವತ್ತಾಗಿ ರಾಜನ ಪಟ್ಟಾಭಿಷೇಕ. ಮಾರಂಭವನ್ನು ನೆರವೇರಿಸುತ್ತಿರುವ ಕೆತ್ತನೆಯ ಚಿತ್ರಗಳು ಮನಮೋಹಕವಾಗಿಯೂ ನ್ಮಿತವಾಗಿಯೂ ರಚಿಸಲ್ಪಟ್ಟಿದ್ದು ಉಲ್ಲೇಖನಾರ್ಹ ಕಲಾಕೃತಿಗಳಾಗಿವೆ.

ುಸ್ಲಿಮ್ ಕಾಲ

ಕ್ರಿ .ಶ. ೭ನೆಯ ಶತಮಾನದಲ್ಲಿ ಪರ್ಷಿಯವು ಅರಬರ ಅಧೀನಕ್ಕೊಳಪಟ್ಟಿತು. ದರೂ ಪರ್ಷಿಯದ ಕಲೆಯು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲಿಲ್ಲ. ಅರಬರು ್ಥಿಕ ಕಲಾವಿದರಿಂದಲೂ ಕುಶಲಕೆಲಸಗಾರರಿಂದಲೂ ಸಸೇನಿಯನ್ ಶೈಲಿಗನುಗುಣವಾಗಿಯೇ ್ರಿದಗಳನ್ನು ನಿರ್ಮಿಸಿದರಲ್ಲದೇ ಅಗತ್ಯ ವಸ್ತುಗಳನ್ನೂ ನಿರ್ಮಿಸಿದರು. ಪರ್ಷಿಯನ್ನರು ್ಲಾಂಧರ್ಮವನ್ನು ಸ್ವೀಕರಿಸಿ ಮುಸ್ಲಿಮರಾದರು. ಪರ್ಷಿಯನ್ ಕಲೆಯು ಮಾತ್ರ

ಇಸ್ಲಾಂ ಕಲೆಯ ಒಂದು ಶಾಖೆಯಾಗಿ ಉಳಿಯಿತಲ್ಲದೇ ಹೊಸ ಧರ್ಮಕ್ಕನುಗುಣವಾಗಿ ತನ್ನ ಹಳೆಯ ಸಾಂಪ್ರದಾಯಗಳನ್ನೂ ಅಳವಡಿಸಿಕೊಂಡಿತು.


ಕ್ರಿ. ಶ. ೯ನೆಯ ಶತಮಾನದಲ್ಲಿ ರಾಜರುಗಳೆಲ್ಲ ಸ್ವತಂತ್ರರಾದರು. ಈ ಪರಿಣಾಮವಾಗಿ ಪರ್ಷಿಯದಲ್ಲಿ ಅನೇಕ ರಾಜಧಾನಿಗಳು ತಲೆದೋರಿದವು ಪ್ರಪ್ರಥಮವಾಗಿ ಇಲ್ಲಿ ಬಂದು ನೆಲೆಸಿದ ತುರ್ಕಿಯರ ಕಾಲದ "ಮಹಮೂದನ ಗೋರಿ ಗೋಪುರ" ಕಟ್ಟಡವು ಸುಪ್ರಸಿದ್ಧವಾಗಿದೆ. ಕ್ರಿ.ಶ. ೧೧ನೆಯ ಶತಮಾನದಲ್ಲಿ ಆಳಿದ ಸೆಲ್ಜೂಕ ಅರಸರು ಸಹ ಘಜ್ನಿ ಮಹಮೂದನ ಗೋರಿಗೋಪುರದಂಥ ಕಟ್ಟಡಗಳನ್ನೇ ಕಟ್ಟಿಸಿದರು. ಸೆಲ್ಜೂಕರು ಸಿಲುಬೆಯಾಕಾರದ ಮಸೀದಿಗಳನ್ನು ಕಟ್ಟುವ ಹೊಸ ಶೈಲಿಯನ್ನು ವಾಸ್ತುಶಿಲ್ಪದಲ್ಲಿ ಅಳವಡಿಸಿಕೊಂಡರು. ಅಲ್ಲದೇ ದೊಡ್ಡ ದೊಡ್ಡ ಸಮಾಧಿ ಭವನ(Mausoleum)ಗಳನ್ನೂ ಕಟ್ಟಿಸಿದರು. ಇವರು ಲೋಹದ ಮತ್ತು ಗಾಜಿನ ಪಾತ್ರೆಗಳು, ಮಡಕೆ-ಕುಡಿಕೆಗಳ ನಿರ್ಮಾಣ ಮುಂತಾದ ಉಪಕಲೆಗಳಲ್ಲಿಯೂ ಅಪಾರವಾದ ಜಾಣ್ಮೆಯನ್ನು ತೋರಿದರು ಪಾತ್ರೆ, ಮಡಕೆ ಹಾಗೂ ಹೂಜಿಗಳ ಮೇಲ್ಮೈಯನ್ನು ಮನುಷ್ಯರು, ಪ್ರಾಣಿಗಳು, ಹೂ ಬಳ್ಳಿಗಳು, ರಾಜ್ಯ ಲಾಂಛನಗಳೇ ಮೊದಲಾದವುಗಳ ಚಿತ್ರಗಳನ್ನು ಸೂಕ್ಷ್ಮಾಕಾರಗಳಲ್ಲಿ ಚಿತ್ರಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು.

ಕ್ರಿ.ಶ.೧೩ನೆಯ ಶತಮಾನದಲ್ಲಿ ಪರ್ಷಿಯವು ಮಂಗೋಲರ ಆಡಳಿತಕ್ಕೊಳಪಟ್ಟಿತು. ಈ ಪರಿಣಾಮವಾಗಿ ಪರ್ಷಿಯನ್ ಕಲೆಗೆ ಹೊಸ ರೂಪು ಬಂದಿತು. ಅನೇಕ ಮಸೀದಿಗಳೂ ಧಾರ್ಮಿಕ ಕಟ್ಟಡಗಳೂ ನಿರ್ಮಾಣಗೊಂಡವು, ಪರ್ಷಿಯನ್ ಸೂಕ್ಷ್ಮಾಕಾರ ವರ್ಣಚಿತ್ರಗಳಿಗೆ ಮಹತ್ವವು ಬರತೊಡಗಿತು.

ಕ್ರಿ.ಶ. ೧೪ನೆಯ ಶತಮಾನದಲ್ಲಿ ತೈಮೂರನ ದಾಳಿಗೆ ತುತ್ತಾಯಿತು. ತೈಮೂರನ ನಂತರದ ಅರಸರ ಕಾಲದಲ್ಲಿ ಪರ್ಷಿಯವು ನಾಗಕರೀಕತೆಯ ಪುನರುತ್ಥಾನವಾಗತೊಡಗಿತು. ಅಫಘಾನಿಸ್ಥಾನದಲ್ಲಿರುವ ಹೇರಾಟ್ ಮತ್ತು ಸಮರ್ಕಂದ ಹಾಗೂ ರಷ್ಯನ್ ತುರ್ಕಸ್ತಾನದಲ್ಲಿರುವ ಬೋಖಾಕಿಗಳಲ್ಲಿರುವ ಕಟ್ಟಡಗಳು ಈ ಕಾಲದ ಅತ್ಯುತ್ತಮ ವಾಸ್ತುಶಿಲ್ಪ ಮಾದರಿಗಳಾಗಿವೆ. ಕ್ರಿ.ಶ.೧೫ನೆಯ ಶತಮಾನದ ತೈಮೂರ ಸಾಮ್ರಾಜ್ಯ ಕಾಲದಲ್ಲಿ ಅನೇಕ ಚೌಕಾಕಾರದ ಹಾಗೂ ಆಯತಾಕಾರದ ಭವ್ಯ ಮಸೀದಿಗಳ ನಿರ್ಮಾಣವಾಯಿತು. ನೀಲಿ, ಹಸಿರು, ನೇರಳೆ, ಹಳದಿ, ಗುಲಾಬಿ ಮತ್ತು ಕಡುಗೆಂಪು ಬಣ್ಣಗಳ ಹೆಂಚಿನ ತುಣುಕುಗಳನ್ನು ಕೂಡಿಸಿ ಗೋಡೆಗಳನ್ನೂ ಗುಮ್ಮಟಗಳನ್ನೂ ಅಲಂಕರಿಸಲಾಗಿದೆ. ಸುಂದರವಾದ ತೈಮೂರ್ ಗುಮ್ಮಟಗಳಲ್ಲಿ ಸಮರ್ಕಂದದ "ಗುರ್-ಇ-ಮೀರ್" ಮಸೀದೆಯು ಅತ್ಯುತ್ತಮ ಉದಾಹರಣೆಯಾಗಿದೆ. ಆ ಕಾಲದ ಪ್ರತಿಭಾಶಾಲಿ "ಬಿಹಜಾದ್"(Bihzad) ಎಂಬ ಚಿತ್ರಕಾರನು ತೈಮೂರ ಆಸ್ಥಾನ ಕಲಾವಿದನಾಗಿ ಹೇರಾತ್‌ನಲ್ಲಿದ್ದನು. ಅವನು ಚಿತ್ರಿಸಿದ ಸೂಕ್ಷ್ಮಾಕಾರ ಚಿತ್ರಗಳು ಪರ್ಷಿಯನ್ ಜನಜೀವನ ಮಾನವ ಮನಸ್ಸಿನ ರಾಗ-ಭಾವಗಳ ನಿರೂಪಣೆ, ಬೇಟೆಯ ದೃಶ್ಯಗಳು, ಪ್ರಕೃತಿ ಸೌಂದರ್ಯ ಫಲ-ಪುಷ್ಪಗಳಿಂದ ತುಂಬಿದ ಗಿಡ-ಮರಗಳ ತಂಪಿನಲ್ಲಿ ಮೈಮರೆತ ಯುವಕ-ಯುವತಿಯರ

ತ್ರಗಳೇ ಮೊದಲಾದ ಚಿತ್ರಗಳು ಮಾರ್ಮಿಕವಾದ ವರ್ಣ ಸಂಯೋಜನೆ, ಕರಾರುವಾಕ್ಕಾದ ವರಗಳು ಆಶ್ಚರ್ಯಕರವಾಗಿ ಚಿತ್ರಿಸಲ್ಪಟ್ಟಿವೆ. "ನಿಝಾಮಿ" ಮಹಾಕವಿಯ ಹಸ್ತಪ್ರತಿಗಳಲ್ಲಿ ಮ್ಮದ ವಸ್ತುಗಳಾಗಿ ಇಂಥ ಅದ್ಭುತ. ಕಲಾಕೃತಿಗಳು ಸೇರಿಕೊಂಡಿರುತ್ತವೆ. ಇವುಗಳಲ್ಲಿ ರಬಾರಿನ ಚಿತ್ರಗಳು, ಬೇಟೆಯ ದೃಶ್ಯದ ಚಿತ್ರಗಳು, ಕುರಿಗಾಹಿಗಳ ಜೀವನ ಚಿತ್ರಗಳು, ಪ್ರಕೃತಿ ೃಶ್ಯಗಳ ಚಿತ್ರಗಳು ಮತ್ತು ಮಸೀದಿಗಳನ್ನು ಕಟ್ಟುತ್ತಿರುವ ಕೆಲಸಗಾರರ ಚಿತ್ರಗಳೇ ೊದಲಾದವುಗಳು ಅನ್ಯಾದೃಶವಾಗಿ ಚಿತ್ರಿಸಲ್ಪಟ್ಟಿವೆ.

ಕ್ರಿ.ಶ. ೧೫೮೭ ರಿಂದ ೧೬೨೮ರ ವರೆಗೆ ಆಳಿದ ಸಫಾವಿದ(Safavid) ಂನೆತನದ 'ಶಿಹಾ ಅಬ್ಬಾಸ'ನ ಕಾಲದಲ್ಲಿ ವಾಸ್ತು ಶಿಲ್ಪಕಲೆಯು ಪರಮಾವಧಿ ನತೆಗೇರಿತು. ಈ ಪರಮೋಚ್ಚ ಸ್ಥಿತಿಯ ಪರ್ಷಿಯನ್ ಕಲಾವಿಕಾಸಕಾಲದಲ್ಲಿಯೇ ೌಂದರ್ಯಪೂರ್ಣವಾದ ರತ್ನಗಂಬಳಿಗಳು ನೇಯಲ್ಪಟ್ಟವು, ಅದ್ಭುತ ವರ್ಣಚಿತ್ರಗಳಿಂದ ೂಡಿದ ಹಸ್ತಪ್ರತಿಗಳು ಸಿದ್ಧವಾದವು, ಸೂಕ್ಷ್ಮಾಕಾರದ ವರ್ಣಚಿತ್ರಗಳು ಚಿತ್ರಿಸಲ್ಪಟ್ಟವು. .೧೬ಮತ್ತು ೧೭ನೆಯ ಶತಮಾನಗಳಲ್ಲಿ ಚೈನಾ ಕಲೆಯ ಪ್ರಭಾವ ಪರ್ಷಿಯನ್ ಲೆಯ ಮೇಲಾದುದು ಕಂಡುಬರುತ್ತದೆಯಲ್ಲದೇ ಮುಂದೇ ಯುರೋಪಿನ ಆದರ್ಶಗಳೊಡನೆ ೀನವಾದುದೂ ತಿಳಿದು ಬರುತ್ತದೆ.



೬) ರೋಮನ್‌ಕಲೆ

ರೋಮನ್ ಸಂಸ್ಕೃತಿ

ಕಾಲ-ಕ್ರಿ.ಪೂ.೭೫೫ - ಕ್ರಿ.ಶ ೪೭೬

ರೋಮ ಪಟ್ಟಣವು ಹಿಂದೆ ಎತ್ರುಸ್ಕನ್ ಅರಸರಿಂದ ಆಳಲ್ಪಡುತ್ತಿತ್ತು. "ರೋಮ್ಯುಲಸ್" ಎಂಬುವನಿಂದ ಕಟ್ಟಲ್ಪಟ್ಟ ಪಟ್ಟಣವೇ ರೋಮ. ಮಧ್ಯ ಇಟಲಿಯಲ್ಲಿನ ನಿವಾಸಿಗಳು ಕಬ್ಬಿಣದ ಮತ್ತು ತಾಮ್ರದ, ಕಂಚಿನ ಹಾಗೂ ಚಿನ್ನದ ಕಲಾಕೃತಿಗಳನ್ನು ರಚಿಸುವುದರಲ್ಲಿ ನಿಪುಣರಾಗಿದ್ದರು. ಎತ್ರುಸ್ಕನ್ ಕಲೆಯು ಮೂರು ವಿವಿಧ ಕಾಲಗಳಲ್ಲಿ ಮೂರು ವಿಧಗಳಲ್ಲಿಯೇ ಬೆಳೆದು ಬಂದಿತ್ತು. ಕ್ರಿ. ಪೂ. ೭೫೦-೬೦೦ ಅವಧಿಯ ಪ್ರಥಮ ಕಾಲ, ಕ್ರಿ. ಪೂ. ೬೦೦-೪೫೦ರ ಅವಧಿಯನ್ನು ದ್ವಿತೀಯ ಕಾಲ ಹಾಗೂ ಕ್ರಿ. ಪೂ ೬೦೦-೪೫೦ರ ಅವಧಿಯನ್ನು ದ್ವಿತೀಯ ಕಾಲ ಹಾಗೂ ಕ್ರಿ.ಪೂ. ೪೫೦-೧೦೦ರ ಅವಧಿಯನ್ನು ತೃತೀಯ ಕಾಲವೆಂದು ತಿಳಿಯಲಾಗುತ್ತದೆ.

ಪ್ರಥಮ ಕಾಲ

ಈ ಕಾಲದಲ್ಲಿ ಕಂಚಿನ ಬಕೇಟುಗಳು, ಕೂಜಾ, ದುಂಡಗಿನ ಹಿಡಿಕೆಗಳುಳ್ಳ ಪಾತ್ರೆಗಳೇ ಮೊದಲಾದ ವಸ್ತುಗಳು ಅಲಂಕೃತ ಮನುಷ್ಯರ ಮತ್ತು ಪ್ರಾಣಿಗಳ ಕೆತ್ತನೆಯ ಚಿತ್ರಗಳಿಂದ ಅಲಂಕರಿಸಲ್ಪಟ್ಟಿದ್ದವು. ಚಿನ್ನದ ಕೊಕ್ಕೆಗಳು, ಕಿವಿಯೋಲೆಗಳು, ಕೊರಳ ಹಾರಗಳು ಹಾಗೂ ಬುಚೆರೋ(Bucchero) ಎಂದು ಕರೆಯಲ್ಪಡುವ ವಿಶಿಷ್ಟ ಗುಣದ ಬೂದುಗಪ್ಪಿನ ಪಾತ್ರೆಗಳೇ ಮೊದಲಾದವುಗಳು ಇದೇ ಕಾಲದಲ್ಲಿ ತಯಾರಿಸಲ್ಪಟ್ಟವುಗಳಾಗಿದ್ದವು.

ದ್ವಿತೀಯ ಕಾಲ

ಈ ಕಾಲದಲ್ಲಿ ತಯಾರಾದ ಗ್ರೀಕ್ ಹೂದಾನಿಗಳು ಕೊರಿಂಥ್, ಅಥೆನ್ಸ್ ಮತ್ತು ಬೇರೆ ಬೇರೆ ಕಡೆಗಳಲ್ಲಿ ದೊರಕಿವೆ. ಈ ಹೂದಾನಿಗಳು ಬಹುತರವಾಗಿ ಗ್ರೀಕರು ಇಟ್ರೂರಿಯ ದೇಶಕ್ಕೇನೇ ಬಂದು ತಯಾರಿಸಿದವುಗಳಾಗಿರಬೇಕು. ಎತ್ರುಸ್ಕನ್‌ರು ದೊಡ್ಡ ದೊಡ್ಡ ಕಂಚಿನ ಪ್ರತಿಮೆಗಳನ್ನೂ ಚಿಕ್ಕ ಚಿಕ್ಕ ಬೊಂಬೆಗಳನ್ನೂ ತಯಾರಿಸಿದ್ದರು. ಗ್ರೀಕ್ ಮಾದರಿಯ ದೇವಾಲಯಗಳನ್ನು ಕಟ್ಟಿದ್ದರು. ಈ ಕಾಲದಲ್ಲಿ ಅಲಂಕಾರಯುಕ್ತವಾದ ಶವ ಪೆಟ್ಟಿಗೆಗಳನ್ನು ತಯಾರಿಸಲು ಮಣ್ಣನ್ನು ಬಳಸುತ್ತಿದ್ದರು. ಶ್ರಮವಹಿಸಿಕಟ್ಟಿದ ಗೋರಿಗಳ ಗೋಡೆಗಳನ್ನು ವರ್ಣಚಿತ್ರಗಳಿಂದ ಅಲಂಕರಿಸಲಾಗುತ್ತಿತ್ತು. ಈ ವರ್ಣಚಿತ್ರಗಳು ಸಹ ಗ್ರೀಕ್ ಪ್ರಭಾವದಿಂದಲೇ ಚಿತ್ರಿಸಲ್ಪಟ್ಟಿದ್ದವು. ಅಲ್ಲದೇ ಅಸಂಖ್ಯಾತ ಕಲ್ಲಿನ ಮುದ್ರೆಗಳು ಸಹ ಇದೇ ಕಾಲದಲ್ಲಿಯೇ ತಯಾರಿಸಲ್ಪಟ್ಟಿದ್ದವು.

ಮೂರನೆಯ ಕಾಲ

ಈ ಕಾಲದಲ್ಲಿಯೂ ಸಹ ಕಂಚಿನ, ಚಿನ್ನದ ಹಾಗೂ ಮಣ್ಣಿನಿಂದ ತಯಾರಿಸಿ ಸುಟ್ಟ ಬೊಂಬೆಗಳು, ಪಾತ್ರೆಗಳೇ ಮೊದಲಾದ ಕಲಾಕೃತಿಗಳು ತಯಾರಿಸಲ್ಪಟ್ಟಿದ್ದವು. ಮಣ್ಣಿನ ಅಲ್ಲದೇ ಕಲ್ಲಿನ ಶವಪೆಟ್ಟಿಗೆಗಳನ್ನು ತಯಾರಿಸಿ ಅವುಗಳ ಮೇಲೆ ಸತ್ತವರ ಭಾವಚಿತ್ರಗಳನ್ನು ಕೆತ್ತಲಾಗುತ್ತಿತ್ತು.

ಆರಂಭ ಕಾಲದಲ್ಲಿ ಒಂದು ಚಿಕ್ಕ ನಗರ ರಾಜ್ಯವಾಗಿದ್ದ ರೋಮ ಕಾಲಾನುಕ್ರಮದಲ್ಲಿ ುಹಾಸಾಮ್ರಾಜ್ಯವಾಗಿ ಬೆಳೆಯಿತು. ಸಂಸ್ಕೃತಿ ಮತ್ತು ನಾಗರಿಕತೆಗಳ ರಂಗದಲ್ಲಿ ೋಮನ್ನರು ತಮ್ಮ ಅದ್ಭುತವಾದ ಕಾಣಿಕೆಗಳನ್ನು ಪ್ರಪಂಚಕ್ಕೆ ನೀಡಿದ್ದಾರೆ. ಕ್ರಿ.ಪೂ. ನೆಯ ಶತಮಾನದಿಂದ ಕ್ರಿ.ಶ ೫ನೆಯ ಶತಮಾನದ ಕಾಲಾವಧಿಯಲ್ಲಿ ಕಲೆಗೆ ಪಾರವಾದ ಪ್ರೇರಣೆ, ಪೋಷಣೆಗಳು ದೊರೆತವು.

ರೋಮನ್ ವಾಸ್ತು ಶಿಲ್ಪಕಲೆ ಚೇತೋಹಾರಿಯಾಗಿದೆ. ಪ್ರಪ್ರಥಮವಾಗಿ ಸೇತುವೆ, ಾಲುವೆ ಹಾಗೂ ಕಮಾನುಗಳುಳ್ಳ ಸೇತುವೆ ಮೊದಲಾದ ತಾಂತ್ರಿಕ ಕಟ್ಟಡಗಳ ರ್ಮಾಣವಾಯಿತು. ಅನಂತರ ಅರಮನೆಗಳು, ನಾಟಕ ಗೃಹಗಳು ಮತ್ತು ಬೇರೆ ಬೇರೆ ಟ್ಟಡಗಳಲ್ಲಿ ಕಮಾನು ಮತ್ತು ಗುಮ್ಮಟಾಕಾರದ ಮಾಡುಗಳನ್ನು ಬಳಸಲಾಯಿತು. ಟ್ಟಿಗೆ ಹಾಗೂ ಗಾರೆಗಳನ್ನು ಉಪಯೋಗಿಸಿ ಕಟ್ಟಿದ ಈ ಕಟ್ಟಡಗಳು ವೈಶಿಷ್ಟ್ಯಪೂರ್ಣ ಾದರಿಗಳಾಗಿವೆ. ಪಾಂಪೆ(Pompeii) ಪ್ಯಾಲಾಟೈನ್ ಬೆಟ್ಟ(Palatine hill)ದಲ್ಲಿ ಕಟ್ಟಿದ ್ಲಾವಿಯನ್(Jlavian) ಅರಮನೆ ಹಾಗೂ ತಿವೋಲಿ(Tivoli)ಯ ಹೇಡ್ರಿಯನ್ ುಂತಾದ ಕಟ್ಟಗಳು ರೋಮನ್ ವಾಸ್ತುಶಿಲ್ಪಿಯ ಮಹತ್ಸಾಧನೆಗಳೆಂದೇ ಹೇಳಬೇಕು.

ಬಸಿಲಿಕ್(Bisilica) ಎಂದು ಕರೆಯಲ್ಪಡುವ ಭವ್ಯವಾದ ಕಟ್ಟಡದಲ್ಲಿ ಕ್ರಿಶ್ಚಿಯನ್ ಾಸ್ತುಶಿಲ್ಪದ ಪ್ರಭಾವ ಕಂಡುಬರುತ್ತಿದ್ದು ಈ ಕಟ್ಟಡವು ನ್ಯಾಯಮಂದಿರವೋ ಾರ್ವಜನಿಕ ಸಭಾಗೃಹವೋ ಅಥವಾ ವ್ಯಾಪಾರ ಕೇಂದ್ರವೋ ಆಗಿದ್ದಿರಬೇಕು. ದೊಂದು ಆಯತಾಕಾರದ ಕಟ್ಟಡವಾಗಿದ್ದು ದೇವಾಲಯದ ಚಕ್ರನಾಭಿಗೂ ಪಾರ್ಶ್ವಕ್ಕೂ ೊಂಡೊಯ್ಯುವ ಕಂಭಗಳ ಎರಡು ಸಾಲುಗಳಿಂದ ಎರಡು ಭಾಗಗಳಾಗಿ ತೋರುತ್ತದೆ.

"ಪ್ಯಾಂಥಿಯನ್" ಎಂಬ ಕಟ್ಟಡವು ರೋಮನ್ ಕಟ್ಟಡಗಳಲ್ಲಿಯೇ ಪ್ರಾಮುಖ್ಯವಾಗಿದ್ದು, ೃತ್ತಾಕಾರದ ಈ ಕಟ್ಟಡವನ್ನು ಹೇಡ್ರಿಯನ್(Hadrian) ಚಕ್ರವರ್ತಿಯು ರೋಮನ್ನರ ಲ್ಲ ದೇವತೆಗಳಿಗಾಗಿ ಕಟ್ಟಿಸಿದನು. ರೋಮನ್ ಚಕ್ರವರ್ತಿಗಳು ತಾವು ಕಟ್ಟಿಸುವ ಾರ್ವಜನಿಕ ಸ್ನಾನಗೃಹಗಳಲ್ಲಿ ಗುಮ್ಮಟಾಕಾರದ ಮಾಡುಗಳನ್ನು ರಚಿಸಿದ್ದು, ಈ ಾಡುಗಳನ್ನು ಬಟ್ಟೆ ಬದಲಾಯಿಸಲು ಉಪಯೋಗಿಸಲಾಗುತ್ತಿತ್ತು. ವೃತ್ತಾಕಾರದ ಾಟಕ ಗೃಹಗಳನ್ನೂ ಅಂಡಾಕಾರದ ಕ್ರೀಡಾಂಗಣಗಳನ್ನೂ ಕಟ್ಟುವ ಕಲೆಯಲ್ಲಿ ೋಮನ್ ವಾಸ್ತುಶಿಲ್ಪಿಗಳು ಅದ್ಭುತ ಜಾಣ್ಮೆಯನ್ನು ತೋರಿದ್ದಾರೆ. ಎತ್ತರವಾದ ಂಗಭೂಮಿಯ ಮುಂಭಾಗದಲ್ಲಿ ಉಬ್ಬು ಚಿತ್ರಗಳುಳ್ಳ ಅಲಂಕಾರ ಪಟ್ಟಿಕೆಗಳಿರುತ್ತಿದ್ದವು.

ರೋಮನ್ ಮೂರ್ತಿಶಿಲ್ಪಗಳು ಸ್ವತಂತ್ರವಾದ ಕಲಾಕೃತಿಗಳಾಗಿರುತ್ತವೆ. ಇವುಗಳಲ್ಲಿ ಾವಪ್ರತಿಮೆಗಳು ಮತ್ತು ಐತಿಹಾಸಿಕ ಉಬ್ಬು ಚಿತ್ರಗಳು ಪ್ರಮುಖ ಮಾದರಿಗಳಾಗಿವೆ. ಲ್ಫಿಯಲ್ಲಿರುವ ಈಮಿಲಿಯಸ್(Aemilius)ನ ವಿಜಯ ಸ್ಮಾರಕ ಇಂಥ ಅತ್ಯುತ್ತಮ ಲಾಕೃತಿಗಳ ಸ್ಮಾರಕವಾಗಿದೆ. ಇಲ್ಲಿ "ಪಿಡ್ನಾ"(Pydna) ಸಮರ ಸನ್ನಿವೇಶಗಳು ಯಥಾವತ್ತಾಗಿ ೂಪಿಸಲ್ಪಟ್ಟಿವೆ. ಟೀಟಸ್, ಸೆಪ್ಟಿಮಿಯನ್ ಸೆವರಸ್ ಮತ್ತು ಕಾನ್ಸಂಟೈನ್ ಅರಸರ ಜಯ ಸ್ಮಾರಕ ಮಹಾದ್ವಾರಗಳಲ್ಲಿಯೂ ಟ್ರಾಜನ್(Trajan)ನ ಮತ್ತು ಮಾರ್ಕಸ್ ರೇಲಿಯಸ್‌ನ ವಿಜಯ ಸ್ತಂಭಗಳ ಮೇಲೆಯೂ ಇಂಥ ಐತಿಹಾಸಿಕ ಸನ್ನಿವೇಶಗಳ

ಉಬ್ಬುಚಿತ್ರಗಳು ರೂಪಿತವಾಗಿವೆ. ರೋಮನ್ ಮೂರ್ತಿಶಿಲ್ಪಕಲೆಯು ವಾಸ್ತವ ಹಾಗೂ ಸಂಕೇತಗಳ ಮಿಶ್ರಣವಾಗಿರುತ್ತದೆ. ರೋಮನ್ ಉಬ್ಬುಚಿತ್ರಕಲೆಯು ನೋಡುಗನನ್ನು ವಿಚಾರಿಸಲು ತೊಡಗಿಸುತ್ತವೆ. ಗ್ರೀಕ್ ಮಾದರಿಯಲ್ಲಿ ನಿರ್ಮಿತವಾದ ಆಗಸ್ಟಸ್ ಅಶ್ವಾರೂಢ ಮಾರ್ಕಸ್ ಆರೇಲಿಯಸ್ ಹಾಗೂ ಅನೇಕ ದಳಪತಿಗಳ, ಶಾಸಕರ ಅಮೃತ ಶಿಲೆಯ ಪ್ರತಿಮೆಗಳು, ಹೇಡ್ರಿಯನ್ ಚಕ್ರವರ್ತಿಯ ಶಿರಸ್ಸು ಮುಂತಾದ ಕಲಾಕೃತಿಗಳು ರೋಮನ್ ಮೂರ್ತಿಶಿಲ್ಪಕಲೆಯ ಉತ್ತಮ ಉದಾಹರಣೆಗಳಾಗಿವೆ.

ವರ್ಣಚಿತ್ರಕಲೆ

ರೋಮನ್ ವರ್ಣಚಿತ್ರಕಲಾಕೃತಿಗಳು ಬಹುತರವಾಗಿ ನಾಶವಾಗಿವೆ. ಭಯಂಕರ ಭೂಕಂಪಕ್ಕೆ ತುತ್ತಾಗಿ ಸರ್ವನಾಶಗೊಂಡ ಪಾಂಪೆ ಪಟ್ಟಣದ ಅವಶೇಷಗಳಲ್ಲಿಯೂ ರೋಮ್‌ನಗರದ ಭಗ್ನಾವಶೇಷಗಳಲ್ಲಿಯೂ ಕಂಡುಬಂದ ಭಿತ್ತಿಚಿತ್ರಗಳು ಆಕರ್ಷಣೀಯವಾಗಿವೆ. ಪ್ರಕೃತಿ ದೃಶ್ಯಗಳು, ಸ್ತ್ರೀಯರು, ಮಕ್ಕಳು, ಹಾಗೂ ರೋಮಿನ ದೇವ-ದೇವತೆಗಳು, ಧಾರ್ಮಿಕ ಸಮಾರಂಭಗಳೇ ಮೊದಲಾದವುಗಳ ಚಿತ್ರಗಳು ರೋಮ್ ವರ್ಣಚಿತ್ರಕಾರರ ಚಿತ್ರವಸ್ತುಗಳಾಗಿದ್ದವು. ಬಣ್ಣ ಬಣ್ಣದ ಕಲ್ಲುಗಳನ್ನು ಜೋಡಿಸಿ ಸೊಗಸಾದ ಮೋಸಾಯಿಕ್ ಚಿತ್ರಗಳ ರಚನೆಯಲ್ಲಿಯೂ ರೋಮನ್ ಚಿತ್ರಕಾರರು ಅಸಾಧಾರಣವಾದ ಪ್ರತಿಭೆಯನ್ನು ತೋರಿಸಿದ್ದಾರೆ. ಕಟ್ಟಡಗಳ ಗೋಡೆಗಳನ್ನು ಹೆಚ್ಚಾಗಿ ಅಲಂಕಾರಯುಕ್ತ ನಕ್ಷೆಗಳಿಂದಲೂ ಪ್ರಕೃತಿದೃಶ್ಯ ಚಿತ್ರಗಳಿಂದಲೂ ವರ್ಣಮಯವಾಗಿ ಕಾಣುವಂತೆ ಅಲಂಕರಿಸುತ್ತಿದ್ದರು. ನಕ್ಷಾ ಮಾದರಿಗಳು ಹಾಗೂ ಮೊಸಾಯಿಕ್ ಚಿತ್ರಗಳು ಮೊದ ಮೊದಲು ನೆಲಗಟ್ಟಿನ ಮೇಲೆ ರೂಪಿತವಾಗಿದ್ದು ಅನಂತರ ಗೊಡೆಗಳ ಮೇಲೆ ವರ್ಣಚಿತ್ರಗಳ ಬದಲಾಗಿ ರೂಪುಗೊಳ್ಳತೊಡಗಿದವು. ಎತ್ತುಗಳನ್ನು ಅಲಂಕಾರಯುಕ್ತ ಉಬ್ಬು ನಕ್ಷೆಗಳ ಕೆತ್ತನೆಯಿಂದ ಅಲಂಕೃತಗೊಳಿಸಲಾಗುತ್ತಿತ್ತು.

ರೋಮ್ ಸಾಮ್ರಾಜ್ಯ ಪತನಾನಂತರ ಸುಮಾರು ಹನ್ನೊಂದು ಶತಮಾನಗಳ ನಂತರ ರೋಮನ್ ಕಲೆಯ ಪುನರುತ್ಥಾನವಾಯಿತು. ಈ ಕಾಲದ ರೊಮ್ ಕಲೆಯ ಪ್ರಭಾವವನ್ನು ಯುರೋಪಿನ ಅನೇಕ ರಾಷ್ಟ್ರಗಳ ಕಲಾಕೃತಿಗಳಲ್ಲಿ ಕಾಣಬಹುದು.

ಈಜಿಪ್ಷಿಯನ್ ಸಂಸ್ಕೃತಿ

ಕಾಲ-ಕ್ರಿ.ಪೂ೩೧೦೦ - ಕ್ರಿ. ಪೂ ೫೨೫.

ನೈಲ್ ನದಿಯ ದಂಡೆಗುಂಟ ವಾಸಮಾಡಿಕೊಂಡಿದ್ದ ಈಜಿಪ್ಷಿಯನ್ನರು ಭವ್ಯವಾದ ದೇವಾಲಯಗಳನ್ನೂ ದೊಡ್ಡ ದೊಡ್ಡ ಪಿರಾಮಿಡ್‌ಗಳನ್ನೂ ಕಟ್ಟಿದರು. ಹೈರೋಗ್ಲಾಫಿಕ್ ಎಂಬ ಹೊಸ ಲಿಪಿಯನ್ನು ಪರಿಶೋಧಿಸಿ ಪೇಪಿರಸ್ ಎಂಬ ಎಲೆಯ ಮೇಲ ಬರೆಯುತ್ತಿದ್ದರು. ಈ ಲಿಪಿಯು ಚಿತ್ರಗಳ ಸಮೂಹವಾಗಿರುತ್ತಿತ್ತು. ಈಜಿಪ್ಷಿಯನ್ನರು ತಮ್ಮ ಜೀವನದ ರೀತಿಯನ್ನು ತೋರಿಸಲು ದೇವಾಲಯಗಳ ಗೋಡೆಗಳ ಮೇಲ ಅನೇಕ ಚಿತ್ರಗಳನ್ನೂ ಚಿತ್ರಲಿಪಿಗಳನ್ನೂ ಕೆತ್ತನೆಮಾಡಿ ಚಿತ್ರಿಸಿದ್ದಾರೆ. ಮೆಂಫಿಸ್, ಥೀಬ್ಸ್ ಅಖಿಟೇಟನ್ ಮತ್ತು ಅಲೆಕ್ಸಾಂಡ್ರಿಯಗಳು ಇವರ ಪ್ರಮುಖ ಪಟ್ಟಣಗಳಾಗಿದ್ದವು.

ಈಜಿಪ್ಷಿಯನ್ನರು ಸೂರ್ಯ ಹಾಗೂ ನೈಲ್ ದೇವತೆಗಳು ತಮ್ಮ ಪ್ರಧಾ

ೀವತೆಗಳನ್ನಾಗಿ ಮಾಡಿಕೊಂಡಿದ್ದರು. ಅಲ್ಲದೇ ನೈಲ್ ನದಿಯಲ್ಲಿನ ಮೊಸಳೆಗಳು ಸಹ ವರ ದೇವತೆಗಳಾಗಿದ್ದವು. ಮರಣಾನಂತರದ ಜೀವನದ ಬಗೆಯಲ್ಲಿ ಅವರಿಗೆ ಹೆಚ್ಚು ಂಬುಗೆಯಿತ್ತು. ಸುಗಂಧಾದಿ ದ್ರವ್ಯಗಳನ್ನು ಲೇಪಿಸಿ ಶವವು ಕೆಟ್ಟುಹೋಗದಂತೆ ವ್ಯವಾದ ಪಿರಮಿಡ್ಡುಗಳನ್ನು ಕಟ್ಟಿ ಶವವನ್ನು ಅದರಲ್ಲಿ ಇರಿಸುತ್ತಿದ್ದರು. ಅದರೊಂದಿಗೆ ರಸನು ಉಪಯೋಗಿಸುತ್ತಿದ್ದ ಪೀಠೋಪಕರಣಗಳು, ಬಟ್ಟೆಗಳು, ಆಭರಣಗಳು ಾಗೂ ಅರಸನ ಪ್ರೀತಿಯ ಆಹಾರ ಮತ್ತು ಪಾನೀಯಗಳನ್ನು ಸಹ ಪಿರಮಿಡ್ಡುಗಳಲ್ಲಿ ಿಸುತ್ತಿದ್ದರಲ್ಲದೇ ಹಲವು ವೇಳೆ ಅರಸನ ಪ್ರೀತಿಗೆ ಪಾತ್ರರಾದ ಗುಲಾಮರನ್ನು ಸಹ ಂದು ಅರಸನ ಶವದೊಂದಿಗೆ ಹೂಳಿಬಿಡುತ್ತಿದ್ದರು.

ಈಜಿಪ್ಷಿಯನ್ ಫೇರೋ ಅರಸರು ಕಟ್ಟಿಸಿದ ಪಿರಮಿಡ್‌ಗಳು ಗಿಝೆ(Gizeh) ಬಳಿ ಇಂದಿಗೂ ಇರುತ್ತವೆ. ಅವುಗಳಲ್ಲಿ ಖೂಫು ಎಂಬ ಅರಸನ ಗೋರಿಯು ವ್ಯವಾಗಿದ್ದು ೨,೫೦೦೦೦೦೦೦ಘನ ಅಡಿಗಳಷ್ಟು ಸ್ಥಳವನ್ನು ಆವರಿಸಿಕೊಂಡಿದೆ. ಈ ದ್ಭುತವಾದ ಪಿರಾಮಿಡ್ಡನ್ನು ಕಟ್ಟಲು ೨೦,೦೦೦೦೦ ಕಲ್ಲುಗಳನ್ನು ಬಳಸಲಾಗಿದ್ದು ತಿಯೊಂದು ಕಲ್ಲಿನ ತೂಕವು ಸುಮಾರು ಎರಡೂವರೆ ಟನ್ನಿಗಿಂತಲೂ ಹೆಚ್ಚಾಗಿರುತ್ತದೆ. ಜಿಪ್ಷಿಯನ್ ವಾಸ್ತುಶಿಲ್ಪ ಕಲೆಯು ಕೇವಲ ಪಿರಮಿಡ್ಡುಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ೇವಾಲಯಗಳು, ಅರಮನೆಗಳು, ಸ್ಪಿಂಕ್ಸ್ (ಸಿಂಹದ ದೇಹ, ಪಕ್ಷಿಗಳ ರೆಕ್ಕೆ ಹಾಗೂ ಾನವ ಮುಖವನ್ನು ಹೊಂದಿದ ವಿಚಿತ್ರ ಪ್ರಾಣಿಯ ಪ್ರತಿಮೆ), ಸ್ಮಾರಕ ಸ್ಥಂಭಗಳು, ಸನ ಸ್ಥಂಭಗಳು ಹಾಗೂ ಫೇರೋ ಅರಸರ ಅತಿದೊಡ್ಡ ಪ್ರಮಾಣದ ಪ್ರತಿಮೆಗಳೇ ೊದಲಾದ ಪ್ರತಿಮೆಗಳೇ ಮೊದಲಾದ ಅದ್ಭುತವಾದ ಅಖಂಡವಾದ ಕಲಾಕೃತಿಗಳನ್ನೂ ಜಿಪ್ಷಿಯನ್ನರು ಸೃಷ್ಟಿಸಿದ್ದಾರೆ. ಕ್ರಿ.ಪೂ. ೨೨೫೦ರಲ್ಲಿ ವಾಸ್ತುಶಿಲ್ಪವು ಸಾಲುಗಂಭ ೆನ್ನೊಳಗೊಂಡ ಗೋರಿಗಳನ್ನೂ ದೇವಾಲಯಗಳನ್ನೂ ಕಟ್ಟುವ ವಿಶಿಷ್ಟ ಗುಣಗಳನ್ನು ಾಧಿಸಿಕೊಂಡಿತು. ನೈಲ್ ನದಿಗೆ ಎದುರಾಗಿರುವ ಬೆಟ್ಟಗಳನ್ನು ಕೊರೆದು ಗುಹಾಂತರ ೇವಾಲಯಗಳನ್ನು ನಿರ್ಮಿಸಲಾಯಿತು. ಸರ್ವವಿಧದಲ್ಲಿ ಅಲಂಕೃತವಾದ ಗೋರಿಗಳಲ್ಲಿ ಯರ್-ಅಲ್-ಬಹಾರ್‌ನಲ್ಲಿರುವ ಹೆತ್ಸೆಪ್ಸುತ್(Hatsepsut)ಎಂಬ ರಾಣಿಯ ಗುಹಾಂತ ೋರಿಯು ಅತ್ಯುತ್ತಮವಾದ ಸುಂದರವಾದ ಉದಾಹರಣೆಯಾಗಿದೆ.

ಮಹಾದ್ವಾರಗಳ ದೇವಾಲಯಗಳೆಂದು ಕರೆಯಲ್ಪಡುವ ಕಾರ್ನಾಕ(Karnak)ದ ಅಮನ್-ರಾ" ಎಂಬ ದೇವಾಲಯವೂ ಲಕ್ಸರ್(Luxar)ದ "ಹೋರಸ್"(Horus) ಬ ದೇವಾಲಯವೂ ವಿಶಿಷ್ಟ ಶೈಲಿಯಲ್ಲಿ ನಿರ್ಮಿಸಿದ ದೇವಾಲಯಗಳಾಗಿವೆ. ಈ ವಾಲಯಗಳ ಪ್ರತಿಯೊಂದು ಇಂಚು ಭಾಗವನ್ನೂ ಸಹ ವರ್ಣಲೇಪಿತ ಉಬ್ಬು ತ್ರಗಳಿಂದ ಅಲಂಕರಿಸಲಾಗಿದೆ.

ಈಜಿಪ್ಟಿನ ಮೂರ್ತಿಶಿಲ್ಪಕಲೆಯು ಫೇರೋ ಅರಸರ ಕಾಲದಿಂದಲೂ ಬೆಳೆದು ದಿತ್ತು. ಅರವತ್ತು ಅಡಿಗಳಿಗಿಂತಲೂ ದೊಡ್ಡದಾದ ಫೇರೋ ಅರಸರ ಪ್ರತಿಮೆಗಳನ್ನು ರ್ಮಿಸಲಾಗಿದ್ದು ಮಾನವದೇಹ ಮತ್ತು ಪ್ರಾಣಿಗಳ ತಲೆಯನ್ನು ಹೊಂದಿರುವಂತೆ ಿಸಲಾಗಿದೆ. ಇಲ್ಲಿನ ಗೋಡೆಗಳ ಮೇಲಿರುವ ಉಬ್ಬು ಪ್ರತಿಮೆಗಳು, ಕೆರೆ, ಮರಗಳು, ೆನೆಗಳು ಮೊದಲಾದವುಗಳನ್ನು ಚಿತ್ರಿಸುವಾಗ ಯಥಾದರ್ಶನ ಚಿತ್ರರೇಖನ(Perspective awing) ಪದ್ಧತಿಯನ್ನು ಅನುಸರಿಸಲಾಗಿದೆ. ಇಲ್ಲಿನ ಪ್ರತಿಮಾ ಭಾವಚಿತ್ರಗಳು ಶಾಶ್ವತ ೀಷ್ಟತೆಯನ್ನು ವ್ಯಕ್ತಪಡಿಸುತ್ತವೆ.

ಪ್ರಾಚೀನ ಈಜಿಪ್ಪಿನಲ್ಲಿ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪ ಕಲೆಯೊಂದಿಗೆ ರತ್ನಾಭರಣಗಳು, ಶಾಲುಗಳು, ಚಿತ್ರಯವನಿಕೆಗಳು, ತಲೆದಿಂಬುಗಳು, ಮರಗೆಲಸಗಳು, ಹೂದಾನಿಗಳು, ಪಾತ್ರೆಗಳು ಮತ್ತು ಮಧುಪಾತ್ರೆಗಳೇ ಮೊದಲಾದ ವಸ್ತುಗಳ ಮೇಲ ಕಣ್ಣು ಕೊರೈಸುವ ಶ್ರೀಮಂತವರ್ಣಗಳನ್ನು ಬಳಸಿ ಅತಿಸೂಕ್ಷ್ಮವಾದ ಅಲಂಕಾರಯುಕ್ತ ನಕ್ಷೆಗಳನ್ನು ಚಿತ್ರಿಸುವ ಕಲೆಯೂ ಅಸ್ವಾದ್ಯಶವಾಗಿ ಬೆಳೆದುಬಂದಿತ್ತು. ಇಂಥ ಕಲಾಪೂರ್ಣ ವಸ್ತುಗಳು ಕ್ರಿ. ಪೂ. ೧೩೫೦ ರಲ್ಲಿ ಆಳುತ್ತಿದ್ದ ತೂತನ್‌ಖಾಮೆನ್(Tutankhamen) ಎಂಬ ಅರಸನ ಗೋರಿಯಲ್ಲಿ ದೊರಕಿದ್ದು ಅವುಗಳಲ್ಲಿ ಚಿನ್ನದ ಕಿರೀಟ, ಅರಸನ ಬಟ್ಟೆಗಳು, ಸಿಂಹಾಸನ, ರಥ ಹಾಸಿಗೆ ಮತ್ತು ಅನೇಕ ವಸ್ತುಗಳು ಉಲ್ಲೇಖನೀಯ ವಾದವುಗಳಾಗಿರುತ್ತವೆ.



೭) ಮೊಹೆಂಜೋದಾರೊ

ಸಿಂಧೂ ಅಥವಾ ಹರಪ್ಪಾ ಸಂಸ್ಕೃತಿ

ಕಾಲ-ಕ್ರಿ.ಪೂ.೨೫೦೦-ಕ್ರಿ.ಪೂ.೧೫೦೦

ಇಂದಿನ ಪಾಕಿಸ್ತಾನದಲ್ಲಿ ಹರಿವ ಸಿಂಧೂ ನದಿಯ ದಂಡೆಗುಂಟ ಬೆಳೆದು ಬಂ ಸಂಸ್ಕೃತಿಯನ್ನೇ ಸಿಂಧೂ ಅಥವಾ ಹರಪ್ಪಾ ಸಂಸ್ಕೃತಿ ಎಂದು ಕರೆಯಲಾಗುತ್ತ ಸಿಂಧೂ ಜನರು ನಗರ, ಪಟ್ಟಣಗಳ ಯೋಜನೆಯಲ್ಲಿ ನಿಪುಣರಾಗಿದ್ದು

ಪಟ್ಟಣಗಳನ್ನು ಸುಂದರವಾದ ಬೀದಿಗೆದುರಾಗಿ ಕಟ್ಟುತ್ತಿದ್ದರು. ಈ ಪಟ್ಟಣಗಳಲ್ಲಿ ಶಿಲ್ಪಕಲೆಗಾರರು ಕೆಲಸಮಾಡುತ್ತಿದ್ದರು. ಮೋಹೆಂಜೋ-ದಾರೋ ಮತ್ತು ಹರಪ್ಪಾಗಳು ಅವರ ಪ್ರಮುಖ ಪಟ್ಟಣಗಳಾಗಿದ್ದವು. ಈ ಸಂಸ್ಕೃತಿಯು ಉತ್ತರ ಭಾರತದ ಹಿಂದೂ ಸಂಸ್ಕೃತಿಗೂ ಬಹುತರವಾಗಿ ದಕ್ಷಿಣ ಭಾರತದ ದ್ರಾವಿಡ ಸಂಸ್ಕೃತಿಗೂ ತನ್ನ ಮಹತ್ವ ಪೂರ್ಣವಾದ ಕೊಡುಗೆಗಳನ್ನು ಸಲ್ಲಿಸಿತು. ಸಿಂಧೂ ಸಂಸ್ಕೃತಿಯು ವ್ಯಾಪಾರಿ ಸಮಾಜದಿಂದ ನಿಧಾನವೂ ಸಹಜವೂ ಆದ ರೀತಿಯಲ್ಲಿ ಕ್ರಮಬದ್ಧವಾಗಿ ಬಂದ ಕಲಾ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿತ್ತು.

ಕ್ರಿಸ್ತ ಪೂರ್ವ ಐದುಸಾವಿರ ವರ್ಷಗಳ ಹಿಂದೆಯೇ ಈ ಸಂಸ್ಕೃತಿಯ ಉದಯವಾಯಿತೆಂಬುದು ಕೆಲವು ವಿದ್ವಾಂಸರ ಅಭಿಮತವಾಗಿದೆ. ಕ್ರಿ.ಶ. ೧೯೨೨ರಲ್ಲಿ ಸಿಂಧ ಪ್ರಾಂತದ ಲಾರಕಾನಾ ಜಿಲ್ಲೆಯಲ್ಲಿರುವ ಮೋಹೆಂಜೋ-ದಾರೋ(ಸತ್ತವರ ದಿಣ್ಣೆ)ವನ್ನೂ ಪಶ್ಚಿಮ ಪಂಜಾಬಿನ ಮೊಂಟಗೊಮರಿ ಜಿಲ್ಲೆಯಲ್ಲಿರುವ ಹರಪ್ಪಾವನ್ನೂ ಶೋಧಿಸಲಾಯಿತು. ಅಲ್ಲದೇ ಈ ಸಂಸ್ಕೃತಿಗೆ ಎಪ್ಪತ್ತು ವಸಾಹತುಗಳನ್ನು ಸುತ್ಕಾಜೆನ್-ಡೋರ್ ದಿಂದ ರೂಪಾರ್‌ವರೆಗೂ ಗುಜರಾಥಿನ ಲೋಥಾಲ್‌ವರೆಗೂ ಸಂಶೋಧಿಸಿ ತೋರತೆಗೆಯಲಾಯಿತು. ಚನ್ಹುದಾರೋ, ಸುತ್ಕಾಜೆನ್-ಡೋರ್, ರೂಪಾರ್, ಲಕ್ಕಬಾವಲ್, ಅಮ್ರಾ, ಸೋಮನಾಥ ಮತ್ತು ಲೋಥಾಲಗಳು ವ್ಯಾಪಾರದ ಪ್ರಮುಖ ಸುಂಕದ ಕಟ್ಟೆಗಳಾಗಿದ್ದವು.

ಈ ಪಟ್ಟಣಗಳಲ್ಲಿ ಎಲ್ಲ ಆಕಾರದ ಮನೆಗಳನ್ನು ಕಟ್ಟಲಾಗಿದ್ದು ಬಿಸಿಲಿನಲ್ಲಿ ಒಣಗಿಸಿ ತಯಾರಿಸಿದ ಮಣ್ಣಿನ ಇಟ್ಟಿಗೆಗಳನ್ನು ಮನೆಯ ಒಳಭಾಗದಲ್ಲಿಯೂ ಅಗಲಿಗಳಿಗೂ ಕೋಟೆಗಳಿಗೂ ಉಪಯೋಗಿಸಲಾಗಿದೆಯಾದರೂ ಸುಟ್ಟ ಇಟ್ಟಿಗೆಗಳನ್ನು ಕಟ್ಟಡಗಳಿಗಾಗಿ ಬಳಸಲಾಗಿದೆ. ಈ ಮನೆಗಳು ಎರಡು ಇಲ್ಲವೆ ಮೂರು ಅಂತಸ್ತುಗಳುಳ್ಳವುಗಳಾಗಿರುತ್ತಿದ್ದವು. ಪಟ್ಟಣಗಳ ಪಶ್ಚಿಮ ಭಾಗದಲ್ಲಿ ದೇವಾಲಯಗಳೂ ಧಾರ್ಮಿಕ ಕಟ್ಟಡಗಳೂ ಪ್ರಾರ್ಥನಾ ಮಂದಿರಗಳೂ ಕಣಜಗಳೂ ಇರುತ್ತಿದ್ದು ಸುಸಜ್ಜಿತವಾಗಿರುತ್ತಿದ್ದವು. ಈ ಎಲ್ಲ ಕಟ್ಟಡಗಳೂ ಒಂದೊಮ್ಮೆ ವರ್ಣಾಲಂಕಾರದಿಂದ ಸಜ್ಜುಗೊಳಿಸಲ್ಪಟ್ಟಿರಬೇಕೆಂದು ಊಹಿಸಲು ಸಾಧ್ಯವಿದೆ.

ಸಮಸ್ಯಾತ್ಮಕವಾದ ವಿಶೇಷ ಮಾಹಿತಿಯು ದೊರೆಯದ ಈ ದೇವಾಲಯಗಳಲ್ಲಿ ಮೊಹೆಂಜೋ-ದಾರೋವಿನ ಎಂದು ಗುರುತಿಸಿದ ಭಾಗದಲ್ಲಿರುವ ದೇವಾಲಯವೊಂದು ಇದ್ದು ದೇವಾಲಯದ ಸಣ್ಣ ಒಳಾಂಗಣದಲ್ಲಿ ವೃತ್ತಾಕಾರದ ಬಳೆಯಂತೆ-ಕಟ್ಟಿದ ಕಟ್ಟಡದ ಮಧ್ಯಭಾಗದಲ್ಲಿ ಒಂದೊಮ್ಮೆ ದೇವವೃಕ್ಷವಾಗಲೀ ಇಲ್ಲವೇ ಕುಳಿತ ಭಂಗಿಯಲ್ಲಿರುವ ಒಬ್ಬ ಗಡ್ಡಧಾರಿಯ ಚಿಕ್ಕಪ್ರತಿಮೆಯಾಗಲೀ ಇದ್ದಿರಬೇಕೆಂದು ತೋರುತ್ತದೆ. ಇಲ್ಲಿಯ ಕೋಟೆಯಲ್ಲಿರುವ ದೇವಾಲಯದ ಮಧ್ಯದಲ್ಲಿ ಒಂದು ಹೊಂಡವಿದೆ. ಅದರ ಎರಡೂ ಬದಿಗಳಲ್ಲಿ ಇಳಿದುಹೋಗಲು ಮೆಟ್ಟಲುಗಳೂ ಹೊಂಡದ ಬದಿಯಲ್ಲಿ ಗೊಡೆಗಂಭಗಳುಳ್ಳ ಒಂದು ಸಭಾಗೃಹವೂ ಇದ್ದು ಅನೇಕ ಕೋಣೆಗಳೂ ಇರುತ್ತವೆ. ಅದರ ಪಕ್ಕದಲ್ಲಿ

ಇನ್ನೊಂದು ಕಟ್ಟಡವಿದ್ದು ಬಹುತರವಾಗಿ ಮಹಾವಿದ್ಯಾಲಯ(College)ವಾಗಿದ್ದಿರಬೇಕು. ಮತ್ತೊಂದು ಕಟ್ಟಡದಲ್ಲಿ ಪ್ರತ್ಯೇಕವಾಗಿರುವ ಸಣ್ಣ ಸಣ್ಣ ಕೊಠಡಿಗಳಿದ್ದು ಇವುಗಳನ್ನು ಬಹುತರವಾಗಿ ದೇವರಧ್ಯಾನ(Meditation)ಕ್ಕಾಗಿ ಉಪಯೋಗಿಸುತ್ತಿದ್ದಿರಬೇಕು.

ಸಿಂಧೂ ನದಿಯ ಕಣಿವೆಯಲ್ಲಿ ದೊರೆತ ಹೋರಿ, ಬಲಿಷ್ಠವಾದ ಕಾವಲುನಾಯಿ, ಶಾಲನ್ನು ಹೊದ್ದುಕೊಂಡ ಯೋಗಿ, ಸೊಂಟದ ಮೇಲೆ ಕೈ ಇಟ್ಟುಕೊಂಡು ನಿಂತಿರುವ ಯುವನರ್ತಕಿ ಮತ್ತು ಬಲಗಾಲ ಮೇಲೆ ನಿಂತು ಎಡಗಾಲನ್ನು ಮುಂದೆ ಚಾಚಿರುವ ಭಂಗಿಯಲ್ಲಿರುವ ನರ್ತಕ ಮುಂತಾದ ಚಿಕ್ಕ ಪುಟ್ಟ ಪ್ರತಿಮೆಗಳು ಇಲ್ಲಿನ ನಿವಾಸಿಗಳು ಮೂರ್ತಿಶಿಲ್ಪಕಲೆಯಲ್ಲಿಯೂ ಕೆತ್ತನೆಯ ಕಲೆಯಲ್ಲಿಯೂ ಅಸಾಧಾರಣವಾದ ಪ್ರಾವೀಣ್ಯತೆಯನ್ನು ಪಡೆದಿದ್ದರೆಂಬುದನ್ನು ತೋರಿಸುತ್ತವೆ.

ಹರಪ್ಪಾ ಮತ್ತು ಮೊಹೆಂಜೋ-ದಾರೋಗಳಲ್ಲಿ ಅನೇಕ ಮುದ್ರೆಗಳು ದೊರೆತಿದ್ದು ಕಲಾತ್ಮಕವಾಗಿ ರಚಿಸಲ್ಪಟ್ಟಿವೆ. ಈ ಮುದ್ರೆಗಳ ಮೇಲೆ ಕೆತ್ತನೆ ಮಾಡಿದ ಕಾಡೆಮ್ಮೆ, ಕಾಡುಕೋಣ, ಘೇಂಡಾಮೃಗ, ಹುಲಿ, ಚಿಗರೆ, ಮತ್ತು ಹಳಿಲಿನ ಹೋರಿ ಮುಂತಾದ ಚಿತ್ರಗಳು ಈ ಜನರ ಕೆತ್ತನೆ ಕಲೆಯ ನೈಪುಣ್ಯಕ್ಕೆ ಸಾಕ್ಷಿಗಳಾಗಿವೆ. ಈ ಮುದ್ರೆಗಳು ಮಣ್ಣು, ಹಸ್ತಿದಂತ, ಚರ್ಮ ಮತ್ತು ಕಟ್ಟಿಗೆಗಳಿಂದ ತಯಾರಿಸಲ್ಪಟ್ಟವುಗಳಾಗಿವೆ. ಎತ್ತು ಹಾಗೂ ಅದರ ಬದಿಯಲ್ಲಿ ಮೂರು ತಲೆಗಳುಳ್ಳ ಒಬ್ಬ ಮನುಷ್ಯನ ಚಿತ್ರವನ್ನು ಕೆತ್ತನೆ ಮಾಡಲಾದ ಮುದ್ರೆಯೊಂದಿದ್ದು ಇದರಲ್ಲಿರುವ ಮನುಷ್ಯ "ಪಶುಪತಿ" ಅಥವಾ "ಶಿವ"ನನ್ನೂ ಎತ್ತು ಶಿವನ ವಾಹನವಾದ "ನಂದಿ"ಯನ್ನೂ ಸಂಕೇತಿಸಿರಬೇಕೆಂದು ಊಹಿಸಲಾಗಿದೆ. ಕೆಲವು ಮುದ್ರೆಗಳ ಮೇಲೆ ನೃತ್ಯಭಂಗಿಯಲ್ಲಿರುವ ಹುಡುಗಿಯರ ಚಿತ್ರಗಳನ್ನೂ ವೀಣೆ ಮುಂತಾದ ತಂತೀವಾದ್ಯಗಳ ಚಿತ್ರಗಳನ್ನೂ ಕೆತ್ತನೆ ಮಾಡಲಾಗಿದೆ. ಇಲ್ಲಿ ದೊರೆತ ಮುದ್ರೆಗಳಿಂದಲೂ ಅವಶೇಷಗಳಿಂದಲೂ ಈ ಜನರಲ್ಲಿ ಮೂರ್ತಿಪೂಜೆಯು ರೂಢಿಯಲ್ಲಿತ್ತೆಂದು ತಿಳಿದುಬರುತ್ತದೆ. ಇವುಗಳಲ್ಲಿ ಹೆಚ್ಚಾಗಿ ಹೆಣ್ಣು ದೇವತೆಯ ಪ್ರತಿಮೆಗಳಿದ್ದು ಶಕ್ತಿದೇವತೆಯಾದ ದುರ್ಗೆ ಇಲ್ಲವೆ ಮಾತೃದೇವತೆಗಳ ಪ್ರತಿಮೆಗಳಾಗಿರಬೇಕು. ಅವರು ಶಿವ-ಪಶುಪತಿಯನ್ನು ಪೂಜಿಸುತ್ತಿದ್ದರು. ಒಂದು ಮುದ್ರೆಯ ಮೇಲೆ ಆಲದ ಮರದ ಬುಡದಲ್ಲಿ ಕುಳಿತ ಹೆಣ್ಣು ದೇವತೆ ಹಾಗೂ ಅದರ ಜತೆಯಲ್ಲಿ ಕೋಡುಗಳಿರುವ ಗಂಡು ದೇವತೆಗಳನ್ನು ಕೆತ್ತನೆ ಮಾಡಲಾಗಿದೆ. ಈ ಮುದ್ರೆಯ ಮೇಲಿರುವ ದೇವತೆಗಳು ಬಹುತರವಾಗಿ "ಶಿವ ಪಾರ್ವತಿ"ಯರ ಚಿತ್ರಗಳಾಗಿರಬೇಕು. ಮತ್ತೊಂದು ಮುದ್ರೆಯಲ್ಲಿ ಪಶುಪತಿಯು ಅನೇಕ ಪಶುಗಳೊಂದಿಗೆ ಯೋಗಾಸನದಲ್ಲಿ ಕುಳಿತುಕೊಂಡಿರುವ 'ಮಹಾಯೋಗಿ'ಯಂತೆ ಕೆತ್ತನೆ ಮಾಡಲಾಗಿದೆ. ಅಲ್ಲದೆ ಮೋಹೆಂಜೋ-ದಾರೋ ಮತ್ತು ಹರಪ್ಪಾಗಳಲ್ಲಿ ಶಿವಲಿಂಗವನ್ನು (ಯೋನಿ+ಲಿಂಗ) ಹೋಲುವ ಅನೇಕ ಕಲ್ಲುಗಳೂ ದೊರೆತಿವೆ.

ಸಿಂಧೂ ಸಂಸ್ಕೃತಿಯ ವರ್ಣಚಿತ್ರಕಲೆಯನ್ನು ಲಭ್ಯವಾಗಿರುವ ಪಿಂಗಾಣಿ ಪಾತ್ರೆಗಳಿಂದ ಮಾತ್ರವೇ ತಿಳಿಯಬಹುದಾಗಿದೆ. ಕಲಾಪೂರ್ಣವಾದ ವಿವಿಧ ಆಕಾರಗಳ ಪಿಂಗಾಣಿಗಳನ್ನು ತಯಾರಿಸಿ ಅವುಗಳ ಮೇಲೆ ವಿವಿಧ ಬಣ್ಣಗಳಿಂದ ಹೂವು, ಮರಗಳು, ಪಕ್ಷಿಗಳು (ಒಮ್ಮೊಮ್ಮೆ ನವಿಲುಗಳು),ಜಿಂಕೆ, ಮೇಕೆ, ನರಿ ಮೊದಲಾದವುಗಳ ತ್ವರಿತ ರೇಖಾಚಿತ್ರಗಳನ್ನೂ ಅಪ್ಪಳಿಸಿ ಎಳೆದರೇಖೆ, ಅಡ್ಡಾ-ತಿಡ್ಡಾ ರೇಖೆ, ಚುಕ್ಕೆಗಳಿಂದುಂಟಾಗುವ ವೃತ್ತಾಕಾರದ

ಡಿಗಳನ್ನು ಕಪ್ಪುಬಣ್ಣಗಳಿಂದ ಚಿತ್ರಿಸಿದ ಚಿತ್ರಗಳಿಂದಲೂ ಪಿಂಗಾಣಿಗಳನ್ನು ಅಲಂಕರಿಸುವುದು ಡುಬರುತ್ತದೆ. ಕೆಲವು ಬಾರಿ ಮಗುವನ್ನು ಎತ್ತಿಕೊಂಡಿರುವ ಹೆಂಗಸು, ಜಾಳಿಗೆ ೊಂದಿಗಿರುವ ಮೀನುಗಾರ ಮೊದಲಾದ ಮಾನವಾಕೃತಿಗಳನ್ನೂ ಚಿತ್ರಿಸಲಾಗಿದೆ. ಈ ನರೂ ಸಹ ಮಣ್ಣು, ತಾಮ್ರ ಕಂಚು, ಬೆಳ್ಳಿ ಮತ್ತು ಚೀನಿ ಮಣ್ಣಿನಂತ ಪಿಂಗಾಣಿ ತ್ರೆಗಳನ್ನು ತಯಾರಿಸುತ್ತಿದ್ದರು ಇವುಗಳಲ್ಲದೆ ಮೊಹೆಂಜೋ-ದಾರೋ ಮತ್ತು ರಪ್ಪಾ ಪಟ್ಟಣಗಳಲ್ಲಿ ಕತ್ತೆ, ಮಂಗ, ನಂದಿ, ನಾಯಿ, ಕುರಿ, ಒಂಟೆ, ಎಮ್ಮೆ ಎತ್ತು, ತ್ತು ಬಂಡಿಗಳೇ ಮೊದಲಾದ ಮಕ್ಕಳ ಆಟಿಕೆಯ ವಸ್ತುಗಳೂ ಹಣಿಗೆ, ಸೂಜಿ, ಚಣಿಗೆ, ಮುಂತಾದ ನಿತ್ಯೋಪಯೋಗಿ ವಸ್ತುಗಳೂ ದೊರಕಿವೆ.

ಷೈಟ್ ಸಂಸ್ಕೃತಿ

ಕಾಲ-ಕ್ರಿ.ಪೂ.೭೨೫-ಕ್ರಿ.ಶ.೩೫೦

ಕುಷೈಟರು ಆಫ್ರಿಕದ ನೈಲ ನದಿಯ ಗುಂಟ ಈಜಿಪ್ಟದ ದಕ್ಷಿಣದಲ್ಲಿ ಸಿಸುತ್ತಿದ್ದರು. ಸಹಾರಾ ಮರುಭೂಮಿಯ ಕೆಲಭಾಗದಲ್ಲಿ ಸಾಕಷ್ಟು ವ್ಯಾಪಕವಾಗಿ ಲೆಸಿದ್ದರು. ಇವರ ಕಾಲದಲ್ಲಿ ಮೆರೋ(Mereo)ಪಟ್ಟಣವು ಕಬ್ಬಿಣದ ವಸ್ತುಗಳನ್ನು ಯಾರಿಸುವ ಬಹು ಪ್ರಾಮುಖ್ಯವಾದ ಕೇಂದ್ರ ಸ್ಥಾನವಾಗಿತ್ತು. ಈ ಜನರು ಂದರವಾದ ಕುಂಭಕಲಾಕೃತಿಗಳನ್ನು ರಚಿಸಿದರು. ಪಿರಮಿಡ್‌ಗಳನ್ನೂ ದೇವಾಲಯಗಳನ್ನೂ ುತ್ತು ಅರಮನೆಗಳನ್ನೂ ಕಟ್ಟಿಸಿದರು. ಅಲ್ಲದೇ ಇವರು ಈ ವರೆಗೆ ಗುರುತಿಸಿಲಾಗದ ರೆಹವುಳ್ಳ ಭಾಷೆಯನ್ನು ಅಭಿವೃದ್ಧಿಗೊಳಿಸಿದ್ದರು.

ಾರತೀಯ ಕಲಾ ಪರಂಪರೆಗಳು

ಭಾರತ ದೇಶವು ಅನೇಕ ಪ್ರತ್ಯೇಕವಾದ ವಿವಿಧ ಬಗೆಯ ಜನಜೀವನವನ್ನು ೊಂದಿದ ರಾಷ್ಟ್ರವಾಗಿದೆ. ಹಿಂದೂ, ಮುಸಲ್ಮಾನ, ಜೈನ, ಬೌದ್ಧ ಪಾರಸಿ ಹಾಗೂ ಶ್ಚಿಯನ್ ಮೊದಲಾದ ಅನೇಕ ಧರ್ಮಗಳ ಆಶ್ರಯ ಸ್ಥಾನವಾಗಿರುವ ಭಾರತದ ಲಾಕೃತಿಯು ಸುಮಾರು ಎರಡು ಸಾವಿರ ವರ್ಷಗಳಿಂದಲೂ ಚೇತೋಹಾರಿಯಾಗಿ ಳೆದು ಬಂದ ಮಹಾನ್ ಚರಿತ್ರೆಯಾಗಿದೆ. ನೆರೆಯ ಬರ್ಮಾ, ಸಿಲೋನ್, ಫಘಾನಿಸ್ತಾನ, ಟಿಬೇಟ್, ಸಯಾಮ, ಇಂಡೋನೇಶಿಯ, ಇಂಡೋಚೈನಾ ಮುಂತಾದ ೇಶಗಳ ಕಲೆಯ ಮೇಲೆ ಭಾರತೀಯ ಕಲೆಯು ಪ್ರಭಾವ ಬೀರಿದೆ, ಇಲ್ಲವೆ ಈ ಎಲ್ಲ ೇಶಗಳ ಕಲೆಯು ಭಾರತೀಯ ಕಲೆಯ ತಳಹದಿಯ ಮೇಲೆಯೇ ಬೆಳೆದು ಬಂದಿದೆ.

ಭಾರತದಲ್ಲಿ ಅಸಂಖ್ಯವಾದ ದೇವಾಲಯಗಳು, ಸ್ತೂಪಗಳು, ಅರಮನೆಗಳು, ುಸೀದಿಗಳು, ಗೋರಿಗಳು, ಚರ್ಚುಗಳು, ಗುರುದ್ವಾರಗಳು ಮತ್ತು ವಿಜಯಸ್ತಂಭಗಳೇ ೊದಲಾದವುಗಳ ಅವಶೇಷಗಳೂ ಸಾವಿರಕ್ಕೂ ಹೆಚ್ಚಾಗಿರುವ ಗುಹಾಂತರ ದೇವಾಲಯಗಳೂ ಂಘಾರಾಮ-ಚೈತ್ಯಾಲಯಗಳೂ ಇರುತ್ತವೆ. ಪ್ರಾಚೀನ ಕಾಲದ ಅನೇಕ ಅರಮನೆಗಳು, ೇವಾಲಯಗಳು ಇಂದಿಗೂ ಬಳಕೆಯಲ್ಲಿರುತ್ತವೆ.

ಮೂರ್ತಿಶಿಲ್ಪಕಲೆಯು ಭಾರತದ ಮಹತ್ವಪೂರ್ಣ ಕಲೆಯಾಗಿದೆ. ದೇವಾಲಯಗ ಹೊರಮೈ ಹಾಗೂ ಒಳಮೈಗಳ ಮೇಲಿನ ಕೆತ್ತನೆಯ ಅಲಂಕಾರವು ನೋಡುಗನನ ವಿಸ್ಮಿತನನ್ನಾಗಿ ಮಾಡುತ್ತದೆ. ದೊಡ್ಡ ದೊಡ್ಡ ಬೆಟ್ಟಗಳನ್ನು ಕೊರೆದು ನಿರ್ಮಿಸಿ ಗುಹಾಂತರ ದೇವಾಲಯಲಗಳ ಹೊರಮೈ ಒಳಮೈಗಳ ಮೇಲಿನ ಕೆತ್ತನೆಯ ಉಬ ಚಿತ್ರಕಲಾಕೃತಿಗಳು ದಂಗುಬಡಿಸುತ್ತವೆ. ತುಸು ಹೆಚ್ಚಾಗಿಯೇ ಕಂಡು ಬರುವ ಅಲಂಕಾರ ಉದ್ದೇಶಪೂರ್ವಕವಾಗಿಯೇ ರಚಿತಗೊಂಡಿದೆ. ದೈವತ್ವದ ಭವ್ಯಕಲ್ಪನೆಗಳಿಂದ ಉದ್ರಿ ಭಕ್ತನಿಗೆ ಮನಃಶಾಂತಿಯನ್ನುಂಟುಮಾಡುವುದೇ ಈ ಕಲಾಕೃತಿಗಳ ಉದ್ದೇಶವಾಗಿತ್ತು ಭಾರತೀಯ ಧಾರ್ಮಿಕ ಕಲ್ಪನೆಯಲ್ಲಿ ರೂಪುಗೊಂಡ ದೇವ-ದೇವತೆಗಳ ಪ್ರತಿಮೆಗಳ ವಿಶೇಷ ವಸ್ತ್ರಾಲಂಕಾರಗಳಿಂದಲೂ ಒಡವೆಗಳಿಂದಲೂ ಲಾಲಿತ್ಯಪೂರ್ಣವಾಗಿ ರೂಪುಗೊಂ ವುಗಳಾಗಿವೆ. ದೈವೀ ಪ್ರತಿಮೆಗಳಿಗೆ ಅನೇಕ ತಲೆಗಳನ್ನೂ ಕೈಗಳನ್ನೂ ಜೋಡಿಸಿ ಆಯ ದೇವತೆಯ ಗುಣ ವೈಶಿಷ್ಟ್ಯಗಳನ್ನು ಬಿಂಬಿಸಲಾಗಿದೆ.

ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪ ಕಲೆಗಳಂತೆಯೇ ವರ್ಣಚಿತ್ರಕಲೆಯು ಸ ಮಹತ್ವಪೂರ್ಣ ಕಲೆಯಾಗಿಯೇ ಭಾರತದಲ್ಲಿ ಬೆಳೆದು ಬಂದಿದೆ. ದೇವಾಲಯಗಳ ಅರಮನೆಗಳ, ಮಠಮಾನ್ಯಗಳ ಹಾಗೂ ಸಭಾಗೃಹಗಳ ಗೋಡೆಗಳನ್ನು ವರ್ಣಚಿತ್ರಗಳಿಂ ಅಲಂಕರಿಸಲಾಗುತ್ತಿತ್ತಲ್ಲದೇ ಮೂರ್ತಿಶಿಲ್ಪಗಳನ್ನೂ ವರ್ಣಲೇಪನಗೊಳಿಸಿ ಅಂದಗೊಳಿ ಲಾಗುತ್ತಿತ್ತು. ಇಂಥ ವರ್ಣಚಿತ್ರಗಳು ಕ್ರಿ. ಪೂ. ೧ನೆಯ ಶತಮಾನಕ್ಕಿಂತಲು ಹಿಂದಿನಿಂದಲೇ ಚಿತ್ರಸಲ್ಪಟ್ಟಿರುವದನ್ನು ಭಾರತೀಯ ಚರಿತ್ರೆಯ ಮೂಲ ತಿಳಿದುಕೊಳ್ಳಬಹುದು. ಜಲವರ್ಣಗಳಿಂದ ಚಿತ್ರಿಸಲಾದ ಸೂಕ್ಷ್ಮಾಕಾರ ಅಥವ ಕಿರುವರ್ಣಚಿತ್ರ(Miniature Paintings)ಗಳುಳ್ಳ ಹಸ್ತಪ್ರತಿಗಳು, ಚಿತ್ರಸಂಗ್ರ ಪುಸ್ತಕ(Albums)ಗಳಲ್ಲಿ ಅಂಟಿಸಲು ಚಿತ್ರಿತವಾದ ಚಿತ್ರಗಳು ಮುಂತಾದ ಕಲಾಕೃತಿಗಳ ಭಾರತೀಯ ಚಿತ್ರಕಲಾ ಪ್ರಪಂಚದಲ್ಲಿ ಸಾಮಾನ್ಯವಾಗಿವೆ. ಹೀಗೆ ಬೆಳೆದು ಬಂ ಭಾರತೀಯ ಸಂಸ್ಕೃತಿಯು ವಿವಿಧ ಘಟಕಗಳ ಸಂಸ್ಕೃತಿಯಾಗಿದೆ. ಭಾರತೀಯ ಚಿತ್ರಕಲೆಯಲ್ಲಿ ಭಿತ್ತಿಚಿತ್ರಗಳು(Frescoes) ಮತ್ತು ಕಿರುವರ್ಣಚಿತ್ರಗಳು(Miniature) ಎಂದ ಎರಡು ಭಾಗಗಳನ್ನು ಮಾಡಬಹುದು ಅಜಂತಾ, ಎಲ್ಲೋರಾ, ಬಾಗ್, ಬಾದಾಮಿ ಸಿತ್ತನ್ನವಾಶಲ್ ಮುಂತಾದ ಗುಹಾಂತರ ದೇವಾಲಯದ, ಪಲ್ಲವರ ಮತ್ತು ಚೋಳರ ಕಾಲ ಚಿತ್ರಗಳು, ಲೇಪಾಕ್ಷಿ, ತಾಡಪತ್ರಿ ಮುಂತಾದ ಕಡೆಗಳಲ್ಲಿರುವ ಚಿತ್ರಗಳು ಭಿತ್ತಿಚಿತ್ರಗ (ಗೋಡೆಗಳ ಮೇಲೆ ಚಿತ್ರಿಸಿದ ಚಿತ್ರಗಳು). ಗುಜರಾತ್, ರಾಜಸ್ತಾನ್‌ಗಳ ಹಾಗ ಗುಡ್ಡಗಾಡು ಪ್ರದೇಶಗಳ ಹಸ್ತಪ್ರತಿಗಳಲ್ಲಿ ಕಂಡು ಬರುವ ಚಿತ್ರಗಳು ಕಿರುವರ್ಣಚಿತ್ರಗ

ಭಿತ್ತಿಚಿತ್ರಗಳು

ಅಜಂತಾ–

ವರ್ಣಚಿತ್ರಕಲೆಯ ದೃಷ್ಟಿಯಿಂದ ಅಜಂತಾ ಗುಹಾಂತರ ದೇವಾಲಯಗಳ ಚಿತ್ರಿತವಾದ ಭಿತ್ತಿಚಿತ್ರಗಳು ವಿಶ್ವಮಾನ್ಯವಾಗಿರುತ್ತವೆ. ಇಲ್ಲಿರುವ ೨೯ ಗುಹೆಗಳಲ್ಲಿ ಅ



ಅಜಂತಾ

ಹೆಗಳು ಮಾತ್ರ ವಿಶೇಷವಾಗಿ ಭಿತ್ತಿ ಚಿತ್ರಗಳನ್ನೊಳಗೊಂಡಿವೆ. ಈ ಎಲ್ಲ ಗುಹೆಗಳು ರ್ಮಾಣಗೊಳ್ಳಲು ಕ್ರಿ. ಪೂ. ಎರಡನೆಯ ಶತಮಾನದಿಂದ ಸುಮಾರು ಒಂದು ಿರ ವರುಷಗಳ ಸುದೀರ್ಘ ಅವಧಿಯೇ ಬೇಕಾಯಿತು. ಶಾತವಾಹನರು, ಕಾಟಾಕರು ಮತ್ತು ಚಾಲುಕ್ಯ ಅರಸರ ಕಾಲಗಳಲ್ಲಿ ಚಿತ್ರಿತವಾದ ಭಿತ್ತಿಚಿತ್ರಗಳಲ್ಲಿ ವೈವಿಧ್ಯತೆಯನ್ನೂ ಗುರುತಿಸಬಹುದು ೧,೨,೯,೧೦,೧೬ ಮತ್ತು ೧೭ನೆಯ ಹೆಗಳ ಗೋಡೆಗಳು, ಒಳಛತ್ತುಗಳು ಹಾಗು ಕಂಭಗಳ ಮೇಲೆ ವರ್ಣಮಯ ್ರಗಳಿದ್ದು ಬುದ್ಧನ ಚರಿತ್ರೆ ಮತ್ತು ಬುದ್ಧ ಜಾತಕ ಕಥೆಗಳಿಗೆ ಸಂಬಂಧಿಸಿದವುಗಳಾಗಿವೆ. ್ರಗಳಲ್ಲಿ ಷಡ್ದಂತ ಜಾತಕಕ್ಕೆ ಸಂಬಂಧಿಸಿದ "ಮರಣೋನ್ಮುಖಿ ರಾಜಕುಮಾರಿ", ತ್ರಬುದ್ಧರು, ಸಿಂಹಲಾವದಾನ, "ಕಪಿಲವಸ್ತು"ವಿಗೆ ಮರಳಿಬಂದ ಬುದ್ಧ", "ಪ್ರಣಯ ", "ಮಹಾ ಹಂಸ", "ಮಾತೃಪೋಷಕ", "ಋುಋು", "ಷಡ್ದಂತ", "ಶಿಭಿ", ಶ್ವಂತರ", "ನಾಲಾಗರಿ ಜಾತಕ", ಬೋಧಿಸತ್ವ" (ಪದ್ಮಪಾಣಿ ಮತ್ತು ವಜ್ರಪಾಣಿ), ಾರದರ್ಶನ", "ಪಂಚಿಕಾ ಕಥೆ", "ಶಿಭಿ ಮತ್ತು ನಾಗ ಜಾತಕಗಳು", "ಶ್ರಾವಸ್ತಿಯ ವಾಡಗಳು", "ಅರಮನೆ ಮತ್ತು ಇಂದ್ರಲೋಕ ದೃಶ್ಯಗಳು", "ಕ್ಷಾಂತಿವಾದಿನ್" ತ್ತು "ಮೈತ್ರಿ ಬಲ ಜಾತಕಗಳು" ಮುಂತಾದ ವರ್ಣಚಿತ್ರಗಳು ಅದ್ವಿತೀಯವಾಗಿಯೂ ್ಯದೃಶವಾಗಿಯೂ ಚಿತ್ರಿಸಲ್ಪಟ್ಟ ಕಲಾಕೃತಿಗಳಾಗಿರುತ್ತವೆ.

ಎಲ್ಲೋರಾ-

ಎಲ್ಲೋರಾದಲ್ಲಿಯೂ ಸುಮಾರು ಮೂವತ್ತೆರಡು ಗುಹಾಂತರ ದೇವಾಲಯಗಳೂ ಅಖಂಡ ಶಿಲೆಯ ಕೈಲಾಸನಾಥ ದೇವಾಲಯವೂ ಇರುತ್ತವೆ.ಹಿಂದೂ ಹಾಗೂ ಜೈನ ಧರ್ಮಗಳಿಗೆ ಸಂಬಂಧಿಸಿದ ಚಿತ್ರಗಳು ಚಿತ್ರಿತವಾಗಿದ್ದು ವಾತಾವರಣದ ಹೊಡೆತಕ್ಕೆ ಸಿಲುಕಿ ಭಗ್ನಾವಶೇಷಗಳಂತೆ ಕಾಣಿಸುತ್ತವೆ. ಕೆಲವೇ ಪೌರಾಣಿಕ ದೇವತೆಗಳನ್ನು ಮಾತ್ರ ಗುರುತಿಸುವಷ್ಟು ಮಸುಕಾಗಿ ಕಾಣಿಸುತ್ತವೆ. ರಾಷ್ಟ್ರಕೂಟರ ಒಂದನೆಯ ಕೃಷ್ಣನು ಕಟ್ಟಿಸಿದ "ಕೈಲಾಸನಾಥ ದೇವಾಲಯದಲ್ಲಿಯೂ ಭಿತ್ತಿ ಚಿತ್ರಗಳಿದ್ದವೆಂಬುದಕ್ಕೆ ಅಲ್ಲಿನ ಅವಶೇಷಗಳು ಸಾಕ್ಷಿಯಾಗಿವೆ. ಯುದ್ಧ ಭೂಮಿಯ ಹೋರಾಟದ ದೃಶ್ಯಗಳು", "ಗರುಡಾರೂಢ ವಿಷ್ಣು, ಶಿವ, ಪಾರ್ವತಿ, "ನಂದಿ" ಮತ್ತು "ನವಿಲಿನ ಮೇಲಿರುವ ಕಾರ್ತಿಕೇಯ" ಮುಂತಾದ ಚಿತ್ರಗಳು ಗುರುತಿಸುವಷ್ಟು ಮಟ್ಟಿಗೆ ಕಾಣಿಸುತ್ತವೆ"-ಎಂದು ಎಚ್. ತಿಪ್ಪೇರುದ್ರಸ್ವಾಮಿಯವರು ತಮ್ಮ "ಕರ್ನಾಟಕ ಸಂಸ್ಕೃತಿ ಸಮೀಕ್ಷೆ"ಯಲ್ಲಿ ತಿಳಿಸುತ್ತಾರೆ.

ಬದಾಮಿ-

ಬದಾಮಿಯ ಎರಡು ಮತ್ತು ಮೂರನೆಯ ಗುಹಾಂತರ ದೇವಾಲಯಗಳಲ್ಲಿಯೂ ಭಿತ್ತಿ ಚಿತ್ರಗಳಿದ್ದು ಅಜಂತಾ ಮತ್ತು ಬಾಗ್‌ಗಳಲ್ಲಿ ಬಳಸಿದ ತಂತ್ರವನ್ನೇ ಇಲ್ಲಿಯೂ ಬಳಸಲಾಗಿದೆ. ಇಲ್ಲಿನ ದೇವಾಲಯಗಳು ವೈಷ್ಣವ ಧರ್ಮಕ್ಕೆ ಸಂಬಂಧಿಸಿದವುಗಳಾಗಿದ್ದರೂ ಶೈವಧರ್ಮಕ್ಕೆ ಸಂಬಂಧಿಸಿದ ಭಿತ್ತಿಚಿತ್ರಗಳನ್ನು ಚಿತ್ರಿಸಲಾಗಿದೆ. ವಾತಾವರಣದ ಹಾವಳಿಯಿಂದಾಗಿ ಎಲ್ಲ ಚಿತ್ರಗಳೂ ಹಾಳಾಗಿ ಹೋಗಿದ್ದರೂ ಮಹತ್ವ ಪೂರ್ಣವಾದ 'ಶಿವ-ಪಾರ್ವತಿ'ಯರ ಚಿತ್ರಗಳು ಮಾತ್ರ ಸ್ಪಷ್ಟವಾಗಿ ಕಾಣಿಸುವಷ್ಟು ಮಟ್ಟಿಗೆ ಉಳಿದುಕೊಂಡಿವೆ.

ಸಿತ್ತನ್ನವಾಶಲ್, ಕಾಂಚಿಪುರಮ್, ತಿರಮಲೈಪುರಂ.

ಅಜಂತಾ, ಬಾದಾಮಿ, ಬಾಗ್‌ಗಳ ಭಿತ್ತಿಚಿತ್ರಗಳು ಔತ್ತರೇಯ ಪದ್ಧತಿಯನ್ನು ಬಿಂಬಿಸುತ್ತಿದ್ದರೆ ಸಿತ್ತನ್ನವಾಕಲ್, ಕಾಂಚಿಪುರಮ್, ತಿರಮಲೈಪುರಮ್‌ಗಳ ಭಿತ್ತಿಚಿತ್ರಗಳು ದಕ್ಷಿಣಾತ್ಯ ಪದ್ಧತಿಯನ್ನು ಬಿಂಬಿಸುವ ಭಿತ್ತಿಚಿತ್ರಗಳಾಗಿವೆ. ಸಿತ್ತನ್ನವಾಶಲ್‌ದ ನರ್ತಿಸುತ್ತಿರುವ ನರ್ತಕಿಯರು", "ಪಲ್ಲವರ ಒಂದನೆಯ ಮಹೇಂದ್ರವರ್ಮ ಮತ್ತು ಅವನ ರಾಣಿ" ಮುಂತಾದ ಚಿತ್ರಗಳಲ್ಲದೇ ಜೈನಧರ್ಮಕ್ಕೆ ಸೇರಿದ ಅನೇಕ ಚಿತ್ರಗಳಿವೆ. ಕಾಂಚಿಪುರದ ಕೈಲಾಸನಾಥ ದೇವಾಲಯದಲ್ಲಿರುವ ಚೀನಿಯರ ಧರ್ಮಕ್ಕೂ "ಮಲಯಾದಿಪಟ್ಟಿ"ಯಲ್ಲಿ ಚಿತ್ರಗಳು ವೈಷ್ಣವ ಧರ್ಮಕ್ಕೂ ಸೇರಿದವುಗಳಾಗಿವೆ. "ತಿರುಮಲೇಪುರಂ"ದ ಚಿತ್ರಗಳು ಶೈವಧರ್ಮಕ್ಕೆ ಸಂಬಧಿಸಿದವುಗಳಾಗಿರುತ್ತವೆ.

ಗಾಂಧಾರ ವರ್ಣಚಿತ್ರಕಲೆ-

ಪೂರ್ವ ತುರ್ಕಸ್ತಾನದಲ್ಲಿ ಮೀರಾನದ ಸ್ತೂಪದ ಸುತ್ತಲೂ ಚಿತ್ರಿಸಲಾದ ಭಿತ್ತಿಚಿತ್ರಗಳು ಕ್ರಿ.ಶ. ಎರಡನೆಯ ಶತಮಾನದಲ್ಲಿ ಚಿತ್ರಿತವಾಗಿದ್ದು ಕುಷಾನ ಅರಸ ಕಾಲದ್ದೆಂದು ತಿಳಿದು ಬಂದಿದೆ. ರೆಕ್ಕೆಗಳುಳ್ಳ ದೇವಕನ್ನಿಕೆಯ ಹೂಮಾಲೆಯಿಂದ ಎ

ುತ್ತಿರುವಂತೆ ಚಿತ್ರಿಸಲಾದ ಚಿತ್ರ, ಸನ್ಯಾಸಿಗಳ ಗುಂಪು ಮತ್ತು ವೆಸ್ಸಂತರ ಜಾತಕಕ್ಕೆ ಬಧಿಸಿದ ಚಿತ್ರಗಳು ಪಾಂಪೇಯಲ್ಲಿನ ಭಿತ್ತಿಚಿತ್ರವೊಂದನ್ನು ನೆನಪಿಗೆ ತರುತ್ತವೆ. ಆ ತರದ ಕಾಲದಲ್ಲಿ ಚಿತ್ರಿಸಲಾದ ಬಾಮಯಾನದಲ್ಲಿಯ ಭಿತ್ತಿಚಿತ್ರಗಳಲ್ಲಿ ಇರಾಣಿಯನ್ ಲವು ಪ್ರಧಾನವಾಗಿ ಕಾಣುತ್ತಿದ್ದರೆ ದುಖ್ತರ್-ಇ-ನೋಷೀರ್‌ವಾನ್‌ನಲ್ಲಿನ ಭಿತ್ತಿಚಿತ್ರಗಳು ಪೂರ್ಣವಾಗಿ ಸಸೇನಿಯನ್ ಶೈಲಿಯಲ್ಲಿ ಚಿತ್ರಿಸಲ್ಪಟ್ಟವುಗಳಾಗಿರುತ್ತವೆ. ತಾರಿಮ್ ಬಚಿ ಭೂಮಿಯಲ್ಲಿರುವಂತೆ ಖೋತಾನ್, ಕಾಶಪುರ ಮುಂತಾದ ಕಡೆಗಳಲ್ಲಿರುವ ಹೆಗಳಲ್ಲಿರುವ ಭಿತ್ತಿಚಿತ್ರಗಳು ಮಾತ್ರ ಸ್ಥಾನೀಯ ಇರಾಣಿಯನ್ ಮತ್ತು ಭಾರತೀಯ ಸ್ತರ ಶೈಲಿಯನ್ನೊಳಗೊಂಡ ಗಾಂಧಾರ ವರ್ಣಚಿತ್ರಕಲೆಯ ಅತ್ಯುತ್ತಮ ನಿದರ್ಶನಗಳಾಗಿವೆ.

ಪ್ತ ಅರಸರ ಕಾಲದ ವರ್ಣಚಿತ್ರಕಲೆ-

ಗುಪ್ತ ಅರಸರ ಆಳ್ವಿಕೆಯ ಕಾಲವನ್ನು ಭಾರತೀಯ ಸಂಸ್ಕೃತಿಯ ಸುವರ್ಣಯುಗವೆಂದು ಗಣಿಸಲಾಗಿದೆ. ವಾಸ್ತುಶಿಲ್ಪ. ಮೂರ್ತಿಶಿಲ್ಪಕಲೆಗಳಂತೆಯೇ ಈ ಕಾಲದಲ್ಲಿ ರ್ಣಚಿತ್ರಕಲೆಯೂ ಪ್ರಬುದ್ಧವಾಗಿಯೇ ಬೆಳೆಯಿತು. ಗುಪ್ತ ಕಲೆಯ ದ್ಯೋತಕವಾಗಿ ತಿಸಾದ ಕೆಯೋಂಝಾರ ಜಿಲ್ಲೆಯ ಕಾಡುಗಳಲ್ಲಿರುವ ದೆಂಗಾಪೋಷಿ ಮತ್ತು ತಾಬಿಂಜಿಗಳಲ್ಲಿ ದೊರೆತ ಕೆಲವೇ ತುಣುಕುಗಳು ಉಳಿದುಕೊಂಡಿವೆ. ಆಗ್ನೇಯ ಾಳ್ವದಲ್ಲಿರುವ ಭಾಗ್ ಗುಹಾಂತರ ದೇವಾಲಯಗಳ ಭಿತ್ತಿಚಿತ್ರಗಳು ಗುಪ್ತ ಕಲೆಯ ಮಾಣ ಭೂತ ಕಲಾಕೃತಿಗಳಾಗಿವೆ.

ಅಜಂತಾ ಗುಹಾತರ ದೇವಾಲಯಗಳ ೧೬ ಮತ್ತು ೧೭ನೆಯ ಗುಹೆಗಳ ತ್ರಗಳು ವಾಕಾಟಕರ ಕೊನೆಯ ಅರಸು ಹರಿಷೇಣನ ಕಾಲದಲ್ಲಿ ಚಿತ್ರಿಸಲ್ಪಟ್ಟಿವೆ. ಜಾ ಮತ್ತು ಬೇಡನಾ ಗುಹಾಂತರ ದೇವಾಲಯಗಳ ಭಿತ್ತಿಚಿತ್ರಗಳೂ ವಾಕಾಟಕ ಸರ ಕಾಲದಲ್ಲಿಯೇ ಚಿತ್ರಿತವಾಗಿವೆ. ಅಜಂತೆಯ ಬಹುತೇಕ ಗುಹೆಗಳಲ್ಲಿನ ತ್ತಿಚಿತ್ರಗಳು ಕಟಚೂರಿ ಮತ್ತು ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಚಿತ್ರಿಸಲ್ಪಟ್ಟಿವೆ. ಎಲ್ಲ ಭಿತ್ತಿ ಚಿತ್ರಗಳೂ ಗುಪ್ತ ಶೈಲಿಯಲ್ಲಿಯೇ ಚಿತ್ರಿತವಾಗಿದ್ದು ರೋಮ್ಯಾಂಟಿಕ್ ತ್ತು ಬರೋಕ್ ಶೈಲಿಯ ಗುಣಧರ್ಮಗಳನ್ನು ಹೊಂದಿವೆ, ಕ್ರಿ.ಶ.೫ನೆಯ ಶತಮಾನದ ನೆಯಲ್ಲಿ ಚಿತ್ರಿತವಾದ ಶ್ರೀಲಂಕಾದಲ್ಲಿರುವ ಸೀಗಿರಿಯದ ಭಿತ್ತಿಚಿತ್ರಗಳ ವರ್ಣಚಿತ್ರ ಾಕೃತಿಗಳಾಗಿರುತ್ತವೆ.

ಲ ಅರಸರ ವರ್ಣಚಿತ್ರಕಲಾಶೈಲಿ-

ಪಾಲ ವರ್ಣಚಿತ್ರ ಕಲಾ ಶೈಲಿಯನ್ನು ಥೀಮಾನ್ ಮತ್ತು ಬಿಟ್ಪಾಲೋ ಅವರಿಂದ ದಯವಾಯಿತೆಂದು ಟಿಬೇಟಿನ ಚರಿತ್ರಕಾರರು ಹೇಳುತ್ತಾರೆ, ಪಾಲ, ವರ್ಮಾ ಮತ್ತು ಂದ್ರ ಅರಸರ ಮಹಾಪೋಷಣೆಯಲ್ಲಿ ನಿರ್ಮಿಸಲಾದ 'ಪ್ರಜ್ಞಾ-ಪಾರಮಿತ', 'ಸಾದನಾ ಾಲ್', 'ಪಂಚರಕ್ಷ' ಮತ್ತು 'ಕರಂಡ ವ್ಯೂಹ"ಗಳೆಂಬ ಹಸ್ತಪ್ರತಿಗಳ ಸಂದರ್ಭಚಿತ್ರಗಳು ರ ಚಿಕ್ಕವಾಗಿದ್ದು ಬೌದ್ಧ ದೇವತೆಗಳು, ಸ್ತೂಪಗಳು, ಭಾರತ ದೇಶದ ಸುಪ್ರಸಿದ್ಧ ಾತ್ರಾಸ್ಥಳಗಳು ಮುಂತಾದವುಗಳ ಚಿತ್ರಗಳಾಗಿವೆ. ಈ ಚಿತ್ರಗಳು 'ಗುಪ್ತ' ಶೈಲಿಯಲ್ಲಿಯೇ ತ್ರಿಸಿದವುಗಳಾಗಿವೆ.

ಸೂಕ್ಷ್ಮಾಕಾರ ಇಲ್ಲವೆ ಕಿರುವರ್ಣಚಿತ್ರಗಳು (Miniature Paintings)

ಅಜಂತಾ, ಬಾಗ ಮುಂತಾದ ಗುಹಾ ಚಿತ್ರಗಳ ನಂತರ ಹಲವು ಶತಮಾನಗಳವರೆಗೆ ಭಾರತೀಯ ಕಲಾ ಚರಿತ್ರೆಯು ಮಸುಕಾಗಿ ಚರಿತ್ರೆಯಿಂದ ಮರೆಯಾಗಿ ಹೋಗಿದೆ. ಕ್ರಿ.ಶ. ಹದಿಮೂರನೆಯ ಶತಮಾನದಲ್ಲಿ ವರ್ಣಚಿತ್ರಕಲಾ ಪರಂಪರೆಗೆ ಚಾಲನೆ ದೊರೆತು ಕಿರುವರ್ಣಚಿತ್ರಗಳ ರೂಪದಲ್ಲಿ ಹೊರಹೊಮ್ಮಿತು. ಭಿತ್ತಿಚಿತ್ರಗಳ ಬದಲಾಗಿ ಧಾರ್ಮಿಕ, ಆಧ್ಯಾತ್ಮಿಕ ಗ್ರಂಥಗಳ ಹಸ್ತಪ್ರತಿಗಳಲ್ಲಿ ಅಂಟಿಸಲು ಸಾಧ್ಯವಾಗುವಂತೆ ಕಿರುಚಿತ್ರ(Miniatures)ಗಳನ್ನೂ ರಚಿಸಲಾಯಿತು. ಇಲ್ಲವೆ ತಾಳೆಗರಿಯ ಸೀಮಿತ ಸ್ಥಳಾವಕಾಶದಲ್ಲಿ ಈ ಸಾಂದರ್ಭಿಕ ಕಿರುವರ್ಣಚಿತ್ರಗಳ್ನು ಚಿತ್ರಿಸಲಾಯಿತು. ಈ ಕಾಲದಲ್ಲಿ ರಚಿತವಾದ ಹಸ್ತಪ್ರತಿಗಳು ಸಾಂದರ್ಭಿಕ(Illustrations)ಚಿತ್ರಗಳಿಂದ ಅಲಂಕರಿಸಲ್ಪಟ್ಟಿದ್ದವು.



೮) ಕೃಷ್ಣಲೀಲಾ

ಮೇಲಿಂದ ಮೇಲೆ ನಡೆಯುತ್ತಿದ್ದ ಮುಸ್ಲಿಮರ ದಾಳಿಯಿಂದ ಚ್ಯುತಿಗೊಳ್ಳದ ಪಶ್ಚಿಮ ಭಾರತದ ಗುಜರಾತ, ಮಾಳ್ವಾ ಮತ್ತು ರಾಜಸ್ತಾಗಳಲ್ಲಿ ಈ ಸೂಕ್ಷ್ಮಾಕಾರ ಚಿತ್ರಕಲೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬೆಳೆಯಿತಲ್ಲದೇ ಭಾರತೀಯ ಚಿತ್ರಕಲಾ ಪರಂಪರೆಗೆ ನಿರ್ದಿಷ್ಟವಾದ ಕೊಡುಗೆಗಳನ್ನೂ ನೀಡಿತು. ಈ ಕಲಾ ಪರಂಪರೆಯನ್ನು ಜೈನ, ಗುಜರಾತ, ಅಥವಾ ಪಶ್ಚಿಮ ಭಾರತೀಯ ಪರಂಪರೆ ಎಂದು ಕರೆಯಲಾಗುತ್ತದೆ. ಜೈನ ಅರಸರಾದ ಗುಜರಾತಿನ ಚಾಲುಕ್ಯರ ಮಹಾಪೋಷಣೆಯ

ಬೆಳೆಯಿತು. ಈ ಅರಸರು ಜೈನ ಹಸ್ತಪ್ರತಿಗಳಿಗಾಗಿ ಅನೇಕ ಸಂದರ್ಭಚಿತ್ರಗಳನ್ನು ಬರೆಯಿಸಿದರು. ಗುಜರಾತಿನ ಶ್ರೀಮಂತ ವ್ಯಾಪಾರಿಗಳ ಮತ್ತು ಪ್ರಮುಖ ವ್ಯಕ್ತಿಗಳ ಔದಾರ್ಯವೂ ಈ ಪರಂಪರೆಯ ಬೆಳವಣಿಗೆಗೆ ಪೂರಕವಾಗಿತ್ತು ಎಂಬುದಕ್ಕೆ ಪಾಟಿನ್, ಕ್ಯಾಂಬೆ, ಜೈಸಲ್ಮೇರ್‌ಗಳ ಜೈನ ಗ್ರಂಥಾಲಯಗಳಲ್ಲಿರುವ ಹಸ್ತಪ್ರತಿಗಳು ನಿದರ್ಶನವಾಗಿವೆ. ಕ್ರಿ.ಶ. ಹನ್ನೆರಡನೆಯಶತಮಾನಕ್ಕೆ ಸಂಬಂಧಿಸಿದ ಜೈನಹಸ್ತಪ್ರತಿಗಳು ತಾಳೆಗರಿಯ ಮೇಲಿದ್ದು ತಾಳೆಗರಿಯ ಸೀಮಿತ ಸ್ಥಳಾವಕಾಶದಿಂದಾಗಿ ಚಿತ್ರದ ರೂಪರೇಷೆಗಳ ಹಾಗೂ ವರ್ಣಚಿತ್ರಿತವಾದ ಚಿತ್ರಗಳಲ್ಲಿ ತಿಳಿನೇರಳೆ(Purple), ಕೆಂಪು ಇಲ್ಲವೇ ನೀಲವರ್ಣದ ಹಿನ್ನೆಲೆಯಲ್ಲಿ ಒಂದೇ ಒಂದು ದೇವತೆ ಹಾಗೂ ಪೋಷಕನ ಚಿತ್ರಗಳನ್ನು ಹಳದಿ, ಬಿಳಿ ಮತ್ತು ಹಸಿರು ವರ್ಣಗಳಿಂದ ಚಿತ್ರಿಸಿರುವದನ್ನು ಕಾಣಬಹುದು.

ಕ್ರಿ.ಶ.೧೪ನೆಯ ಶತಮಾನದಲ್ಲಿ ಕಾಗದವು ಬಳಕೆಯಲ್ಲಿ ಬಂದ ನಂತರ ಈ ಹಸ್ತಪ್ರತಿಗಳು ಹೆಚ್ಚಿನ ಸಂಖ್ಯೆಯಲ್ಲಿ ರಚಿಸಲ್ಪಟ್ಟವು. ಜೊತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಲಾಕೃತಿಗಳ ರಚನೆಯೂ ಆಯಿತು. ಆನೆಗಳ ಇಲ್ಲವೆ ರಾಜಹಂಸಗಳ ಸಾಲು ಮತ್ತು ಹೂಬಳ್ಳಿಯ ನಕ್ಷೆಗಳಿಂದ ಹಸ್ತಪ್ರತಿಯ ಪುಟ ಪುಟಗಳ ಅಂಚುಗಳನ್ನು ಅಲಂಕರಿಸಲಾಯಿತು. ಕಪ್ಪು ಇಲ್ಲವೆ ಕೆಂಪು ಹಿನ್ನೆಲೆಯ ಮೇಲೆ ಚಿನ್ನ ಮತ್ತು ರಜತ ವರ್ಣಗಳ ಬಳಕೆಯಿಂದ ಚಿತ್ರಪುಟದ ಸೌಂದರ್ಯವರ್ಧಿಸಿತು. ಈ ಎಲ್ಲ ಹಸ್ತ ಪ್ರತಿಗಳು ಜೈನಧರ್ಮಕ್ಕೆ ಸಂಬಂಧಿಸಿದವುಗಳಾಗಿದ್ದು ಪ್ರೇಮಕಾವ್ಯವಾದ "ವಸಂತ ವಿಲಾಸ"ದಂತಹ ಜಾತ್ಯಾತೀತವಾದ ಹಸ್ತಪ್ರತಿಗಳಲ್ಲಿ ಕೇಲವೇ ಕೆಲವು ಕಲಾಕೃತಿಗಳಿರುತ್ತವೆ.

ವೈಶಿಷ್ಟ್ಯಪೂರ್ಣವಾದ ಜೈನ ಕಲಾಕೃತಿಗಳಲ್ಲಿ ಜೈನ ಕಲಾವಿದನ ಸ್ವಂತಿಕೆ ಹಾಗೂ ಹೊಸತನಗಳು ಎದ್ದುಕಾಣುತ್ತವೆ.

"ಕಲ್ಪಸೂತ್ರ" ಮತ್ತು "ನೀಮತ್ ನಾಮಾ" ಎಂಬ ಹಸ್ತಪ್ರತಿಗಳು ಕಾಗದಗಳಲ್ಲಿ ರಚಿಸಲ್ಪಟ್ಟಿದ್ದು ಮಾಂಡು ಮತ್ತು ಜಾನಪುರಗಳ ಸ್ಥಾನಿಕ ಮುಖಭಾವಗಳ ವೈವಿಧ್ಯತೆ ಮತ್ತು ಉಡುಗೆ ತೊಡಿಗೆಗಳನ್ನು ಪ್ರತಿಬಿಂಬಿಸುವ ಶಿಶುವರ್ಣ ಚಿತ್ರಗಳಿಂದ ತುಂಬಿರುತ್ತವೆ. ನೀಮತ್ ನಾಮಾ ಎಂಬ ಪಾಕಶಾಸ್ತ್ರ ಗ್ರಂಥದಲ್ಲಿ ಚಿತ್ರಿತವಾದ ಸಂದರ್ಭ ಚಿತ್ರಗಳು ಪರ್ಷಿಯನ್ ಪ್ರಭಾವದಿಂದ ಚಿತ್ರಿಸಿದವುಗಳಾಗಿವೆ. ಇದೇ ಕಾಲದಲ್ಲಿ ರಾಜಸ್ತಾನವೂ ಸಹ ವರ್ಣಚಿತ್ರಕಲಾ ಕೇಂದ್ರವಾಗಿತ್ತು. ಕ್ರಿ.ಶ.೧೫ನೆಯ ಶತಮಾನದಲ್ಲಿ "ಸುವಾಸನಾಹಾಚಾರಿಯಂ" ಎಂಬ ಹಸ್ತಪ್ರತಿಯು ಮೇವಾಡದ ದೇವಕುಲವಾಟಕದಲ್ಲಿ ರಚಿತವಾದುದಾಗಿದ್ದು ಇದರಲ್ಲಿ ೩೭ ಸಂದರ್ಭ ಚಿತ್ರಗಳಿರುತ್ತವೆ. ಕ್ರಿ.ಶ. ೧೫೪೮ರ ನಂತರ ಈ ಶೈಲಿಯನ್ನು "ರಾಜಸ್ತಾನಿ ಕಲೆ" ಎಂದು ಪ್ರತ್ಯೇಕವಾಗಿ ಗುರುತಿಸಲಾಯಿತು. ಒಡಿಸಾದ ಹಸ್ತಪ್ರತಿಗಳಲ್ಲಿ ಚಿತ್ರಿತವಾದ ಶಿಶುವರ್ಣಚಿತ್ರಕಲಾ ಶೈಲಿಯು ಪಶ್ಚಿಮ ಭಾರತದ ಶೈಲಿಗಿಂತ ಬಿನ್ನವಾಗಿದ್ದು ತಾಳೆಗರಿಯ ಮೇಲೆ ಕಂಟದಿಂದ(ಮೊನೆಯಾದ ಲೆಕ್ಕಣಿಕೆ) ಒತ್ತಿ ಬರೆದು ಕಲ್ಲಿದ್ದಲು ಪುಡಿಯನ್ನು ತುಂಬಿ ಈ ಚಿತ್ರಗಳನ್ನು ಪೂರ್ತಿಗೊಳಿಸಲಾಗಿದೆ.

ರಜಪೂತ ಕಿರುವರ್ಣಚಿತ್ರಗಳು

ಜೈಪುರ, ಬಿಕಾನೇರ ಮತ್ತು ಉದಯಪುರ ಸಂಸ್ಥಾನಗಳ ಆಸ್ಥಾನಗಳಲ್ಲಿ ರಜಪೂತ ಕಲೆಯು ಬೆಳೆದು ಬಂದಿತು. ಈ ಶೈಲಿಯನ್ನು "ಜೈಪುರಿಕಲಂ"(ಕುಂಚ) ಎಂದು ಕರೆಯಲಾಗುತ್ತದೆ.

ಸಿವಾಲಿಕ ಬೆಟ್ಟಗಳ ಸಾಲಿನಲ್ಲಿರುವ ಪೂಂಚ, ಜಮ್ಮು, ಬಶೋಲಿ, ನೂರಪೂರ, ಕಾಂಗ್ರಾ, ಹರಿಪುರ, ಗುಳೇರ ಮತ್ತು ಹಿಮಾಲಯ ಪರ್ವತ ಪ್ರದೇಶದಲ್ಲಿರುವ ರಾಮನಗರ, ಭದರವಾ, ಚಂಭಾ, ಕುಲು ಮತ್ತು ತೆಹರಿ ಗರವಾಲ ಮುಂತಾದ ಗುಡ್ಡಗಾಡುಗಳಲ್ಲಿ ಬೆಳೆದು ಬಂದ ಶೈಲಿಯನ್ನು "ಪಹಾಡಿ ಕಲಂ" ಎಂದು ಕರೆಯಲಾಗುತ್ತದೆ. ಮಹಾರಾಜ ರಣಜಿತಸಿಂಗನ ಪೋಷಣೆಯಲ್ಲಿ ಬೆಳೆದ ಶೈಲಿಯೂ "ಪಾಹಾಡಿಕಲಂ"ದಲ್ಲಿಯೇ ಸೇರಿಕೊಳ್ಳುತ್ತದೆ. ಮೊಗಲರು"ಹಮ್ಜಾನಾಮಾ" ಎಂಬ ಹಸ್ತಪ್ರತಿಗೆ ಸಂದರ್ಭ ಚಿತ್ರಗಳ ರಚನೆಗಾಗಿ ಕೆಲವು ಕಲಾವಿದರನ್ನು ಮೊಗಲ್ ಆಸ್ಥಾನಕ್ಕೆ ಕರೆಸಿಕೊಳ್ಳುವವರೆಗೆ ಅಂದರೆ ಕ್ರಿ.ಶ.೧೬ನೆಯ ಶತಮಾನದ ಆದಿಯವರೆಗೆ ಈ ಸಾಂಪ್ರದಾಯವು ಪಶ್ಚಿಮ ಭಾರತೀಯ ಸಾಂಪ್ರದಾಯವನ್ನೇ ಉಳಿಸಿಕೊಂಡಿತ್ತು. ಮೊಗಲ್ ಆಸ್ಥಾನದಿಂದ ಸ್ವಸ್ಥಾನಕ್ಕೆ ಮರಳಿ ಬರುವ ವೇಳೆಗೆ ಈ ಕಲಾವಿದರು ಮೊಗಲ್ ಶೈಲಿಯಿಂದ ಪ್ರಭಾವಿತರಾಗಿದ್ದರು ಎಂದು ಹೇಳುವದಕ್ಕಿಂತ ಪರ್ಷಿಯನ್ ಕಲೆಯು ಇವರ ಮೇಲೆ ಹೆಚ್ಚು ಪ್ರಭಾವ ಬೀರಿತ್ತು ಎಂದು ಹೇಳುವದೇ ಸೂಕ್ತ. ಈ ಕಲಾವಿದರಿಂದ ರಚಿತವಾದ ನಂತರದ ಕಲಾಕೃತಿಗಳಲ್ಲಿ ಪರೋಕ್ಷವಾಗಿ ಮೊಗಲ್ ಶೈಲಿಯ ಪರಿಣಾಮವಾಗಿರುವುದನ್ನು ಕಾಣಬಹುದು. ಲೌರ್‌ಚಂದಾ(Lour Chauda) ಚೌರಾ ಪಂಚಾಸಿತಾ, ಕೃಷ್ಣಲೀಲಾ, ಗೀತಗೋವಿಂದ ಮತ್ತು ಭಾಗವತ ಪುರಾಣಗಳಲ್ಲಿ ಚಿತ್ರಿತವಾದ ಚಿತ್ರಗಳು ಪರ್ಷಿಯನ್ ಪ್ರಭಾವದಲ್ಲಿಯೇ ಚಿತ್ರಿಸಲ್ಪಟ್ಟಿರುವದು ಸ್ಪಷ್ಟವಾಗಿದೆ. ಕ್ರಿ.ಶ ೧೬೦೫ರಲ್ಲಿ ಮೇವಾಡದ ರಾಜಧಾನಿ ಚಾವಂಡದಲ್ಲಿ ನಾಸಿರುದ್ದೀನ್ ಎಂಬ ಕಲಾವಿದನು ಚಿತ್ರಿಸಿದ ರಾಗಮಾಲಾಚಿತ್ರಗಳು ನಿಸ್ಸಂಶಯವಾಗಿಯೂ ಇದೇ ಶೈಲಿಯಲ್ಲಿ ಚಿತ್ರಿಸಲ್ಪಟ್ಟಿವೆ. ಮೂವತ್ತಾರಕ್ಕೂ ಹೆಚ್ಚು ರಾಗ-ರಾಗಿಣಿಯರನ್ನು ಬಣ್ಣಿಸುವ ಈ ವರ್ಣಚಿತ್ರಗಳು ಹೆಚ್ಚು ಪ್ರಸಿದ್ಧಿಯನ್ನು ಪಡೆದಿದ್ದವು. ಚಿತ್ರಣ ಶೈಲಿ ಪರ್ಷಿಯನ್ ಆಗಿದ್ದರೂ ಈ ಚಿತ್ರಗಳ ವಸ್ತು ಮತ್ತು ಅಭಿವ್ಯಕ್ತಿಗಳು ಶುದ್ಧ ಭಾರತೀಯವಾಗಿದ್ದು ಹೆಚ್ಚಾಗಿ ಬಾಲಕೃಷ್ಣ, ದನಗಾಹಿ ಕೃಷ್ಣ, ರಾಧಾ-ಕೃಷ್ಣರ ಪ್ರೇಮಲೀಲೆಗಳ ಚಿತ್ರಗಳೇ ಕಂಡುಬರುತ್ತವೆ.

ಸಾಹಿಬ್ದೀನ್ ಎಂಬ ಚಿತ್ರಕಾರನು ಭಾಗವತ ಪುರಾಣ, ಸೂಕರಕ್ಷೇತ್ರ ಮಹಾತ್ಮೆ, ರಾಮಾಯಣ ಮುಂತಾದ ಹಸ್ತಪ್ರತಿಗಳಿಗೆ ಚಿತ್ರಗಳನ್ನು ಬರೆದನು. ಮನೊಹರನೆಂಬ ಇನ್ನೊಬ್ಬ ಚಿತ್ರಕಾರನು ರಾಮಾಯಣದ'ಬಾಲಕಾಂಡ'ಕ್ಕೆ ಸಂದರ್ಭ ಚಿತ್ರಗಳನ್ನು ಬರೆದನು. ಈ ಎಲ್ಲ ಕಲಾಕೃತಿಗಳು ಮೇವಾಡದ ರಾಜಾ ಜಗತ್‌ಸಿಂಗನ ಮಹಾಪೋಷಣೆಯಲ್ಲಿ ಚಿತ್ರಿಸಿದವುಗಳಾಗಿದ್ದು ಈ ಕಾಲದಲ್ಲಿ ರಾಜಸ್ತಾನೀ ಕಲೆಯು ಪರಮೋಚ್ಚ ಸ್ಥಾನವನ್ನು ತಲುಪಿತ್ತು. ಮೇವಾಡದ ರಾಜಸ್ತಾನೀ ಕಲೆಯು ಪರಮೊಚ್ಚ ರಾಣಾ ಪ್ರತಾಪಸಿಂಗನ ನಂತರದ ಅರಸರಾದ ರಾಜಾ ರಾಜಸಿಂಗ್ ಮತ್ತು ರಾಜಾ ಜೈಸಿಂಗ ಅವ

ಕಾಲದವರೆಗೂ ಮುಂದುವರಿದು ಕಾಲಕ್ರಮೇಣ ಮೊಗಲ್ ಶೈಲಿಯಲ್ಲಿ ಲೀನವಾಯಿತು. ಆದರಂತೆ ಮಾರವಾರ, ಜೋಧಪುರ, ಬುಂದಿ, ಮಾಳ್ವಾ, ಕಿಷನ್‌ಗಡ, ಮತ್ತು ಜೈಪುರಗಳು ರಾಜಸ್ತಾನಿ ಚಿತ್ರಕಲಾ ಪರಂಪರೆಯ ಕೇಂದ್ರಗಳಾಗಿದ್ದು ಸಂಪೂರ್ಣವಾಗಿ ಮೊಗಲ್ ಶೈಲಿಯನ್ನು ಅಳವಡಿಸಿಕೊಂಡಿದ್ದವು. ಚಿತ್ರೀಕರಣದ ವಸ್ತು ಮಾತ್ರ ಭಾರತೀಯವಾಗಿದ್ದು ಪೌರಾಣಿಕ ಪ್ರೇಮಿ-ಪ್ರೇಯಸಿಯರ, ಪ್ರೇಮಕಥೆಯನ್ನು ಹೇಳುವ ರಾಗಮಾಲಾ ಮತ್ತು ಹೆಂಗಸಿನ ವಿವಿಧ ಭಂಗಿಗಳೇ ಮುಂತಾದ ವಸ್ತುಗಳನ್ನೇ ಚಿತ್ರಿಸಲಾಗಿದೆ. ಜೋಧಪುರ ಮಾತ್ರ ರಾಜಸ್ತಾನೀ ಪರಂಪರೆಯ ಕೊಂಚ ಸಂಬಂಧವನ್ನಿರಿಸಿಕೊಂಡಿತ್ತಾದರೂ ಜೋಧಪುರ ಕಲಾವಿದರು ಚಿತ್ರಿಸಿದ ಭಾವಚಿತ್ರಗಳಲ್ಲಿ (Portraits)ಮೊಗಲ್ ಶೈಲಿಯು ಪ್ರಾಮುಖ್ಯವಾಗಿರುವುದನ್ನು ಗಮನಿಸಬಹುದು. ೧೭ನೆಯ ಶತಮಾನದಲ್ಲಿ ಪ್ರವರ್ಧಿಸಿದ 'ಬುಂಧಿ' ಕಲಾ ಸಾಂಪ್ರದಾಯದಲ್ಲಿ ಮೊಗಲ್ ಮತ್ತು ಮೇವಾಡ ಸಾಂಪ್ರದಾಯಗಳೆರಡೂ ಸಮ್ಮಿಳಿತವಾಗಿದ್ದವು. ಬುಂದಿ ಚಿತ್ರಕಾರನು ರಾಗಮಾಲಾ ಮತ್ತು ರಸಿಕಪ್ರಿಯ ಚಿತ್ರಗಳನ್ನು ಚಿತ್ರಿಸುವಾಗ ತನ್ನ ಪ್ರಾಂತದ ನೈಸರ್ಗಿಕ ಸೌಂದರ್ಯದ ಪ್ರಯೋಜನವನ್ನು ಸಾಕಷ್ಟು ಪಡೆದು ಕೊಂಡಿದ್ದಾನೆಂಬುದನ್ನು ಬುಂದಿ ಚಿತ್ರಗಳಲ್ಲಿ ಕಾಣಬಹುದು.

ಕಿಷನ್‌ಗಡ-

ಕಿಷನ್‌ಗಡ ಸಂಸ್ಥಾನದ ರಾಜಾ ಸಾಮಂತ್‌ಸಿಂಗನ ಆಶ್ರಯದಲ್ಲಿ ಕಿಷನ್‌ಗಡ ಕಿರುವರ್ಣಚಿತ್ರ ಶೈಲಿಯು ಬೆಳೆದು ಬಂದಿತು. ಸ್ವತಃ ಸಾಮಂತ್‌ಸಿಂಗನು ಕೃಷ್ಣಭಕ್ತಿಗೀತಗಳ ರಚನಾಕಾರನಾಗಿದ್ದು ಆ ಗೀತೆಗಳಿಗೆ ಅನೇಕ ಸಂದರ್ಭ ಚಿತ್ರಗಳನ್ನು ಬರೆಯಿಸಿದ್ದನು. ಪರಿಶುದ್ಧ ರಾಜಸ್ತಾನೀ ವಸ್ತು ಮತ್ತು ಅಭಿವ್ಯಕ್ತಿಗಳುಳ್ಳ ಈ ವರ್ಣಚಿತ್ರಗಳು ಮೊಗಲ್ ಶೈಲಿಯಲ್ಲಿಯೇ ಚಿತ್ರಿಸಿದವುಗಳಾಗಿದ್ದವು. ಕ್ರಿ.ಶ.೧೮ನೆಯ ಶತಮಾನದಲ್ಲಿ ಕಿಷನ್‌ಗಡ ಮತ್ತು ಜೈಪುರ ವರ್ಣಚಿತ್ರಗಳು ಮಹತ್ವಪೂರ್ಣವಾದ ಸ್ಥಾನವನ್ನು ದೊರಕಿಸಿಕೊಂಡಿದ್ದವು. ಜೈಪುರದ ಮಿರ್ಝಾ ರಾಜಾ ಜೈಸಿಂಗನ ನಂತರದ ಕಲಾಕೃತಿಗಳಲ್ಲಿ ಮೊಗಲ್ ಶೈಲಿಯೇ ಪ್ರಧಾನವಾಗಿ ಪರಿಣಮಿಸಿತು. ಏಕೆಂದರೆ ಮೊಗಲ್ ಆಸ್ಥಾನದ ಅನೇಕ ವರ್ಣಚಿತ್ರಕಾರರು ಮೊಗಲ್ ಚಕ್ರವರ್ತಿ ಔರಂಗಜೇಬನ ಚಿತ್ರಕಲಾ ವಿಷಯದಲ್ಲಿನ ವಿಮುಖತೆ, ನಿರ್ಲಕ್ಷತೆಗಳು ಮತ್ತು ಭಿನ್ನಾಭಿಪ್ರಾಯಗಳಿಂದಾಗಿ ಮೊಗಲ್ ಆಸ್ಥಾನವನ್ನು ತೊರೆದು ಜೈಪುರ ಅರಸರ ಆಶ್ರಯವನ್ನು ಕೋರಿ ಜೈಪುರಕ್ಕೆ ಬಂದು ನೆಲೆಸಿದರು. ಎರಡನೆಯ ಸವಾಯಿ ಜೈಸಿಂಗನ ಕಾಲದಲ್ಲಿ ಚಿತ್ರಿತವಾದ ರಾಗಮಾಲಾ ಚಿತ್ರಗಳು ಬಹುವಾಗಿ ಮೊಗಲ್ ಶೈಲಿಯಲ್ಲಿಯೇ ಚಿತ್ರಿತವಾಗಿದ್ದರೂ ಸರಳ ಸಂಯೋಜನೆ, ಮಾನವಾಕೃತಿಗಳ ಸಪಾಟು(Flat) ರಚನೆ ಹಾಗೂ ಕಾವ್ಯಮಯ ಗುಣವೈಶಿಷ್ಟ್ಯಗಳು ಹಿಂದೂ ಸಾಹಿತ್ಯ ಇಲ್ಲವೇ ಹಿಂದೂ ಧರ್ಮದಿಂದ ಸ್ಫೂರ್ತಿಗೊಂಡವುಗಳಾಗಿದ್ದವು.

ಪಹಾಡಿ ಕಿರುಚಿತ್ರಗಳು

ಈ ಶೈಲಿಯು ಈ ಹಿಂದೆ ಹೇಳಿದಂತೆ ಪಂಜಾಬಿನ ಗುಡ್ಡಬೆಟ್ಟಗಳ ಪ್ರದೇಶದಲ್ಲಿ ಬೆಳೆದ ಶೈಲಿಯಾಗಿದೆ. ಬಶೋಲಿ, ಜಮ್ಮು, ನೂರಪುರ, ಕಾಂಗ್ರಾ, ಗುಳೇದ ಮತ್ತು

ಚಂಬಾ ಮುಂತಾದ ಸಂಸ್ಥಾನಗಳು ಈ ಶೈಲಿಯ ಪ್ರಮುಖ ಕೇಂದ್ರಗಳಾಗಿದ್ದವು. ಇಲ್ಲಿನ ಕಲಾವಿದರು ಆರಿಸಿಕೊಂಡ ವಸ್ತು ಪ್ರಾಮುಖ್ಯವಾಗಿ "ಪ್ರೇಮ"ವಾಗಿತ್ತು. ಈ ಪ್ರೇಮ ಸಂಕೇತವಾಗಿ ರಾಧೆ-ಮತ್ತು ಕೃಷ್ಣರನ್ನು ಪ್ರೇಮಿ-ಪ್ರೇಯಸಿಯರಂತೆ ಚಿತ್ರಿಸಲಾಗಿದೆ. ಪ್ರಣಯ ಸಂಕೇತಗಳಾಗಿ ಕಮಲ, ಕೃಷ್ಣಮೃಗ, ನವಿಲು, ಗರುಡಪಕ್ಷಿ, ಮೋಡಗಳು ಮತ್ತು ಜೋಡಿಕಂಭಗಳನ್ನು ಬಳಸಲಾಗಿದೆ.

ಬಶೋಲಿ ಕಿರುಚಿತ್ರಗಳು ಮೊಗಲ್ ಮತ್ತು ರಾಜಸ್ಥಾನೀ ಪ್ರಭಾವಗಳಿಂದಲೇ ಚಿತ್ರಿತವಾದವುಗಳಾಗಿದ್ದರೂ ಜಾನಪದ ತಳಹದಿಯ ಮೇಲೆಯೇ ರಚಿಸಿದ ಸ್ವತಂತ್ರ ಕಲಾಕೃತಿಗಳಾಗಿವೆ.ರಾಜಾ ಕೃಪಾಲಪಾಲನ ತಿಳಿಕೆಯ ಕಾಲದಲ್ಲಿ ರಚಿತವಾದ ಭಾನುದತ್ತನ 'ಚಿತ್ತರಸಮಂಜರಿ'ಯ ಹಸ್ತಪ್ರತಿಗಾಗಿ ಸುಪ್ರಸಿದ್ಧ ಕಲಾವಿದನಾದ ದೇವಿದಾಸ್ ಎಂಬ ಚಿತ್ರಕಾರನು ಚಿತ್ರಿಸಿದ ಕಿರುಚಿತ್ರವೊಂದು ಬಶೋಲಿ ಶೈಲಿಯ ಮೊಟ್ಟ ಮೊದಲ ಕೃತಿಯಾಗಿದೆ. ಕ್ರಿ.ಶ.೧೬೯೪ರಲ್ಲಿ ಪೂರ್ಣಗೊಂಡ ಈ ಹಸ್ತಪ್ರತಿಯ ಸಂದರ್ಭ ಚಿತ್ರಗಳನ್ನು ನೋಡಿದಾಗ ಕಲಾವಿದನು ಸಂಪೂರ್ಣವಾಗಿ ತನ್ನ ಪ್ರಾಂತದ ನೈಸರ್ಗಿಕ ಸೌಂದರ್ಯದ ಪ್ರಯೋಜನವನ್ನು ಪಡೆದುಕೊಂಡಿರುವದು ಸ್ಪಷ್ಟವಾಗಿ ಗೋಚರಿಸುತ್ತದೆ. ಮೊಗಲ್ ಚಕ್ರವರ್ತಿ ಔರಂಗಜೇಬನು ಚಿತ್ರಕಲೆಯ ಬಗ್ಗೆ ಅಸಡ್ಡೆಯನ್ನು ತೋರಿಸಿದ್ದರಿಂದ ಅನೇಕ ಮೊಗಲ್ ಚಿತ್ರಕಾರರು ಬಶೋಲಿಯಲ್ಲಿ ಆಶ್ರಯ ಪಡೆಯದ ಕಾರಣವಾಗಿ ಬಶೋಲಿ ಶೈಲಿಯು ಮೊಗಲ್ ಮತ್ತು ರಾಜಸ್ಥಾನಿ ಕಲಾ ಪರಂಪರೆಗಳ ಸಂಗಮವಾಗಿ ಏಕೀಕೃತ ದೇಶೀಯ ಕಲೆಯಾಗಿ ಮೂಡಿ ಬಂದಿತು. ಈ ಚಿತ್ರಗಳಲ್ಲಿ ಸಾಮಾನ್ಯವಾಗಿ ಹಳದಿ, ನೀಲಿ, ಕೇಸರಿ ಮತ್ತು ಕೆಂಪು ವರ್ಣಗಳನ್ನೇ ಬಳಸಲಾಗಿದ್ದು ಶ್ರೀಮಂತ ವರ್ಣ ವಿನ್ಯಾಸವುಳ್ಳ ಕಲಾಕೃತಿಗಳಾಗಿ ಕಾಣಿಸುತ್ತವೆ. 'ಮಾಣಕು'ಎಂಬ ಸ್ತ್ರೀ ಕಲಾವಿದೆಯ 'ಗೀತಗೋವಿಂದ'ಕ್ಕಾಗಿ ಚಿತ್ರಿಸಿದ ಚಿತ್ರಗಳು ಬರೋಲಿ ಶೈಲಿಯ ನಿರ್ದಿಷ್ಟ ಬೆಳವಣಿಗೆಯನ್ನು ತೋರಿಸುತ್ತವೆ.. ಬಶೋಲಿ ಶೈಲಿಯು ಅದ್ಭುತ ವರ್ಣಸಂಯೋಜನೆಯು ನೆರೆಯ ಕುಲ ಮತ್ತು ಮಂಡಿ ಸಂಸ್ಥಾನಗಳ ಕಲಾಶೈಲಿಯ ಮೇಲೆ ತನ್ನ ಪ್ರಭಾವವನ್ನು ಬೀರಿದೆ. ಈ ಪೌರಾಣಿಕ. ಪ್ರೇಮ ಕಥಾ ಸನ್ನಿವೇಶಗಳಲ್ಲದೇ ರಾಜಾ ಕೃಪಾಲಚಂದನ ಮತ್ತು ಅನೇಕ ಗುಡ್ಡಗಾಡು ಪ್ರಮುಖರ ಭಾವಚಿತ್ರಗಳನ್ನೂ ಬಶೋಲಿ ಚಿತ್ರಕಾರರು ಚಿತ್ರಿಸುರುವುದು ಕಂಡು ಬರುತ್ತದೆ.

ಕಾಂಗ್ರಾ ಸಂಸ್ಥಾನದ ಕಿರುವರ್ಣಚಿತ್ರಗಳು ಈ ಪಹಾಡಿ ಶೈಲಿಯ ಅಸಾಮಾನ್ಯ ಕಲಾಕೃತಿಗಳಾಗಿದ್ದು ರಾಜಾ ಸಂಸಾರಚಂದನ ಮಹಾ ಪೋಷಣೆಯಲ್ಲಿ ಈ ಶೈಲಿಯು ಪ್ರವರ್ಧಮಾನವಾಗಿ ಬೆಳೆಯಿತು. ಇರಾಣದ ನಾದಿರಶಹನ ದಾಳಿಯಿಂದಾಗಿ ಮೊಗಲ್ ಚಕ್ರಾಧಿಪತ್ಯವು ತತ್ತರಿಸುತ್ತಿದ್ದ ಸಮಯದಲ್ಲಿ ಮೊಗಲ್ ಆಸ್ಥಾನದಲ್ಲಿ ಶಿಕ್ಷಣ ಹೊಂದಿದ ಅನೇಕ ಕಲಾವಿದರು ಗುಡ್ಡಗಾಡಿನ ಈ ಸಂಸ್ಥಾನಗಳಲ್ಲಿ ಬಂದು ನೆಲೆಸಿ ಚೇತೋಹಾರಿಯಾದ, ಆಕರ್ಷಣೀಯವಾದ ಈ ಕಾಂಗ್ರಾ ಶೈಲಿಯ ಕೇಂದ್ರಸ್ಥಾನವಾಯಿತು. ಹೆಣ್ಣಿನ ಸೌಂದರ್ಯವು ಈ ಶೈಲಿಯ ಪ್ರಮುಖಗುಣವಾಗಿದೆ. ಸೌಂದರ್ಯಪೂರ್ಣವಾದ ಚಿತ್ರ ಸಂಯೋಜನೆ, ತೆಳುವರ್ಣಗಳು, ಆರೋಗ್ಯಕರ ವರ್ಣವಿನ್ಯಾಸಗಳಿಂದಲೂ ಅದ್ವಿತೀಯವಾದ ತಾಂತ್ರಿಕ ನೈಪುಣ್ಯತೆಯಿಂದಲೂ ಕಾಂಗ್ರಾ ಕಿರುಚಿತ್ರಗಳು ವರ್ಣಚಿತ್ರಕಲಾ ಪ್ರಪಂಚದಲ್ಲಿ ತನ್ನದೇ ಆದ ಸ್ಥಾನಮಾಗಳನ್ನು ಹೊಂದಿದೆ.

ಇದೇ ಅವಧಿಯಲ್ಲಿ ಜಮ್ಮು ಮತ್ತು ಗುಳೇರ ಸಂಸ್ಥಾನಗಳಲ್ಲಿಯೂ ಮೊಗಲ್ ಲಾವಿದರು ಬಂದು ನೆಲೆಸಿ ಹೊಸ ಸಾಂಪ್ರದಾಯಗಳನ್ನು ಬೆಳೆಸಿದರು. ಜಮ್ಮು ಂಸ್ಥಾನದ ರಾಜಾ ರಣಜಿತದೇವನು ಹೀಗೆ ಗುಳೇಬಂದ ಕಲಾವಿದರಿಗೆ ಆಶ್ರಯವಿತ್ತು ುಹಾಪೋಷಕನಾಗಿ ಹೊಸ ಶೈಲಿಯ ಉತ್ಕರ್ಷಕ್ಕೆ ಕಾರಣಕರ್ತನಾದ ಕೀರ್ತಿಗೆ ಾತ್ರನಾಗಿದ್ದಾನೆ. ರಣಜಿತದೇವನ ತಮ್ಮನಾದ ಬಲವಂತ ದೇವನು ಜಮ್ಮು ಶೈಲಿಯ ತ್ಯುತ್ತಮ ಕಿರುವರ್ಣಚಿತ್ರಗಳ ಸಂಗ್ರಹವೊಂದನ್ನು ನಮಗೆ ಬಳುವಳಿಯಾಗಿ ಬಿಟ್ಟು ೋಗಿದ್ದಾನೆ. ಬಲವಂತದೇವನ ಆಶ್ರಯದಲ್ಲಿದ್ದ ಕಲಾವಿದರಲ್ಲಿ ಜಸರೂಟಿನ ನಸುಖ,ವಜನ ಶಾಹ ಮತ್ತು ಸೀದಿ ಅವರು ಪ್ರಮುಖ ಕಲಾವಿದರಾಗಿದ್ದರು. ವರಲ್ಲಿ ಹೆಚ್ಚಾಗಿ ಭಾವಚಿತ್ರಗಳನ್ನು ಚಿತ್ರಿಸುವ ಕಲಾವಿದರಿದ್ದು ತಮ್ಮ ಪೋಷಕನಾದ ಲವಂತದೇವನು ಅನೇಕ ತೆರನಾದ ಭಾವಚಿತ್ರಗಳನ್ನು ಚಿತ್ರಿಸಿದ್ದಾರೆ. ಈ ಜಮ್ಮು ಲಿಯ ಕಿರುಚಿತ್ರಗಳೂ ಮೊಗಲ್ ಪ್ರಭಾವದಿಂದ ಹೊರತಾಗಿಲ್ಲ.

ಜಮ್ಮು ಸಾಂಪ್ರದಾಯಕ್ಕೆ ಹತ್ತಿರವಾದ ಮತ್ತೊಂದು ಕಲಾಶೈಲಿಯು ಗುಳೇರ ಂಸ್ಥಾನದಲ್ಲಿ ಬೆಳೆದು ಬಂದಿತು. ರಾಜಾ ಗೋವರ್ಧನ ಚಂದನು ಈ ಶೈಲಿಯ ಾಹಾಪೋಷಕನಾಗಿದ್ದನು.ಈ ಶೈಲಿಯ ಕಿರು ಚಿತ್ರಗಳು ಹೆಚ್ಚಾಗಿ ಕೃಷ್ಣಚರಿತ್ರೆಗೆ ಂಬಧಪಟ್ಟ ಕಥಾಚಿತ್ರಗಳಾಗಿರುತ್ತವೆ.

ಹಿಂದೆ ಮೊಗಲ್ ಚಕ್ರವರ್ತಿಯಾದ ಶಹಾಜಹಾನನ ಆಸ್ಥಾನ ಕಲಾವಿದರಾಗಿದ್ದ ಮದಾಸ ಮತ್ತು ಅವನ ಮಗನಾದ ಹರದಾಸ ಎಂಬ ಕಲಾವಿದರು ಗರವಾಲ ುವರ್ಣಚಿತ್ರಕಲಾ ಶೈಲಿಯ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ. ಈ ಇಬ್ಬರೂ ಾವಿದರೂ ಗರವಾಲ ಸಂಸ್ಥಾನದ ರಾಜಾ ಪ್ರಿಥಿಪಾಲಶಾಹನ ರಾಜಧಾನಿಯಾದ ನಗರಕ್ಕೆ ಬಂದು ಆಸ್ಥಾನ ಕಲಾವಿದರಾಗಿ ನೆಲೆಸಿದ್ದರು. ರಾಜಾ ಪ್ರಿಥಿಪಾಲನ ತರದ ಅರಸರಾದ ರಾಜಾ ಮೋಲಾರಾಮ ಮತ್ತು ಅವನ ಮಕ್ಕಳಾದ ಲಾರಾಮ ಹಾಗೂ ಶಿಬರಾಮ ಅವರ ಕಾಲಕ್ಕೆ ಗರವಾಲ ಕಿರುಚಿತ್ರ ಕಲಾಶೈಲಿಯು ಹೋನ್ನತ ಶಿಖರಕ್ಕೇರಿತ್ತು. ಮೋಲಾರಾಮನು ಈ ಶೈಲಿಗೆ ಹೆಚ್ಚು ಪ್ರೋತ್ಸಾಹ ಿದ ಅರಸನಾಗಿದ್ದನು. ಗರವಾಲ ಶೈಲಿಯ ಅನೇಕ ಅತ್ಯುತ್ತಮ ವರ್ಣಚಿತ್ರಗಳು ಕರ್ಷಕವಾಗಿ ಇಂದಿಗೂ ಉಳಿದಿವೆ.


ಲ್ತಾನಿ ಕಿರುವರ್ಣ ಚಿತ್ರಗಳು-

ಹಿಂದಿನ ಮುಸಲ್ಮಾನ ಅರಸರ ಅಭಿರುಚಿಯು ವಾಸ್ತುಶಿಲ್ಪಕಲೆಗೆ ಸೀಮಿತವಾಗಿದ್ದರಿಂದ ರ ಆಳಿಕೆಯ ಕಾಲದಲ್ಲಿ ಭವ್ಯವಾದ ಸ್ಮಾರಕಗಳ ರಚನೆ ಮಾತ್ರವಾಗಿರುವುದು ಕಂಡು ುತ್ತದೆ. ಆದರೂ ದೆಹಲಿಸುಲ್ತಾನರ ಕಾಲದ ಅಮೀರ್ ಖುಸ್ರು ದಿಹಲವಿಯ ಮೇಶ್'ನಂಥ ಐತಿಹಾಸಿಕ ಕಾವ್ಯಗಳ ಮತ್ತು ಫಿರ್ದೌಸಿಯ ಕಾವ್ಯಗಳ ಹಸ್ತ ಗಳಲ್ಲಿ ಚಿತ್ರಿತವಾದ ಕೆಲವು ಸಂದರ್ಭಚಿತ್ರಗಳು ಕಂಡು ಬಂದಿವೆ. ಈ ಸಾಂದರ್ಭಿಕ ಚಿತ್ರಗಳು ಸರಳವಾದ ಚಿತ್ರ ಸಂಯೋಜನೆ ದಟ್ಟವಾದ ಹಾಗೂ ಆಕರ್ಷಣೀಯವಾದ ್ಣಸಂಯೋಜನೆಗಳಿಂದ ಕೂಡಿದವುಗಳಾಗಿವೆ. ಅಲ್ಲದೆ ವಿದೇಶಿ ಚೌಕಟ್ಟಿನಲ್ಲಿ

ಚಿತ್ರಿತವಾದ ಈ ಚಿತ್ರಗಳನ್ನು ಭಾರತೀಯ ವಿಧಾನಗಳಲ್ಲಿ ಪುನರ್ನಿರ್ಮಿಸಿದಂತೆ ಕಾಣುತ್ತದೆ. ಬಿಕಾನೇರ, ಔನಪುರ, ಅಹಮದನಗರ, ಪಾಟ್ನಾ ಮುಂತಾದ ಪ್ರಾಂತೀಯ ಸುಲ್ತಾನರ ಕಾಲದಲ್ಲಿ ರಚಿಸಲ್ಪಟ್ಟ ಅನೇಕ ಕಿರುಚಿತ್ರಗಳು ಉಲ್ಲೇಖನೀಯವಾಗಿವೆ. ಜೌನಪುರದ ಹುಶೇನ್ ಶಾರ್ಕಿಯ ಕಾಲದಲ್ಲಿ 'ಅವದಿ ಹಿಂದಿ'ಯಲ್ಲಿ ರಚಿತವಾದ ತಾರಚಂದಾ ಎಂಬ ಹಸ್ತಪ್ರತಿಯೊಂದು ಪೂರ್ಣಗೊಂಡಿತು. ಈ ಹಸ್ತಪ್ರತಿಗಾಗಿ ಚಿತ್ರಿಸಿದ ಸಂದರ್ಭ ಚಿತ್ರಗಳು ಪರ್ಷಿಯನ್ ಮತ್ತು ರಾಜಸ್ತಾನೀ ಕಲೆಯ ಪ್ರಭಾವ ದಿಂದ ಚಿತ್ರಿಸಿದವುಗಳಾಗಿವೆ. ಬಿಕಾನೇರದ ಸುಲ್ತಾನ್ ಫಿರೂಜಶಾಹನ ಭಾವಚಿತ್ರ, ವಿಜಯನಗರ ಮತ್ತು ಟರ್ಕಿಕಲಾಶೈಲಿಯಲ್ಲಿ ಚಿತ್ರಿಸಲ್ಪಟ್ಟ ರಾಗಮಾಲಾ ಕಿರುಚಿತ್ರಗಳು, ಅಹಮದ ನಗರದ ತಾರೀಫ್-ಇ-ಹುಶೇನ್ ಶಾಹಿ ಹಸ್ತಪ್ರತಿಯ ಕಿರುಚಿತ್ರಗಳು, ಪರ್ಷಿಯನ್ ಮತ್ತು ಹಿಂದೀ ಕಲಾಶೈಲಿಯಲ್ಲಿ ಚಿತ್ರಿಸಲಾದ ಕುಮಟಗಿಯ ಭಿತ್ತಿಚಿತ್ರಗಳು, ತೈಮೂರೀ ಮತ್ತು ಪರ್ಷಿಯನ್ ಕಲಾಶೈಲಿಯಲ್ಲಿ ಚಿತ್ರಿತವಾದ ಪಾಟ್ನಾದ 'ಹಾತಿಫಿ' ಹಸ್ತಪ್ರತಿಯ ಕಿರುಚಿತ್ರಗಳು ಈ ಕಾಲದ ಅತ್ಯುತ್ತಮ ಕಲಾಕೃತಿಗಳೆಂದು ಖ್ಯಾತಿಪಡೆದಿವೆ.

ಮೊಗಲ್ ಕಿರುವರ್ಣ ಚಿತ್ರಗಳು-

ಹದಿನಾರನೆಯ ಶತಮಾನದಿಂದ ಪ್ರವರ್ಧಮಾನರಾಗಿ ಬೆಳೆದ ಮೊಗಲ್ ಚಕ್ರವರ್ತಿಗಳು ವರ್ಣಚಿತ್ರಕಲೆಯ ಮಹಾಪೋಷಕರಾಗಿದ್ದರು. ಮಂಗೋಲಿಯನ್ ಮತ್ತು



೯) ಮೊಗಲ್ ಚಿತ್ರಕಲೆ

ರ್ಷಿಯನ್ ಕಲಾಶೈಲಿಗಳ ಸಂಗಮವೇ ಮೊಗಲ್ ಶೈಲಿಯಾಗಿದೆ. ಕ್ರಿ.ಶ.೧೫೨೬ರಲ್ಲಿ ೊಗಲ್ ಚಕ್ರಾಧಿಪತ್ಯಕ್ಕೆ ಅಡಿಗಲ್ಲು ಹಾಕಿದ ಬಾಬರನು ವರ್ಣಚಿತ್ರಕಲೆಯ ್ರೇಮಿಯಾಗಿದ್ದನು. "ರಾಜ್ಯಸ್ಥಾಪನೆಯು ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವ ೂರ್ಣವಾದದ್ದು ಕಲಾಸಂಸ್ಕೃತಿಯ ಸ್ಥಾಪನೆಯು ಕೂಡ"-ಎಂದು ತಿಳಿದವನು ಬಾಬರ್, ಹಜದ್ ಎಂಬ ವಿಶ್ವಮಾನ್ಯ ಕಲಾವಿದನಿಂದ ಪರ್ಷಿಯದಲ್ಲಿ ಬೆಳೆದ ವರ್ಣಚಿತ್ರಕಲಾ ರಂಪರೆಯನ್ನೇ ಮೊಗಲರು ಭಾರತಕ್ಕೆ ತಂದರೆಂದು ಹೇಳಬಹುದು. ಪರ್ಷಿಯನ್ ಲೆಯು ಬಹುವಾಗಿ ಮಂಗೋಲಿಯನ್ ಪ್ರಭಾವಕ್ಕೊಳಗಾಗಿತ್ತು. ಮಧ್ಯ ಏಷ್ಯ ಮತ್ತು ರ್ಷಿಯ ಎರಡೂ ಸಾಪ್ರದಾಯಗಳನ್ನು ಒಂದುಗೂಡಿಸಿ ಹೊಸರೂಪವನ್ನು ಕೊಟ್ಟವನು ಹಜದ್, ಬಿಹಜದ್‌ನ ಶಿಷ್ಯರೇ ಈ ಹೊಸ ಸಾಂಪ್ರದಾಯದವನ್ನು ಭಾರತಕ್ಕೆ ಂದರು. ಬಾಬರನ ದೃಷ್ಟಿಯಲ್ಲಿ ಬಿಹಜದ್‌ನು ಗೌರವಾನ್ವಿತ ಕಲಾವಿದನಾಗಿದ್ದನು.

ಅಫಘಾನದ ಶೇರ್‌ಷಹನ ದಾಳಿಯಿಂದಾಗಿ ರಾಜ್ಯಕೋಶಗಳನ್ನು ಕಳೆದುಕೊಂಡ ುಮಾಯೂನನು ಪರ್ಷಿಯದ ತಹಮಾಸ್ಪನ ಆಶ್ರಯದಲ್ಲಿ ಕೆಲಕಾಲವಿದ್ದಾಗ ಪರ್ಷಿಯದ ನೇಕ ಕಾಲವಿದರನ್ನು ಕಂಡಿದ್ದನು. ತನ್ನ ಸಹೋದರ ಕಾಮರಾನನಿಂದ ಕಾಬೂಲನ್ನು ುರಳಿ ಪಡೆದ ನಂತರ ಪರ್ಷಿಯದ ಕಲಾವಿದರಲ್ಲಿ ಶ್ರೇಷ್ಠರೆನಿಸಿದ ತೆಬ್ರೀಜಿನ ಮೀರ್ ಯ್ಯದ ಆಲಿ ಮತ್ತು ಷಿರಾಝಿನ ಖ್ವಾಜಾ ಅಬ್ದ್-ಅಸ್-ಸಮದ್ ಎಂಬ ಇಬ್ಬರು ಾವಿದರನ್ನು ತನ್ನ ಆಸ್ಥಾನಕ್ಕೆ ಕರೆ ತಂದನು. ಈ ಇಬ್ಬರೂ ಸಫಾವಿಸ್ ಕಲಾವಿದರು ಹಜದ್‌ನ ಶಿಷ್ಯರಾಗಿದ್ದರು. ಹುಮಾಯಾನನು ಈ ಇಬ್ಬರೂ ಕಲಾವಿದರನ್ನು ದಸ್ತಾನ್-ಇ-ಅಮೀರ್ ಹಮಝಾ" ಎಂಬ ಸುಪ್ರಸಿದ್ಧವಾದ ಹಸ್ತಪ್ರತಿಗೆ ಸಂದರ್ಭಚಿತ್ರಗಳನ್ನು ಯಲು ತೊಡಗಿಸಿದನು. ಆದರೆ ಈ ಪುಸ್ತಕದ ಕೆಲಸವು ಹೂಮಾಯೂನನ ಆಳಿಕೆಯ ಅವಧಿಯಲ್ಲಿ ಮುಗಿಯದೇ ಅಕಬರನ ಕಾಲಕ್ಕೂ ಮುಂದುವರಿಯಿತು.

ಹುಮಾಯೂನನ ಮಗನಾದ ಅಕಬರನು ಮೀರ್‌ಸಯ್ಯದ ಆಲಿ ಮತ್ತು ಬ್ದ್-ಅಸ್-ಸಮದ್ ಇಬ್ಬರ ಮಾರ್ಗದರ್ಶನದಲ್ಲಿ ಚಿತ್ರಕಲೆಯನ್ನು ಅಭ್ಯಾಸಮಾಡಿದ್ದನು. ದೆಯಿಂದ ಪ್ರಾರಂಭವಾದ 'ಹಮಝಾನಾಮಾ" ಪುಸ್ತಕದ ಕೆಲಸವನ್ನು ಅಕಬರನು ದು ಬೃಹದ್ಯೋಜನೆಯನ್ನಾಗಿ ಮಾಡಿದನು. ಇದಕ್ಕಾಗಿ ನೂರಾಎಪ್ಪತ್ತಕ್ಕೂ ಹೆಚ್ಚು ರ್ಣಚಿತ್ರ ಕಲಾವಿದರನ್ನು ನಿಯಮಿಸಿ ಇಬ್ಬರೂ ಪರ್ಷಿಯನ್ ಕಲಾವಿದರ ಾರ್ಗದರ್ಶನದಲ್ಲಿ ಸಂದರ್ಭಚಿತ್ರಗಳು ನಿರ್ಮಾಣಗೊಳ್ಳುವಂತೆ ವ್ಯವಸ್ಥೆ ಮಾಡಿದನು. ಿ ನಿಯಮಿತರಾದ ಚಿತ್ರಕಲಾವಿದರಲ್ಲಿ ಅನೇಕರು ಭಾರತದ ವಿವಿಧ ಭಾಗಗಳ ಳೀಯ ಹಿಂದೂ ಕಲಾವಿದರೇ ಆಗಿದ್ದರು. ಈ ಪರಿಣಾಮವಾಗಿ ಪರ್ಷಿಯನ್ ುತ್ತು ಭಾರತೀಯ ತಂತ್ರಗಳು ಒಂದು ಗೂಡಿದ ಹೊಸ ಶೈಲಿಯೊಂದರ ಮವಾಯಿತು. ಈ ಹಸ್ತಪ್ರತಿಯನ್ನು ಸಂದರ್ಭಚಿತ್ರಗಳೊಂದಿಗೆ ಪೂರ್ಣಗೊಳಿಸಲು . ೧೫೬೭ರಿಂದ ೧೫೮೨ರವರೆಗೆ ಸುಮಾರು ಹದಿನೈದು ವರುಷಗಳು ಬೇಕಾಯಿತು. ಹಸ್ತಪ್ರತಿಯಲ್ಲಿ ಬಟ್ಟೆಗಳ ಮೇಲೆ ಚಿತ್ರಿಸಿದ ಸುಮಾರು ೧೪೦೦ ಸಾಂದರ್ಭಿಕ ರ್ಣಚಿತ್ರಗಳಿದ್ದು ಪ್ರತಿಯೊಂದು ಚಿತ್ರವೂ ೨೭"x೨೦"ಅಳತೆಯಲ್ಲಿ ಚಿತ್ರಿಸಲ್ಪಟ್ಟಿರುತ್ತವೆ.

ಇದಲ್ಲದೆ ಅಕಬರನ ಆಳ್ವಿಕೆಯ ಕಾಲದಲ್ಲಿ ಪರ್ಷಿಯನ್ ಭಾಷೆಗೆ ತರ್ಜುಮೆಗೊಳಿಸಿದ ಹಿಂದೂ ಪುರಾಣಗಳ ಹಸ್ತಪ್ರತಿಗಳಲ್ಲಿಯೂ ಪರ್ಷಿಯ ಶಾಸ್ತ್ರೀಯ ಕಾವ್ಯಗಳ ಹಸ್ತ ಪ್ರತಿಗಳಲ್ಲಿಯೂ ಅನೇಕ ಸಂದರ್ಭಚಿತ್ರಗಳು ಚಿತ್ರಿಸಲ್ಪಟ್ಟವು. ಎಲ್ಲಕ್ಕೂ ಹೆಚ್ಚಾಗಿ ಅಕಬರನ ಕಾರ್ಯಾಲಯಕ್ಕೆ ಸಂಬಂಧಪಟ್ಟ ಚಿತ್ರಗಳು ಮತ್ತು ಅವನ ಪೂರ್ವಜರಾದ ತೈಮೂರೀಗಳ ಜೀವನಕ್ಕೆ ಸಂಬಂಧಿಸಿದ ಚಿತ್ರಗಳು ಮುಂತಾದ ಕಲಾಕೃತಿಗಳ ರಚನೆಗೆ ಅಕಬರ ಮಹಾಶಯನು ಅದ್ವಿತೀಯವಾದ ಆಶ್ರಯ ಹಾಗೂ ಪೋಷಣೆಗಳನ್ನು ನೀಡಿದನು. "ದಟ್ಟಣೆಯಿಂದ ಕೂಡಿದ ದರಬಾರಿನ ದೃಶ್ಯಗಳು", "ಯುದ್ಧ ಇಲ್ಲವೆ ಬೇಟೆಯ ಶಿಬಿರಗಳು" ಮುಂತಾದ ಕಿರುಚಿತ್ರಗಳು "ಅಕಬರನಾಮಾ" ಎಂಬ ಹಸ್ತಪ್ರತಿಯಲ್ಲಿದ್ದು "ಪ್ರೌಢ ಅಕಬರೀ ಶೈಲಿ" ಎಂದೇ ಗುರುತಿಸಲ್ಪಡುತ್ತದೆ. ದೈವದತ್ತ ಕಲೆಯನ್ನು ಮೈಗೂಡಿಸಿಕೊಂಡಿದ್ದ ಅಕಬರ ಆಸ್ಥಾನ ಕಲಾವಿದರಲ್ಲಿ ದಸವಂತ್ ಮತ್ತು ಬಸವಾನ್ ಎಂಬಿಬ್ಬರು ಕಲಾವಿದರು ಶ್ರೇಷ್ಠರಲ್ಲಿ ಶ್ರೇಷ್ಠರೆನಿಸಿದ್ದರು. ಯುರೋಪಿಯನ್ ಮಾದರಿಯ ತಂತ್ರವನ್ನು ಬಳಸುವದರಲ್ಲಿ .ಸವಾಬನು ಅದ್ವೀತಿಯವಾದ ನೈಪುಣ್ಯತೆಯನ್ನು ಸಾಧಿಸಿದ್ದನು ಅಕಬರನು ಭಾರತೀಯ ಹಾಗೂ ಇಸ್ಲಾಮಿಕ್ ಸಾಂಪ್ರದಾಯಗಳೆರಡನ್ನೂ ಪ್ರೋತ್ಸಾಹಿಸಿದನಲ್ಲದೇ ಭಾವಚಿತ್ರ(Portraits)ಗಳ ರಚನೆಗೂ ಹೆಚ್ಚು ಮಹತ್ವವನ್ನು ಕೊಟ್ಟಿದ್ದನು. ದಸವಂತ್ ಮತ್ತು ಬಸವಾನರಲ್ಲದೇ ಕೇಶವ, ಲಾಲ್, ಮುಕುಂದ್, ಮುಷ್ಕಿನ್, ಮಧು, ಜಗನ್, ಮಹೇಶ್, ಖೈಮಕರನ್, ತಾರಾ, ಸಾನವಾಲಾ, ಹರಬನ್ಸ್ ಮತ್ತು ರಾಮ ಮುಂತಾದ ಪ್ರಭುಗಳು ಅಕಬರನ ಆಸ್ಥಾನವನ್ನು ಅಲಂಕರಿಸಿದ್ದರು. ಪರ್ಷಿಯನ್ ತಂತ್ರನೈಪುಣ್ಯತೆಯನ್ನು ಗಳಿಸಿದ ಅನೇಕ ಹಿಂದೂ ಕಲಾವಿದರಿಂದ ಬಸವಾನ, ಲಾಲ್, ಭೀಮ, ಧರ್ಮದಾಸ, ಮಧು ಮತ್ತು ಸೂರದಾಸ್ ಗುಜರಾತಿ, ಮುಂತಾದ ಮಹಾನ್ ಕಲಾವಿದರಿಂದ ಚಂಗೆಸಖಾನನ ವಂಶಾವಳಿಯ ಚರಿತ್ರೆಯನ್ನು ಹೇಳುವ "ಜಾಮಿ-ಅಲ್-ತವಾರಿಖ" ಹಸ್ತಪ್ರತಿಯಲ್ಲಿ ಸಾಂದರ್ಭಿಕ ಕಿರುವರ್ಣ ಚಿತ್ರಗಳನ್ನು ಬರೆಯಿಸಲಾಯಿತು. ಅದರಂತೆ ಬಸವಾನ, ಮನೋಹರ ಧರ್ಮದಾಸ ಮತ್ತು ನರಸಿಂಹ ಮುಂತಾದ ಕಲಾವಿದರು ಅಮೀರ ಖುಸ್ರುವಿ ಕಾವ್ಯಗಳಿಗೆ ಸಂದರ್ಭಚಿತ್ರಗಳನ್ನು ಬರೆದರು. ಅಲ್ಲದೆ ಸಂಸ್ಕೃತ ಭಾಷೆಯಿಂದ ಪರ್ಷಿಯನ್ ಭಾಷೆಗೆ ಭಾಷಾಂತರಿಸಲ್ಪಟ್ಟ ಮಹಾಭಾರತ; ಯೋಗವಾಶಿಷ್ಠ ಮತ್ತು ರಾಮಾಯಣ ಮುಂತಾದ ಹಸ್ತಪ್ರತಿಗಳಿಗೂ "ರಝ್ಮನಾಮ" ಎಂಬ ಹಸ್ತಪ್ರತಿಗು ಹಿಂದೂ ಕಲಾವಿದರೇ ಸಂದರ್ಭಚಿತ್ರಗಳನ್ನು ಚಿತ್ರಿಸಿದರು.

ಜಹಾಂಗೀರನ ಕಾಲದಲ್ಲಿ (೧೬೦೫-೧೬೨೭)ಭಾವಚಿತ್ರಕಲೆ ಮತ್ತು ದರಬಾರಿ ದೃಶ್ಯಗಳ ಚಿತ್ರಕಲೆಯು ಕ್ರಾಂತಿಕಾರಕವಾದ ಬೆಳವಣಿಗೆಯನ್ನು ಹೊಂದಿತು. ಅಕಬರ ಕಾಲದಲ್ಲಿದ್ದ ಕಲಾವಿದರ ಸಂಖ್ಯೆಯನ್ನು ಜಹಾಂಗೀರನು ಕಡಿಮೆಗೊಳಿಸಿ ಶ್ರೇಷ್ಠರೆನಿಸಿ ಕೆಲವೇ ಕೆಲವು ಕಲಾವಿದರನ್ನು ಉಳಿಸಿಕೊಂಡನು. ನಕಲು ಚಿತ್ರಗಳ ಬದಲಾ ಸ್ವತಂತ್ರವಾದ ಚಿತ್ರಗಳ ರಚನೆಗೆ ಹೆಚ್ಚು ಪ್ರೋತ್ಸಾಹವನ್ನು ನೀಡಿದನು. ಹೆಚ್ಚಿನ ಸಂಖ್ಯೆ ಸಭಾಸದರುಳ್ಳ ದರಬಾರು, ಒಂದೇ ವರ್ಣದ ಹಿನ್ನಲೆಯುಳ್ಳ ಏಕಾಂಗಿ ಇಲ್ಲ

ಂಪಿನಲ್ಲಿರುವ ಸಭಾಸದರು, ದರಬಾರು ಇಲ್ಲವೇ ಶಿಬಿರಗಳಲ್ಲಿ ಜಹಾಂಗೀರನೊಂದಿಗೆ ಾಲುಗೊಂಡ ನೆಚ್ಚಿನ ಚಿತ್ರಕಲಾವಿದರು, ಜಹಾಂಗೀರನ ಭಾವಚಿತ್ರ ಇಲ್ಲವೇ ಅವನ ್ರೀತಿಯ ಪಕ್ಷಿಗಳು, ಪ್ರಾಣಿಗಳು, ಹೂಗಳು ಮುಂತಾದವುಗಳನ್ನು ಚಿತ್ರಿಸಲು ನ್ನದ್ಧರಾದ ಕಲಾವಿದರು ಮುಂತಾದ ಚಿತ್ರಗಳನ್ನು ಕಾಣಬಹುದು."ಯುಗದ ಕೌತುಕ"ನೆಂದೇ ೆಸರುಗಳಿಸಿದ ಮನಸೂರ ಎಂಬ ಕಲಾವಿದನು ಪಕ್ಷಿ ಮತ್ತು ಪ್ರಾಣಿಗಳು ಮುಂತಾದ ಸರ್ಗಿಕ ವಸ್ತುಗಳನ್ನು ಚಿತ್ರಿಸುವುದರಲ್ಲಿ ಅದ್ವಿತೀಯನೆನಿಸಿದ್ದನು. ಅದರಂತೆ ಅಬುಲ್ ಸನ್ ಎಂಬ ಕಲಾವಿದನು ಭಾವಚಿತ್ರ ರಚನೆಯಲ್ಲಿ ಅದ್ವಿತೀಯನಾಗಿದ್ದನಲ್ಲದೇ ಷನದಾಸ ಮತ್ತು ಬಸವಾನನ ಪುತ್ರನಾದ ಮನೋಹರ ಎಂಬ ಚಿತ್ರಕಾರರೂ ೀರಾತ್‌ನ ಅಕಾ ರಝಾ(ಅಬುಲ್ ಹಸನನ ತಂದೆ), ಸಾರಮಾಕಿನ ಮಹಮ್ಮದ ಾದಿರ ಮುಂತಾದ ಅಸಾಮಾನ್ಯ ಕಲಾವಿದರು ಜಹಾಂಗೀರನ ಆಸ್ಥಾನದಲ್ಲಿದ್ದರು.

ರತ್ನಾಭರಣಗಳನ್ನೂ ಸ್ಮಾರಕಗಳ ವಾಸ್ತುಶಿಲ್ಪಕಲೆಯನ್ನೂ ಹೆಚ್ಚಾಗಿ ಪ್ರೀತಿಸುತ್ತಿದ್ದ ಹಾಜಹಾನನ ಕಾಲದಲ್ಲಿ (೧೬೨೭-೧೬೫೮)ಮೊಗಲ್ ಕಲಾಶೈಲಿಯ ಕಲಾಕೃತಿಗಳು ಸಾಧಾರಣವಾಗಿ ಚಿತ್ರಿಸಲ್ಪಟ್ಟವು. ಜಹಾಂಗೀರನ ಆಸ್ಥಾನದಲ್ಲಿದ್ದ ಅನೇಕ ಸುಪ್ರಸಿದ್ಧ ಲಾವಿದರು ಜಹಾಂಗೀರನ ಉತ್ತರಾಧಿಕಾರಿಯಾದ ಶಹಾಜಹಾನನ ಆಸ್ಥಾನ ಕಲಾವಿದರಾಗಿ ೀವೆ ಸಲ್ಲಿಸುತ್ತಿದ್ದರು. ಈ ಕಲಾವಿದರ ತಾಂತ್ರಿಕ ನೈಪುಣ್ಯತೆಯಲ್ಲಿ ನಿರ್ದಿಷ್ಟವಾದ ಂಧಾರಣೆಯಾಗಿತ್ತು. ಗೋವರ್ಧನ್, ಮಹಮ್ಮದ ನಾದಿರ್, ಹೂನಹಾರ್, ಬಾಲಚಂದ, ನೂಪ ಚತುರ್, ಬಿಚಿತ್ರ್, ಮತ್ತು ಚೀತರಮಾನ್ ಮುಂತಾದವರು ಶಹಾಜಹಾನನ ಸ್ಥಾನದ ಸುಪ್ರಸಿದ್ಧ ಕಲಾವಿದರಾಗಿದ್ದರು "ಭಾವಚಿತ್ರ" ಚಿತ್ರಣವು ಜನಪ್ರಿಯವಾಗಿತ್ತು ಪಾದಶಾಹಾನಾಮಾ" ಎಂಬ ಹಸ್ತಪ್ರತಿಯಲ್ಲಿನ ಸಂದರ್ಭಚಿತ್ರಗಳೂ ಭೇಟಿಯಲ್ಲಿ ರತನಾದ ಜಹಾಂಗೀರ್, ದರಬಾರಿನಲ್ಲಿ ಸಭಾಸದರು ಮುಂತಾದ ದೃಶ್ಯಗಳ ತ್ರಗಳೂ ಮನಮೋಹಕವಾಗಿ ಚಿತ್ರಿತವಾಗಿವೆ.

ಮುಂದೆ ಔರಂಗಜೇಬನ ಆಳ್ವಿಕೆಯ ಪ್ರಾರಂಭದವರೆಗೂ ಅನ್ಯಾದೃಶವಾಗಿ ಬೆಳೆದು ಂದ ಮೊಗಲ್ ಕಲಾ ಸಾಂಪ್ರದಾಯವು ಔರಂಗಜೇಬನು ಈ ವರ್ಣಚಿತ್ರಕಲೆಯನ್ನು ರ್ಲಕ್ಷಿಸಿದ್ದರಿಂದಲೂ, ಪ್ರೋತ್ಸಾಹಿಸದೇ ಇದ್ದುದರಿಂದಲೂ ಕುಂಠಿತಗೊಳ್ಳುತ್ತ ಹೋಯಿತು. ುಹಮ್ಮದ ಶಹನ ಕಾಲದ (೧೭೧೯-೧೭೪೮) ಕೆಲವು ಕಿರುಚಿತ್ರಗಳು ಮಾತ್ರ ನಾಕರ್ಷಕವಾಗಿ ಚಿತ್ರಿಸಲ್ಪಟ್ಟವೆ. ಮೊಗಲ್ ಕಲಾಸಾಂಪ್ರದಾಯವು ಹೀಗೆ ಕುಂಟುತ್ತ ಂಟುತ್ತ ಶಹಾ ಆಲಮ್‌ನ ಕಾಲದವರೆಗೂ (೧೭೫೯-೧೮೦೬) ನಡೆಯಿತು. ಾವಿದರು ಕೆಲವು ಭಾವಚಿತ್ರಗಳನ್ನು ರಚಿಸಿದರಾದರೂ ಹಿಂದಿನ ಕಿರುಚಿತ್ರಗಳ ನಕಲು ಾಡಿದಂತಿದ್ದು ನಿರ್ಜೀವ ಚಿತ್ರಗಳಾಗಿ ರೂಪುಗೊಂಡವು. ಮುಂದೆ ಈ ಮಹಾನ್ ಿಯು ಬಾಜಾರೀ ಚಿತ್ರಕಲೆಯಾಗಿ ಉಳಿದದ್ದು ಐತಿಹಾಸಿಕ ವಿಪರ್ಯಾಸವೇ ಸರಿ.

ಕ್ಷಿಣೀ ಕಿರುಚಿತ್ರಗಳು–

ಮೊಗಲ್ ಕಲಾ ಶೈಲಿಯಂತೆಯೇ ಗೋಚರಿಸುವ ಅಷ್ಟೇ ಪ್ರಭಾವ ಶಾಲಿಯಾದ ರ್ಣಚಿತ್ರಕಲಾ ಶೈಲಿಯೊಂದು ಮೊಗಲರ ಆಳಿಕೆಯ ಪ್ರಾರಂಭದ ಕಾಲದಲ್ಲಿಯೇ ದಕ್ಷಿಣ ರತದ ಮುಸಲ್ಮಾನರ ಆಶ್ರಯದಲ್ಲಿ ಬೆಳವಣಿಗೆಯನ್ನು ಹೊಂದುತ್ತ ಬಂದಿತ್ತು. ಈ ದಕ್ಷಿಣ

ಭಾರತದ ಸುಲ್ತಾನರ ವರ್ಣಚಿತ್ರ ಕಲಾಶೈಲಿಯು ಪರ್ಷಿಯನ್ ಮತ್ತು ಟರ್ಕಿಷ್ ಮೂಲಗಳ ಸಮಿಶ್ರಣವಾಗಿದೆಯಲ್ಲದೇ ಭಾರತೀಯ ಸ್ಥಾನಿಕ ಪ್ರಭಾವಕ್ಕೊಳಪಟ್ಟುದಾಗಿದೆ.

ಅಹಮದ ನಗರವು ಡೆಕ್ಕನೀ ಶೈಲಿಯ ಪ್ರಥಮ ಕೇಂದ್ರವಾಗಿತ್ತಲ್ಲದೇ ಮೊಗಲರ ರಾಜ್ಯ ವಿಸ್ತಾರದ ಮನೋಭಾವಕ್ಕೆ ಮೊದಲ ತುತ್ತೂ ಆಯಿತು. ಡೆಕ್ಕನೀ ಭಾವಚಿತ್ರಗಳು ಮತ್ತು ಹಸ್ತಪ್ರತಿಗಳ ಸಂದರ್ಭ ಚಿತ್ರಗಳು ಸುಧಾರಿತ ರೇಖಾವಿನ್ಯಾಸ ಹಾಗೂ ನಿರ್ಧಿಷ್ಟ ವರ್ಣವಿನ್ಯಾಸಗಳಿಂದ ಕೂಡಿದವುಗಳಾಗಿವೆ. ಸಂಖ್ಯೆಯಲ್ಲಿ ತೀರ ಕಡಿಮೆಯಾಗಿದ್ದರೂ ಶ್ರೇಷ್ಠ ಗುಣಮಟ್ಟದವುಗಳಾಗಿರುತ್ತವೆ.



೧೦) ಡೆಕ್ಕನೀ ಶೈಲಿ ಬಿಜಾಪುರ

ಬಿಜಾಪುರದ ಸುಲ್ತಾನರ ಆಸ್ಥಾನದಲ್ಲಿ ಅನೇಕ ಪರ್ಷಿಯನ್ ಮತ್ತು ಟರ್ಕಿ ಕಲಾವಿದರು ಸೇವೆ ಸಲ್ಲಿಸುತ್ತಿದ್ದರು. ವಿಜಯನಗರದ ಪತನಾ ನಂತರ ದೇಶೀಯ ಸ್ವತಂತ್ರವಾದ ಶೈಲಿಯ ಉದಯವಾಯಿತು. ೧೬ನೆಯ ಶತಮಾನದಲ್ಲಿ ರಚಿತವಾದ "ನುಜುಮ್-ಆಲ್-ಉಲುಮ್" ಎಂಬ ವಿಶ್ವ ಯುದ್ಧದ ದೃಶ್ಯಗಳನ್ನೂ ಅಹಮದ ನಗರದ ಹುಶೇನ್ ನಿಜಾಮ ಶಾಹಿಗಳ ಭಾವಚಿತ್ರಗಳನ್ನೂ ಒಳಗೊಂಡ "ತಾರೀಫ್-ಇ-ಹುಶೇನ್ ಶಾಹಿ" ಹಸ್ತಪ್ರತಿಯ ಚಿತ್ರಗಳು ಅನ್ಯಾದೃಶವಾಗಿವೆ. ಬಿಜಾಪುರದ ಆಲಿ ಆದಿಲ್‌ಶಹ ಮತ್ತು ಆವನ ಮಗ ಎರಡನೆಯ ಇಬ್ರಾಹಿಮ ಅವರು ಈ ಶೈಲಿಯ ಮಹಾಪೋಷಕರಾಗಿದ್ದರು. ಬಿಜಾಪುರ, ಅಹಮದನಗರ ಮತ್ತು ಗೋಲಕೊಂಡಗಳಿಂದ ರಚಿತವಾಗಿದ್ದ ರಾಗಮಾಲಾ ಚಿತ್ರಗಳು ಡೆಕ್ಕನೀ ಶೈಲಿಯ ಅತ್ಯುತ್ತಮ ಉದಾಹರಣೆಗಳಾಗಿವೆ.

ಜಾಪುರದ ಭಾವಚಿತ್ರಣಗಳ ಶೈಲಿ ಮತ್ತು ಗೋಲಕೊಂಡದ ಅಬ್ದುಲ್ಲಾ ತುಬಶಹ(೧೬೨೬-೭೨) ಮತ್ತು ಅಬುಲ್ ಹಸನ್ ಕುತುಬಶಹರ ಪೋಷಣೆಯಲ್ಲಿ ದೃತವಾದ ಭಾವಚಿತ್ರಣಗಳ ಶೈಲಿಗಳ ಮೇಲೆ ಮೊಗಲ್ ಶೈಲಿಯ ಸೌಮ್ಯತೆಯು ಣಾಮವನ್ನು ಬೀರಿತ್ತು. ಔರಂಗಜೇಬನ ಸೈನ್ಯವು ಸಂಪೂರ್ಣ ಡೆಕ್ಕನ್ ಪ್ರದೇಶವನ್ನು ಕ್ರಮಿಸಿಕೊಂಡಿತಾದರೂ ಡೆಕ್ಕನ್ ವರ್ಣಚಿತ್ರ ಶೈಲಿಯ ಪ್ರವಾಹವು ನಿಲ್ಲಲೇ ಇಲ್ಲ. ಟನೆಯ ಶತಮಾನದಲ್ಲಿ ಹೈದರಾಬಾದವು ಸ್ವತಂತ್ರ ಸಂಸ್ಥಾನವಾಗಿ ರೂಪುಗೊಂಡು ವಚಿತ್ರಣ ಮತ್ತು ರಾಗಮಾಲಾ ಚಿತ್ರಣಗಳ ರಮ್ಯಶೈಲಿಯನ್ನೂ ಕಾಪಾಡಿಕೊಂಡು ದ ಪ್ರಮುಖ ಕೇಂದ್ರಸ್ಥಾನವಾಯಿತು. ಈ ಶೈಲಿಯು ಡೆಕ್ಕನದ ಚಿಕ್ಕ ಪುಟ್ಟ ಸ್ಥಾನಗಳ ಕಲಾಪ್ರಕಾರಗಳ ಮೇಲೂ ಹಾಗೂ ದಕ್ಷಿಣದ ಮರಾಠಾ ಆಡಳಿತಕ್ಕೊಳಪಟ್ಟ ಜಾವೂರು ಕಲಾಪ್ರಕಾರದ ಮೇಲೂ ತನ್ನ ಪ್ರಭಾವವನ್ನು ಬೀರಿತ್ತು.

ಕ್ಷಿಣ ಭಾರತದ ಚಿತ್ರಕಲೆ-

ಕ್ರಿ.ಶ. ಎಂಟನೆಯ ಶತಮಾನಕ್ಕಿಂತಲೂ ಹಳೆಯವಾದ ಅತ್ಯುತ್ತಮ ತರಗತಿಯ ರತೀಯ ಪ್ರಮಾಣ ಭೂತವಾದ ವರ್ಣಚಿತ್ರಗಳು ದಕ್ಷಿಣ ಭಾರತದ ಸಿತ್ತನ್ನವಾಶಲ್ ನಂಥ ನೇಕ ನಿವೇಶನಗಳಲ್ಲಿ ಕಂಡು ಬಂದಿರುತ್ತವೆ. ತಂಜಾವೂರಿನ ಬೃಹದೀಶ್ವರ ದೇವಾಲಯ ತ್ತು ತ್ರಿಪುರಾಂತಕಮ್ ಹಾಗೂ ಪಿಲ್ಲಲಮರಿ ದೇವಾಲಯಗಳ ಮಂಟಪಗಳಲ್ಲಿ ಚಿತ್ರಿತವಾದ ತ್ತಿಚಿತ್ರಗಳು ಸಹ ಇದೇ ಕಾಲಕ್ಕೆ ಸೇರಿದವುಗಳಾಗಿವೆ. ಮಳೆ, ಬಿಸಿಲು, ಗಾಳಿಗಳ ಹೊಡೆತಕ್ಕೆ ಸಿಕದಂತಹ ಏಕಾಂತ ಸ್ಥಳದಲ್ಲಿ ಈ ಭಿತ್ತಿಚಿತ್ರಗಳು ಚಿತ್ರಿಸಲ್ಪಟ್ಟಿರುವದರಿಂದ ಚಿತ್ರಗಳು ಳಾಗದೇ ಈವರೆಗೆ ಉಳಿದುಕೊಂಡು ಬಂದಿವೆ. ಒಂಭತ್ತನೆಯ ಶತಮಾನದಿಂದ ದಿಮೂರನೆಯ ಶತಮಾನದವರೆಗೆ ಆಳುತ್ತಿದ್ದ ಚೋಳ ಅರಸರ ಕಾಲದಲ್ಲಿ ಚಿತ್ರಿತವಾದ ಜಾವೂರಿನ ಭಿತ್ತಿಚಿತ್ರಗಳು ಅನ್ಯಾದೃಶವಾಗಿವೆ ಸಂಪೂರ್ಣ ಒಳಮಾಳಿಗೆ ಹಾಗೂ ಡೆಗಳು ಅಸಂಖ್ಯಾತ ಚಿತ್ರಗಳಿಂದ ಅಲಂಕರಿಸಲ್ಪಟ್ಟಿವೆ. ಹನ್ನೊಂದರಿಂದ ಹದಿಮೂರನೆಯ ತಮಾನಗಳಲ್ಲಿ ಚಿತ್ರಿಸಲ್ಪಟ್ಟ ತ್ರಿಪುರಾಂತಕಮ್ ಮತ್ತು ಪಿಲ್ಲಲಮರಿಗಳ ಚಿತ್ರಗಳು ರಂಗಲ್ಲಿನ ಕಾಕತೀಯ ಅರಸರಿಂದ ಚಿತ್ರಿಸಲ್ಪಟ್ಟವುಗಳಾಗಿವೆ. ಈ ವರ್ಣಚಿತ್ರಗಳು ಕೆಲವು ೊಸ ಗುಣ ವೈಶಿಷ್ಟಗಳಿಂದ ಚಿತ್ರಿತವಾದ ಪ್ರಾಚೀನ ಭಾರತೀಯ ಶೈಲಿಯಲ್ಲಿಯೇ ಇದ್ದರೂ ಶ್ಚಿಮ ಭಾರತೀಯ ಚಿತ್ರಗಳಂತೆ ಕಾಣಸುತ್ತವೆ.

ಹದಿನಾಲ್ಕನೆಯ ಶತಮಾನದಿಂದ ಹದಿನೇಳನೆಯ ಶತಮಾನದ ಅವಧಿಯಲ್ಲಿ ತ್ರಿತವಾದ ವಿಜಯನಗರ ವರ್ಣಚಿತ್ರಕಲಾ ಶೈಲಿಯು ಚೋಳ ಮತ್ತು ಪಾಂಡ್ಯ ಂಪ್ರದಾಯಗಳ ಮುಂದವರಿದ ಶೈಲಿಯಾಗಿದೆ. ಈ ಕಾಲಕ್ಕೆ ಸಂಬಂಧಿಸಿದ ಅಸಂಖ್ಯಾತ ರ್ಣಚಿತ್ರಗಳನ್ನು ಇಂದಿಗೂ ಆನೆಗುಂದಿ, ತಾಡಪತ್ರಿ, ಕಾಂಚಿಪುರಮ್, ಕಾಳಹಸ್ತಿ ರುಪತಿ, ತಿರುವಣ್ಣಾಮಲೈ, ಚಿದಂಬರಮ್, ತಿರುವಳ್ಳೂರ್, ಕುಂಭಕೋಣಂ, ಮತ್ತು ೕರಂಗಂ ಮುಂತಾದ ಕಡೆಗಳಲ್ಲಿ ಕಾಣಬಹುದು. ಅವುಗಳಲ್ಲಿ ಲೇಪಾಕ್ಷಿಯ ೕರಭದ್ರೇಶ್ವರ ದೇವಾಲಯದ ಭಿತ್ತಿಚಿತ್ರಗಳು ಅದ್ವಿತೀಯ ಕಲಾಕೃತಿಗಳಾಗಿದ್ದು ಮಾಯಣ, ಮಹಾಭಾರತ ಮತ್ತು ಬೇರೆ ಬೇರೆ ಪುರಾಣಗಳ ವಿವಿಧ ಸನ್ನಿವೇಶಗಳ ತ್ರಗಳು ಅನುಪಮವಾಗಿ ಚಿತ್ರಿಸಲ್ಪಟ್ಟಿರುತ್ತವೆ. ಅವುಗಳ ಚಿತ್ರವಸ್ತುಗಳು ಕಲಾವಿದನು

ಬಣ್ಣ ಮತ್ತು ಕುಂಚಗಳ ಮೇಲೆ ಸಾಧಿಸಿದ ಪ್ರಭುತ್ವವನ್ನು ಎತ್ತಿ ತೋರಿಸುತ್ತವೆ. ಈ ಎಲ್ಲ ಕಲಾಕೃತಿಗಳು ಮಧ್ಯಕಾಲೀನ ಕಲಾಕೃತಿಗಳಾಗಿವೆ.

ತಂಜಾವೂರು ಮರಾಠಾ ಪ್ರಭುತ್ವಕ್ಕೆ ಸೇರಿದ ನಂತರ ಶರಭೋಜಿ ಮಹಾರಾಜರ ಮಹಾಪೋಷಣೆಯಲ್ಲಿ ತಂಜಾವೂರ ಶೈಲಿಯೆಂದೇ ಇಂದಿಗೂ ಪ್ರಸಿದ್ಧವಾಗಿರುವ ಶೈಲಿಯು ಬೆಳೆದು ಬಂದಿತು. ಚಿನ್ನದ ಹಾಳೆಗಳನ್ನು ಬಳಸಿ, ಆಭರಣಗಳನ್ನು ಚಿತ್ರಿಸಿ ಅಂದಗೊಳಿಸಿ ಚಿತ್ರಿಸುವ ಈ ಶೈಲಿಯು ವಿಶ್ವಮಾನ್ಯವಾಗಿದೆ.

ವಿಜಯನಗರ ಕಾಲದ ಚಿತ್ರಕಲೆ-

ವಿಜಯನಗರದ ಅರಸರು ವಾಸ್ತುಶಿಲ್ಪ ಮೂರ್ತಿಶಿಲ್ಪ ಕಲೆಗೆ ಕೊಟ್ಟಷ್ಟೇ ಪ್ರೋತ್ಸಾಹವನ್ನು ಚಿತ್ರಕಲೆಗೂ ಕೊಟ್ಟಿದ್ದರು. ಈ ಕಾಲದಲ್ಲಿ ವಿಜಯನಗರದ ರಾಜಧಾನಿ ಹಂಪಿ ಅಲ್ಲದೇ ಆನೆಗೊಂದಿ, ಆಂಧ್ರಪ್ರದೇಶದ ಲೇಪಾಕ್ಷಿ ತಾಡಪತ್ರಿ ಮುಂತಾದ ಕಡೆಗಳಲ್ಲಿರುವ ದೇವಾಲಯಗಳ ಗೋಡೆಗಳನ್ನೂ ಛಾವಣಿಗಳನ್ನೂ ಅಲಂಕರಿಸಿರುವ ಭಿತ್ತಿಚಿತ್ರಗಳು ವಿಜಯನಗರ ಶೈಲಿಯ ಅತ್ಯುತ್ತಮ ಉದಾಹರಣೆಗಳಾಗಿವೆ.

ಲೇಪಾಕ್ಷಿ-

ಲೇಪಾಕ್ಷಿಯ ವೀರಭದ್ರಸ್ವಾಮಿ ದೇವಸ್ಥಾನದ ಭಿತ್ತಿಚಿತ್ರಗಳು ಅಜಂತಾ ಭಿತ್ತಿಚಿತ್ರಗಳಿಗೆ



೧೧) ಲೇಪಾಕ್ಷಿ

ರಿದೊರೆಯಾಗಿ ನಿಲ್ಲಬಲ್ಲ ಕಲಾಕೃತಿಗಳಾಗಿವೆ. ಇಲ್ಲಿ ಚಿತ್ರಿತವಾದ ಬೃಹದಾಕಾರದ ೀರಭದ್ರಸ್ವಾಮಿಯ ಚಿತ್ರ ನೋಡುಗನನ್ನು ಮೂಕವಿಸ್ಮಿತನನ್ನಾಗಿ ಮಾಡುತ್ತದೆ. ಅಲ್ಲದೇ ಈ ದೇವಾಲಯದ ಪ್ರತಿಯೊಂದು ಚಿತ್ರವೂ ವೈಶಿಷ್ಟ್ಯಪೂರ್ಣವಾಗಿ ಚಿತ್ರಿಸಲ್ಪಟ್ಟಿದೆ. ೀರಾಮಚಂದ್ರ ದೇವಾಲಯದಲ್ಲಿ ಚಿತ್ರಿಸಲಾದ ದಶಾವತಾರ ಚಿತ್ರಗಳು ಮತ್ತು ಂದಪುರಾಣಕ್ಕೆ ಸಂಬಂಧಿಸಿದ ಶಿವಲೀಲಾ ಚಿತ್ರಗಳು ಮನಮೋಹಕವಾಗಿವೆ. ಬಿಳಿ, ಳದಿ, ಕೆಂಪು ಮತ್ತು ನೀಲಿವರ್ಣಗಳನ್ನು ಬಳಸಿ ಚಿತ್ರಿಸಲಾದ ವರ್ಣವೈಖರಿ ಚ್ಚರಿಯನ್ನುಂಟುಮಾಡುತ್ತದೆ.

ಂಪೆ-

ವಿಜಯನಗರ ವರ್ಣಚಿತ್ರಕಲಾ ಶೈಲಿಯ ಪರಿಪೂರ್ಣತೆಯನ್ನು ಹಂಪೆಯ ರೂಪಾಕ್ಷ ದೇವಾಲಯದ ರಂಗಮಂಟಪದ ಒಳಭಾವಣಿಯಲ್ಲಿ ಚಿತ್ರಿತವಾದ ತ್ತಿಚಿತ್ರಗಳಲ್ಲಿ ಕಾಣಬಹುದು. ಗಿರಿಜಾ ಕಲ್ಯಾಣ, ತ್ರಿಪುರ ಸಂಹಾರ, ಮತ್ಸ್ಯಭೇದ, ಷ್ಣುವಿನ ದಶಾವತಾರ ಮತ್ತು ಪಲ್ಲಕ್ಕಿಯಲ್ಲಿ ಕುಳಿತುಕೊಂಡಿರುವ ವಿದ್ಯಾರಣ್ಯ ಮಹಾಸ್ವಾಮಿಗಳ ರವಣಿಗೆ ಮುಂತಾದ ಚಿತ್ರಗಳು ರೇಖಾ ವಿನ್ಯಾಸ ವರ್ಣವಿನ್ಯಾಸಗಳಲ್ಲಿ ಅದ್ಭುತವಾಗಿ ತ್ರಿಸಲ್ಪಟ್ಟಿವೆ. ಇತ್ತೀಚೆಗೆ ಈ ಚಿತ್ರಗಳನ್ನು ಮರುವರ್ಣಲೇಪನದಿಂದ ತಿದ್ದಿಸಿರುವುದು ಕಂಡು ರುತ್ತದೆ. ವಿರೂಪಾಕ್ಷ ದೇವಾಲಯ ಮಾತ್ರವಲ್ಲದೇ ಹಂಪೆಯ ಅನೇಕ ದೇವಾಲಯಗಳ ಳಛತ್ರಗಳು, ಕಂಭಗಳು, ತೊಲೆ ಮುಂತಾದವುಗಳ ಮೇಲೆ ಒಂದೊಮ್ಮೆ ವರ್ಣಚಿತ್ರಗಳು ದ್ದಿರಬಹುದಾದ ಕುರುಹುಗಳು ಕಂಡು ಬರುತ್ತವೆ. ಆನೆಗೊಂದಿಯಲ್ಲಿರುವ ಹುಚ್ಚಪ್ಪಯ್ಯನ ಠ ಎಂದು ಕರೆಯಲಾದ ಕಟ್ಟಡವೊಂದರ ಒಳಛತ್ತಿನಲ್ಲಿ ಅತ್ಯಂತ ಸುಂದರವಾದ ಚಿತ್ರಗಳ ವಶೇಷಗಳಿದ್ದು ವಿಜಯನಗರದ ಅರಸೊತ್ತಿಗೆಯ ಕಾಲದಲ್ಲಿಯೇ ಚಿತ್ರಿತವಾದವುಗಳಾಗಿವೆ. ಯಚೂರ ಜಿಲ್ಲೆಯ ಕನಕಗಿರಿಯ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯದ ರಂಗಮಂಟಪದ ಳಭಾವಣಿಯಲ್ಲಿಯೂ ಮಹಾದ್ವಾರದಲ್ಲಿಯೂ ಅತ್ಯಂತ ಸುಂದರವಾಗಿದ್ದಿರಬಹುದಾದ ತ್ತಿಚಿತ್ರಗಳ ಅವಶೇಷಗಳು ಕಂಡು ಬರುತ್ತವೆ.

ೈಸೂರು ಶೈಲಿ-

ವಿಜಯನಗರದ ಪತನಾನಂತರ ಪ್ರಬಲರಾದ ಮೈಸೂರು ಅರಸರು ವಿಜಯನಗರ ಾ ಶೈಲಿಯನ್ನೂ ಪರಂಪರೆಯನ್ನೂ ಮೈಸೂರಿನದೇ ಆದ ಚೌಕಟ್ಟಿನಲ್ಲಿ ಬೆಳೆಸಿಕೊಂಡು ದರಲ್ಲದೇ ಕರ್ನಾಟಕದ ಚಿತ್ರಕಲಾ ಪರಂಪರೆಗೆ ಪುನರ್ಜನ್ಮ ನೀಡಿ ಪುಣ್ಯಭಾಗಿಗಳೂ ದರು. ಮೈಸೂರ ಅರಸರ ಕಾಲದಲ್ಲಿ ಅನೇಕ ದೇವಾಲಯಗಳು, ಕಟ್ಟಡಗಳು ರ್ಮಿತವಾದವಷ್ಟೇ ಅಲ್ಲ, ಭಿತ್ತಿಚಿತ್ರಗಳಿಂದ ಅಲಂಕರಿಸಲ್ಪಟ್ಟವು. ಚಿಕ್ಕದೇವರಾಜ ಡೆಯರ ಕಾಲದಲ್ಲಿ ಶ್ರವಣಬೆಳಗೊಳದ ಕಲ್ಯಾಣಿಯ ಮಂಟಪದಲ್ಲಿ ಚಿತ್ರಿತವಾದ ತ್ತಿಚಿತ್ರಗಳ ಅವಶೇಷಗಳು ಮಾತ್ರ ಕಂಡು ಜೈನ ಮಠದ ಒಳಗೋಡೆಗಳು, ಳಭಾವಣಿಗಳು, ತೊಲೆ ಕಂಬ ಬೋಧಿಗೆಗಳು ಒಂದನ್ನೂ ಬಿಡದಂತೆ ಜೈನಧರ್ಮೀಯ ತ್ತಿಚಿತ್ರಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಚಿತ್ರಿಸಲಾಗಿದ್ದು ಪೂರ್ಣವಾದ ಕಲಾಕೃತಿಗಳಾಗಿವೆ. ಅಲ್ಲದೇ ಎಡೆಯೂರು ಸಿದ್ಧಲಿಂಗೇಶ್ವರ ದೈವಾಲಯದಲ್ಲಿ



೧೨) ಮೈಸೂರು ಸಾಂಪ್ರದಾಯಕ

ಚಿತ್ರಿತವಾದ "ಪಂಚವಿಂಶತಿ". ಲೀಲಾಮೂರ್ತಿಗಳ ಹಾಗೂ ಸಿದ್ಧಲಿಂಗ ಯತಿಗಳ ಜೀವನಕ್ಕೆ ಸಂಬಂಧಿಸಿದ ಚಿತ್ರಗಳೂ, ಬೆಳವಾಡಿಯ ಮಂಟೇಸ್ವಾಮಿ ಮಠದಲ್ಲಿ ಚಿತ್ರಿತವಾದ ರಾಮಾಯಣ ಮತ್ತು ಶಿವಲೀಲೆಗಳ ಚಿತ್ರಗಳೂ, ಗುಬ್ಬಿಯ ಮೈಲಪ್ಪನ ಗುಡಿಯಲ್ಲಿ ಚಿತ್ರಿತವಾದ ಪಂಚವಿಂಶತಿ ಲೀಲಾ ಮೂರ್ತಿಗಳ ಚಿತ್ರಗಳೂ ಅನ್ಯಾದೃಶವಾಗಿ ಚಿತ್ರಿಸಲ್ಪಟ್ಟಿವೆ. ಇವುಗಳಲ್ಲದೇ ಬೇರೆ ಬೇರೆ ಕಾಲದಲ್ಲಿ ಚಿತ್ರಿತವಾದ ಶಿರಾ ಹಿರಿಯೂರು, ಶೀಬಿ, ಕೆರಗೋಡು, ರಂಗಾಪುರ ಮುಂತಾದ ಕಡೆಗಳಲ್ಲಿರುವ ದೇವಾಲಯಗಳ ಭಿತ್ತಿ ಚಿತ್ರಗಳು ಮೈಸೂರು ಅರಸರ ಕಲಾಪ್ರೇಮವನ್ನು ಪ್ರಕಟಿಸುತ್ತವೆ. ಒಟ್ಟಿನಲ್ಲಿ ಮೈಸೂರು ಒಡೆಯರು ಮಹಾಕಲಾಪೋಷಕರಾಗಿದ್ದರೆಂಬುದು ವಿಶ್ವವಿಖ್ಯಾತ

ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಆಳಿಕೆಯ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರು ಈ ಕಲಾಶೈಲಿಯ ಮಹಾಪೋಷಕರಾಗಿದ್ದರ. ಮುಮ್ಮಡಿಯವರೇ ಕಟ್ಟಿಸಿದ ಚಾಮರಾಜ ನಗರದ ಚಾಮರಾಜೇಶ್ವರ ದೇವಾಲಯದ ಭಿತ್ತಿಚಿತ್ರಗಳೂ ವೆಂಕಟರಣಸ್ವಾಮಿ ದೇವಾಲಯದ ಭಿತ್ತಿಚಿತ್ರಗಳೂ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ ಉನ್ನತ ಕಲಾದೃಷ್ಟಿಯನ್ನು ವ್ಯಕ್ತಪಡಿಸುತ್ತವೆ. ಮೈಸೂರಿನ ವೆಂಕಟರಮಣಸ್ವಾಮಿ ದೇವಾಲಯ ಮುಡುಕುತೊರೆಯ ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಚಿತ್ರಿತವಾದ ಶೈವ-ವೈಷ್ಣವಧರ್ಮಗಳಿಗೆ ಸಂಬಂಧಿಸಿದ ಭಿತ್ತಿಚಿತ್ರಗಳು ಮುಮ್ಮಡಿಯವರ ಸರ್ವಧರ್ಮ ಸಮನ್ವಯತೆಯ ಮನೋವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತವೆ. ಇವರ ಕಾಲದ ಇನ್ನೊಂದು ಮಹತ್ವ



೧೩) ಗಂಜೀಫಾ

ಬೃಹತ್ತಾದ ಯೋಜನೆ ಎಂದರೆ ಶ್ರೀ ತತ್ವನಿಧಿ ಎಂಬ ಗ್ರಂಥ. ಒಟ್ಟು ೧೮೮೬ ವರ್ಣರಂಜಿತ ರೇಖಾಚಿತ್ರಗಳನ್ನೊಳಗೊಂಡ ಈ ಶ್ರೀ ತತ್ವನಿಧಿ ಮೈಸೂರ ಶೈಲಿಯ ಬೃಹತ್ ಭಂಡಾರವೆಂದೇ ಹೇಳಬಹುದು. ಶಕ್ತಿನಿಧಿ, ವಿಷ್ಣುನಿಧಿ, ಶಿವನಿಧಿ, ಬ್ರಹ್ಮನಿಧಿ, ಗ್ರಹನಿಧಿ, ವೈಷ್ಣವನಿಧಿ, ಶೈವನಿಧಿ, ಆಗಮನಿಧಿ, ಕೌತುಕನಿಧಿ ಎಂಬ ಒಂಬತ್ತು ಅಧ್ಯಾಯಗಳಿದ್ದು ಭಾರತೀಯ ಸನಾತನ ಧರ್ಮದ ಎಲ್ಲ ದಳಗಳನ್ನೂ ಒಟ್ಟುಗೂಡಿಸಿದ ಧರ್ಮಸಾರಸಂಗ್ರಹವಾಗಿದೆ. ಶಕ್ತಿನಿಧಿಯಲ್ಲಿ ಶಕ್ತಿ ತತ್ವಗಳನ್ನು ಪ್ರತಿನಿಧಿಸುವ ಚಾಮುಂಡೇಶ್ವರಿ ಮುಂತಾದ ಚಿತ್ರಗಳೂ, ವಿಷ್ಣುನಿಧಿಯಲ್ಲಿ ವಿಷ್ಣುತತ್ವಗಳನ್ನು ಪ್ರತಿನಿಧಿಸುವ ವಿಷ್ಣುವಿಗೆ ಸಂಬಂಧಿಸಿದ ಚಿತ್ರಗಳೂ, ಶಿವನಿಧಿಯಲ್ಲಿ ಶಿವತತ್ವವನ್ನು ರೂಪಿಸುವ ಚಿತ್ರಗಳೂ, ಬ್ರಹ್ಮನಿಧಿಯಲ್ಲಿ ಬ್ರಹ್ಮತತ್ವಗಳನ್ನು ಪ್ರತಿಪಾದಿಸುವ ಚಿತ್ರಗಳೂ ಸಂಗೀತಕ್ಕೆ ಸಂಬಂಧಿಸಿದ ಚಿತ್ರಗಳೂ, ಗ್ರಹನಿಧಿಯಲ್ಲಿ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಕಾಲಪುರುಷ,ಋತುಗಳು, ವಾರ ತಿಥಿಗಳು ಮುಂತಾದ ಚಿತ್ರಗಳೂ, ವೈಷ್ಣವ ನಿಧಿಯಲ್ಲಿ ಭಾಷ್ಯಕಾರರ ಆಳ್ವಾರರುಗಳ ಚಿತ್ರಗಳೂ, ಶೈವನಿದ್ರೆಯಲ್ಲಿ ಲಿಂಗಗಳ ಯೋಗಾಸನಗಳ ಚಿತ್ರಗಳೂ ಚಿತ್ರಿತವಾಗಿವೆಯಲ್ಲದೇ ಆಗಮನಿಧಿಯಲ್ಲಿ ೫೯ ಚಿತ್ರಗಳೂ ಕೌತುಕ ನಿಧಿಯಲ್ಲಿ ೪೮ ಚಿತ್ರಗಳೂ ಚಿತ್ರಿತವಾಗಿದ್ದು ವರ್ಣವಿನ್ಯಾಸ, ರೇಖಾವಿನ್ಯಾಸಗಳು ಅನ್ಯದೃಶವಾಗಿವೆ.

ಜಗನ್ಮೋಹನ ಅರಮನೆಯಲ್ಲಿರುವ ಭಿತ್ತಿಚಿತ್ರಗಳೂ ಇದೇ ಕಾಲದಲ್ಲಿ ಚಿತ್ರಿಸದವು

ಗಳಾಗಿದ್ದು ಮುಮ್ಮಡಿಯವರ ವಂಶಾವಳಿಯನ್ನು ರೂಪಿಸುವ ಚಿತ್ರಗಳೂ, ಪಟ್ಟದ ಹಸುಗಳು, ಪಟ್ಟದ ಕುದುರೆ, ಮೋಹಕವಾದ ಕನ್ನೆಯರು ಮುಮ್ಮಡಿಯವರ ಸಮಕಾಲೀನ ನವಾಬರ, ಭಕ್ತಿಗಳ, ಪರಿವಾರದವರ ರೂಪಚಿತ್ರಗಳೇ ಮುಂತಾದವುಗಳಿರುತ್ತವೆ. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಶಿಕಾರಿಪುರದ ತಿಪ್ಪಯ್ಯ ಅಲ್ಲದೇ ವೀರಣ್ಣ, ಯಲ್ಲಯ್ಯ, ಬಸಣ್ಣ ಮುಂತಾದ ಚಿತ್ರಕಲಾವಿದರಿದ್ದರೆಂದು ತಿಳಿದು ಬಂದಿದೆ.

ಆನಂತರ ಚಾಮರಾಜ ಒಡೆಯರ ಮತ್ತು ನಾಲ್ವಡಿ ಕೃಷ್ಣರಾಜರ ಕಾಲದಲ್ಲಿ ಮೈಸೂರು ಶೈಲಿಯ ಅಪೂರ್ವ ರೀತಿಯಲ್ಲಿ ಬೆಳೆದು ಬಂದಿತು. ಕಾಗದ, ಬಟ್ಟೆ ಇಲ್ಲವೇ ಗಾಜಿನ ಮೇಲೆ ಜಲವರ್ಣ ಅಥವಾ ತೈಲವರ್ಣಗಳಲ್ಲಿ ರಾಜ ಮಹಾರಾಜರ ಭಾವ ಚಿತ್ರಗಳು, ದೇವ-ದೇವತೆಗಳ ಹಾಗೂ ಪೌರಾಣಿಕ ಚಿತ್ರ ಸಂಯೋಜನೆಗಳು ಮುಂತಾದುವುಗಳನ್ನು ದೇಶೀಯ ಮೂಲವರ್ಣಗಳಿಂದ ಚಿತ್ರಿಸಿ, ಚಿನ್ನ-ಬೆಳ್ಳಿಗಳನ್ನು ಲೇಪಿಸಿ ಚಿತ್ರಗಳನ್ನು ಅಂದಗೊಳಿಸಲಾಗಿದೆ. ಈ ಶೈಲಿಯಲ್ಲಿ ಚಿತ್ರಿಸುವ ಮೈ. ಸುಬ್ರಮಣ್ಯ ರಾಜು ಅವರ ಪುತ್ರ ವಿಶ್ವೇಶ್ವರ ರಾಜು ಅಲ್ಲದೇ ಇನ್ನೂ ಅನೇಕ ಕಲಾವಿದರು ಈಗಲೂ ಇದ್ದಾರೆ.

ಟಿಪ್ಪು ಸುಲ್ತಾನರ ಕಾಲದಲ್ಲಿ ಚಿತ್ರಕಲೆ-

ಟಿಪ್ಪುಸುಲ್ತಾನರ ಕಾಲದಲ್ಲಿ ಕಟ್ಟಲಾದ ಶ್ರೀರಂಗಪಟ್ಟಣದ ದರಿಯಾ ದೌಲತ್




೧೪) ಶ್ರೀರಂಗಪಟ್ಟಣ

ರಮನೆಯ ಕಲಾಕೃತಿಗಳ ಒಂದು ಭಂಡಾರವೇ ಆಗಿದೆ. ಇಲ್ಲಿ ಚಿತ್ರಿಸಲಾದ ತ್ಯಾಚಿತ್ರಗಳು ವಿವಿಧ ವರ್ಣಗಳಿಂದಲೂ ಚಿನ್ನದ ಮುಲಾಮಿನಿಂದಲೂ ರಚಿತವಾಗಿದ್ದು ಇಂದಿಗೂ ತಮ್ಮ ಹೊಳಪನ್ನು ಕಳೆದುಕೊಳ್ಳದ ಗಮನಾರ್ಹ ಕಲಾಕೃತಿಗಳಾಗಿವೆ. ಗೋಡೆಗಳಲ್ಲಿ ಚಿತ್ರಿತವಾದ ಭಿತ್ತಿಚಿತ್ರಗಳಲ್ಲಿ ಯುದ್ಧಗಳ ಸನ್ನಿವೇಶಗಳು, ಅಂಬಾರಿಯಲ್ಲಿ ಕುಳಿತು ಯುದ್ಧಭೂಮಿಗೆ ಹೊರಟ ಹೈದರಾಲಿ, ಕುದುರೆಯ ಮೇಲಿರುವ ಟಿಪ್ಪು ಅವನ ಮುಂದೆ ಹುಲಿಪಟ್ಟೆಯ ಧ್ವಜಧಾರಿ ಸೈನಿಕರು, ಆನೆಗಳ ಒಂಟೆಗಳ ಸಾಲು, ಫ್ರೆಂಚ್ ಫರಂಗಿ ದಳ ಮುಂತಾದ ಅನೇಕ ಚಿತ್ರಗಳು ಅದ್ವಿತೀಯವಾಗಿ ಚಿತ್ರಿಸಲ್ಪಟ್ಟಿವೆಯಲ್ಲದೇ ಅನೇಕ ರಾಜರ, ನವಾಬರ ಮತ್ತು ಪಾಳೇಗಾರರ ಭಾವಚಿತ್ರಗಳೂ ಚಿತ್ರಿಸಲ್ಪಟ್ಟಿವೆ. ಕಿತ್ತೂರು ರಾಣಿ, ಮೊಹಮ್ಮದ ಆಲಿ, ತಂಜಾವೂರಿನ ರಾಜ, ಕೊಡಗಿನ ವೀರರಾಜೇಂದ್ರ, ಕರ್ನಾಟ್-ಕಡಪಾ ನವಾಬರು, ಪೇಶ್ವೆ ಎರಡನೆಯ ಬಾಲಾಜಿ, ಮುಮ್ಮಡಿ ಕೃಷ್ಣರಾಜ ಒಡೆಯರು, ಚಿತ್ರದುರ್ಗದ ಮದಕರಿ ನಾಯಕ, ಕಿತ್ತೂರ ರಾಣಿ ಚನ್ನಮ್ಮ ಮುಂತಾದವರ ಭಾವಚಿತ್ರಗಳನ್ನೂ ಪಾಶ್ಚಾತ್ಯ ಕಲಾಶೈಲಿಯಲ್ಲಿ ಚಿತ್ರತವಾದ ಟಿಪ್ಪುವಿನ ತೈಲವರ್ಣ ಚಿತ್ರಗಳಲ್ಲದೇ ಪಾಶ್ಚಾತ್ಯ ಶೈಲಿಯಲ್ಲಿಯೇ ಚಿತ್ರಿತವಾದ ಅನೇಕರ ಭಾವಚಿತ್ರಗಳ ಸಂಗ್ರಹವೂ ದರಿಯಾ ದೌಲತ್ ಅರಮನೆಯಲ್ಲಿರುತ್ತವೆ.

ಪಾಶ್ಚಾತ್ಯ ಕಲಾ ಸಾಂಪ್ರದಾಯಗಳು

ರೆನಾಯ್ಸನ್ಸ್(Renaissance) ಅಥವಾ ಪುನರುತ್ಥಾನ ಕಲೆ-

ಕ್ರಿ.ಶ.೧೪೦೦ರಲ್ಲಿ ಇಟಾಲಿಯ ಸಾಮಾಜಿಕ, ಧಾರ್ಮಿಕ, ಆರ್ಥಿಕ ವೈಜ್ಞಾನಿಕ



೧೫) ಮೈಕೆಲ್ ಏಂಜಲೊ

ಸಾಹಿತ್ಯಿಕ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆಗಳಾದವು. ಇದೊಂದು ಬೌದ್ಧಿ ಬೆಳವಣಿಗೆಯ ಕಾಲವೆಂದೇ ಪರಿಗಣಿಸಬಹುದು.

ಇದೇ ಕಾಲದಲ್ಲಿಯೇ ಇಟಾಲಿಯ ಫ್ಲಾರೆನ್ಸ್ ನಗರದದಲ್ಲಿ ಈ ಪುನರುತ್ಥಾ ಕಲೆಯು ಪ್ರಾರಂಭವಾಯಿತು. ವಾಸ್ತು ಶಿಲ್ಪಿಗಳು, ಕಲಾವಿದರೂ ಸಹ ಕಾಲಧರ್ಮಕ್ಕನ ಸಾರವಾಗಿ ಕಲಾಕ್ಷೇತ್ರದಲ್ಲಿಯೂ ಹೊಸ ಹೊಸ ಸಂಶೋಧನೆಗಳನ್ನು ಮಾಡಿದರು ಫಿಲಿಪ್ಪೊ ಬ್ರೂನೆಲೆಷಿ(Filippo Brunelleschi) ಎಂಬ ವಾಸ್ತುಶಿಲ್ಪಿಯು ಈ ಕಲಾವಿದ ಮುಖಂಡತ್ವವನ್ನು ವಹಿಸಿದ್ದನು. ಬ್ರೂನೆಲೆಷಿಯ ವಾಸ್ತುಶಿಲ್ಪದ ಆದರ್ಶತೆಯನ ಇಂದಿಗೂ ಅನುಸರಿಸಲಾಗುತ್ತದೆ. ಬ್ರೂನೆಲೆಷಿಯ ಸಪಾಟಾದ ಮೇಲ್ಮೈಯ ಮೇ ಚಿತ್ರಿಸಲಾಗುವ ವಸ್ತುವಿನ ಮೂರೂ ಪರಿಮಾಣಗಳು ಕಾಣುವಂತೆ ಚಿತ್ರಿಸಲ ಯಥಾದರ್ಶನ(Perspective) ವಿಧಾನವನ್ನು ಪ್ರಪ್ರಥಮವಾಗಿ ಕಂಡು ಹಿಡಿದನು ಕೂಡಲೆ ಇನ್ನುಳಿದ ಕಲಾವಿದರೂ ಯಥಾದರ್ಶನ ವಿಧಾನವನ್ನು ಬಳಸಿ ವಸ

ಹತ್ತಿರದಿಂದ ಇಲ್ಲವೆ ದೂರದಿಂದ ಕಾಣಿಸುವಂತೆ ಚಿತ್ರಿಸಲು ತೊಡಗಿದರು. ಮಸಾಕಿಯೊ(Masaccio) ಎಂಬ ಫ್ಲೋರೆಂಟಾಯಿನ್ ಕಲಾವಿದನು ಯಥಾದರ್ಶನ ವಿಧಾನವನ್ನು ಪ್ರಪ್ರಥಮವಾಗಿ ತನ್ನ ಕಲಾಕೃತಿಗಳಲ್ಲಿ ಬಳಸಿದನು.

ಇದೇ ಕಾಲದಲ್ಲಿಯೇ ಜಾನ್‌ವಾನ್ ಆಯಿಕ್ (Jaanvan Eyck)ಎಂಬ ಫ್ಲಾಂಡರ್ಸ್‌ನ ವರ್ಣಚಿತ್ರಕಾರನು ತೈಲವರ್ಣ ಚಿತ್ರಗಳ ರಚನೆಯಲ್ಲಿ ಪ್ರಯೋಗಗಳನ್ನು ನಡೆಸಿದ್ದನು. ಆಯಿಕ್ ತೈಲವರ್ಣಗಳನ್ನು ಕಂಡು ಹಿಡಿಯುವದಕ್ಕಿಂತ ಮೊದಲು ಕಲಾವಿದರು ಹುಡಿವರ್ಣಗಳನ್ನು ತತ್ತಿಯ ಲೋಳೆ ರಸದಲ್ಲಿ ಬೆರೆಸಿ ತಮ್ಮ ವರ್ಣಚಿತ್ರಗಳನ್ನು ರಚಿಸುತ್ತಿದ್ದರು. ಹೀಗೆ ಹುಡಿವರ್ಣಗಳನ್ನು ತತ್ತಿಯ ಲೋಳೆಯಲ್ಲಿ ಬೆರೆಸಿ ತಯಾರಿಸಿದ ಬಣ್ಣವು ಕೂಡಲೇ ಒಣಗಿ ಹೋಗುತ್ತಿದ್ದುದರಿಂದ ಚಿತ್ರಗಳಲ್ಲಿ ವಿವರಗಳನ್ನು ತುಂಬುವದು ಕಷ್ಟಸಾಧ್ಯವಾಗುತ್ತಿತ್ತು. ತೈಲವನ್ನು ಬೆರೆಸುವದರಿಂದ ಚಿತ್ರಕಲಾಕೃತಿಯು ನಿಧಾನವಾಗಿ ಒಣಗುತ್ತಿರುವದರಿಂದ ವಿವರಗಳ ರಚನೆಗೆ ಸಾಕಷ್ಟು ಸಮಯವನ್ನು ತೆಗೆದುಕೊಳ್ಳಲು ಸಾಧ್ಯವಾಯಿತು. ಹೀಗೆ ಆಯಿಕ್‌ನು ವರ್ಣಚಿತ್ರಕಾರರಿಗೆ ಒಂದು ಹೊಸ ಪ್ರಪಂಚವನ್ನೇ ನಿರ್ಮಿಸಿಕೊಟ್ಟನೆಂಬ ಕೀರ್ತಿಗೆ ಕಾರಣನಾಗಿದ್ದಾನೆ.

ಇಟಾಲಿ, ಫ್ಲಾಂಡರ್ಸ್(ಈಗ ಬೆಲ್ಜಿಯಂನಲ್ಲಿದೆ) ಮತ್ತು ಬೇರೆ ಬೇರೆ ಕಡೆಗಳಲ್ಲಿ ಹೊಸ ವಿಧಾನ ಹಾಗೂ ಶೈಲಿಗಳ ಪ್ರಯೋಗಗಳು ನಡೆಯ ತೊಡಗಿದವು. ಫ್ಲೊರೆನ್ಸ್ ನಗರವು ಕೇಂದ್ರವಾಗಿ ಮಹಾನ್ ಕಲಾವಿದರನ್ನು ಸೃಷ್ಟಿಸಿತು. ವಿಶ್ವವಿಖ್ಯಾತ ಕಲಾವಿದ ಲಿಯೊನಾರ್ಡೊ-ಡಾ-ವಿನ್ಸಿಯು ಇಲ್ಲಿಯೇ ಆಂದ್ರಿಯಾಡೆಲ್ ವೆರೋಚಿಯೋ(Andrea Verrocchio) ಎಂಬ ಸುಪ್ರಸಿದ್ಧ ವರ್ಣಚಿತ್ರಕಾರನೂ ಮೂರ್ತಿಶಿಲ್ಪಕಾರನೂ ಆದ ಕಲಾವಿದನ ಶಿಬಿರದಲ್ಲಿ ಕಲಾಶಿಕ್ಷಣವನ್ನು ಪಡೆದನು. ಡಾ ವಿನ್ಸಿಗಿಂತ ಇಪ್ಪತ್ತೂರು ವರುಷ ಚಿಕ್ಕವನಾದ ಇನ್ನೊಬ್ಬ ದೈತ್ಯ ಕಲಾವಿದ ಮೈಕಲ್‌ಲ್ಯಾಂಜಲೋನು ಫ್ಲೋರೆಂಟಾಯಿನ್ ಕಲಾವಿದನಾದ ಡೊಮೆನಿಕೊ ಘಿರ್ಲಾಂಡೈಯಾ(Domenico Ghrlandaio) ಎಂಬವನ ಹತ್ತಿರ ಕೆಲಸಮಾಡುತ್ತಿದ್ದಾಗ ತನ್ನದೇ ಆದ ಸ್ವತಂತ್ರ ಶೈಲಿಯನ್ನು ಕಂಡುಕೊಳ್ಳುವ ಉದ್ದೇಶದಿಂದಲೇ ಕೆಲಸ ಮಾಡುತ್ತಿದ್ದನು ಎರಡನೆಯ ಪೋಪ್ ಜೂಲಿಯನ್‌ನ ಆದೇಶದ ಮೇರೆಗೆ ಸಿಸ್ಟೈನ್ ಚಾಪೆಲ್‌ದ ಗೋಡೆಗಳ ಮೇಲೂ ಒಳಮಾಳಿಗೆಯಲ್ಲಿಯೂ ನಾಲ್ಕು ವರುಷಗಳ ಕಾಲ ಭಿತ್ತಿಚಿತ್ರಗಳನ್ನು ಚಿತ್ರಿಸಿದ ಮೈಕೆಲ್ ಆ್ಯಂಜಲೋ ಒಬ್ಬ ಮಹಾನ್ ಚಿತ್ರಕಾರರನೆಂದು ವಿಶ್ವ ಮನ್ನಣೆಯನ್ನು ಗಳಿಸಿದ್ದರೂ "ನಾನೊಬ್ಬ ಮೂರ್ತಿಶಿಲ್ಪಕಲಾವಿದ ಮಾತ್ರ, ವರ್ಣಚಿತ್ರಕಾರನಲ್ಲ" ಎಂದುಹೇಳುತ್ತಿದ್ದನು. ಕ್ರಿ.ಶ.೧೫೦೪ರಲ್ಲಿ ಇಟಾಲಿಯ ಯುವ ಚಿತ್ರಕಲಾವಿದನಾದ ರಫಾಯೆಲ್ ಎಂಬವನು ಫ್ಲೋರೆನ್ಸಿಗೆ ಬಂದು ಡಾ-ವಿನ್ಸಿ ಮತ್ತು ಮೈಕೆಲ್ ಆ್ಯಂಜಲೋ ಅವರ ಕಲಾಕೃತಿಗಳನ್ನು ಅಭ್ಯಸಿಸಿದನು. ರಫಾಯೆಲ್ ಸಹ ಎರಡನೆಯ ಪೋಪ್ ಜೂಲಿಯನ್‌ನ ಆದೇಶದಂತೆ ರೋಮ್‌ದ ವ್ಯಾಟಿಕನ್‌ನಲ್ಲಿ ಅಸ್ವಾದ್ಯದೃಶ್ಯವಾದ ಅದ್ಭುತವಾದ ಭಿತ್ತಿಚಿತ್ರಗಳನ್ನು ರಚಿಸಿದನು. ರಫಾಯೆಲ್ ಚಿತ್ರಿಸಿದ ಮೆಡೊನಾ(ರತಿ)ದೇವತೆಗಳ ಚಿತ್ರಗಳು ವಿಶ್ವವಿಖ್ಯಾತವಾಗಿವೆ.

ಇದೇ ಕಾಲದಲ್ಲಿಯೇ ವಿಶ್ವವಿಖ್ಯಾತ ದೈತ್ಯ ಕಲಾವಿದರೆನಿಸಿದ ಟಿಷಿಯನ್(Titian), ಜಾರ್ಜಿಯೋನ್(Georgione), ಟಿಂಟೋರೆಟೋ(Tintoretto), ವೆರೋನೀಸ(Veronese), ಮತ್ತು ಕೊರೆಜಿಯೋ(Correggio) ಮುಂತಾದವರು ವೇನಿಸ್‌ನ ಅಗ್ರಗಣ್ಯ ಕಲಾವಿದರಾಗಿದ್ದರು. ಇವರಲ್ಲದೇ ಫ್ರಾಫಿಲಿಪ್ಪೋ ಲಿಪಿ(Frafilippo Lippi), ಫ್ರಾಏಂಜೆಲಿಕೊ(Fra Angelico) ಪಿಯಾಕೋ ಡೆಲ್ಲಾ ಫ್ರಾನ್ಸೆಸ್ಕಾ(Piero della Francsca), ಮ್ಯಾಂಟೆನಾ(Mentegna) ಮತ್ತು ಬೊಟಿಸೆಲಿ(Botticelli)ಯಂಥ ಅದ್ವಿತೀಯ ಕಲಾವಿದರೂ ಅನ್ಯಾದೃಶ್ಯವಾದ ಮನಮೋಹಕವಾದ ವರ್ಣಚಿತ್ರಗಳನ್ನು ಚಿತ್ರಿಸಿ ವಿಶ್ವಮಾನ್ಯಕಲಾವಿದರೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಇಟಾಲಿಯ ಪುನರುತ್ಥಾನ ಕಲೆಯಿಂದ ಪ್ರಭಾವಿತರಾದ ಅನೇಕ ಯುರೋಪಿಯನ್ ಕಲಾವಿದರು ಫ್ಲಾರೆನ್ಸ್, ವೆನಿಸ್ ಮತ್ತಿತರ ಇಟಾಲಿಯ ನಗರಗಳಿಗೆ ಬಂದು ಅಭ್ಯಸಿಸತೊಡಗಿದರು. ಕ್ರಿ.ಶ.೧೬೦೦ರ ನಂತರದ ಸ್ಪೇನಿನ ಕಲಾವಿದರಾದ ಎಲ್ಗ್ರೇಕೊ ಮತ್ತು ಡೀಗೋ ವೆಲಾಸ್ಕಿ(Diego Velaski)ರಂತಹ ಕಲಾವಿದರು ಪುನರುತ್ಥಾನ ಶೈಲಿಯಲ್ಲಿ ಮಹೋನ್ನತ ಕಲಾಕೃತಿಗಳನ್ನು ರಚಿಸಿದರು. ಈ ಪುನರುತ್ಥಾನ ಕಲಾಶೈಲಿಯು ಜರ್ಮನಿಗೂ ವ್ಯಾಪಿಸಿ ಫ್ಲೆಮಿಷ್ ಮತ್ತು ಡಚ್ ಕಲಾವಿದರ ಏಳಿಗೆಗೆ ಕಾರಣವಾಯಿತು.

ಹೀಗೆ ಪುನರುತ್ಥಾನ ಕಲೆಯು ಜ್ಞಾನಾಭೀಪ್ಸೆಯ ತೃಷೆ, ಹೊಸ ವಿಚಾರಗಳು, ಮತ್ತು ತಂತ್ರಗಳು ಮೊದಲಾದವುಗಳಿಂದಾಗಿ ಯುರೋಪು ಖಂಡವನ್ನೆಲ್ಲ ಆಕ್ರಮಿಸಿತು.

ಬರೋಕ್(Baroque) ಅಥವಾ ಅಸಮಾಲಂಕೃತ ಕಲಾಶೈಲಿ–

ಕ್ರಿ.ಶ. ೧೬೦೦ರಿಂದ ಕ್ರಿ.ಶ.೧೭೫೦ರ ಅವಧಿಯನ್ನು ಬರೋಕ್ ಇಲ್ಲವೆ ಅಸಮಾಲಂಕೃತ ಕಲಾಶೈಲಿಯ ಕಾಲವೆಂದು ಕರೆಯಲಾಗಿದೆ. ಈ ಕಾಲವನ್ನು ಕಲಾಚಟುವಟಿಕೆಗಳ ಸುಗ್ಗಿಯ ಕಾಲವೆಂದು ಹೇಳಬಹುದು. ವಾಸ್ತುಶಿಲ್ಪ, ಶಿಲ್ಪ, ಚಿತ್ರಕಲೆಗಳಲ್ಲದೇ ಸಂಗೀತ ಕಲೆಯೂ ಈ ಅಸಮಾಲಂಕೃತ ಶೈಲಿಯನ್ನು ಅಳವಡಿಸಿಕೊಂಡಿತ್ತು. ಕ್ರಿ.೧೬೩೦ ಮತ್ತು ೧೬೮೦ರ ಕಾಲವು ಇಟಾಲಿಯಲ್ಲಿ ಈ ಅಸಮಾಲಂಕೃತ ಕಲಾಶೈಲಿಯ ಅತ್ಯುನ್ನತ ಶಿಖರವನ್ನೇರಿದ ಕಾಲವೆಂದು ಪರಿಗಣಿಸಲಾಗಿದೆ. ದೊಡ್ಡ ದೊಡ್ಡ ವರ್ಣಚಿತ್ರಕೃತಿಗಳು ಈ ಅವಧಿಯಲ್ಲಿ ಚಿತ್ರಿತವಾಗಿದ್ದು ಧಾರ್ಮಿಕ ಭಾವನೆಗಳನ್ನು ವ್ಯಕ್ತಪಡಿಸುವ ಕಲಾಕೃತಿಗಳಾಗಿದ್ದವು.

ಅಸಮಾಲಂಕೃತ ಕಲಾಶೈಲಿಯ ಕಲಾವಿದರು ಹೆಚ್ಚಾಗಿ ವಾಸ್ತುಶಿಲ್ಪ, ಶಿಲ್ಪ ಹಾಗೂ ಚಿತ್ರಕಲೆ ಈ ಮೂರೂ ಕಲಾಪ್ರಕಾರಗಳನ್ನು ಸಮನ್ವಯಿಸಿದರು. ಈ ಮೂರೂ ಕಲಾಪ್ರಕಾರಗಳಲ್ಲಿಯೂ ಕ್ರಿ.ಶ.೧೫೯೮-೧೬೮೦ರಲ್ಲಿ ಜೀವಿಸಿದ್ದ ಗಿಯೋವನಿ ಬರ್ನಿನಿ(Giovanni Bernini)ಎಂಬ ಮಹಾನ್ ಕಲಾವಿದನು ಅದ್ವಿತೀಯನೆನಿಸಿದ್ದನು. ಇವನು ರೋಮ ನಗರದ ಸೇಂಟ್ ಪೀಟರನ ದೇವಾಲಯದ ಪೂರ್ಣಗೊಳಸುವಿಕೆಯ ಕಾರ್ಯದಲ್ಲಿ ಸಹಾಯ ಸಲ್ಲಿಸಲು ಅನೇಕ ವರ್ಷಗಳವರೆಗೆ ಕೆಲಸಮಾಡಿದನು. ಅಲ್ಲದೆ ಬರ್ನಿನಿಯು ವಾಸ್ತುಶಿಲ್ಪಕಲೆಯ ಮತ್ತು ವರ್ಣಚಿತ್ರಕಲೆಗಳನ್ನು ಒಟ್ಟುಗೂಡಿಸಿ ಕಲೆಯ ಒಗ್ಗೊಡಿದ ಆಕಾರವನ್ನು ನಿರ್ಮಿಸಿದನು.

ಪಶ್ಚಿಮ ಜರ್ಮನಿಯ ರೆಸಿಡೆಂಟು ಅರಮನೆಯ ಒಳಮಾಳಿಗೆಯಲ್ಲಿ ಚಿತ್ರಗಳನ್ನು ತ್ರಿಸಿದ ವೆನೇಷಿಯನ್ ಕಲಾವಿದ ಗಿಯಾಂಬಾಟಿಸ್ಟಾ ಟಿಪೆಲೋ(Giampattista iepolo) ಎಂಬ ಇನ್ನೊಬ್ಬ ಕಲಾವಿದನು ಅಸಮಾಲಂಕೃತ ಕಲಾಶೈಲಿಯ ಮಹಾನ್ ಲಾವಿದನಾಗಿದ್ದನು. ಟಿಪೆಲೋ ಚಿತ್ರಿಸಿದ ಈ ಅರಮನೆಯ ಒಳಮಾಳಿಗೆಯನ್ನು ೋಡಿದಾಗ ಆಕಾಶದಲ್ಲಿರುವ ಕಿಂಡಿಯಿಂದ ಹಾರಾಡುವ ಮನುಷ್ಯಾಕೃತಿಗಳನ್ನೂ ೋಡಗಳನ್ನು ನೋಡುತ್ತಿರುವಂತೆ ಭಾಸವಾಗುತ್ತದೆ; ನಾವೂ ಅದೇ ಚಿತ್ರದ ಒಂದು ಗವಾಗಿ ಹೋಗುತ್ತೇವೆ. ಇದನ್ನೇ ಬರೋಕ್ ಎನ್ನುವುದು.

ಬರೋಕ್ ಶೈಲಿಯ ಪ್ರಾರಂಭ ಕಾಲದಲ್ಲಿಯೇ ಮಹಾನ್ ಕಲಾವಿದನೆಂದು ಶ್ವವಿಖ್ಯಾತನಾದ ಪೀಟರ್‌ಪಾಲ್ ರೂಬೆನ್ಸನು(Peterpaul Rubens) ಇಟಾಲಿಯಲ್ಲಿ ಂಟುವರುಷಗಳ ವರೆಗೆ ಅಭ್ಯಾಸಮಾಡಿ ಆ್ಯಂಟ್‌ವರ್ಪ್(Antwerp)ದ ತನ್ನ ಮನೆಗೆ ರಳಿ ಬಂದನಂತರ ಆ್ಯಂಟ್‌ವರ್ಪನು ಯುರೋಪಿಯನ್ ಕಲೆಯ ಕೇಂದ್ರವನ್ನಾಗಿಮಾಡಿದನು. ೂಬೆನ್ಸ್ ಚಿತ್ರಿಸಿದ ಟ್ರಾಯಂಫ್ ಆಫ್‌ಲವ್(Triumph of Love) ಎಂಬ ಕಲಾಕೃತಿಯು ಂಗಾರದ ಬೆಳಕನ್ನು ಚೆಲ್ಲುವ ಸತ್ವಪೂರ್ಣ ಕಲಾಕೃತಿಯಾಗಿದೆಯಲ್ಲದೆ ಅಸಮಾಲಂಕೃತಿ ಾಶೈಲಿಯ ಮಹೋನ್ನತ ಕೃತಿ ಎಂದು ಪರಿಗಣಿತವಾಗಿದೆ. ನಿಜವಾದ ಅಸಮಾಲಂಕೃತಿ ುಕ್ತ ಶೈಲಿಯ ಈ ಚಿತ್ರವು ಚೌಕಟ್ಟಿನ ಪರಿಮಿತಿಯನ್ನು ಮೀರಿ ಚಿತ್ರಿತವಾದಂತೆ ಕಾಣಿಸುತ್ತದೆ.

ೋಕೊಕೊ(Rococo) ಅಥವಾ ಅತ್ಯಲಂಕಾರ ಕಲೆ-

ಕ್ರಿ. ಶ. ೧೭೦೦ರಲ್ಲಿ ರೋಕೊಕೊ ಅಥವಾ ಅತ್ಯಲಂಕಾರ ಕಲಾಶೈಲಿಯು ುರೋಪಿನಲ್ಲೆಲ್ಲ ಸುಪ್ರಸಿದ್ಧವಾಗಿತ್ತು. ರೊಕೊಕೊ ಕಲೆಯು ಅಲಂಕಾರ ಪೂರ್ಣವೂ ಾವನಾ ಪ್ರಧಾನವೂ ಆದ ಒಂದು ಕಲಾಶೈಲಿಯಾಗಿದೆ.

ಈ ಶೈಲಿಯು ಪ್ರಪ್ರಥಮವಾಗಿ ದಕ್ಷಿಣ ಜರ್ಮನಿಯ ಪ್ರಾಂತಗಳ ಅರಮನೆಗಳು ತ್ತು ಚರ್ಚುಗಳ ಒಳಾವರಣಗಳನ್ನು ಅಲಂಕಾರಯುಕ್ತ ವರ್ಣಚಿತ್ರಗಳಿಂದ ಅಲಂಕರಿಸುವ ೂಲಕ ಪ್ರಾರಂಭವಾಯಿತು. ಚರ್ಚುಗಳ ಒಳಾವರಣಗಳು ಬಿಳಿ ಮತ್ತು ಬಂಗಾರದ ್ಣಗಳಿಂದ ಅಲಂಕರಿಸಲ್ಪಡುತ್ತಿದ್ದವು. ಬರೋಕ್ ಶೈಲಿಯ ಸೃಜನ ಶೀಲ ಕುಟುಂಬದವರಾದ ಸಮರು(Asams) ಮತ್ತು ಝಿಮ್ಮರ್‌ಮನ್ನರು(Zimmermanns) ರೋಕೊಕೊ ಶೈಲಿಗೆ ುಗಿದರು. ಈ ಕಾಲದ ಸುಪ್ರಸಿದ್ಧ ಅಲಂಕಣಕಾರನೆನಿಸಿದ ಗಿಯೋವನಿ ಬಾಟಿಸ್ಟಾ ಪೊಲೋ(Giovanni Battista Tiepolo) ಎಂಬ ವೇನೇಷಿಯನ್ ಚಿತ್ರಕಲಾವಿದನು ೇಕ ಅರಮನೆಗಳ ಮತ್ತು ಚರ್ಚುಗಳ ಒಳಮಾಳಿಗೆಗಳಲ್ಲಿ ಅತ್ಯದ್ಭುತವಾದ ಂಕಾರಯುಕ್ತ ಭಿತ್ತಿಚಿತ್ರಗಳನ್ನು ರಚಿಸಿದ್ದಾನೆ. ವೆನಿಸ್ ಪಟ್ಟಣದ ರೆಝ್ಝೋನಿಕೊ(Rezzonico) ಬ ಅರಮನೆಯಲ್ಲಿ ಟೀಪೋಲೊ ಚಿತ್ರಿಸಿದ ನೋಬಿಲಿಟ್ ಆ್ಯಂಡ್ ವ್ಹರ್ಚ್ಯೂ(Nobility l Virutue) ಎಂಬ ಭಿತ್ತಿಚಿತ್ರವು ಪ್ರೇಕ್ಷಣೀಯವಾಗಿದೆ. ಬಹುಶಃ ಈ ಭಿತ್ತಿಚಿತ್ರಗಳು ಶ.೧೭೦೦ರಲ್ಲಿ ಚಿತ್ರಿತವಾದವುಗಳಾಗಿವೆ.

ರೋಕೊಕೊ ಯುಗದ ಇನ್ನೊಬ್ಬ ಮಹಾನ್ ಕಲಾವಿದ ಆಂಟೋಯಿನ್

ಪಟ್ಟಾವ(Antoine Watteau) ಬೆಲ್ಜಿಯಂನಲ್ಲಿ ಹುಟ್ಟಿದ ವಟ್ಟಾವ ಫ್ರಾನ್ಸಿನಲ್ಲಿ ನೆಲೆಸಿ ೩೭ರ ಹರೆಯದಲ್ಲಿಯೇ ಕಾಲವಾದನು. ಇವನು ತನ್ನ ಕಾಲದ ಸದ್ಗೃಹಸ್ತರ ಭವ್ಯ ಮಂದಿರಗಳ ಒಳಾವರಣಗಳನ್ನು ಅತ್ಯಲಂಕೃತ ಶೈಲಿಯ ವರ್ಣಚಿತ್ರಗಳಿಂದ ಅಲಂಕರಿಸಿದ್ದನು ಅವನು ಚಿತ್ರಿಸಿದ "ಧಾನ್ಯಗಳ ದೇವತೆ"ಯ ಚಿತ್ರವು ಸೌಂದರ್ಯ ಪೂರ್ಣಚಿತ್ರವಾಗಿದೆ.

ಈ ರೋಕೊಕೊ ಶೈಲಿಯು ಕೇವಲ ವರ್ಣಚಿತ್ರಕಲೆಗೆ ಮಾತ್ರ ಸೀಮಿತವಾಗಿರದೇ ವಾಸ್ತುಶಿಲ್ಪ, ಶಿಲ್ಪ, ಸಂಗೀತ, ನಾಟಕ; ನಕ್ಷಾಚಿತ್ರ ಮುಂತಾದ ಅನೇಕ ಕಲಾ ಪ್ರಕಾರಗಳಿಗೂ ವ್ಯಾಪಿಸ್ತಿತು. ಈ ಕಾಲದಲ್ಲಿ ತಯಾರಿಸಲ್ಪಟ್ಟ ಅಲಂಕಾರಯುಕ್ತ ಚಾಕುವಿನ ಹಿಡಿಕೆಗಳು ಮತ್ತು ಚಹದ ಪಾತ್ರೆಗಳು ಸುಪ್ರಸಿದ್ಧವಾಗಿದ್ದವು. ಒಟ್ಟಿನಲ್ಲಿ ಸುಖಜೀವನದ ಸಾಧನವಾಗಿ ಈ ರೋಕೊಕೊ ಶೈಲಿಯು ಅಂತರ್‌ರಾಷ್ಟ್ರೀಯ ಮನ್ನಣೆಯನ್ನು ಗಳಿಸಿತ್ತು.

ರೋಮ್ಯಾಂಟಿಕ್(Romantic) ಅಥವಾ ರಮ್ಯಶೈಲಿ-

ರೋಮ್ಯಾಂಟಿಕ್ ಅಥವಾ ರಮ್ಯಕಲಾಶೈಲಿಯು ಶತಮಾನಗಳಿಂದಲೂ ಬೆಳೆದು ಬಂದ ಶೈಲಿಯಾಗಿದೆ ಎಂಬದನ್ನು ಚರಿತ್ರೆಯಿಂದ ತಿಳಿಯುತ್ತೇವೆ. ಸಾಹಿತ್ಯ, ಸಂಗೀತ, ದೃಶ್ಯಕಲೆಗಳು ಮತ್ತು ವಾಸ್ತುಶಿಲ್ಪಕಲೆಗಳೆಲ್ಲ ಇತಿಹಾಸದೊಂದಿಗೆ ಬೆಳೆದು ಬಂದ ಈ ರಮ್ಯಶೈಲಿಯಲ್ಲಿಯೇ ರೂಪಿತಗೊಂಡವು. ಈ ಶೈಲಿಯು ಕ್ರಿ.ಶ.೧೭೦೦ ಮತ್ತು



೧೬) ಟರ್ನರ

೦೦ರ ಮಧ್ಯಕಾಲದವರೆಗಿನ ಅವಧಿಯಲ್ಲಿ ಯುರೋಪಿನಲ್ಲಿ ಪ್ರಾರಂಭವಾಗಿ ಮೇರಿಕೆಯ ಸಂಯುಕ್ತ ಸಂಸ್ಥಾನಗಳ ಕಲಾಶೈಲಿಯ ವರೆಗೂ ತನ್ನ ಪ್ರಭಾವವನ್ನು ರಿಸಿತು. ರೋಮ್ಯಾಂಟಿಕ್ ಶೈಲಿಯು ಸಂಯುಕ್ತ ಸಂಸ್ಥಾನಗಳಲ್ಲಿ ಅತೀ ಮಹತ್ವದ ನವನ್ನು ಪಡೆದಿತ್ತು.

ರೋಮ್ಯಾಂಟಿಕ್ ಶೈಲಿಯು ಕಲ್ಪನಾ ಪ್ರಧಾನವಾದ ಶೈಲಿಯಾಗಿದೆ. ರೋಮ್ಯಾಂಟಿಕ್ ವಿದರು ತಮ್ಮ ಕಲಾಕೃತಿಗಳಲ್ಲಿ ಚಮತ್ಕಾರಗಳನ್ನೂ ಆಶ್ಚರ್ಯಕರ ಭಾವನೆಗಳನ್ನೂ ಮ್ಮ ಕಲ್ಪನೆಗಳಿಂದ ತುಂಬುತ್ತಿದ್ದರು.ಹೆಚ್ಚಾಗಿ ಈ ಕಲಾವಿದರು ಪರ್ವತ ಶ್ರೇಣಿಗಳು, ಯಾಸ್ತ, ನದಿಗಳು ಮುಂತಾದ ನೈಸರ್ಗಿಕ ವಸ್ತುಗಳನ್ನೇ ಚಿತ್ರಿಸುತ್ತಿದ್ದರು. ಸೆಫ್.ಎಂ.ಡಬ್ಲ್ಯೂ. ಟರ್ನರ್(Joseph M.W. Turner)ಎಂಬ ಬ್ರಿಟಿಷ್ ಕಲಾವಿದನು ಶೈಲಿಯ ಪ್ರಬುದ್ಧ ಮತ್ತು ಪ್ರಮುಖ ಕಲಾವಿದನಾಗಿದ್ದನು. ಅವನ ಪ್ರಭಾವಶಾಲೀ ನೆಗಳು ಅವನು ನೋಡಿದ ವಸ್ತುಗಳು ಅದ್ಭುತ. ಪ್ರಪಂಚವಾಗಿ ಬದಲಾದವು. ರ್ನರ್ ಚಿತ್ರಿಸಿದ ಐತಿಹಾಸಿಕ ಮತ್ತು ಪೌರಾಣಿಕ ಘಟನೆಗಳು, ಸೂರ್ಯಾಸ್ತಗಳು, ಮುದ್ರದ ದೃಶ್ಯಗಳು ಮುಂತಾದ ಕಲಾಕೃತಿಗಳು ಟರ್ನರ್‌ನ ಅದ್ಭುತ ಕಲ್ಪನಾ ಯನ್ನು ತೋರಿಸುತ್ತವೆ.

ಕ್ಯಾಸ್ಪರ್ ಡೇವಿಡ್ ಫ್ರೀಡಂಚ್(Casper David Friendrich) ಎಂಬ ಕಲಾವಿದನು ಶೈಲಿಯಲ್ಲಿ ಭೂದೃಶ್ಯಗಳನ್ನು ಚಿತ್ರಿಸುವ ಮಹಾನ್ ಕಲಾವಿದನಾಗಿದ್ದನು. ಫ್ರೀಡ್ರಿಚ್ ಸಿದ ಭಯಾನಕ, ಬೆಳದಿಂಗಳಲ್ಲಿ ನಿಂತಿರುವ ಇಬ್ಬರು ಮನುಷ್ಯರುಳ್ಳ "ಟೂ ಮೆನ್ ಲುಕಿಂಗ್ ಅಟ್ ದ ಮೂನ್" ಎಂಬ ಚಿತ್ರವು ಕಲಾವಿದನ ಅದ್ಭುತವಾದ ಕಲ್ಪನೆಗಳ ಯೋಜನೆಯಾಗಿ ಕಂಡುಬರುತ್ತದೆ.

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಪ್ರಪ್ರಥಮ ರೋಮ್ಯಾಂಟಿಕ್ ಕಲಾವಿದ ರ್ಜ್ ಕ್ಯಟ್ಲಿನ್(George Cattlin) ಎಂಬ ಕಲಾವಿದನು ಅಮೇರಿಕನ್ ಇಂಡಿಯನ್ನರ ತ್ತು ಅವರ ನಾಯಕರ ಚಿತ್ರಗಳನ್ನು ಚಿತ್ರಿಸಿದನು. ಈ ಚಿತ್ರಗಳ ರಚನೆಗಾಗಿ ಅವನು ಇಂಡಿಯನ್ನರೊಂದಿಗೆ ಐದು ವರುಷಗಳ ಕಾಲ ವಾಸವಾಗಿದ್ದು ಅನೇಕ ರ್ಣಚಿತ್ರಗಳನ್ನೂ ರೇಖಾಚಿತ್ರಗಳನ್ನೂ ಚಿತ್ರಿಸಿಕೊಂಡನು. ಥಾಮಸ್ ಕೋಲ(Thomas e) ಎಂಬ ಇನ್ನೊಬ್ಬ ರೋಮ್ಯಾಂಟಿಕ್ ಕಲಾವಿದನು ಸಂಯುಕ್ತ ಸಂಸ್ಥಾನಗಳ ಕಾಡು ಡುಗಳ ಭಯಾನಕ ದೃಶ್ಯಗಳನ್ನು ಚಿತ್ರಿಸಿದ್ದು ಅದ್ಭುತ ಕಲಾಕೃತಿಗಳಾಗಿವೆ.

ಷ್ ಕಲೆ-

ಮಧ್ಯಕಾಲೀನ ಇಂಗ್ಲೀಷ್ ವರ್ಣಚಿತ್ರಗಳ ಗುಣಮಟ್ಟವನ್ನು ಹಸ್ತಪ್ರತಿಗಳಲ್ಲಿ ಬಹುದು. ಈ ಹಸ್ತಪ್ರತಿಗಳಲ್ಲಿ ವಾಕ್ಯದ ಮೊದಲಕ್ಷರವನ್ನು ಅಲಂಕಾರಗೊಳಿಸಿ ದಿನ ಅಕ್ಷರಗಳನ್ನು ಬರೆಯಲಾಗುತ್ತಿತ್ತು. ಈ ಹಸ್ತಪ್ರತಿಗಳನ್ನು ಇಲ್ಯೂಮಿನೇಟೆಡ್ ನ್ಯುಸ್ಕ್ರಿಪ್ಟ್(Illuminated Manuscripts)ಚಿಎಂದು ಕರೆಯಲಾಗುತ್ತದೆ. ಕ್ರಿ.ಶ.೧೨ನೆಯ

ಶತಮಾನದಲ್ಲಿ ರಚಿತವಾದ ಇಂಥ ಹಸ್ತಪ್ರತಿಗಳು ಅಳತೆಯಲ್ಲಿ ದೊಡ್ಡದಾಗಿದ್ದು ಉಜ್ವಲವಾಗಿ ಅಲಂಕರಿಸಿದವುಗಳಾಗಿವೆ. ನಂತರದ ಹಸ್ತಪ್ರತಿಗಳು ಚಿಕ್ಕವಾಗಿದ್ದರೂ ಅಲಂಕೃತ ಮೊದಲಕ್ಷರವನ್ನು ಹೆಚ್ಚು ಚಿತ್ತಾಕರ್ಷಕವೂ ಸೂಕ್ಷ್ಮವೂ ಆಗಿ ಚಿತ್ರಿಸಲ್ಪಟ್ಟವುಗಳಾಗಿರುತ್ತವೆ. ೧೩ನೆಯ ಶತಮ್ಯಾನದ ಕೊನೆಹಾಗೂ ೧೪ನೆಯ ಶತಮಾನದ ಆದಿಯಲ್ಲಿ ರಚಿಸಲಾದ ಬ್ಯಾಬಲ್‌ಗಳು ಮತ್ತು ಸಾಲ್ಟರ್ಸ್(Psalters)ಗಳು ಶ್ರೀಮಂತವಾಗಿ ಅಲಂಕರಿಸಿದ ಅಂಚುಗಳ ಮತ್ತು ಸಮಕಾಲೀನ ಜನಜೀವನದ ಮನಮೊಹಕ ಸನ್ನಿವೇಶಗಳ ಚಿತ್ರಣಗಳಿಂದ ಕೂಡಿದವುಗಳಾಗಿವೆ.

ಕ್ರಿ.ಶ. ೧೬ನೆಯ ಶತಮಾನದಲ್ಲಿ ಬ್ರಿಟಿಷ್ ಕಲೆಯ ನವೋದಯವಾಯಿತು. ಈ ನವೋದಯಕ್ಕೆ ಫ್ಲೆಮಿಷ್ ಮತ್ತು ಜರ್ಮನ್ ಪ್ರಭಾವ ಕಾರಣವಾಯಿತು. ಜರ್ಮನ್ ಕಲಾವಿದ ಚಿಕ್ಕ ಹಾನ್ಸ್ ಹೋಲ್ಬೀನ(Hans Holbein the Younger)ನ ಉಜ್ವಲವಾದ ಭಾವಚಿತ್ರಗಳು(Portraits) ಎಂಟನೆಯ ಹೆನ್ರಿಯ(Henri VIII) ಆಸ್ಥಾನದಲ್ಲಿದ್ದು ಮನಮೋಹಕ ಕಲಾಕೃತಿಗಳಾಗಿವೆ. ಹೋಲ್ಬೀನ್‌ನ ಅನಂತರ ಎಲಿಝಾಬೆತ್‌ರಾಣಿ(Elizabeth I)ಯ ಕಾಲದಲ್ಲಿ ಅತ್ಯುತ್ತಮವಾದ ಕಿರುಚಿತ್ರ(Miniature Paintings)ಗಳ ಬೆಳವಣಿಗೆಯಾಯಿತು. ಈ ಕಿರುವರ್ಣಚಿತ್ರ(Miniaature Paintings)ಗಳ ಶೈಲಿಯು ಪರಿಪೂರ್ಣ ಇಂಗ್ಲೀಷ್ ಶೈಲಿಯಾಗಿತ್ತು.

ಕ್ರಿ.ಶ. ೧೬ ಮತ್ತು ೧೭ನೆಯ ಶತಮಾನದಲ್ಲಿ ಭಾವಚಿತ್ರವು(Portrature) ಪ್ರೋಟೆಸ್ಟಂಟ್ ಇಂಗ್ಲೀಷ್ ವರ್ಣಚಿತ್ರಕಲೆಯ ಪ್ರಧಾನ ಆಸಕ್ತಿಯಾಗಿತ್ತು. ಹೆಚ್ಚಾಗಿ ಫ್ಲೆಮಿಷ್ ಮತ್ತು ಡಚ್ ಕಲಾವಿದರು ತಮ್ಮ ಮಹಾಪೋಷಕರ ಇಚ್ಛೆಗನುಗುಣವಾಗಿ ತಮ್ಮ ಕಲಾಶೈಲಿಯಲ್ಲಿ ಸುಧಾರಣೆಗಳನ್ನು ತಂದುಕೊಂಡರು. ಫ್ಲೆಮಿಂಗ್ ಕಲಾವಿದ ವ್ಯಾನ್‌ಡೈಕ್(Van Dyck)ನ ಕಲಾಕೃತಿಗಳು ಒಂದನೆಯ ಚಾರ್ಲಸ್ (Charles I)ನ ಆಸ್ಥಾನದ ಘನತರ ವೈಭವವನ್ನು ಪ್ರತಿಬಿಂಬಿಸುತ್ತವೆ. ಡಚ್ ಕಲಾವಿದ ಪೀಟರ್ ಲಿಲಿ(Peter lely)ಯು ಬ್ರಿಟಿಷ ರಾಜ್ಯದ ಪುನಃಸ್ಥಾಪನೆಯ ನಂತರ ಅನೇಕ ನೌಕಾಪಡೆಯ ಅಧಿಕಾರಿಗಳ ಭಾವಚಿತ್ರಗಳನ್ನು ಚಿತ್ರಿಸಿದನು. ಈ ಚಿತ್ರಗಳಲ್ಲಿ ರಾಜ್ಯಸ್ಥಾಪನೆಯ ಹೊಣೆಗಾರಿಕೆಯನ್ನು ಹೊತ್ತ ಅಧಿಕಾರಿಗಳ ವ್ಯಕ್ತಿತ್ವ ಸ್ಪಷ್ಟವಾಗಿ ನಿರೂಪಿಸಲಾಗಿದೆ. ಅಲ್ಲದೆ ಎರಡನೆಯ ಚಾರ್ಲಸ್ (Charlesl II)ನ ಹೆಸರಿಸಬಹುದಾದ ಕೀರ್ತಿಗೆ ಕಾರಣರಾದ ಅನೇಕ ಸುಂದರಿಯರುಗಳನ್ನೂ ಲಿಲಿ ರಮಣೀಯವಾಗಿ ಚಿತ್ರಿಸಿದ್ದಾನೆ.

೧೮ನೆಯ ಶತಮಾನದಲ್ಲಿ ಇಂಗ್ಲಿಷ್ ಕಲಾವಿದರು ತಮ್ಮದೇ ಆದ ಸ್ವತಂತ್ರ ಶೈಲಿಯೊಂದನ್ನು ರೂಪಿಸಿಕೊಂಡರು. ಶ್ರೀಮಂತ ಪೋಷಕರಿಂದ ಈ ಕಲಾವಿದರಿಗೆ ಬಹಳಷ್ಟು ಬೇಡಿಕೆ ಬಂದಿತು. ಈ ಶ್ರೀಮಂತರ ಭಾವಚಿತ್ರಗಳಲ್ಲಿ ಅವರ ಶ್ರೀಮಂತಿಕೆಯ ಠೀವಿ, ಹಿನ್ನೆಲೆಯಲ್ಲಿ ಸಂಪತ್ತು ಎದ್ದುಕಾಣುವಂತೆ ಚಿತ್ರಿಸಿರುವ ರೀತಿ ಅಗಾಧವಾಗಿದ್ದು ಏಳರಿಂದ ಎಂಟು ಅಡಿ ಎತ್ತರದ ಚಿತ್ರಗಳಾಗಿರುತ್ತವೆ. ೧೮ನೆಯ ಶತಮಾನದ ಬ್ರಿಟಿಷ್ ನಡುಗಡ್ಡೆಗಳ ಶ್ರೀಮಂತ ವ್ಯಕ್ತಿಗಳ ಭಾವಚಿತ್ರಗಳನ್ನು ಚಿತ್ರಿಸಿ

ೀನಾಲ್ಡ್(Renolds), ಗೇನ್ಸಬರೋ(Gainsborough) ಅವರ ಕೃತಿಗಳಲ್ಲಿ ಶ್ರೀಮಂತ ುದುಕಿನ ನಯ, ನಾಜೂಕು, ವಿಲಾಸಗಳು ಸ್ಪಷ್ಟವಾಗಿ ಚಿತ್ರಿತವಾಗಿರುವದನ್ನು ಾಣಬಹುದು. ಬೇರೆ ಕೆಲವು ಕಲಾವಿದರು ಭಾವಚಿತ್ರಕಲೆಯಲ್ಲಿ ಪ್ರಾವೀಣ್ಯತೆಯನ್ನು ಡೆಯಲೆತ್ನಿಸಿದರೆ ಸುಪ್ರಸಿದ್ಧ ಕಲಾವಿದ ವಿಲಿಯಂ ಹೋಗಾರ್ಥ್(William Hogarth)ನು ಳದರ್ಜೆಯ ದುಷ್ಪರಿಣಾಮಗಳನ್ನು ತಿದ್ದಿ ಸಾಮಾಜಿಕ ಪರಿವರ್ತನೆಯ ಮಹತ್ವಾಕಾಂಕ್ಷೆಯಿಂದ ನ್ನ ಕಲಾಕೃತಿಗಳನ್ನು ಸೃಷ್ಟಿಸಿದನು. ೧೮ನೆಯ ಶತಮಾನದ ಅಂತ್ಯದಲ್ಲೇ ರಿಚರ್ಡ್ ಿಲ್ಸನ್(Richard Wilson), ಮತ್ತು ಗೇನ್ಸಬರೋ ಅವರು ತೈಲವರ್ಣಗಳಿಂದಲೂ ಾಗೂ ಅಲೇಕ್ಝಾಂಡರ್ ಕಝೆನ್ಸ್ ಜೆ.ಆರ್ ಕಝೆನ್ಸ್(Alexander Cozens), ಅವರು ಲವರ್ಣಗಳಿಂದಲೂ ನಿಸರ್ಗದೃಶ್ಯಚಿತ್ರ(Landscapes)ಗಳನ್ನು ಚಿತ್ರಿಸತೊಡಗಿದರು. ಈ ನಿಸರ್ಗದೃಶ್ಯ ಚಿತ್ರಶೈಲಿಯು ೧೯ನೆಯ ಶತಮಾನದ ಆದಿಯಲ್ಲಿ ಪರಮೋಚ್ಚಸ್ಥಾನ ಡೆದಿರುವದನ್ನು ಟರ್ನರ್(Turner), ಕಾನ್ಸ್‌ಟೇಬಲ್(Constable), ಕ್ರೋಮ(Crome), ಾಟ್ಮನ್(Cotman), ಮುಂತಾದವರ ನಿಸರ್ಗದೃಶ್ಯ ಚಿತ್ರಗಳು ತೋರ್ಪಡಿಸುತ್ತವೆ. ಿಲ್ಸನ್‌ನು ಇಟಾಲಿಯಲ್ಲಿದ್ದು ಕ್ಲಾಡ್(Claude)ನನ್ನು ಅನುಸರಿಸಿಯೇ ನಿಸರ್ಗ ದೃಶ್ಯಗಳನ್ನು ಿತ್ರಿಸುತ್ತಿದ್ದನು. ಈ ಚಿತ್ರಗಳು ನಿಸರ್ಗದ ಭಾವಚಿತ್ರಗಳಂತೆ ಕಾಣಿಸುತ್ತವೆಯೇ ೊರತಾಗಿ ಕ್ಲಾಡ್‌ನ ಆದರ್ಶನೀಯ ನಿಸರ್ಗದೃಶ್ಯ ಚಿತ್ರಗಳ ಅನುಕರಣೆಯಲ್ಲ. ಾನ್ಸ್‌ಟೇಬಲ್, ಟರ್ನರ್ ಮತ್ತು ಅನೇಕ ಜಲವರ್ಣಚಿತ್ರ ಕಲಾವಿದರು ೧೯ನೆಯ



೧೭) ಶ್ರೀಮತಿ ಶ್ರೀ ರಾಬರ್ಟ್ ಆಂಡ್ರೂಸ್ ಅವರ ಭಾವಚಿತ್ರ

ಶತಮಾನದ ಫ್ರೆಂಚ್ ಕಲಾವಿದರಿಗೆ ಸ್ಫೂರ್ತಿನೀಡದ ೧೯ನೆಯ ಶತಮಾನದ ಮಧ್ಯಕಾಲದಿಂದೀಚೆಗೆ ನೂರುವರುಷಗಳ ಅವಧಿಯಲ್ಲಿ ಬ್ರಿಟಿಷ್ ಕಲೆಯು ವೈವಿಧ್ಯಮಯವಾಗಿ ಅರಳಿತು. ಪ್ರೀ-ರಾಫೇಲೈಟ್ ಕಲಾವಿದರು ಹಿಂದಿನ ಇಟಾಲಿಯನ್ ಕಲೆಯ ಸಾಮರ್ಥ್ಯವನ್ನು ಮರಳಿ ಪಡೆಯಲು ಯತ್ನಿಸಿದರು. ವಿಲ್ಲಿಯಮ್ ಮೊರಿಸ್(William Morris)ನು ಸಾಂಪ್ರದಾಯಕ ಕರಕುಶಲಕಲೆಯ ನೈಪುಣ್ಯತೆಯ ವೈಭವವನ್ನು ಮರಳಿ ಪುನಶ್ಚೈತನ್ಯಗೊಳಿಸಲೆತ್ನಿಸಿದನು. ಸಮಷ್ಟಿ ಪರಿಣಾಮವಾದ ಶೈಲಿಯನ್ನು ಅಭ್ಯಾಸಮಾಡಿದ ಕೆಲವು ವರ್ಣಚಿತ್ರಕಾರರು ರಾಯಲ್ ಅಕಾಡೆಮಿಯ ಪ್ರಗತಿಶೀಲ ಪ್ರತಿಸ್ಪರ್ಧಿಗಳಾಗಿ ೧೮೬೬ರಲ್ಲಿ ಆಧುನಿಕ ಕಲಾಸಂಘವೊಂದನ್ನು ಸ್ಥಾಪಿಸಿದರು. ಅವರಲ್ಲಿ ಫಿಲಿಪ್ ವಿಲ್ಸನ್ ಸ್ಟೀಯರ್(Philip Wilson Steer) ಮತ್ತು ವಾಲ್ಟರ್ ರಿಚರ್ಡ್ ಸಿಕರ್ಟ್(Walter Richard Sickert) ಅವರು ಪ್ರಮುಖರಾಗಿದ್ದರು. ಸಿಕರ್ಟ್‌ನು ತಾನು ಫ್ರೆಂಚ್ ಕಲಾವಿದ ಡೇಗಾಸ್(Degas)ನ ಶಿಷ್ಯನೆಂದು ತಾನೇ ಘೋಷಿಸಿಕೊಂಡಿದ್ದನು. ಹಾಗೆಯೇ ಅನೇಕ ಇಂಗ್ಲಿಷ್ ಕಲಾವಿದರು ಡೀಪ್ಪೀ(Dieppe) ಎಂಬ ಫ್ರೆಂಚ್ ಪಟ್ಟಣದಲ್ಲಿ ತಮ್ಮ ವರ್ಣಚಿತ್ರಕಲಾಕೃತಿಗಳ ರಚನೆಯಲ್ಲಿ ಬಹುಕಾಲವನ್ನು ಕಳೆದರು. ೨೦ನೆಯ ಶತಮಾನದಲ್ಲಿ ಬ್ರಿಟಿಷ್ ಕಲೆಯು ಪ್ರಬುದ್ಧಮಾನಕ್ಕೆ ಬಂದಿತು. ಜರ್ಮನ್ ವಾಸ್ತುಶಿಲ್ಪಿಗಳು ಇಂಗ್ಲೆಂಡ್‌ನಲ್ಲಿ ಕೆಲಸಮಾಡಿದರು, ಅನೇಕ ರೀತಿಯ ಕಲಾಪ್ರದರ್ಶನಗಳೇರ್ಪಟ್ಟವು. ಎರಡನೆಯ ಜಾಗತಿಕ ಮಹಾಯುದ್ಧದಿಂದೀಚೆಗೆ ಹೆನ್ರಿಮೂರ್(Henri Moore) ಎಂಬ ಮೂರ್ತಿಶಿಲ್ಪಕಾರನು ವಿಶ್ವವಿಖ್ಯಾತಿಯನ್ನು ಪಡೆದನಲ್ಲದೇ ಬಾರ್ಬರಾ ಹೆಪ್‌ವರ್ತ್(Barbara Hepworth) ರೆಗ್ ಬಟ್ಲರ್(Reg Butler) ಮತ್ತು ಲಿನ್ ಛಾಡ್ವಿಕ್(Lynn Chadwick)ರಂತಹ ತರುಣ ಶಿಲ್ಪಿಗಳಿಗೆ ಸ್ಫೂರ್ತಿದಾಯಕನೂ ಆದನು.

ಜಪಾನೀ ಚಿತ್ರಕಲೆ-

ಜಪಾನೀ ಕಲೆಯು ಹೆಚ್ಚಾಗಿ ಚೈನಾ ಕಲೆಯಿಂದ ಸ್ಫೂರ್ತಿಗೊಂಡುದಾಗಿದೆ ಕ್ರಿ.ಶ. ೭ನೆಯ ಶತಮಾನದಲ್ಲಿ ಚೈನಾದೇಶದ ಕಲೆಯು ಉನ್ನತ ಮಟ್ಟದಲ್ಲಿ ಅಭಿವೃದ್ಧಿ ಹೊಂದಿದಾಗ ಜಪಾನದ ಪ್ರಪ್ರಥಮ ವರ್ಣಚಿತ್ರಕಲಾಕೃತಿಯ ರಚನೆಯಾಯಿತು. ಕ್ರಿ.ಶ. ೬ನೆಯ ಶತಮಾನದ ನಂತರ ಜಪಾನಿನಲ್ಲಿ ಬೌದ್ಧಧರ್ಮದ ಪರಿಚಯವಾದಾಗ ಚೀನ ಮತ್ತು ಕೋರಿಯ ದೇಶಗಳ ಕಲಾವಿದರು ಜಪಾನಿಗೆ ಬಂದು ಅನೇಕ ಕಲಾಕೃತಿಗಳನ್ನು ರಚಿಸಿದರು. ಈ ಕಾರಣವಾಗಿ ಕ್ರಿ.ಶ. ೯ನೆಯ ಶತಮಾನದ ವರೆಗೆ ಜಪಾನಿನಲ್ಲಿ ಬೆಳೆದುಬಂದ ಕಲೆಯಲ್ಲಿ ಚೈನಾ ಇಲ್ಲವೇ ಕೋರಿಯದ ಕಲೆಯ ಪ್ರಧಾನ ಗುಣಧರ್ಮಗಳು ಸ್ಪಷ್ಟವಾಗಿರುತ್ತವೆ.

ಜಪಾನದ 'ನಾರಾ'ದ ಹತ್ತಿರ ವಿರುವ 'ಹೊಯರ್ೂಜಿ'(Horyuji) ದೇವಾಲಯ ಭಿತ್ತಿಚಿತ್ರಗಳು ಇದೇ ಕಾಲದಲ್ಲಿ ಚಿತ್ರಿತವಾದವುಗಳಾಗಿವೆ. ನಾರಾದಲ್ಲಿರುವ ಶೋಸೋಯಿನ್(Shosoin) ವಸ್ತು ಸಂಗ್ರಹಾಲಯವು ಪ್ರಪಂಚದಲ್ಲಿಯೇ ಅತ್ಯಂತ ಹಳೆಯದಾದ ವಸ್ತುಸಂಗ್ರಹಾಲಯವಾಗಿದೆ. ಈ ವಸ್ತುಸಂಗ್ರಹಾಲಯದಲ್ಲಿರುವ ಅನೇಕ



೧೮) ಜಪಾನಿ ಚಿತ್ರಕಲೆ

ಮೂಲ್ಯವಾದ ಪಿಂಗಾಣಿ ಪಾತ್ರೆಗಳು, ಗಾಜು ಮತ್ತು ಲೋಹದ ವಸ್ತುಗಳಲ್ಲದೇ ಯ್ಗೆಯ ಕಲಾಕೃತಿಗಳೇ ಮುಂತಾದ ಅದ್ವಿತೀಯ ಗೃಹಬಳಕೆಯ ವಸ್ತುಗಳಿದ್ದು, ವುಗಳನ್ನು ಜಪಾನಿನ ಸಾಮ್ರಾಜ್ಞಿಯೊಬ್ಬಳು ಈ ವಸ್ತು ಸಂಗ್ರಹಾಲಯಕ್ಕೆ ಸಮರ್ಪಿಸಿದ್ದಾಳೆ. ಕಲಾಕೃತಿಗಳಲ್ಲಿ ಚೈನಾ ದೇಶದ ಕರಕುಶಲಕಲಾ ನೈಪುಣ್ಯತೆಯನ್ನು ಕಾಣಬಹುದು. ಶ. ೧೦ನೆಯ ಶತಮಾನದ ವೇಳೆಗೆ ಜಪಾನ ಕಲೆಯು ತನ್ನದೇ ಆದ ಸ್ವರೂಪವನ್ನು ತೆಯಿತು. ಜಪಾನೀ ಬೌದ್ಧ ವರ್ಣಚಿತ್ರಕಲೆ ಮತ್ತು ಮೂರ್ತಿಶಿಲ್ಪಕಲೆಗಳಲ್ಲಿ ಸಾಮಾನ್ಯವಾದ ರಮ್ಯತೆಯು ಸ್ಫುಟಗೊಂಡಿತು. ಇದೇ ವೇಳೆಯಲ್ಲಿ ತಲೆ ಎತ್ತಿದ ಮೋಟೋ(Yamato) ಕಲಾಶಾಲೆಯು ಪ್ರಪ್ರಥಮವಾಗಿ ಕಲಾಶೈಲಿಯಲ್ಲಿ ಜಪಾನೀಯತೆ ನ್ನು ಪ್ರಕಟಪಡಿಸಿತು. ಸಾಹಿತ್ಯಕ, ಧಾರ್ಮಿಕ ಮತ್ತು ಐತಿಹಾಸಿಕ ಗ್ರಂಥಗಳಲ್ಲಿ ಜ್ಯಾಗಿ ಮಿಂಚುವ ಬಣ್ಣಗಳನ್ನು ಬಳಸಿ ವೈವಿಧ್ಯಮಯವಾದ ಸಂದರ್ಭ ಚಿತ್ರಗಳನ್ನು ರುಳಿಯಾಕಾರದಲ್ಲಿ ಚಿತ್ರಿಸಿ ಅಲಂಕರಿಸಲಾಯಿತು. ಈ ಸುರುಳಿಗಳಲ್ಲಿ ಜಪಾನ ಸಾಂಗದ ಜನಜೀವನ ಚಿತ್ರಿತವಾಗಿದೆ.

ಕ್ರಿ.ಶ. ೧೩ನೆಯ ಶತಮಾನದ ವೇಳೆಗೆ ಜಪಾನಿನ ಕಲೆಯ ಮೇಲೆ ಚೈನಾಕಲೆಯ ಭಾವವು ಮತ್ತೊಂದು ರೀತಿಯಲ್ಲಿ ಸ್ಫುರಿಸಿತು. ಚೈನಾದೇಶದಲ್ಲಿ ಬಹುದಿನಗಳ ರ್ವದಲ್ಲಿಯೇ ಬಳಕೆಯಲ್ಲಿದ್ದ ಕಪ್ಪುಇಂಡಿಯನ್ ಇಂಕ್(Black Indian Ink)ಅನ್ನು

ಬಳಸುವ ಪದ್ಧತಿ ಜಪಾನಿನಲ್ಲಿ ಬಳಕೆಯಲ್ಲಿ ಬಂದಿತು. ಭೂದೃಶ್ಯಗಳು, ಸಸ್ಯಗಳ
ಪ್ರಾಣಿಜೀವನಗಳು, ಜಪಾನ್ ಚಿತ್ರಕಲಾವಿದರ ಪ್ರೀತಿಯ ವಸ್ತುಗಳಾದವು. ಅನೇ
ಕಲಾಶಾಲೆಗಳ ಉಗಮವಾಯಿತು. ಈ ಕಲಾಶಾಲೆಯನ್ನು ಪ್ರಾರಂಭಿಸಿದ ಕಲಾವಿದ
ಹೆಸರಿನಲ್ಲಿಯೇ ಈ ಕಲಾಶಾಲೆಗಳಿರುತ್ತಿದ್ದು ಇಲ್ಲಿ ಕಲಿಯುವ ವಿದ್ಯಾರ್ಥಿಗಳು ಕಲಾವಿದ
ಕುಟುಂಬಕ್ಕೆ ನಿರ್ದಿಷ್ಟ ಶೈಲಿಯಲ್ಲಿ ವೃದ್ಧಿಗೊಂಡುದಾಗಿರುತ್ತಿತ್ತು. ಕ್ರಿ.ಶ.೧೪೨೦-೧೫೦೬ರಲ
ಜೀವಿಸಿದ್ದ ಶೆಷ್ಷು(Sesshu) ಎಂಬ ಕಲಾವಿದನು "ಕಪ್ಪು ಇಂಡಿಯನ್ ಇಂಕ್
ವರ್ಣಚಿತ್ರಕಲೆಯಲ್ಲಿ ಪ್ರಭುತ್ವವನ್ನು ಪಡೆದ ಕಲಾವಿದನೆಂದು ಪ್ರಸಿದ್ಧಿಯಾಗಿದ್ದನು.

ಕ್ರಿ.ಶ. ೧೬೦೩-೧೮೬೮ರ ಅವಧಿಯಲ್ಲಿ ಆಳುತ್ತಿದ್ದ ಟೋಕುಗವಾ(Tokugawa
ಅರಸರ ಆಳ್ವಿಕೆಯ ಕಾಲದಲ್ಲಿ ಅಭಿವೃದ್ಧಿಗೊಂಡ ಕಲೆಯು ಪರಿಶುದ್ಧವಾದ ಜಪಾನ
ಶೈಲಿಯ ಸ್ವರೂಪವನ್ನು ಪಡೆಯಿತು. ಆದರೂ ಚೈನಾ ಕಲೆಯು ಮೆಚ್ಚುಗೆಯನ
ಮುಂದುವರಿಸಿಕೊಂಡೇ ಹೋಯಿತು. ಜಪಾನಿನಲ್ಲಿ ಉಳಿದುಕೊಂಡು ಬಂದ ಕಲಾಶಾಲೆಗಳ
ಚೈನಾ ಸ್ಫೂರ್ತಿಯಿಂದಲೇ ಕಾರ್ಯನಿರ್ವಹಿಸುತ್ತಿದ್ದರೂ ಹೊಸ ಶೈಲಿಗನುಗುಣವಾ
ಕಲಾಕೃತಿಗಳ ನಿರ್ಮಾಣದಲ್ಲಿ ತೊಡಗಿದವು. ಉಜ್ವಲವಾದ ನೈಸರ್ಗಿಕ ವಸ್ತುವಿ
ನಕ್ಷಾರೂಪ ಚಿತ್ರಣ, ಸಾಟಿ ಇಲ್ಲದ ತಾಂತ್ರಿಕ ನೈಪುಣ್ಯತೆ ಹಾಗೂ ಚಿತ್ರಣದಲ
ಅಂತ್ಯವಿಲ್ಲದ ಅಸಾಮಾನ್ಯ ತಾಳ್ಮೆಗಳು ಈ ಹೊಸ ಶೈಲಿಯ ಪ್ರಮುಖ ಗುಣವೈಶಿಷ್ಟ್ಯಗಳಾಗಿವ
ಹೊಸ ಹೊಸ ವಸ್ತುಗಳೂ ಹೊಸ ರೀತಿಯ ವರ್ಣಗಳ ಹೊಂದಾಣಿಕೆಗಳೂ
ಕಾಣಿಸಿಕೊಂಡವು. ಕನಕವರ್ಣದ ಹಿನ್ನೆಲೆಯು ಈ ಕಲಾಕೃತಿಗಳಲ್ಲಿ ಮಹತ್ವದ
ಸ್ಥಾನವನ್ನು ಗಳಿಸಿಕೊಂಡಿತು. ಪರಿಶುದ್ಧ ಚೈನಾ ಸಾಂಪ್ರದಾಯಕ್ಕಾಗಿಯೇ ಹುಟ್ಟಿಕೊಂಡ
'ಕಾನೊ' ಕಲಾ ಶಾಲೆಯು ಕೂಡ ಈ ಹೊಸ ಶೈಲಿಗೆ ಮಾರುಹೊಗಿ ಅದರ
ಗುಣಧರ್ಮಗಳನ್ನು ಬಳಸಿಕೊಳ್ಳತೊಡಗಿತು. ಕ್ರಿ.ಶ.೧೬ನೆಯ ಶತಮಾನದ ಮಧ
ಭಾಗದಲ್ಲಿ ರಚಿಸಲ್ಪಟ್ಟ "ಬ್ಯೋಬು" (Byobu) ಎಂದು ಕರೆಯಲಾಗುವ ಉಜ್ವಲವಾದ
ಮಡಿಕೆಯ ಜವನಿಕೆಗಳು ಮತ್ತು ಅರಮನೆಗಳು ಹಾಗೂ ದೇವಾಲಯಗಳಲ್ಲಿ ತೂಗ
ಹಾಕಲು ಚಿತ್ರಿಸಲ್ಪಟ್ಟ "ಫೂಸುಮಾ"(Jusuma) ಎಂಬ ವರ್ಣ ಮಹತ್ವಪೂರ್ಣವಾದ
ಸಾಧನೆಗಳಾಗಿವೆ. ಕೋಎತ್ಸು(Koetsu) ಮತ್ತು ಕೋರಿನ್(Korin) ಎಂಬ ವಿಖ್ಯಾತ
ಕಲಾವಿದರ ಕಲಾಕೃತಿಗಳಲ್ಲಿ ಪರಿಪೂರ್ಣ ಜಪಾನೀಯತೆಯನ್ನು ಕಾಣಬಹುದು
ಯೂಕಿಯೋಯೆ(Ukiyoye) ಕಲಾಶಾಲೆಯು ಪ್ರಪ್ರಥಮವಾಗಿ ವರ್ಣಗಳ ಮರಗೆತ್ತನೆಯ
ಕಲಾಕೃತಿ(Coloured wood cuts)ಗಳನ್ನು ರಚಿಸಿ ಸಾಮಾನ್ಯ ಬಡಜನತೆಗೆ ಮಾರುತ್ತಿತ್ತು
ಬಡಜನತೆಯೂ ವರ್ಣಚಿತ್ರಗಳ ಬದಲಾಗಿ ಈ ಮರಗೆತ್ತನೆಯ ಚಿತ್ರಗಳನ್ನು ಅಪೇಕ್ಷ
ಸುಲಭ ಬೆಲೆಯಲ್ಲಿ ಕೊಂಡುಕೊಳ್ಳುತ್ತಿತ್ತು. ಪಟ್ಟಣಗಳಲ್ಲಿ ವಾಸಿಸುವ ಜನಸಾಮಾನ್ಯ
ಸಂತೋಷಕೂಟಗಳು ಮತ್ತು ಚಟುವಟಿಕೆಗಳ ಈ ಮರಗೆತ್ತನೆ ಕಲಾವಿದ
ವಸ್ತುಗಳಾಗಿರುತ್ತಿದ್ದವು. ಪಾಶ್ಚಿಮಾತ್ಯ ಕಲಾವಿದರಾದ ಮ್ಯಾನೆಟ್(Manet) ಮತ
ವ್ಹಿಸ್ಲರ್(Whistler)ರಂತಹ ಅನೇಕ ಪಾಶ್ಚಾತ್ಯ ಕಲಾವಿದರು ಈ ಮರಗೆತ್ತನೆಯ
ಕಲಾಕೃತಿಗಳಿಂದ ಪ್ರಭಾವಿತರಾಗಿದ್ದರು.

ಲ್ಯಾಕರ್(Lacquer) ಇಲ್ಲವೆ ಹೊಂಬಣ್ಣದ ಮೆರುಗನ್ನು ಕೊಡುವ ಅದರಲ್ಲೂ ಗಾರದ ಹೊಳಪನ್ನು ಕೊಡುವ ಪದ್ಧತಿಯು ಚೈನಾ ದೇಶಕ್ಕಿಂತಲೂ ಜಪಾನಿನಲ್ಲಿ ಹ್ಚು ಬಳಕೆಯಲ್ಲಿತ್ತು. ಸುಝುರಿಬಕೊ(Suzuribako)ಎಂದು ಕರೆಯಲ್ಪಡುವ ಬರವಣಿಗೆಯ ಪಕರಣಗಳಾದ ಲೆಕ್ಕಣಿಕೆ, ಕುಂಚ, ಇಂಡಿಯನ್ ಇಂಕ್, ಶಾಯಿಕಲ್ಲು(Ink Stone) ಗೂ ಇನ್ರೋ(Inro) ಎಂದು ಕರೆಯುವ ಸುಗಂಧ ದ್ರವ್ಯಗಳನ್ನು ಹಾಕುವ ಚಿಕ್ಕ ಗೆಗಳೇ ಮೊದಲಾದವುಗಳನ್ನಿಡುವ ಪೆಟ್ಟಿಗೆ ಮುಂತಾದವುಗಳು ಹೀಗೆ ಹೊಂಬಣ್ಣದ ವೇ ಬಂಗಾರದ ಹೊಳಪನ್ನು ಕೊಟ್ಟು ಸಿದ್ಧಪಡಿಸಿದ ವಸ್ತುಗಳಾಗಿರುತ್ತವೆ. ಅಲ್ಲದೆ ಪನೀ ಕುಂಭಕಲೆಯೂ ವಿಶ್ವವಿಖ್ಯಾತವಾಗಿದೆ.

ರಾಫೆಲೈಟ್(Pre-Raphaelite) ಕಲೆ–

ವಿಶ್ವವಿಖ್ಯಾತ ಇಟಾಲಿಯನ್ ಕಲಾವಿದ ರಾಫೆಲ್‌ನ ಕಾಲಕ್ಕಿಂತ ಮೂರುನೂರು ಷಗಳ ಹಿಂದೆ ರೂಢಿಯಲ್ಲಿದ್ದ ಧಾರ್ಮಿಕ ಮನೋಭಾವನೆ ಹಾಗೂ ಮುಕ್ತಿ ರ್ಗತತ್ವ ಭಾವನಗಳಿಗನುಸಾರವಾಗಿಯೇ ಸಾಹಿತ್ಯಿಕ ಮತ್ತು ಕಲಾತ್ಮಕ ಚಟುವಟಿಕೆಗಳು ರ್ಯರೂಪಕ್ಕೆ ಬರಬೇಕೆಂಬ ಕೆಲವು ಸಾಹಿತಿಗಳ ಮತ್ತು ಕಲಾವಿದರ ಉದ್ದೇಶಗಳಿಂದಾಗಿ ರಬಂದ ಕಲಾಸಾಂಪ್ರದಾಯವನ್ನು ಪ್ರಿ- ರಾಫೆಲೈಟ್ ಇಲ್ಲವೆ ರಾಫೆಲ್ ಪೂರ್ವ ಕಲೆ ದು ಕರೆಯಲಾಗುತ್ತದೆ.

ರಾಫೆಲನ ಕಾಲದವರೆಗೆ ಸುಮಾರು ಮೂರು ನೂರು ವರುಷಗಳ ಅವಧಿಯಲ್ಲಿ ಸಲ್ಪಟ್ಟ ಕಲಾಕೃತಿಗಳ ವಸ್ತು ಮತ್ತು ರೂಪಗಳು ಈ ಕಲಾವಿದರಿಗೆ ಹಳಸಲು ವಸ್ತು, ಪಗಳಾಗಿ ಕಂಡವು. ಡಾಂಟೆ ಗೇಬ್ರಿಯಲ್ ರೋಸೆಟಿ(Dante Gabriel Rossetti) ಬ ಕವಿಯೂ ಕಲಾವಿದನೂ ಆದ ವ್ಯಕ್ತಿಯಿಂದ ಈ ಚಳವಳಿಯು ಕ್ರಿ.ಶ. ೪೮ರಲ್ಲಿ ಪ್ರಾರಂಭವಾಯಿತು. ಈ ಕ್ರಾಂತಿಕಾರಿ ಚಳವಳಿಯಲ್ಲಿ ಸಹಾಯಕರಾಗಿ ಯಂ ಹಾಲ್ಮನ್ ಹಂಟ್(William Holman Hunt) ಮತ್ತು ಜಾನ್ ಎವರೆಟ್ ಲ್ಲೇಸ್(John Everett Millais) ಎಂಬ ಸಮಾನ ಮನಸ್ಕರಾದ ಕಲಾವಿದರಲ್ಲದೇ ರ್ಡ್ ಮ್ಯಾಡೋಕ್ಸ ಬ್ರೌನ್(Jord Madox Brown) ಎಂಬ ವರ್ಣಚಿತ್ರಕಾರನೂ ನಾ ರೊಸೇಟಿ(Christina Rossette), ಕವೆಂಟ್ರಿ ಪ್ಯಾಟ್‌ಮೋರ್(Covetry Patmore), ಬ ಕವಿಗಳೂ ಕಲಾವಿದ ರೋಸೇಟಿಯೊಂದಿಗೆ ಪಾಲುಗೊಂಡರು.

ಹೊಸ ಹುರುಪು ಹುಮ್ಮಸ್ಸುಗಳೊಂದಿಗೆ ಪ್ರಾರಂಭವಾದ ಈ ಕಲಾಪ್ರಕಾರದಲ್ಲಿ ವಾದ ತತ್ವನಿಷ್ಠತೆಗಿಂತ ಉತ್ಸಾಹ ಮತ್ತು ಉನ್ನತವಾದ ಆದರ್ಶಗಳು ಪ್ರಾಮುಖ್ಯತೆಯನ್ನು ದುಕೊಂಡಿದ್ದವು. ಕವಿ ಕೀಟ್ಸ್(Keats)ನ ಮಧ್ಯಕಾಲೀನ ಮತ್ತು ಇಟಾಲಿಯ ಪ್ರಕೃತಿ ರ್ಣನೆಗಳ ಪ್ರಭಾವವು ಈ ಸಾಂಪ್ರದಾಯದ ಮೇಲೆ ಬಹುವಾಗಿತ್ತು. ಹಂಟ್ ಮತ್ತು ಲ್ಲೇಸ್ ಇವರ ಕಲಾಕೃತಿಗಳಲ್ಲಿ ಈ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು. . ೧೫ನೆಯ ಶತಮಾನದ ಫ್ಲೆಮಿಷ್ ಕಲಾವಿದರು ಬಳಸುತ್ತಿದ್ದ ಕಣ್ಣುಕೋರೈಸುವ ತ್ತು ಶಕ್ತಿಯುತ ವರ್ಣಗಳ ಬಳಕೆಯ ತಂತ್ರವನ್ನು ಅಳವಡಿಸಿಕೊಂಡಿದ್ದರು.

ಕಲಾಕೃತಿಗಳ ರಚನೆಯಲ್ಲಿ ಮೋಕ್ಷ ಸಂಪಾದನೆಯ ನೈತಿಕ ತತ್ವ ಹಾಗೂ ನಿರ್ದಿ ಮತ್ತು ದಾಖಲೆಗಳ ಮಾರ್ಗ ಸಮನ್ವಯವು ಚಿತ್ರಿಸಲಿರುವ ವಸ್ತು ಮತ ತಂತ್ರಗಳೊಂದಿಗೆ ಬೆರೆತುಕೊಂಡಿರುವಂತೆ ಕಾಳಜಿ ವಹಿಸುವದೇ ಪ್ರಿ- ರಾಫೆಲಾಯಿಟ ಇಲ್ಲವೆ ರಾಫೇಲ ಪೂರ್ವಕಲೆಯ ಮುಖ್ಯ ಸಾರವಾಗಿರುತ್ತದೆ.

ಅಮೇರಿಕದ ಕಲೆ-

ಇಂದಿಗೆ ಮೂರು ನೂರು ವರುಷಗಳ ಹಿಂದೆಯೇ ಯುರೋಪಿನ ವಲಸೆಗಾರರ ಅಮೇರಿಕದಲ್ಲಿ ಬಂದು ನೆಲೆಗೊಂಡು ತಮ್ಮದೇ ಆದ ವಸಾಹತುಗಳನ್ನು ಸ್ಥಾಪಿಸಿಕೊಂಡರು ತಮ್ಮ ನಿತ್ಯ ಜೀವನಕ್ಕೆ ಅಗತ್ಯವಾದ ವಸ್ತುಗಳನ್ನು ತಾವೇ ತಯಾರಿಸಿಕೊಂಡರು. ತಲೆಯ ಮೇಲೆ ಸೂರು ಅಗತ್ಯವಾದ್ದರಿಂದ ವಾಸ್ತುಶಿಲ್ಪಕಲೆಯು ಇಲ್ಲಿ ಪ್ರಧಾನವಾಯಿತು ವರ್ಣಚಿತ್ರಕಲೆ ಮತ್ತು ಮೂರ್ತಿಶಿಲ್ಪಕಲೆಗಳು ಜೀವನಾವಶ್ಯಕವಾದ ಕುಶಲಕಲೆಗಾರಿಕೆಗಳಾ ಬೆಳೆದು ಬಂದವು. ಕ್ರಿ.ಶ.೧೭೦೦ ಮತ್ತು ೧೮೦೦ ರ ಅವಧಿಯಲ್ಲಿ ಇಲ್ಲಿ ಪ್ರತಿಯೊಬ್ಬ ವಸಾಹತುದಾರನೂ ಕುಶಲಕಲೆಗಾರ, ವಾಸ್ತುಶಿಲ್ಪಕಾರ, ಕೈಗಾರಿಕೆದಾರನಾಗಿದ್ದನು ಸ್ಥಾನೀಯ ವಸ್ತುಗಳ ಬಳಕೆ ಸಾಮಾನ್ಯವಾಗಿತ್ತು. ಯುರೋಪಿನ ಪ್ರಭಾವದಲ್ಲಿಯೆ ಬದುಕಿನ ಬಹುಭಾಗ ಬೆಳೆದು ಬಂದಿತು.

ಯುರೋಪಿನ ವರ್ಣಚಿತ್ರಕಲೆಯು ಅಮೇರಿಕದ ವರ್ಣಚಿತ್ರ ಕಲೆಯ ಮೇಲೆಯೂ



೧೯) ಗ್ರಾಂಟ್‌ವುಡ್

ನ್ನ ಪ್ರಭಾವವನ್ನು ಬೀರಿತು. ಅಮೇರಿಕೆಯ ಸುಪ್ರಸಿದ್ಧ ವರ್ಣಚಿತ್ರಕಲಾವಿದರಾದ ಬೆಂಜಾಮಿನ್ ವೆಸ್ಟ್ ಮತ್ತು ಜಾನ್ ಸಿಂಗಲ್ಟನ್ ಕಾಪ್ಲೆ ಅವರು ಕ್ರಿ.ಶ.೧೭೭೦ರಲ್ಲಿ ಇಟಾಲಿಯ ಉತ್ತಮೋತ್ತಮ ಕಲಾವಿದರ ಜೊತೆಗೆ ಅಭ್ಯಾಸ ಮಾಡುತ್ತಿದ್ದರು. ಕೂಡಲೇ ಅವರು ಖ್ಯಾತಿಯನ್ನೂ ಗಳಿಸಿದರು. ತಮ್ಮೊಂದಿಗೆ ಯುರೋಪಿಗೆ ಬಂದ ತರುಣರಿಗೆ ತಮ್ಮ ಜಾಣ್ಮೆಯನ್ನೂ ಕಲಿಸಿಕೊಟ್ಟರು. ಈ ವಿದ್ಯಾರ್ಥಿಗಳು ಯೂರೋಪಿನಿಂದ ಮರಳಿ ಅಮೇರಿಕೆಗೆ ಬರುವಾಗ ಯುರೋಪಿನ ಸಾಂಪ್ರದಾಯಕ ಶೈಲಿಯೊಂದಿಗೆ ಬಂದರು.

ಕ್ರಿ.ಶ. ೧೮ನೆಯ ಶತಮಾನದ ಕೊನೆಯಲ್ಲಿ ಅಮೇರಿಕೆಯಲ್ಲಿ ಕಲಾಶಾಲೆಗಳು ಹುಟ್ಟಿಕೊಂಡವಲ್ಲದೇ ಇಲ್ಲಿ ತಯಾರಾದ ಕಲಾವಿದರು ಅಮೇರಿಕೆಯ ಹೊರಗಡೆಯಲ್ಲಿಯೂ ಹೆಸರುಗಳಿಸಿದರು. ಯೂರೋಪಿನ ಫ್ರೆಂಚ್ ಮೂರ್ತಿಶಿಲ್ಪಕಲಾವಿದನಾದ ಹೌಡನ್(Haudon), ಫ್ರೆಂಚ್ ವಾಸ್ತುಶಿಲ್ಪಿಯೂ ನಗರಯೋಜಕನೂ ಆದ ಎಲ್' ಎನ್‌ಫಾಂಟ್ (L'Enfont)ರಂತಹ ಯುರೋಪಿನ ಕಲಾವಿದರು ಅಮೇರಿಕೆಗೆ ಬಂದರು. ಹೌಡನ್ನನು ಜಾರ್ಜವಾಶಿಂಗ್ಟನ್‌ನ ಅನೇಕ ಅರ್ಧಾಕೃತಿಗಳ(Portrait Busts) ಪ್ರತಿಮೆಗಳ ಕೆತ್ತನೆ ಮಾಡಿದರೆ, ಎಲ್. ಎನ್‌ಫಾಂಟಸು ಹೊಸ ರಾಜಧಾನಿ ನಗರ ವಾಶಿಂಗ್ಟನ್‌ಗಾಗಿ ಯೋಜನೆಯನ್ನು ಮಾಡಿದನು. ಕ್ರಿ.ಶ.೧೯ನೆಯ ಶತಮಾನದಲ್ಲಿ ಅಮೇರಿಕೆಯು ವಾಣಿಜ್ಯ ವ್ಯವಹಾರ ಮತ್ತು ಸಂಪತ್ತಿನಲ್ಲಿ ಶೀಘ್ರಗತಿಯಲ್ಲಿ ಅಭಿವೃದ್ಧಿ ಹೊಂದಿತು. ಹೊಸ ಶ್ರೀಮಂತರು ಸುಖಭೋಗಗಳತ್ತ ಗಮನ ಹರಿಸಿದರು. ಬಾಸ್ಟನ್(Boston), ನ್ಯೂಯಾರ್ಕ್(New York) ಮತ್ತು ಫಿಲಿಡೆಲ್ಫಿಯಾ ಮುಂತಾದ ಬಂದರುಗಳ ಪಟ್ಟಣಗಳು ವಿಶಾಲವಾಗಿ ಬೆಳೆಯ ತೊಡಗಿದವು. ಔದ್ಯೋಗಿಕ ನಗರಗಳು ಉದ್ಭವವಾದವು. ಆದರೆ ವರ್ಣಚಿತ್ರಕಲೆಯಲ್ಲಿ ಮಾತ್ರ ಅಲ್ಪಪ್ರಮಾಣದ ಪ್ರಗತಿಯ ಲಕ್ಷಣಗಳು ಕಂಡುಬಂದವು. ಕಲಾವಿದರು ತಮ್ಮ ಸುತ್ತ ಮುತ್ತಲಿನ ಸ್ಥಳೀಯ ನೈಸರ್ಗಿಕ ಸೌಂದರ್ಯದತ್ತ ಗಮನ ಹರಿಸತೊಡಗಿದರು. ಈ ಕಲಾವಿದರು ವೃತ್ತಪತ್ರಿಕೆಗಳ ವರದಿಗಾರ ಕಲಾವಿದರಾದರು. ಅವರು ಮೂಲ ವಸಾತುಗಳ ಭೂದೃಶ್ಯ(Landscape) ಗಳನ್ನು ಚಿತ್ರಿಸಿದರು; ಪ್ರತಿನಿತ್ಯದ ಜೀವನದ ದೃಶ್ಯಗಳನ್ನು ತಮ್ಮ ಕಲಾಕೃತಿಗಳಲ್ಲಿ ಸೆರೆಹಿಡಿಯಲು ಪ್ರಯತ್ನಿಸಿದರು.

ಈ 'ವರದಿಗಾರ ಕಲಾವಿದ'ರಲ್ಲಿ ವಿನ್ಸ್ಲೊ ಹೋಮರ್(Winslow Homer)ನು ಅಗ್ರಗಣ್ಯ ಕಲಾವಿದನಾಗಿದ್ದನು. ಹೋಮರನು ಪರದೇಶಗಳಿಗೆ ಹೋಗಿ ಕಲೆಯ ಅಭ್ಯಾಸವನ್ನು ಮಾಡಲಿಲ್ಲವಾದರೂ ಯುರೋಪಿಯನ್ ಕಲಾವಿದ ಪ್ರೇರೇಪಿತನಾಗಿ ತನ್ನಷ್ಟಕ್ಕೆ ತಾನೇ ಕಲೆಯ ಅಭ್ಯಾಸ ಮಾಡಿದನು. ಛಾಯಾಗ್ರಹಣ ಕಲೆಯ ಶೋಧವು ಇನ್ನೂ ಆಗಿರಲಿಲ್ಲವಾದ ಕಾರಣ ವೃತ್ತ ಪತ್ರಿಕೆಗಳು ಕಲಾವಿದರಿಂದ ಚಿತ್ರಿಸಲ್ಪಟ್ಟ ಚಿತ್ರಗಳಿಗಾಗಿ ಕಾಯಬೇಕಾಗುತ್ತಿತ್ತು ಈ ಕಾರಣವಾಗಿ ಹೋಮರನು ಅಮೇರಿಕೆಯ ವೃತ್ತಪತ್ರಿಕೆಯೊಂದರಲ್ಲಿ ಸಂದರ್ಭಚಿತ್ರಕಾರನಾಗಿ(Illustrator) ತನ್ನ ಜೀವನೋಪಾಯಕ್ಕಾಗಿ ಸೇರಿಕೊಂಡನು. ವೃತ್ತ ಪತ್ರಿಕೆಗಳ ಯುಗವೆಂದೇ ಕರೆಯಲ್ಪಟ್ಟ ಈ ಕಾಲದಲ್ಲಿ ಕ್ಯಾಲೆಂಡರ ಚಿತ್ರಗಳು, ನಗರ ಮತ್ತು ಗ್ರಾಮಾಂತರ ಪ್ರದೇಶಗಳ ನಿತ್ಯಜೀವನದ ಸನ್ನಿವೇಶಗಳ ವರ್ಣಚಿತ್ರಗಳು ಸುಪ್ರಸಿದ್ಧವಾಗಿದ್ದವು.

ಥಾಮಸ್ ಈಕಿನ್ಸ್‌ನು ಪ್ಯಾರಿಸಿನಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಮ್ಯಾನೆಟ್(Manet) ತನ್ನ ವಾಸ್ತವವಾದ ಹಾಗೂ ಯುರೋಪಿನ ತರ್ಕಾಭಾಸ ಶೈಲಿಯಿಂದಾಗಿ ಪ್ರಸಿದ್ಧಿಗೆ ಬರುತ್ತಿದ್ದನು. ಥಾಮಸ್ ಈಕಿನ್ಸ್ ಅಲ್ಲದೆ ವ್ಹಿಸ್ಲರ್, ಸಾರ್ಜೆಂಟ್ ಮತ್ತು ಮೇರಿ ಕಾಸಟ್(Mary Cassat)ಮುಂತಾದ ೧೯ನೆಯ ಶತಮಾನದ ಅಮೇರಿಕೆಯ ಕಲಾವಿದರು ಪ್ಯಾರಿಸ್ ಇಲ್ಲವೆ ಲಂಡನ್‌ಗಳಲ್ಲಿದ್ದು ಯುರೋಪಿಯನ್ ಪರಿಣಾಮದಿಂದಲೇ ತಮ್ಮ ಕಲಾಕೃತಿಗಳನ್ನು ರಚಿಸುತ್ತಿದ್ದರು. ಆಷ್ಕನ್‌ಕಲಾಶಾಲೆಯು ಅಮೇರಿಕೆಯದೇ ಆದ ಸ್ವತಂತ್ರ ಶೈಲಿಯ ಬೆಳವಣಿಗೆಗಾಗಿ ಶ್ರಮಿಸುತ್ತಿತ್ತು. ಪ್ರತಿನಿತ್ಯದ ಜನಜೀವನದ ಚಿತ್ರಣವೇ ಈ ಕಲಾಶಾಲೆಯ ಪ್ರಧಾನ ಗುರಿಯಾಗಿತ್ತು. ಆ ಕಾಲದ ಸುಪ್ರಸಿದ್ಧ ತರುಣ ಚಿತ್ರಕಾರನಾದ ಜಾರ್ಜ್ ಬೆಲ್ಲೋಸ್(George Bellows)ನು ಮುಷ್ಟಿಯುದ್ಧ ಕ್ರೀಡೆಗಳಂತ ವಸ್ತುಗಳ ವರ್ಣಚಿತ್ರಗಳನ್ನು ನಿರ್ಮಿಸಿದನು.

೧೯೧೩ರಲ್ಲಿ ನ್ಯೂಯಾರ್ಕಿನ ಅಮೇರಿಕನ್ ಪ್ರಭುತ್ವದ ಆಯುಧ ಶಾಲೆಯಲ್ಲಿ ಯುರೋಪಿನ ಆಧುನಿಕ ಕಲಾಪ್ರದರ್ಶನವೊಂದು ಜರುಗಿತು. ಈ ಆಯುಧಗಳ ಪ್ರದರ್ಶನದಲ್ಲಿ ಅಮೇರಿಕೆಯ ಜನತೆ ಹಾಗೂ ಕಲಾವಿದರು "ಸಮಷ್ಟಿ ಪರಿಣಾಮವಾದಿ" ಕಲಾವಿದರ ಕ್ರಾಂತಿಕಾರಕ ಕಲಾಕೃತಿಗಳನ್ನು ಪ್ರಥಮ ಬಾರಿಗೆ ಕಂಡರು. ಮೊದಲನೆಯ ಹಾಗೂ ಎರಡನೆಯ ಜಾಗತಿಕ ಮಹಾಯುದ್ಧದ ಅವಧಿಯಲ್ಲಿ ಅನೇಕ ಅಮೇರಿಕನ್



೨೦) ರೋಷನ್‌ಬರ್ಗ್

ರ್ಚಿತ್ರಕಲಾವಿದರು ಮತ್ತು ಶಿಲ್ಪಿಗಳು ಘನಾಕೃತಿ ಕಲೆ(Cubism), ಸರ್ರಿಯಲಿಸ್ಟು , ಮತ್ತು ಅಮೂರ್ತ ಕಲೆ(Abstract Art)ಗಳ ಶೈಲಿಗೆ ಸಂಬಂಧಿಸಿದಂತೆ ಅಭ್ಯಾಸ ಾಡಿದರು. ಜಾನ್ ಮಾರ್ಟಿನ್(John Martin) ಮತ್ತು ಸ್ಟ್ಯೂಆರ್ಟ್ ಡೇವಿಸ್(Stuart vis) ಅವರು ಹೀಗೆ ಅಭ್ಯಾಸಮಾಡಿದ ಕಲಾವಿದರಲ್ಲಿ ಅಗ್ರಗಣ್ಯರೂ ಸುಪ್ರಸಿದ್ಧರೂ ದ್ದರು. ೧೯೩೦ರಲ್ಲುಂಟಾದ ಆರ್ಥಿಕ ಕುಸಿತದಿಂದಾಗಿ ಗ್ರಾಂಟ್‌ವುಡ್(Grant wood) ್ ಷಾನ್(Ben Shakn)ರಂತಹ ಕಲಾವಿದರು ಮರಳಿ ವಾಸ್ತವವಾದಕ್ಕೆ ತಿರುಗಿದರು. ಿ. ೧೯೩೦ ಕೊನೆಯ ವೇಳೆಗೆ ಯುರೋಪಿನ ಅನೇಕ ಕಲಾವಿದರು, ವಾಸ್ತುಶಿಲ್ಪಿಗಳು ಾಶ್ರಿತರಾಗಿ ಸಂಯುಕ್ತ ಸಂಸ್ಥಾನಗಳಿಗೆ ವಲಸೆ ಬಂದರು. ಈ ನಿರಾಶ್ರಿತ ಕಲಾವಿದರು ಸುತ್ತಿದ್ದ ಅಮೂರ್ತ ಅಭಿವ್ಯಕ್ತಿವಾದ(Absract Expressionism)ಎಂಬ ಹೊಸ ಯ ಉದ್ಭವವಾಗಿ ಬೆಳೆಯತೊಡಗಿತು. ಈ ಹೊಸ ಶೈಲಿಯಲ್ಲಿ ಕಲಾಕೃತಿಗಳನ್ನು ಸುತ್ತಿದ್ದ ಜಾಕ್ಸನ್ ಪೊಲೊಕ್(Jackson Pollack) ಮಾರ್ಕ್ ರುಥ್ಕೋ(Mark hko) ಮತ್ತು ಅಡಾಲ್ಫ ಗೋಟ್ಲೀಬ್(Adlalf Gottlieb)ರಂತಹ ವಿಶ್ವವಿಖ್ಯಾತ ಾವಿದರಿಂದಾಗಿ ನ್ಯೂಯಾರ್ಕ ಫ್ಯಾರಿಸಿನ ಪ್ರತಿರೂಪವಾದ ಕಲಾಕೇಂದ್ರವಾಗಿ ಣಮಿಸಿತು.

ಆಧುನಿಕ ಕಲೆ-ಪಂಥಗಳು

ಯಾಲಿಜಂ(Realism) ಅಥವಾ ವಾಸ್ತವವಾದ-

ರೋಮ್ಯಾಂಟಿಕ್ ಕಲಾವಿದರು ಚಿತ್ರಿಸುತ್ತಿದ್ದ ಕಲ್ಪನಾ ಚಿತ್ರಗಳು ಗುಸ್ಟಾವ್ ರ್ಬೆಟ್(Gustave Courbet)ಎಂಬ ಫ್ರೆಂಚ್ ಕಲಾವಿದನ ಮನಸ್ಸಿಗೆ ಹಿಡಿಸಲಿಲ್ಲ ೋರ್ಬೆಟ್‌ನು" ಕಲಾವಿದನಾದವನು ನಿಜಜೀವನದ ನಿಜಚಿತ್ರಗಳನ್ನು ಚಿತ್ರಿಸಬೇಕೇ ರತು ಕಲ್ಪನೆಯಿಂದ ಚಿತ್ರಗಳಲ್ಲಿ ರಮ್ಯತೆಯನ್ನು ತುಂಬುವುದು ಸರಿಯಲ್ಲ" ಎಂದು ಿಸಿದ್ದನು. ಈ ಕಾರಣವಾಗಿ ಅವನು ವಾಸ್ತವ ರೀತಿಯ ಕಲಾತ್ಮಕಗಳ ರಚನೆಗೆ ತಗಿದನು. ವಾಸ್ತವ ಜೀವನದ ವಾಸ್ತವಚಿತ್ರಗಳ ರಚನೆಯೇ ವಾಸ್ತವವಾದ ಎಂದು ುಲ್ಪಟ್ಟಿತು. ಇಂಥ ಕಲಾಕೃತಿಗಳನ್ನು ಸಾವಿರದ ಎಂಟುನೂರ ಐವತ್ತೈದರಲ್ಲಿ ರ್ಬೆಟ್ ಫ್ರಾನ್ಸಿನಲ್ಲಿ ಪ್ರದರ್ಶಿಸಿದನು. ಈ ಎಲ್ಲ ಕಲಾಕೃತಿಗಳೂ ಪರಿಣಾಮಕಾರಿ ಾವವನ್ನು ಬೀರಿ ಪ್ರಶಂಸೆ, ಕೀರ್ತಿಗಳನ್ನು ತಂದುಕೊಟ್ಟವು. ಹೀಗೆ ಈ ವಳಿಯು ಪ್ರಾರಂಭವಾಯಿತು.

ಜೀನ್ ಫ್ರ್ಯಾಂಕೋಯಿನ್ ಮಿಲೆಟ್(Jean Francois Millet) ಎಂಬ ಕಲಾವಿದನು ವ ವಾದಕ್ಕೆ ತಿರುಗಿದನು. ದೈನಂದಿನ ಜೀವನಕ್ಕೆ ಸಂಬಂಧಿಸಿದ ಘಟನೆಗಳು, ೇಶಗಳು ಮಿಲೆಟ್‌ನ ಚಿತ್ರಣ ವಸ್ತುಗಳಾದವು. ಮನುಷ್ಯನನ್ನು ವಾಸ್ತವರೀತಿಯಲ್ಲಿ ುವದನ್ನು ಇವನು ಹೆಚ್ಚಾಗಿ ಮೆಚ್ಚುತ್ತಿದ್ದನು. ಅನೇಕ ಕಲಾವಿದರು ಶ್ರೀಮಂತ ಳು ಠೀವಿಯಿಂದ ನಿಂತಿರುವಂತೆ ಚಿತ್ರಿಸುತ್ತಿರುವುದನ್ನು ಕಂಡು ಮಿಲೆಟ್‌ನಿಗೆ ತವಾಯಿತು. ಬಡ ರೈತನು ತನ್ನ ಹೊಲಗಳಲ್ಲಿ ಕೆಲಸದಲ್ಲಿ ಮಗ್ನರಾಗಿರುವಂತೆ

ಚಿತ್ರಿಸಲು ಇಚ್ಛಿಸಿದ ಮಿಲೆಟ್ ಜನಸಾಮಾನ್ಯರ ನಿಜ ಜೀವನದ ರೀತಿ ನೀತಿಗಳನ್ನೇ ತನ್ನ ಚಿತ್ರಗಳಲ್ಲಿ ಸೆರೆಹಿಡಿದನು. ಮಿಲೆಟ್ ಚಿತ್ರಿಸಿದ ದ ಸೋಅರ್(The Sower) ಎಂಬ ಚಿತ್ರವು ವಾಸ್ತವ ರೀತಿಯ ಶೈಲಿಯನ್ನು ಬಿತ್ತುತ್ತಿರುವ ರೈತನು ಸುಂದರವಾಗಿ ಕಾಣುವಂತೆ ಚಿತ್ರಿಸದೇ ಶ್ರಮಪೂರ್ಣವಾಗಿ ಕಾರ್ಯಮಗ್ನನಾಗಿರುವ ಒಬ್ಬ ನಿಜವಾದ ಫ್ರೆಂಚ್ ರೈತನಂತೆ ಚಿತ್ರಿಸಿರುವುದೇ ಮಿಲೆಟ್‌ನ ನಿಜ ಜೀವನದ ಬಗೆಯಲ್ಲಿರುವ ಗೌರವಾದರಗಳನ್ನು ವ್ಯಕ್ತಪಡಿಸುತ್ತದೆ ಅವನು ಚಿತ್ರಿಸಿದ ಯಾವುದೇ ಚಿತ್ರಗಳಲ್ಲಿನ ವ್ಯಕ್ತಿಗಳಾಗಲೀ ನಿಸರ್ಗ ದೃಶ್ಯಗಳಾಗಲೀ ಕಾಲ್ಪನಿಕ ಸೌಂದರ್ಯ, ರಮ್ಯತೆಗಳನ್ನು ಹೊರತು ಪಡಿಸಿಯೇ ಚಿತ್ರಿಸದವುಗಳಾಗಿವೆ

ಮಿಲೆಟ್‌ನು ತನ್ನ ವಾಸ್ತವಾವಾದೀ ಕಲಾಕೃತಿಗಳಿಂದ ಇನ್ನುಳಿದ ಕಲಾವಿದರಲ್ಲಿ ಜನಸಾಮಾನ್ಯರ ವಿಷಯವಾಗಿ ಕಳಕಳಿಯ ಜಾಗರೂಕತೆಯನ್ನುಂಟು ಮಾಡಿದನು. ಕಂಡದ್ದನ್ನು ಕಂಡಂತೆಯೇ ಚಿತ್ರಿಸುವ ಈ ವಾಸ್ತವವಾದ ಶೈಲಿಯು ಮುಂದಿನ ಪರಿಣಾಮವಾದಿ ಕಲೆಗೆ ದಾರಿಮಾಡಿಕೊಟ್ಟಿತೆನ್ನಬಹುದು.

ಸರ್ರಿಯಾಲಿಜಂ(Surrealism)

ಸಾವಿರದ ಒಂಭೈನೂರ ಇಪ್ಪತ್ತರಲ್ಲಿ ಫ್ರೆಂಚ್ ಬರಹಗಾರರಾದ ಆಂದ್ರೆ ಬ್ರೆಟನ್



೨೧) ಸಾಲ್ವಡಾರ್ ಡಾಲಿ

ಅವರ ಮುಖಂಡತ್ವದಲ್ಲಿ "ಸರ್ರಿಯಾಲಿಜಂ" ಎಂದು ಕರೆಯಲಾಗುವ ಈ ಶೈಲಿಯು ಪ್ರಾರಂಭವಾಯಿತು. ಸಾಹಿತ್ಯ ಕ್ಷೇತ್ರದಲ್ಲಿ ಪ್ರಾರಂಭವಾದ ಈ ಚಳುವಳಿ ವರ್ಣಚಿತ್ರ ಕಲಾಕ್ಷೇತ್ರಕ್ಕೂ ಕಾಲಿರಿಸಿತು. "ಸುಪ್ತಮನಸ್ಸಿನ ವಿಚಾರಗಳನ್ನು ಸೆರೆಹಿಡಿಯುವದೇ ಈ ಶೈಲಿಯ ಗುರಿಯಾಗಿದೆ."

ಸಾವಿರದ ಒಂಭೈನೂರ ಇಪ್ಪತ್ತು ಮತ್ತು ಮೂವತ್ತರ ದಶಕಗಳಲ್ಲಿ ಸರ್ರಿಯಾಲಿಜಂಗೆ ಸಂಬಂಧಿಸಿ ಸಾಹಿತ್ಯಕ್ಕಿಂತಲೂ ಹೆಚ್ಚು ವ್ಯಾಪಕವಾಗಿ ವರ್ಣಚಿತ್ರಗಳ ರಚನೆಯಾಯಿತು. ವಿಶ್ವ ವಿಖ್ಯಾತ ಮನೋವಿಜ್ಞಾನಿಯಾದ ಸಿಗ್ಮಂಡ್ ಫ್ರಾಯಿಡ ಅವರು ಮಾನವನ ಅಂತರಾಳದ ವಿಚಾರಗಳು ಸುಪ್ತಮನಸ್ಸಿನೊಂದಿಗೆ ಇರಿಸಿಕೊಂಡ ಸಂಬಂಧಗಳನ್ನು ಕುರಿತು ಚೇತೋಹಾರಿ ಎನಿಸುವ ಕನಸುಗಳ ವಿಷಯದಲ್ಲಿ ತಮ್ಮ ಸಂಶೋಧನಾತ್ಮಕ ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಿದರು. ಫ್ರಾಯಿಡ ಅವರ ಸಂಶೋಧನೆಗಳಿಂದ ಪ್ರೇರಿತನಾಗಿ" ಸಾಲ್ವಡಾರ್ ಡಾಲಿ" ಎಂಬ ಚಿತ್ರಕಲಾವಿದನು ಕನಸುಗಳನ್ನು ಕುರಿತು ಅನೇಕ ವರ್ಣ ಚಿತ್ರಗಳನ್ನು ನಿರ್ಮಿಸಿದನು. ಈ ಚಳುವಳಿಯ ಕಲಾವಿದರು "ಕಲೆಯು ಸುಪ್ತಮನಸ್ಸಿನಿಂದ ಹೊರಹೊಮ್ಮ ಬೇಕಲ್ಲದೇ ವ್ಯಕ್ತಿಯ ಶೈಕ್ಷಣಿಕ ಪಾಂಡಿತ್ಯದಿಂದಲ್ಲ" ಎಂದು ತಿಳಿದಿದ್ದರು. ಈ ಕಾರಣವಾಗಿ ಅವರು ಕನಸಿನ ಚಿತ್ರಗಳನ್ನೇ ಚಿತ್ರಿಸಿದರು ಸಾಲ್ವಡಾರ ಡಾಲಿಯಂತೆ "ಯ್ವೆಸ್ ಟಾಂಗಾಯ್" ಎಂಬ ಸರ್ರಿಯಾಲಿಸ್ಟಿರ್ ಕಲಾವಿದನು ಚಿತ್ರಿಸಿದ ಚಿತ್ರಗಳು ಅಮೋಘವಾಗಿವೆ. "ಕನಸಿನಲ್ಲಿ ಕಂಡುಬರುವ ವಿಚಿತ್ರ ತೆರನಾದ ಚಟುವಟಿಕೆಗಳು, ವಸ್ತುಗಳು, ಸನ್ನಿವೇಶಗಳು-ಇವುಂತಾದವುಗಳನ್ನು ವಿಚಿತ್ರರೀತಿಯಲ್ಲಿಯೇ ಸಾಂಕೇತಿಕವಾಗಿ ಚಿತ್ರಿಸುವ ರೀತಿಯನ್ನು ಈ ಸರ್ರಿಯಾಲಿಸ್ಟಿಕ್ ಕಲಾಕೃತಿಗಳಲ್ಲಿ ಕಂಡುಕೊಳ್ಳಬಹುದು.

ಎಕ್ಸಪ್ರೇಶನಿಜಂ(Expressionism) ಅಭಿವ್ಯಕ್ತಿವಾದ–

ಯಾವುದೇ ಒಂದು ಸುಂದರವಾದ ತಾಣ, ಸನ್ನಿವೇಶ ನಮಗೆ ಚೇತೋಹಾರಿಯಾಗಿ ಮನಮೋಹಕವಾಗಿ ಕಾಣಬಹುದು. ಅದೇ ತಾಣ, ಇಲ್ಲವೇ ಅದೇ ಸನ್ನಿವೇಶ ನಾವು ಬೇಕಾಂಗಿಯಾಗಿ ಬೇರೊಂದು ಸಮಯದಲ್ಲಿ ನೋಡಿದಾಗ ವಿಲಕ್ಷಣವಾಗಿ, ಭಯಂಕರವಾಗಿ, ಭೀಕರವಾಗಿ ಕಾಣಸುವ ಅನುಭವ ನಮಗಾಗುವದುಂಟು. ಅನೇಕ ದುಃಖ ದುಮ್ಮಾನಗಳನ್ನು ಬಚ್ಚಿಟ್ಟಿ ಅನ್ಯರಿಗೆ ಅವು ಗೋಚರಿಸದಿರಲೆಂದು ನಾವು ಅನೇಕ ಸಲ ನಗುತ್ತೇವೆ; ಅನ್ಯರ ಸಂತೋಷದಲ್ಲಿ ಭಾಗಿಗಳಾಗುತ್ತೇವೆ. ಈ ವಿಚಾರದಲ್ಲಿ ನಮ್ಮೊಂದಿಗೆ ನಗುವ, ಸಂತೋಷಿಸುವ ಅನ್ಯರೂ ಹೊರತಾಗಿಲ್ಲ. ಇದೆಲ್ಲವೂ ಕೃತಕ ನಗೆ ಸಂತೋಷ. ಆದರೆ ಕಣ್ಣಿಗೆ ಗೋಚರಿಸುವದೇ ಸತ್ಯವಲ್ಲ ಅಥವಾ ತನ್ನ ನೈಜರೂಪವನ್ನು ಮರೆಮಾಚಿ ಬೇರೊಂದು ರೂಪದಲ್ಲಿ ಗೋಚರಿಸುವದನ್ನೇ ನಾವು ಸತ್ಯವೆಂದು ತಿಳಿಯುತ್ತೇವೆ.. ಹಾಗೆಯೇ ಬರೆಯುತ್ತೇವೆ: ಚಿತ್ರಕಲಾ ಕೃತಿಗಳನ್ನು ಚಿತ್ರಿಸುತ್ತೇವೆ. ಈ ವಿಧಾನದಲ್ಲಿ ನಾವು ಸತ್ಯತೆಗೆ ಅನ್ಯಾಯವನ್ನು ಮಾಡುತ್ತೇವೆ. ಯಾವುದೇ ವಸ್ತುವನ್ನಾಗಲೀ ಸನ್ನಿವೇಶವನ್ನಾಗಲೀ ಚಿತ್ರಿಸುವಾಗ ಆ ವಸ್ತು ಸನ್ನಿವೇಶಗಳನ್ನು ಕಣ್ಣಿಗೆ ಕಂಡಂತೆಯೇ

ಚಿತ್ರಿಸಿದರೆ ಅದು ನೈಜ ಚಿತ್ರವಾಗಲಾರದು. ಆ ವಸ್ತು ಅಥವಾ ಸನ್ನಿವೇಶಗಳಿಂದ ನಮಗೆ ಉಂಟಾಗಬಹುದಾದ ಅನುಭವ ಅನಿಸಿಕೆಗಳನ್ನೇ ಚಿತ್ರಿಸಿದಾಗ ಮಾತ್ರ ನೈಜಕಲಾಕೃತಿಯಾದೀತು. ಈ ಎಲ್ಲ ವಿಚಾರಗಳಿಂದ ಉಗಮವಾದ ಹೊಸ ಶೈಲಿಯನ್ನೇ ಎಕ್ಸಪ್ರೆಶನಿಜಂ ಅಥವಾ ಅಭಿವ್ಯಕ್ತಿವಾದ ಎಂದು ಕರೆಯಲಾಗುತ್ತದೆ.

ನಾರ್ವೆ ದೇಶದಲ್ಲಿ ಹುಟ್ಟಿ, ಫ್ರಾನ್ಸ್ ದೇಶದಲ್ಲಿ ವರ್ಣಚಿತ್ರಕಲಾಭ್ಯಾಸವನ್ನು ಮಾಡಿ ಜರ್ಮನಿಯಲ್ಲಿ ತನ್ನ ಬದುಕಿನ ಬಹುಭಾಗವನ್ನು ಕಳೆದ "ಎಡ್ವರ್ಡ್ ಮುಂಚ್" ಎಂಬ ಕಲಾವಿದನು ಈ "ಅಭಿವ್ಯಕ್ತಿವಾದ ಶೈಲಿಯ ಪ್ರಪ್ರಥಮ ಪ್ರವರ್ತಕನಾಗಿದ್ದಾನೆ, ಮಹಾನ್ ಕಲಾವಿದನಾಗಿದ್ದಾನೆ.

ಅಭಿವ್ಯಕ್ತಿವಾದವನ್ನು ಪ್ರತಿಪಾದಿಸುವ ಕಲಾವಿದರು ಹೆಚ್ಚಾಗಿ ಬಡತನ, ಬದುಕಿನ ನೋವು ಹಾಗೂ ಜೀವನದ ಕ್ರೌರ್ಯಗಳಿಂದ ನೊಂದವರಾಗಿದ್ದರಿಂದ ಅಂಥ ವಸ್ತುಗಳನ್ನೇ ತಮ್ಮ ಕಲಾಕೃತಿಗಳ ನಿರ್ಮಾಣಕ್ಕೆ ಆಯ್ದುಕೊಂಡರು. ಅವರು ಬೇರೊಬ್ಬ



೨೨) ಎಡ್ವರ್ಡ್ ಮುಂಚ್

ಚಿತ್ರಕಲಾವಿದನು ಚಿತ್ರಿಸಿದ "ರವಿರಶ್ಮಿಯ ಹೊಂಬಣ್ಣಗಳಲ್ಲಿ ಆನಂದದಿಂದ ನಲಿಯುತ್ತಿರುವ ಮನುಷ್ಯರ ಸುಂದರವಾದ ಚಿತ್ರವು" ನಿಜಕ್ಕೂ ನೈಜ ಚಿತ್ರವಲ್ಲ ಎಂದೇ ಹೇಳುತ್ತಿದ್ದರು. ವಿಡಂಬನ ಚಿತ್ರಕಾರರು ಯಾವುದೇ ಒಬ್ಬ ವ್ಯಕ್ತಿ ಇಲ್ಲವೇ ವಸ್ತುವನ್ನು ಕುರಿತು ವೈಭವೀಕರಿಸಿ ಚಿತ್ರಿಸಿ ನೋಡುಗನನ್ನು ನಗಿಸುವಂತೆ ಈ ಅಭಿವ್ಯಕ್ತಿವಾದದ ಚಿತ್ರ

ಲಾವಿದರು ತಮ್ಮ ವ್ಯಕ್ತಿಚಿತ್ರಗಳಲ್ಲಿಯೂ ಸನ್ನಿವೇಶಗಳ, ಘಟನೆಗಳ ಚಿತ್ರ ಸಂಯೋಜನೆಗಳಲ್ಲಿಯೂ ಬದುಕಿನ ದುಃಖ ದುಮ್ಮಾನಗಳನ್ನೂ ಕ್ರೌರ್ಯತೆಯನ್ನೂ ವೈಭವೀರಕರಿಸಿ ಚಿತ್ರಿಸಿರುವುದನ್ನು ಕಾಣಬಹುದು.

ಅನಿಸಿಕೆಗಳು ಕಲಾವಿದನ ಬಣ್ಣಗಳಿಗೂ ಬಣ್ಣಕೊಡುವ ಸಾಮರ್ಥ್ಯವನ್ನು ಹೊಂದಿವೆ ಎಂಬುದನ್ನು ವಿನ್ಸೆಂಟ್ ವ್ಯಾನ್ ಗಾಘ್(Vincent Van Gagh) ಎಂಬ ಇನ್ನೊಬ್ಬ ವಿಶ್ವವಿಖ್ಯಾತ ಡಚ್ ಕಲಾವಿದನ ಅನೇಕ ಚಿತ್ರಗಳಲ್ಲಿ ಕಾಣಬಹುದು.

ಅಡೋಲ್ಫ್ ಹಿಟ್ಲರ್ ಮತ್ತು ಅವನ ಸಮಾಜವಾದಿಗಳು ಅಧಿಕಾರಕ್ಕೆ ಬಂದ ನಂತರ ಜರ್ಮನಿಯ ಅಭಿವ್ಯಕ್ತಿವಾದದ ಚಿತ್ರಕಲಾವಿದರು ಫ್ರಾನ್ಸ್, ಇಂಗ್ಲೆಂಡ್, ಅಮೇರಿಕದ ಸಂಯುಕ್ತ ಸಂಸ್ಥಾನಗಳು ಮತ್ತು ಬೇರೆ ಬೇರೆ ದೇಶಗಳಲ್ಲಿ ನೆಲೆಸಿ ತಮ್ಮ ಈ ಹೊಸ ಶೈಲಿಯಲ್ಲಿ ಮುಕ್ತವಾಗಿ ತಮ್ಮ ಇಚ್ಛೆಗನುಸಾರವಾಗಿ ಕಲಾಕೃತಿಗಳನ್ನು ರಚಿಸಬೇಕಾಯಿತು. ಆಕೃತಿಗಳನ್ನು ಗುರುತಿಸಲಾಗದಂತೆ-ಚಿತ್ರಿಸುವ "ಅಮೂರ್ತ ಅಭಿವ್ಯಕ್ತಿವಾದ" ಎಂಬುದು ಇತ್ತೀಚಿನ ಅಭಿವ್ಯಕ್ತಿವಾದದ ಇನ್ನೊಂದು ರೀತಿಯಾಗಿದೆ.

ಇಂಪ್ರೆಶನಿಜಂ(Impressionism) ಪರಿಣಾಮವಾದ

ನಸುಕಿನಲ್ಲಿ ಸೂರ್ಯ ಹುಟ್ಟುತ್ತಾನೆ. ಹೊತ್ತು ಹೋದಂತೆಲ್ಲಾ ಮೇಲಕ್ಕೇಳುತ್ತಾನೆ.



ವಿನ್ಸೆಂಟ್ ವ್ಯಾನ್‌ಗೋ

ನಡುನೆತ್ತಿಗೆ ಬರುತ್ತಾನೆ. ಮುಂದೆ ಪಶ್ಚಿಮದತ್ತ ಇಳಿಯುತ್ತ ಇಳಿಯುತ್ತ ಸಂಜೆಗೆ ಕಣ್ಮರೆಯಾಗುತ್ತಾನೆ. ತನ್ನ ಈ ಸಂಪೂರ್ಣ ಕಾರ್ಯಾಚರಣೆಯಲ್ಲಿ ಸೂರ್ಯನು ಬೆಳಗಿನಿಂದ ಸಾಯಂಕಾಲದವರೆಗೂ ಪ್ರಕೃತಿಯ ಮೇಲೆ ತನ್ನ ಕಿರಣಗಳಿಂದ ಅನೇಕ ರೀತಿಯ ಬೆಳಕಿನ ಪರಿಣಾಮಗಳನ್ನುಂಟು ಮಾಡುತ್ತಾನೆ. ಪ್ರತಿಕ್ಷಣದಲ್ಲಿಯೂ ವೈವಿಧ್ಯತೆಗಳನ್ನುಂಟು ಮಾಡಿ ನೋಡುಗನನ್ನು ವಿಸ್ಮಿತನನ್ನಾಗಿ ಮಾಡುತ್ತಾನೆ. ಆಯಾ ನಿರ್ದಿಷ್ಟ ಕ್ಷಣಗಳನ್ನು ಕ್ಷಿಪ್ರಗತಿಯಲ್ಲಿ ಸೇರೆಹಿಡಿಯುವದೇ ಈ ಪರಿಣಾಮವಾದ ಇಲ್ಲವೇ ಇಂಪ್ರೆಶನಿಜಂ ಎಂಬ ವರ್ಣಚಿತ್ರಕಲಾಶೈಲಿಯ ಧ್ಯೇಯ ಧೋರಣೆಗಳಾಗಿವೆ.

ಸಾವಿರದ ಎಂಟುನೂರ ಅರವತ್ತರಲ್ಲಿ ಫ್ರಾನ್ಸಿನ ಕೆಲವು ಯುವಕಲಾವಿದರು ಈ ಶೈಲಿಯಲ್ಲಿ ತಮ್ಮ ವರ್ಣಚಿತ್ರ ಕಲಾಕೃತಿಗಳನ್ನು ರಚಿಸತೊಡಗಿದರು. ಕೇವಲ ಸ್ಟುಡಿಯೋದ ಒಳಗಡೆಯಲ್ಲಿಯೇ ಕುಳಿತು ಕಲಾಕೃತಿಗಳನ್ನು ಚಿತ್ರಿಸುವದನ್ನು ಬಿಟ್ಟು ಸ್ಟುಡಿಯೋದಿಂದ ಹೊರಗೆ ಬಂದು ನಿಸರ್ಗ ಚಿತ್ರಗಳನ್ನು(Landscape) ಚಿತ್ರಿಸಿತೊಡಗಿದರು. ಈ ಚಿತ್ರಗಳಲ್ಲಿ ಸೂರ್ಯನ ಬೆಳಕು ನೈಸರ್ಗಿಕ ವಸ್ತುಗಳ ಮೇಲೆ ಉಂಟುಮಾಡುವ ಪರಿಣಾಮಗಳನ್ನೂ ಕ್ಷಣಕ್ಷಣಕ್ಕೂ ಬದಲಾಗುವ ಬೆಳಕಿನಿಂದ ಉಂಟಾಗುವ ಪ್ರಕೃತಿಯ ವೈವಿಧ್ಯತೆಗಳನ್ನೂ ವರ್ಣಗಳಿಂದ ತೀವ್ರಗತಿಯಲ್ಲಿ ಚಿತ್ರಿಸಲು ಯತ್ನಿಸಿದರು. ಸಾವಿರದ ಎಂಟುನೂರ ಎಪ್ಪತ್ನಾಲ್ಕರಲ್ಲಿ ಕ್ಲಾಡ್‌ಮೊನೆ(Claude monet) ಎಂಬ ಕಲಾವಿದನ ಮುಖಂಡತ್ವದಲ್ಲಿ ಕೆಲವು ಕಲಾವಿದರು ಸೇರಿ ಈ ಶೈಲಿಯಲ್ಲಿ ಚಿತ್ರಿಸಿದರು. ಈ ಪ್ರದರ್ಶನವನ್ನು ವೀಕ್ಷಿಸಿದ ಬೇರೆ ಕಲಾವಿದರು ಮತ್ತು ಪತ್ರಿಕಾ ವರದಿಗಾರರು ಇವರನ್ನು ಪರಿಣಾಮವಾದಿಗಳು(Impressionists)ಎಂದು ಅಪಹಾಸ್ಯ ಮಾಡಿ ನಕ್ಕರು. ಈ ಅಪಹಾಸ್ಯವೇ "ಪರಿಣಾಮವಾದ" ಎಂಬ ಹೊಸ ಕಲಾಶೈಲಿಯ ಉಗಮಕ್ಕೆ ಕಾರಣವಾಯಿತು.

ಕ್ಲಾಡ್ ಮೊನೆಯ ಸ್ನೇಹಿತನಾದ "ಕಾಮಿಲೆ ಪಿಸಾರ್"(Comille pissar) ಎಂಬ ಇನ್ನೊಬ್ಬ ಪರಿಣಾಮವಾದಿ ಕಲಾವಿದನು ಫ್ಯಾರಿಸಿನ ಹೋಟಲ್ ಒಂದರಲ್ಲಿ ಕೊಠಡಿಯೊಂದನ್ನು ಬಾಡಿಗೆಗೆ ಹಿಡಿದು ಪ್ಯಾರಿಸಿನ ಓಣಿಓಣಿಗಳನ್ನೆಲ್ಲ ಹಗಲಿನ ವಿವಿಧ ವೇಳೆಯಲ್ಲಿ ಕಾಣಿಸುವಂತೆ ಅನೇಕ ಚಿತ್ರಗಳನ್ನು ರಚಿಸಿದ್ದಾನೆ. ಹಗಲಿನ ಪ್ರತಿ ಕ್ಷಣವನ್ನೂ ಬಿಂಬಿಸುವ ಬೇರೆ ಬೇರೆ ವರ್ಣಚಿತ್ರಗಳನ್ನೇ ಚಿತ್ರಿಸಿದ್ದಾನೆ.

ಮೇರಿ ಕಾಸ್ಸೆಟ್(Mary Cassatt), ಎಡ್ಗರ್ ಡೇಗಾಸ್(Edgar Degas), ಪಾಲ್ ಗಾಗಿನ್(Paul Gaugin), ಎಡ್ವರ್ಡ್ ಮಾನೆ(Edvard Manet), ರೆನಾಯರ್(Renoir), ಪಿಯರಿ ಆಗಸ್ಟ್(Pierre Auguste), ಟೂಲೂಸ್ ಲಾತ್ರೆಕ್(Toulouse Lautrec) ಹೆನ್ರಿಡಿ(Henri De) ಮತ್ತು ವಿನ್ಸೆಂಟ್ ವ್ಯಾನ್ ಗಾಘ್(Vincent Van Gogh) ಮುಂತಾದ ವಿಶ್ವವಿಖ್ಯಾತ ಕಲಾವಿದರು ಪರಿಣಾಮವಾದ ಪ್ರಖ್ಯಾತ ಪ್ರತಿಪಾದಕರಾಗಿದ್ದಾರೆ.

ಆಬ್‌ಸ್ಟ್ರಾಕ್ಟ್(Abstract) ಕಲೆ ಅಥವಾ ಅಮೂರ್ತಕಲೆ–

ಸಾವಿರದ ಎಂಟುನೂರ ಎಂಭತ್ತರಲ್ಲಿ ಅಮೂರ್ತಕಲೆಯು ಫ್ರಾನ್ಸನಲ್ಲಿ ಪ್ರಾರಂಭವಾಯಿತು. ಆಗ ತಾನೇ ಛಾಯಾಗ್ರಹಣ(Photography) ಕಲೆಯು



೨೪) ಪಾಲ್ ಕ್ಲೇ

ಶೋಧನೆಯಾಗಿತ್ತು. ಛಾಯಾಗ್ರಹಣಕ್ಕಾಗಿ ಬಳಸುವ ಕ್ಯಾಮೆರಾ ವಸ್ತುವಿನ, ವ್ಯಕ್ತಿಯ
ಲ್ಲವೇ ನಿಸರ್ಗದೃಶ್ಯಗಳನ್ನು ಯಥಾವತ್ತಾಗಿ ಚಿತ್ರಿಸುವದನ್ನು ಕಂಡ ವಾಸ್ತವವಾದಿ
ಾವಿದರು ಚಿಂತನೆಗೊಳಗಾದರು. ಕಲಾವಿದನು ಮಾಡುವ ಕೆಲಸವನ್ನೇ ಕ್ಯಾಮರಾ
ು ಮಾತ್ರದಲ್ಲಿ ಮಾಡತೊಡಗಿದ್ದರಿಂದ ಕಲಾವಿದರು ಅನಿವಾರ್ಯವಾಗಿ ಹೊಸ
ಯೊಂದರ ಉತ್ಪತ್ತಿಗೆ ಚಿಂತಿಸಿ ತಮ್ಮ ಚಿತ್ರಕಲಾಕೃತಿಗಳನ್ನು ರಚಿಸತೊಡಗಿದರು.
ವು ಚಿತ್ರಿಸಲಿರುವ ವಸ್ತುವಿನ ವಿವರಗಳನ್ನೆಲ್ಲ ಕೈ ಬಿಟ್ಟು, ನೈಜತೆಯನ್ನು ಕಡಿಮೆಗೊಳಿಸಿ
ಸುವ ಹೊಸಮಾರ್ಗವನ್ನು ಕಂಡು ಕೊಂಡರು. "ಈ ಚಿತ್ರ ಇಂಥ ವಸ್ತುವಿನ
ೂಪವಾಗಿದೆ. ಇಲ್ಲವೇ ಪ್ರತಿರೂಪವಾಗಿದೆ"-ಎಂಬ ನೋಡುಗನ ಅಭಿಪ್ರಾಯವನ್ನು
ಲಿಸುವದೇ ಈ ಕಲಾವಿದರು ಕಂಡುಕೊಂಡ ಹೊಸ ಶೈಲಿಯ ಧ್ಯೇಯವಾಗಿತ್ತು. ಈ
ಯಲ್ಲಿ ಪಾಲ್ ಸಿಝಾನೆ ಮತ್ತು ಜಾರ್ಜೆಸ್ ಸ್ಯೂರಾತ್ ಎಂಬ ಇಬ್ಬರು ಫ್ರೆಂಚ್
ಾವಿದರು ನಿಸರ್ಗದ, ವ್ಯಕ್ತಿಗಳ ಆಕೃತಿಗಳನ್ನು ಮಾತ್ರ ಸುಲಭವಾಗಿ ಗ್ರಹಿಸುವಂತೆ
ಭ ಶೈಲಿಯಲ್ಲಿ ವರ್ಣಚಿತ್ರಗಳನ್ನು ರಚಿಸಿದರು. ಕಣ್ಣಿಗೆ ಕಾಣಿಸುವ ನೈಸರ್ಗಿಕ
ರಗಳ ಚಿತ್ರಣವನ್ನು ಕೈಬಿಟ್ಟು ಸರಳವಾಗಿ ಆಕೃತಿಗಳನ್ನು ಚಿತ್ರಿಸುವ ಈ ಶೈಲಿಯನ್ನು
'ಸ್ಟ್ರಾಕ್ಟ್ ಇಲ್ಲವೇ ಅಮೂರ್ತಕಲೆ ಎಂದು ಕರೆಯಲಾಯಿತು.

ಕೆಲವು ವರ್ಷಗಳ ನಂತರ ಮತ್ತೊಬ್ಬ ವಿಶ್ವವಿಖ್ಯಾತ ಕಲಾವಿದ ನಾದ 'ಪ್ಯಾಬ್ಲೊ
ಸೋ' ಸಹ ಅಮೂರ್ತ ಚಿತ್ರಕಲಾಕೃತಿಗಳನ್ನು ರಚಿಸತೊಡಗಿದನು. ಆ ಶೈಲಿಯಲ್ಲಿ

ಪಿಕಾಸೋ ಇನ್ನಷ್ಟು ಮುಂದುವರಿದು ಯಾವುದೇ ಒಂದು ವಸ್ತು ತೋರಿಕೆ ಕಾಣಿಸುವದಕ್ಕಿಂತ ಹೆಚ್ಚು ಅರ್ಥವತ್ತಾಗಿರುವಂತೆ ತೋರಿಸಲು ಯತ್ನಿಸಿದನು. ಪಿಕಾಸೋ "ತಾನು ಚಿಂತಿಸಿದಂತೆ ನಿಸರ್ಗದ ಚಿತ್ರ ಹೇಗಿರಬೇಕು ಎಂಬುದನ್ನು ನಿರ್ಧರಿಸಿಯೇ" ಕಲಾಕೃತಿಗಳ ರಚನೆಗೆ ತೊಡಗುತ್ತಿದ್ದನು.

ಪಾಲ್ ಕ್ಲೀ(Paul Klee) ಜಾಕ್ಸನ್ ಪೊಲಾಕ್(Jackson Polock) ಮುಂತಾದ ವರ್ಣಚಿತ್ರಕಲಾವಿದರಲ್ಲದೇ ಮಾರ್ಶೆಲ್ ಡಚಾಂಪ್(Marshal Duchamp)ರಂತ ಶಿಲ್ಪಕಾರರೂ ಅಮೂರ್ತ ಶೈಲಿಯ ಕೃತಿಗಳನ್ನೇ ರಚಿಸಿದರು. "ಒಂದು ಛಾಯಾಚಿತ್ರವು ಕೇವಲ ಒಂದು ದೃಶ್ಯದ ಸ್ಥಿರಚಿತ್ರವನ್ನು ತೋರಿಸುತ್ತಿದ್ದರೆ ಅಮೂರ್ತ ಕೃತಿಯು ಇನ್ನೂ ಹೆಚ್ಚು ಹೇಳುತ್ತದೆ." ಎಂಬ ಸಿದ್ಧಾಂತವನ್ನು ಮಂಡಿಸಿದ ಕೀರ್ತಿ ಈ ಅಮೂರ್ತ ಶೈಲಿಯ ಕಲಾವಿದರಿಗೆ ಸಲ್ಲುತ್ತವೆ.

ಫಾವಿಜಂ(Favism) ಅಥವಾ ಒರಟು ಕಲಾಪಂಥ-

(Fauve)ಎಂಬುದರ ಸಾಹಿತ್ಯಿಕ ಅರ್ಥ ಜಿಂಕೆ, ಆದರೆ ಕಾಡುಪ್ರಾಣಿ ಎಂಬ ಅರ್ಥದಲ್ಲಿ ಈ ಶಬ್ದವನ್ನು ಬಳಸಲಾಗುತ್ತದೆ. ಕಣ್ಣು ಕೋರೈಸುವ ಉಗ್ರವರ್ಣಗಳನ್ನು ಬಳಸಿ ಒರಟೊರಟಾಗಿ ಚಿತ್ರಿಸುವ ಪದ್ಧತಿಯನ್ನು ಫಾವಿಜಂ ಎಂದು ಕರೆಯಲಾಗಿದೆ. ಇದನ್ನೇ ಒರಟು ವರ್ಣಚಿತ್ರಕಲಾ ಪಂಥ ಎಂದೂ ಕರೆಯಬಹುದು.

ಈ ಪಂಥದ ಕಲಾವಿದರು ಚಿತ್ರಿಸಿದ ಚಿತ್ರಗಳಲ್ಲಿ ಕುಂಚಗಳಿಂದ ತೀವ್ರಗತಿಯಲ್ಲಿ (Strokes)ಎಳೆದ ರೇಖೆಗಳು ಉದ್ದೇಶಪೂರ್ವಕವಾಗಿ ಒತ್ತಿ ಬರೆದ ಅಕ್ಷರಗಳಂತೆ ಕಾಣಿಸುತ್ತವೆಯಲ್ಲದೆ ಚಿತ್ರಲೇಖನ(Drawing)ದಂತೆ ಕಾಣಿಸುವದಿಲ್ಲ. ಯಥಾದರ್ಶನದ ವಿಷಯದಲ್ಲಿ ಈ ಪಂಥದ ಕಲಾವಿದರಿಗಿದ್ದ ಅಸಡ್ಡೆಯೂ ಇದಕ್ಕೆ ಕಾರಣವಾಗಿದೆ. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಪ್ಯಾರಿಸಿನಲ್ಲಿ ಚಿತ್ರಿತವಾದ ಈ ಶೈಲಿಯ ವರ್ಣಚಿತ್ರಗಳಲ್ಲಿ ಅಸಂಸ್ಕೃತ ಗುಣವೈಶಿಷ್ಟ್ಯಗಳು ಎದ್ದು ಕಾಣುತ್ತವೆ. ಹೆನ್ರಿಮಾಟಿಸೆ(Henri Matisse) (೧೮೬೯-೧೯೫೪) ಎಂಬ ಕಲಾವಿದನು ಈ ಪಂಥದ ಪ್ರಮುಖ ಕಲಾವಿದನಾಗಿದ್ದನಲ್ಲದೇ ತನ್ನ ಜೀವಮಾನ ಪರ್ಯಂತ ಇದೇ ಶೈಲಿಯಲ್ಲಿಯೇ ತನ್ನ ಕಲಾಕೃತಿಯನ್ನು ರಚಿಸಿದ್ದಾನೆ.

ಮೊದಲನೆಯ ಜಾಗತಿಕ ಯುದ್ಧಾನಂತರ ಫಾವಿಸ್ಟ್ ಕಲಾ ಪಂಥದ ಇನ್ನೊಬ್ಬ ಪ್ರಮುಖ ಕಲಾವಿದರೂ ಜಾರ್ಜಿಸ್ ಬ್ರಾಕ್(Georges Braque) ಎಂಬುವನು ಪಿಕಾಸೋನೊಂದಿಗೆ ಬೇರೆ ಪಂಥಗಳೊಂದಿಗೆ ಸಂಬಂಧವನ್ನು ಜೋಡಿಸಿದನು. ಸಿಝಾನ್ ಮತ್ತು ನಿಗ್ರೋ ಮೂರ್ತಿಶಿಲ್ಪ ಕಲಾಶೈಲಿಗಳ ಅಭ್ಯಾಸದಿಂದ ಕ್ಯೂಬಿಜಂ ಎಂಬ ಹೊಸ ಶೈಲಿಯ ವಿಕಾಸಕ್ಕೆ ಕಾರಣನಾದನು.

ಕ್ಯೂಬಿಜಂ (Cubism) ಅಥವಾ ಘನಾಕೃತಿ ಕಲೆ-

ವಸ್ತುವಿನ ಭೌತಿಕ ಸತ್ಯತೆಯನ್ನು ರಕ್ಷಿಸಿಕೊಂಡು ಬರುವುದೇ ಆಧುನಿಕ ಕಲೆಯ



ಜ) ಪಾಬ್ಲೋ ಪಿಕಾಸೋ

ಮೂಲ ಕಟ್ಟಳೆಯಾಗಿದೆ. ಅಂದರೆ ಮೂರ್ತಿಶಿಲ್ಪಕಾರನೊಬ್ಬನು ತಯಾರಿಸಿದ ಮಾನವನ ಶಿಲಾ ಪ್ರತಿಮೆಯು ಶಿಲೆಯಾಗಿಯೇ ಕಾಣಬೇಕಲ್ಲದೇ ಮಾನವನ ಮಾಂಸ ಖಂಡಗಳಾಗಿ, ನಯವಾಗಿ ಕಾಣಬೇಕಾಗಿಲ್ಲ. ಅದರಂತೆಯೇ ವರ್ಣಚಿತ್ರಕಲೆಯಲ್ಲಿಯೂ ಕೂಡ. ಯಥಾದರ್ಶನದ(Perspective) ಉಪಯೋಗ ಹಾಗೂ ನೆರಳು ಬೆಳಕುಗಳನ್ನು ಚಿತ್ರಿಸಿ ಮಾನವಾಕೃತಿಯು ಕಣ್ಣಿಗೆ ಕಂಡಂತೆ ಚಿತ್ರಿಸುವ ರೀತಿಯನ್ನು ಕೈಬಿಟ್ಟು ಕಾಗದ ಇಲ್ಲವೇ ಕ್ಯಾನುವಾಸು ಬಟ್ಟೆಯ ಮೇಲೆ ಬಣ್ಣ ಬಣ್ಣದ ಭೌಮಿತಿಕ ಆಕೃತಿ(Geometrical Forms)ಗಳ ಪಟ್ಟಿಗಳನ್ನು ತುಂಬಿಸಿ ಚಿತ್ರಿಸುವ ರೀತಿ ಈ ಪಂಥದ ಉದ್ದೇಶವಾಗಿದೆ.

ಸ್ಪೇನಿನ ಪ್ಯಾಬ್ಲೋ ಪಿಕಾಸೋ(Pablo Picaso) ಈ ಶತಮಾನದ ಅದ್ಭುತ ಕಲಾವಿದನಾಗಿದ್ದು ಕೂಬಿಸ್ಟ್ ಶೈಲಿಯ ಆದ್ಯ ಪ್ರವರ್ತಕನಾಗಿದ್ದಾನೆ. ಪಿಕಾಸೋ ಅಲ್ಲದೇ ಜಾರ್ಜಸ್ ಬ್ರಾಕ್ ಕಲಾವಿದನೂ ಕೂಡ ಕ್ಯೂಬಿಸ್ಟ್ ಕಲೆಯ ಪ್ರತಿಪಾದಕನಾಗಿದ್ದಾನೆ. ಈ ಇಬ್ಬರೂ ಮಹಾನ್ ಕಲಾವಿದರಿಂದಲೇ ಈ ಪಂಥದ ಉದಯವಾಯಿತು. ಪುನರುತ್ಥಾನ ಕಾಲದಲ್ಲಿ ಸಂಭವಿಸಿದ ಬದಲಾವಣೆಗಳಿಗಿಂತಲೂ ಈ ಪಂಥದ ಕಲಾವಿದರು ವರ್ಣಚಿತ್ರ ಕಲಾಕ್ಷೇತ್ರದಲ್ಲಿ ಹೆಚ್ಚು ಬದಲಾವಣೆಗಳನ್ನು ತಂದರು. ಇನ್ನೊಬ್ಬ ಫ್ರೆಂಚ್ ಕಲಾವಿದ ಸಿಝಾನೆ(Cezzane) ಎಂಬ ಕಲಾವಿದನಿಗೆ ನಿಯಮಿತವಾದ ಸ್ವಾಭಾವಿಕ ಆಕೃತಿಗಳನ್ನು ಭೌಮಿತಿಕ ಆಕೃತಿಗಳಿಂದ ಸರಳೀಕರಿಸಿ ಚಿತ್ರಿಸುವದರಲ್ಲಿ ಹೆಚ್ಚು

ಆಸಕ್ತಿಯಿತ್ತು. ಸಿಝಾನೆ ಆಫ್ರಿಕೆಯ ಅಲ್ಲದೇ ಬೇರೆ ಕೆಲವು ಆದಿಮಾನವ ಕಲಾವಿದರು ಅವಶ್ಯಕ ರೂಪುರೇಷೆಗಳನ್ನು ಮಾತ್ರ ಚಿತ್ರಿಸಿ ಇನ್ನುಳಿದ ವಿವರಗಳನ್ನು ಕೈ ಬಿಟ್ಟು ಚಿತ್ರಿಸುತ್ತಿದ್ದ ರೀತಿಯಲ್ಲಿಯೇ ಮನುಷ್ಯರ, ವಸ್ತುವಿನ, ನಿಸರ್ಗದ ಚಿತ್ರಗಳನ್ನು ಸರಳೀಕರಿಸಿ ಚಿತ್ರಿಸುವ ವಿಧಾನವನ್ನು ಕಂಡುಕೊಂಡಿದ್ದನು. ಈ ದಿಸೆಯಲ್ಲಿ ಕ್ಯೂಬಿಸ್ಟ್ ಕಲಾವಿದರು ತಮ್ಮ ಕಲಾಕೃತಿಗಳನ್ನು ಹೊಸ ಚೈತನ್ಯ ಹಾಗೂ ನಿಷ್ಕೃಷ್ಟತೆಗಳನ್ನು ತುಂಬಲು ಯತ್ನಿಸಿ ಹೊಸ ಹೊಸ ಪ್ರಯೋಗಗಳಲ್ಲಿ ನಿರತರಾದರು.

ಮನುಷ್ಯನೇ ಇರಲಿ, ಮರವೇ ಇರಲಿ ಯಾವುದೇ ವಸ್ತುವಿರಲಿ ಅವುಗಳನ್ನು ತ್ರಿಭುಜ, ಚತುರ್ಭುಜ ಮುಂತಾದ ಆಕೃತಿಗಳಲ್ಲಿ ಚಿತ್ರಿಸಿ, ಸ್ವಾಭಾವಿಕ, ವಸ್ತುಗಳನ್ನು ವಿರೂಪಗೊಳಿಸಿ ಚಿತ್ರಿಸುವದೇ ಈ ಪಂಥದ ಆದ್ಯತೆಯಾಯಿತು. ಕ್ಯೂಬಿಸ್ಟ್ ಕಲಾವಿದನು ಚಿತ್ರಿಸಿದ ಮಾನವ ಮುಖವು ಅನೇಕ ಮುಖಗಳುಳ್ಳ ವಜ್ರದ ಹರಳಿನಂತೆ ಕಾಣಿಸುತ್ತದೆ; ಇಲ್ಲವೇ ಕತ್ತರಿಸಿದ ಗಾಜಿನ ತುಣುಕುಗಳನ್ನು ಅಂಟಿಸಿದಂತೆ ಕಾಣಿಸುತ್ತದೆ. ಕಾಗದ ಇಲ್ಲವೇ .ಕ್ಯಾನವಾಸು ಬಟ್ಟೆಯ ಮೇಲ್ಮೈಯನ್ನು ಅನೇಕ ವಿಭಾಗಗಳನ್ನಾಗಿ ಕಾಣಿಸುವಂತೆ ಚಿತ್ರಿಸುತ್ತಿದ್ದ ರೀತಿಯಿಂದ ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಬೇರೆ ಬೇರೆ ತುಣುಕಗಳ ಸಂಯೋಜನೆಯಂತೆ ಚಿತ್ರಿಸುವ ರೀತಿ ಈ ಹೊಸ ಶೈಲಿಯಲ್ಲಿ ಸಮಾವೇಶಗೊಂಡಿತು. ಕ್ಯೂಬಿಸ್ಟ್ ಶೈಲಿಯು ಹೆಚ್ಚಾಗಿ ತಾಂತ್ರಿಕವಾಗಿದ್ದರೂ ತಾರ್ಕಿಕವಾಗಿರುತ್ತದೆ ಎಂಬುದ ಗಮನಾರ್ಹ. ಮನುಷ್ಯನ ಅಖಂಡಾಕೃತಿಯನ್ನು ಚಿತ್ರಿಸುವ ಬದಲಾಗಿ ಅಂಗಾಗಗಳನ್ನು ಪ್ರತ್ಯೇಕ ಘಟಕಗಳಾಗಿ ವಿಂಗಡಿಸಿ ಚಿತ್ರದ ಹರವನ್ನೆಲ್ಲಾ ಆಕ್ರಮಿಸುವಂತೆ ಚಿತ್ರಿಸುವ ಪರಿಪಾಠ ಬಳಕೆಯಲ್ಲಿ ಬಂದಿತು. ಇದನ್ನು "ವಿಶ್ಲೇಷಿತ ಘನಾಕೃತಿ ಕಲೆ" ಎಂದು ಕರೆಯಲಾಗುತ್ತದೆ. ಹೀಗೆ ಚಿತ್ರಿಸುವಾಗ ಕೆಲವು ನೈಜ ವಸ್ತುಗಳನ್ನು ಕ್ಯಾನವಾಸು ಬಟ್ಟೆಯ ಮೇಲೆ ಕೊಲಾಜ್ ಕೃತಿಗಳಂತೆ ಅಂಟಿಸಿ ಪಿಕಾಸೋ ಮತ್ತು ಬ್ರಾಕ್ ಅವರುಗಳು ಕೆಲವು ಕಲಾಕೃತಿಗಳನ್ನು ರಚಿಸಿದರು ಸ್ಪೇನಿನ ಇನ್ನೊಬ್ಬ ಕಲಾವಿದ ಜೂಆನ್ ಗ್ರಿಸ್(Juaan Gris)ನು ಸ್ನಾನದ ಮನೆಯ ಚಿತ್ರವನ್ನು ಚಿತ್ರಿಸುವಾಗ ನಿಜವಾದ ಕನ್ನಡಿಗಳ ತುಂಡುಗಳನ್ನೇ ಅಂಟಿಸಿ ಚಿತ್ರಿಸಿದನು ಹೀಗೆ ನೈಜವಸ್ತುಗಳನ್ನು ಅಂಟಿಸಿ ಚಿತ್ರಿಸುವ ಶೈಲಿಯನ್ನು "ಸಂಶ್ಲೇಷಿತ. ಘನಾಕೃತಿ ಕಲೆ" ಎಂದು ಕರೆಯುತ್ತಾರೆ.

ಕ್ರಿ.ಶ. ೧೯೧೦ರ ವೇಳೆಗೆ ಸಾಕಷ್ಟು ಕಲಾವಿದರು ಈ ಪಂಥವನ್ನು ಅನುಸರಿಸತೊಡಗಿದರು. ಫರ್ನಾಂಡ್ ಲೀಗರ್(Fernand Leger) ಎಂಬ ಕಲಾವಿದನು ಆಧುನಿಕ ಔದ್ಯೋಗಿಕ ಪ್ರಪಂಚಕ್ಕೆ ಭೌಮಿತಿಕ ಆಕೃತಿಗಳ ಬಹುದೊಡ್ಡ ಕೊಡುಗೆಯನ್ನೇ ನೀಡಿದನು.

ಪರಿಣಾಮೋತ್ತರ ಪಂಥ(Post- Impressionism)

ನಿರೂಪಿಸಿದ ಚಿತ್ರದ ವಿಷಯದಲ್ಲಿ ಸಾಮಾನ್ಯ ನೋಡುಗನು ಹೊಂದುವನೆಂದು ಊಹಿಸಹುದಾದ ಭಾವನೆಗಳಿಗಿಂತ ಕಲಾವಿದನ ವೈಯಕ್ತಿಕ ಭಾವನೆಗಳಿಗೆ ಒತ್ತು ಕೊಡುವ ಕಲಾ ಶೈಲಿಯನ್ನು ಪರಿಣಾಮೋತ್ತರ ಪಂಥ ಇಲ್ಲವೇ ಇಂಪ್ರೆಶನಿಜಂ ಎಂದು

ಯುತ್ತಾರೆ. ವೈಯಕ್ತಿಕ ಭಾವವ್ಯಂಜಕ ಕಲಾಪದ್ಧತಿ ಎಂದೂ ಈ ಶೈಲಿಯನ್ನು ಯಬಹುದಾಗಿದೆ. ಇಂಪ್ರೆಶನಿಜಂ ಎಂಬ ರೀತಿಗೆ ಪ್ರತಿಕ್ರಿಯೆಯಾಗಿ ಈ ಹೆಸರು ದಿರುತ್ತದೆ. ವರ್ಣಚಿತ್ರಕಲೆಯಲ್ಲಿ ಸಾಮರಸ್ಯವನ್ನು ತುಂಬುವದಕ್ಕಾಗಿ ಬೇರೆ ಬೇರೆ ಥಗಳಲ್ಲಿ ಪ್ರಯೋಗಶೀಲರಾದ ಸಿಝಾನೆಯಿಂದ ಘನಾಕೃತಿ ಕಲಾ ಪಂಥವೂ ನ್‌ಗಾಫ್‌ನಿಂದ ಅಭಿವ್ಯಕ್ತಿ ಪಂಥವೂ ಪಾಲ್ ಗಾಗಿನ್‌ನಿಂದ ಸರ್ರಿಯಾಲಿಜಂ ಥವೂ ಹೊರಹೊಮ್ಮಿದವು. ಈ ಮೂವರಲ್ಲದೇ ಇನ್ನೂ ಅನೇಕ ಕಲಾವಿದರ ಣಾಮೊತ್ತರವಾದಿಗಳೆಂದು ಕರೆಯಲ್ಪಟ್ಟರು. ಕೆಲವರನ್ನು "ಪಾಯಿಂಟಲಿಸ್ಟ್"(Pointilist) ದು ಕರೆಯಲಾಯಿತು. ಈ ಪಾಯಿಂಟಿಲಿಸ್ಟರು ಪರಿಣಾಮವಾದಿ ಪಂಥದ ಬಣ್ಣ ಗೂ ಬಣ್ಣಗಳನ್ನು ಮಿಶ್ರಣ ಮಾಡದೇ ನೇರವಾಗಿ ಬಣ್ಣದ ಬಿಂದುಗಳನ್ನಿಟ್ಟು ತ್ರಿಸುವ ತಾರ್ಕಿಕ ಸೈದ್ಧಾಂತಿಕ ವಿಧಿಗಳ ಪ್ರಚೋದನೆಯಿಂದ ತಮ್ಮ ಕಲಾಕೃತಿಗಳ ರಚನೆ ಾಡಿದರು. ಸ್ಯೂರಾತ್(Seuraaf)ನು ಈ ತಂತ್ರವನ್ನು ಉಪ್ಯೋಯಿಗಿಸಿ ಚಿತ್ರಿಸಿದ ತ್ರಗಳು ಸಮತೂಕವುಳ್ಳ ಹಾಗೂ ಪ್ರಮಾಣಭೂತ ಚಿತ್ರಸಂಯೋಜನೆಯ ಆದರ್ಶನೀಯ ಣಾಮೋತ್ತರ ಶೈಲಿಯ ಚಿತ್ರಗಳೆಂದು ಪರಿಗಣಿಸಲ್ಪಟ್ಟಿರುತ್ತವೆ.

್ಯೂಚರಿಜಂ(Futurism) ಸ್ವೇಚ್ಛಾ ಸಂಕೇತಾನುವರ್ತನ ಕಲಾಪಂಥ

ಫ್ಯೂಚರಿಜಂ ಅಥವಾ ಸ್ವೇಚ್ಛಾ ಸಂಕೇತಾನುವರ್ತನ ಕಲಾಪಂಥವು ಕ್ಯೂಬಿಸ್ಟ್ ಥದ ಅನುಸರಣೆ ಎಂದು ಹೇಳಬಹುದಾದರೂ ಫ್ಯೂಚರಿಸ್ಟ್ ಪಂಥಕ್ಕೆ ತನ್ನದೇ ಆದ ವು ಗುಣವೈಶಿಷ್ಟಗಳಿವೆ. ಕ್ಯೂಬಿಸ್ಟ್ ಕಲಾವಿದರು ವಸ್ತುವಿನ ಇಲ್ಲವೆ ಮನುಷ್ಯಾಕೃತಿಗಳನ್ನು ತ್ರಿಸುವಾಗ ವಸ್ತುವನ್ನು ತುಣುಕಗಳಲ್ಲಿ ವಿಂಗಡಿಸಿ ಬೇರೆ ಬೇರೆಯಾಗಿಯೇ ಕ್ಯಾನವಾಸಿನ ಂಬ ಹರಡಿಕೊಂಡಿರುವಂತೆ ಚಿತ್ರಿಸಿ ತಮ್ಮ ವಿಶ್ಲೇಷಣಾತ್ಮಕ ರೂಪಗಳನ್ನು ೀರಿಸುತ್ತಿದ್ದರೆ, ಫ್ಯೂಚರಿಸ್ಟ್ ಕಲಾವಿದರು ತಮ್ಮ ಕಲಾಕೃತಿಗಳನ್ನು ಅಂತರ್ಯಾಮಿ ಲಗಳಿಂದ ತಮ್ಮ ಅಭಿವ್ಯಕ್ತಿಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟು ರಚಿಸುತ್ತಿದ್ದರು.

ಫ್ಯೂಚರಿಸ್ಟು ಕಲಾಕೃತಿಗಳಲ್ಲಿ 'ಚಲನೆ' ಮಹತ್ವದ ಸ್ಥಾನವನ್ನು ಪಡೆಯಿತು. 'ಹಾಗೆ ೀಡಿದರೆ ಚಲನೆ ಮತ್ತು ಬೆಳಕುಗಳು ದೇಹಗಳ ಭೌತಿಕತ್ವವನ್ನು ಹಾಳು ಮಾಡುತ್ತವೆ' ಬುದು ಈ ಪಂಥದ ಕಲಾವಿದರ ವಾದವಾಗಿತ್ತು. ಯಾವುದೇ ವಸ್ತು ಎಂದು ್ದವಾಗಿರುವುದಿಲ್ಲ ಚಲನೆ ಇಲ್ಲದೆ ಜೀವವಿಲ್ಲ, ಚಲನೆಯು ಸತ್ಯದ ಒಂದು ಪವಾಗಿದೆ ಎಂಬುದೇ ಅವರ ವಾದದ ಅರ್ಥ. ಅದಕ್ಕಾಗಿಯೇ ಅವರು ತಮ್ಮ ಾಕೃತಿಗಳಲ್ಲಿ ಚಲನೆಗೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾರೆ. ಉಹಾರಣೆಗೆ ಒಬ್ಬ ನುಷ್ಯ ಯಾವುದೇ ಒಂದು ಭಾರವಾದ ವಸ್ತುವನ್ನು ಎತ್ತುತ್ತಿದ್ದಾನೆ ಎಂಬುದನ್ನು ್ರಸುವಾಗ ಫ್ಯೂಚರಿಸ್ಟ್ ಕಲಾವಿದನು ಮನುಷ್ಯರ ಮುಂಗೈಯನ್ನು ಮೂರು ಇಲ್ಲ ್ಲೈದು ಬಾರಿ ಚಿತ್ರಿಸುತ್ತಾನೆ. ಓಡುತಿರುವ ಪ್ರಾಣಿಗೆ ನಾಲ್ಕು ಕಾಲುಗಳ ಬದಲಾಗಿ ನ್ನೈದು ಇಪ್ಪತ್ತು ಕಾಲುಗಳನ್ನು ಚಿತ್ರಿಸುತ್ತಾನೆ. ಇದು ವಸ್ತುವಿನಲ್ಲಿ ಚಲನೆಯನ್ನು ೀರಿಸುವ ಫ್ಯೂಚರಿಸ್ಟ್ ಕಲಾವಿದರ ವೈಶಿಷ್ಟ್ಯವಾಗಿದೆ.

ಹಿಂದಿನ ಕಲಾಪಂಥಗಳ ಲಕ್ಷ್ಯ-ಲಕ್ಷಣಗಳ ನಿಯಮಗಳನ್ನು ಕಿತ್ತೊಗೆದು ಭಾವ ನಿರೂಪಣೆಯಲ್ಲಿ ಅಥವಾ ಅಭಿವ್ಯಕ್ತಿಸುವಲ್ಲಿ ಸ್ವೇಚ್ಛಾಸಂಕೇತಗಳನ್ನು ಉಪಯೋಗಿಸುವ ನೂತನ ಶೈಲಿಯೇ ಫ್ಯೂಚರಿಸ್ಟ್ ಇಲ್ಲವೇ ಸ್ವೇಚ್ಛಾ ಸಂಕೇತಾನುವರ್ತನ ಕಲಾಸಂಪ್ರದಾಯವಾಗಿದೆ.

ಬೋಸ್ಸಿಯೋನ್(Boccione), ರುಸ್ಸೋಲೋ, ಬಲ್ಲಾ, ಮತ್ತು ಸೇವರಿನಿ(Severini) ಮುಂತಾದವರು ಪ್ರಮುಖ ಫ್ಯೂಚರಿಸ್ಟ್ ಕಲಾವಿದರಾಗಿದ್ದರು. ಇವರಲ್ಲಿ ಬೊಸ್ಸಿಯೋನ್ ಕಾರ್ರಾ ಮಹಾನ್ ವರ್ಣಚಿತ್ರ ಕಲಾವಿದನಾಗಿದ್ದನಲ್ಲದೇ ಅದ್ವಿತೀಯ ಮೂರ್ತಿಶಿಲ್ಪ ಕಲಾವಿದನೂ ಆಗಿದ್ದನು. ೧೯೧೬ರಲ್ಲಿ ಅವನ ಕೊಲೆಯೊಂದಿಗೆ ಫ್ಯೂಚರಿಸ್ಟ್ ಪಂಥವೂ ಪರ್ಯವಸಾನವಾಯಿತು.

ಬೈಝಂಟಾಯಿನ್ ಕಲೆ

ಬೈಝಂಟಾಯಿನರು ಸಿರಿಯಾ ಮತ್ತು ಮೆಸೋಪೊಟೇಮಿಯ ಜನಾಂಗಗಳಿಂದ ಹೆಚ್ಚು ಸ್ಫೂರ್ತಿಯನ್ನು ಪಡೆದವರಾಗಿದ್ದರು. ಕ್ರಿ.ಶ. ೪ನೆಯ ಶತಮಾನದ ವೇಳೆಗೆ ಅವರು ತಮ್ಮ ಧಾರ್ಮಿಕಾಸಕ್ತಿಗೊಳಗಾಗಿ ರೋಮನ್ ಕಲೆಯಿಂದ ಸಂಪೂರ್ಣವಾಗಿ ಭಿನ್ನವಾದ ಕ್ರಿಶ್ಚಿಯನ್ ಕಲೆಯನ್ನು ಉತ್ಪಾದಿಸಿದರು. ಈ ಹೊಸ ಕಲೆಯು ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ ಸುಮಾರು ೧,೦೦೦ ವರುಷಗಳ ವರೆಗೆ ಸ್ಥಿರವಾಗಿ ಬೆಳೆದು ಬಂದಿತು. ಅಲ್ಲದೇ ಕ್ರಿಶ್ಚಿಯನ್ ಪ್ರಪಂಚಕ್ಕೆ ಅತಿ ಪ್ರಿಯವೂ ಆಗಿತ್ತು.

ಕಾನ್ಸ್ಟಂಟಾಯಿನ್ ಥಿಯೋಡೊಸಿಯಸ್ ಮಹಾಶಯ (ಕ್ರಿ.ಶ. ೩೭೯-೯೫) ಮತ್ತು ಜಸ್ಟೀನಿಯನ್ ಚಕ್ರವರ್ತಿಗಳ ಕಾಲವು ಬೈಝಂಟಾಯಿನ್ ಕಲೆಯ ಪ್ರಥಮ ಸುವರ್ಣ ಯುಗವೆಂದು ಕರೆಯಲ್ಪಟ್ಟಿದೆ. ಕ್ರಿ.ಶ. ೭ನೆಯ ಶತಮಾನದಲ್ಲಿ ಸ್ವಲ್ಪ ಬದಲಾವಣೆ ಯಾಯಿತಾದರೂ ೮ನೆಯ ಶತಮಾನದಲ್ಲಿ ಅಧಿಕಾರಕ್ಕೆ ಬಂದ ರಾಜ ಸಂತತಿ ದೈವೀ ಸ್ವರೂಪಗಳನ್ನೂ ಸಂತರನ್ನು ಪ್ರತಿನಿಧಿಸುವ ಭಾವಚಿತ್ರಗಳನ್ನೂ ಧಾರ್ಮಿಕ ಕಲೆಯಲ್ಲಿ ರೂಪಿಸುವದನ್ನು ಪ್ರತಿಬಂಧಿಸಿತು. ಈ ಪ್ರತಿ · ಬಂಧವು ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ಜಾರಿಯಲ್ಲಿತ್ತು. ಕ್ರಿ. ಶ. ೮೪೩ರಲ್ಲಿ ಈ ಪ್ರತಿಬಂಧವನ್ನು ಕಿತ್ತೊಗೆಯಲಾಯಿತು. ಈ ಕಾಲದಲ್ಲಿ ಅಸಾಧಾರಣವಾದ ಕಲಾಕೃತಿಗಳ ಸೃಷ್ಟಿಯಾಯಿತಲ್ಲದೇ ಇಂದಿಗೂ ಉಳಿದುಕೊಂಡಿರುವ ಕಲಾಕೃತಿಗಳು ಪ್ರಾಯಶಃ ಇದೇ ಕಾಲದಲ್ಲಿ ರಚಿತವಾದವುಗಳಾಗಿವೆ. ಈ ಕಾಲವನ್ನು ದ್ವಿತೀಯ ಸುವರ್ಣಯುಗವೆಂದು ಕರೆಯಲಾಗಿದೆ. ಕ್ರಿ. ಶ. ೧೪೫೩ರ ನಂತರದ ಕಲಾಕೃತಿಗಳಲ್ಲಿ ಆಕೃತಿಯ ಪರಿಶುದ್ಧ ಸೌಂದರ್ಯ, ಅದ್ವಿತೀಯವಾದ ಕುಶಲ ಕಲೆಗಾರಿಕೆಯ ಸಾಧನೆಯಾಯಿತು. ಅನ್ಯಾದೃಶವಾದ ಬೈಝಾಂಟಿಯಿನ್ ವರ್ಣಚಿತ್ರ ಕಲಾಕೃತಿಗಳೂ ಇದೇ ಕಾಲದಲ್ಲಿಯೇ ಮೂಡಿ ಬಂದವುಗಳಾಗಿವೆ.

ಬೈಝಂಟಾಯಿನರು ವರ್ಣಚಿತ್ರ, ವಾಸ್ತುಶಿಲ್ಪ ಮುಂತಾದ ಪ್ರತಿಯೊಂದು

ಲಿಯಲ್ಲಿಯೂ ಸಿದ್ಧಹಸ್ತರಾಗಿದ್ದರು. ರೋಮನ್ ಕಟ್ಟಡಗಳ ಎರಡು ಶೈಲಿಗಳಿಂದ ಮ್ಮದೇ ಆದ ಹೊಸ ಶೈಲಿಯೊಂದನ್ನು ಹುಟ್ಟು ಹಾಕಿದರು. ಈ ಹೊಸ ಲಿಯಲ್ಲಿಯೇ ಬೈಝಂಟಾಯಿನ್ ಸಾಮ್ರಾಜ್ಯದ ತುಂಬೆಲ್ಲ ಅಸಂಖ್ಯಾತ ಚಿಕ್ಕ ಚಿಕ್ಕ ರ್ಚುಗಳ ನಿರ್ಮಾಣವಾಯಿತು. ಇವೆಲ್ಲವುಗಳಲ್ಲಿ ಕ್ರಿ.ಶ. ೬ನೆಯ ಶತಮಾನದಲ್ಲಿ ನ್‌ಸ್ಟ್ಯಾಂಟಿನೋಪೆಲ್‌ನಲ್ಲಿ ಜಸ್ಟೀನಿಯನ್ ಚಕ್ರವರ್ತಿಯು ಕಟ್ಟಿಸಿದ ಸಂತ ಸೋಫಿಯಾ ಂದಿರವು ಅತ್ಯುತ್ತಮವಾಗಿದ್ದು ವಿಸ್ತಾರವುಳ್ಳದ್ದೂ ಆಗಿದೆ. ಬೈಝಂಟಾಯಿನರು ತಮ್ಮ ಟ್ಟಡಗಳನ್ನು ಶ್ರೀಮಂತ ಅಲಂಕಾರಗಳಿಂದ ತುಂಬಿರುತ್ತಿದ್ದರು. ಚರ್ಚುಗಳ ಒಳಭಾಗಗಳು ಥೇಚ್ಛವಾಗಿ ಅಲಂಕರಿಸಲ್ಪಡುತ್ತಿದ್ದು ಗೋಡೆಯ ಕೆಳಭಾಗವನ್ನು ಅಮೃತಶಿಲೆಯಿಂದಲೂ ೇಲ್ಭಾಗವನ್ನು ಮೊಸಾಯಿಕ್ ಮತ್ತು ವರ್ಣಚಿತ್ರಗಳಿಂದಲೂ ಅಲಂಕರಿಸುತ್ತಿದ್ದರು. ಕಲಾವಿದರು ಕೇವಲ ತಮ್ಮ ಪ್ರಚಾರಕ್ಕಾಗಿ ಕೆಲಸಮಾಡದೇ ದೇವರ ವೈಭವಕ್ಕಾಗಿ ಸಮಾಡುತ್ತಿದ್ದ ಯತಿಗಳಾಗಿದ್ದರು. ಅತ್ಯುತ್ತಮವಾದ ಬೈಝಂಟಾಯಿನ್ ವರ್ಣಚಿತ್ರಗಳನ್ನೂ ತ್ರಿಚಿತ್ರಗಳನ್ನೂ ಅಲಂಕೃತ ಹಸ್ತಪ್ರತಿಗಳಲ್ಲಿಯೂ ಕಾಣಬಹುದು. ಈ ಹಸ್ತಪ್ರತಿಗಳಲ್ಲಿನ ರ್ಣಚಿತ್ರಗಳನ್ನು ರಚಿಸಿದ ಕಲಾವಿದರೇ ರಚಿಸಿದ್ದಾರೆ. ಒಟ್ಟಿನಲ್ಲಿ ಬೈಝಂಟಾಯಿನರ ವನ ಮಟ್ಟವನ್ನೂ ಸಂಸ್ಕೃತಿಯನ್ನೂ ಈ ಕಲಾಕೃತಿಗಳೇ ಉಚ್ಛ್ರಾಯ ಸ್ಥಿತಿಗೆ ದವೆಂದು ಹೇಳಬಹುದು.

ಫ್ರಿಕನ್ ಕಲೆ–

ಸಹರಾ ಮರುಭೂಮಿಯ ದಕ್ಷಿಣ ಭೂಭಾಗದ ನಿಗ್ರೋ ಆಫ್ರಿಕನ್ ಕಲೆಯನ್ನು ರ್ಮಿಕವಲ್ಲದ ಮನೆಬಳಕೆಯ ವಸ್ತುಗಳ ಅಲಂಕರಣ ಕಲೆ ಮತ್ತು ಧಾರ್ಮಿಕವಾದ ವಂತ ವ್ಯಕ್ತಿಗಳ ಚಿತ್ರಣಕಲೆ ಎಂದು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ. ುದಲ ವರ್ಗದ ಮನೆಬಳಕೆಯ ವಸ್ತುಗಳ ಅಲಂಕರಣಕಲೆಯು ಇಡೀ ಆಫ್ರಿಕವನ್ನು ಪಿಸಿದ್ದು ಕೇವಲ ಕಣ್ಣಿನ ಆನಂದವೇ ಅದರ ಉದ್ದೇಶವಾಗಿದೆ. ಎರಡನೇ ವರ್ಗದ ಯು ದೈವಿಕ ನಂಬುಗೆ ಮತ್ತು ಧಾರ್ಮಿಕ ಸಮಾರಂಭಗಳಲ್ಲಿ ಅಭಿನಯಿಸುವ ಟಕಾದಿಗಳಿಗೆ ಸಂಬಂಧಿಸಿದುದಾಗಿದೆ ಈ ಎರಡನೇ ವರ್ಗದ ಮಾದರಿಗಳನ್ನು ತ್ತರದ ಸೂಡಾನ್ ಮತ್ತು ಗಿನೀಯಾ ಕರಾವಳಿಯಿಂದ ದಕ್ಷಿಣದ ಕಾಮರೂನ್ ಅನ್ನು ಗೊಂಡು ಅಂಗೋಲೂ ವರೆಗೂ ವ್ಯಾಪಿಸಿದ ಆಫ್ರಿಕದ ಪಶ್ಚಿಮಭಾಗದಲ್ಲಿಯೂ ್ಯ ಆಫ್ರಿಕದ ಕಾಂಗೋ ಪ್ರದೇಶಗಳಲ್ಲಿಯೂ ಕಾಣಬಹುದು. ಪೂರ್ವ ಮತ್ತು ಣದ ಬಹುಭಾಗದ ಜನರು ನಿತ್ಯೋಪಯೋಗಿ ವಸ್ತುಗಳಾದ ಮರದ ತಟ್ಟೆಗಳು, ುಚಗಳು, ಮಣ್ಣಿನ ಮಡಕೆಗಳ ಮೇಲೆ ಭೂಮಿತಿಯಾಕಾರದ(Geometrical) ಂಕೃತ ನಕ್ಷೆಗಳನ್ನು ವರ್ಣಗಳಿಂದ ಚಿತ್ರಿಸಿದ್ದಾರೆ. ಪೂರ್ವ ಆಫ್ರಿಕದ ಮಸಾಯಿ ರು ವರ್ಣಚಿತ್ರಗಳಿಂದ ಚರ್ಮದ ಗುರಾಣಿಗಳನ್ನು ಅಲಂಕರಿಸುತ್ತಿದ್ದರೆ ಕೆನ್ಯಾದ ರು ಮರದ ಸ್ಟೂಲುಗಳನ್ನು ಮಣಿಗಳು ಮತ್ತು ತಂತಿಗಳನ್ನು ಕೂಡಿಸಿ(Inlaid) ಂಕರಿಸುತ್ತಾರೆ. ಯುಗಾಂಡಾದಲ್ಲಿ ಒತ್ತಿ ಮೂಡಿಸಿದ ನಕ್ಷೆಗಳನ್ನು ಚಿತ್ರಿಸಿದ ಡಕೆಗಳನ್ನು ಸುಟ್ಟು ತಯಾರಿಸುತ್ತಿದ್ದರೆ ರ್‍ವಾಂಡಾ, ಬುರುಂಡಿ, ಟಾಂಗಾನ್ಯಿಕ ಮತ್ತು ್ತರದ ರೊಡೇಸಿಯ ಮುಂತಾದ ಕಡೆಗಳಲ್ಲಿ ಕಪ್ಪು ಮತ್ತು ಬಿಳಿ ಬಣ್ಣಗಳನ್ನು ಬಳಸಿ



೨೬) ಆಫ್ರಿಕನ್ ಕಲೆ

ಬ್ಯಾಸ್ಕೆಟ್‌ಗಳ ಮೇಲೆ ನಕ್ಷಾರೂಪಗಳನ್ನು ಚಿತ್ರಿಸಲಾಗುತ್ತಿತ್ತು. ಪಶ್ಚಿಮ ಆಫ್ರಿಕ ಮತ್ತು ಕಾಂಗೋ ಪ್ರದೇಶಗಳ ಕೆತ್ತನೆಯ ಕಲಾಕೃತಿಗಳು ಮತ್ತು ಮುಖವಾಡಗಳು ಮಹತ್ವಪೂರ್ಣ ಕಲಾಕೃತಿಗಳೆಂದು ಪರಿಗಣಿಸಲ್ಪಟ್ಟಿವೆ.

ಹಸ್ತಿದಂತ ಮತ್ತು ಕೊಂಬುಗಳನ್ನು ಬಳಸಿ ಶಿಲ್ಪಕಲಾಕೃತಿಗಳನ್ನು ರಚಿಸುತ್ತಿದ್ದರೂ ಆಫ್ರಿಕನ್ ಶಿಲ್ಪಕಲಾವಿದನಿಗೆ ಕಾಷ್ಠ(ಮರ)ವು ಮೆಚ್ಚಿನ ಮಾಧ್ಯಮವಾಗಿದೆ, ಮಾದರಿ ಪ್ರತಿಮಾ ನಿರ್ಮಾಣ ಕಲೆ(Modelling)ಯು ಪಶ್ಚಿಮ ಆಫ್ರಿಕದ ತುಂಬ ವ್ಯಾಪಕವಾಗಿರುತ್ತದೆ. ಕಾಂಗೋ ಪ್ರದೇಶದ ಮೇಲ್ಭಾಗದಲ್ಲಿ ಮೃತರ ಪ್ರತಿರೂಪಗಳನ್ನು ರಚಿಸುವ ಕಲೆಯು ವ್ಯಾಪಕವಾಗಿರುತ್ತದೆ. ನೈಜೀರಿಯದ "ಇಬೋ"ಗಳು ತಮ್ಮ "ಮ್ಬಾರಿ" ಎಂದು ಕರೆಯಲ್ಪಡುವ ಮನೆಗಳನ್ನು ತುಂಬಿಸಲು ಮಣ್ಣಿನ ಮಾದರಿಗಳನ್ನು ತಯಾರಿಸುವ ಕಲೆಯನ್ನು ಹೆಚ್ಚಾಗಿ ವೃದ್ಧಿಗೊಳಿಸಿದರು. ಈ ಮಾದರಿಗಳು ಹೆಚ್ಚಾಗಿ ಧಾರ್ಮಿಕವಾದವು ಗಳಾಗಿರುತ್ತಿದ್ದವು. ಮೇಣದ ಪ್ರತಿಮೆಗಳಿಂದ ಎರಕವೊಯ್ದು ಕಂಚಿನ ಪ್ರತಿಮೆಗಳನ್ನು ತಯಾರಿಸುವ ಕಲೆಯು ಪಶ್ಚಿಮ ಆಫ್ರಿಕೆಯಲ್ಲಿ ಬಳಕೆಯಲ್ಲಿತ್ತು. ದಕ್ಷಿಣ ನೈಜೀರಿಯದ "ಇಫೆ" ಎಂಬಲ್ಲಿ ವಿಸ್ಮಯಕಾರಕ ವಾಸ್ತವಿಕ ಶಿರಸ್ಸುಗಳ ಮಾದರಿಗಳನ್ನು ಮಾಡಿಡಲಾಗಿದೆ. ೧೫ ಮತ್ತು ೧೬ನೆಯ ಶತಮಾನಗಳಲ್ಲಿ ಇದ್ದಿರುವಂತೆಯೆ ನೈಜೀರಿಯದ ಬೆನಿನ್ ಪಟ್ಟಣದ ಸಭಾಜೀವನದ ಶಿರಸ್ಸುಗಳು, ಆಕೃತಿಗಳು ಮುಂತಾದವುಗಳ ಉಬ್ಬುಚಿತ್ರಗಳನ್ನು

ರಚಿಸಲಾಗಿದೆ. ಇವುಗಳಲ್ಲದೇ ತಾಮ್ರವನ್ನು ಬಳಸಿ ತಯಾರಿಸಿದ ಚಿಕ್ಕ ಚಿಕ್ಕ ಆಕೃತಿಗಳೂ ಸಹ ಆಫ್ರಿಕನ್ ಕಲಾವಿದರಿಂದ ರಚಿಸಲ್ಪಟ್ಟಿವೆ. ಶಿಲೆಯಿಂದ ತಯಾರಿಸಿದ ಶಿಲ್ಪಕೃತಿಗಳು ಕಂಡುಬರುತ್ತಿಲ್ಲವಾದರೂ 'ಸಿಯೆರ್ರಾ ಲಿಯೋನ' ಮತ್ತು ರ್‍ಹೊಡೇಸಿಯಗಳಲ್ಲಿ ಬಳಪದ ಕಲ್ಲಿನ ಕೆತ್ತನೆಯ ಕಲಾಕೃತಿಗಳೂ ದಕ್ಷಿಣ ನೈಜೀರಿಯದ ಶಿಲೆಯ ಶಿಲ್ಪಕೃತಿಗಳೂ ದೊರೆತಿದ್ದು ಪ್ರಾಚೀನ ಕಾಲದಲ್ಲಿ ಶಿಲೆಯೂ ಬಳಕೆಯಲ್ಲಿತ್ತು ಎಂಬುದನ್ನು ತೋರಿಸುವ ಮಾದರಿಗಳಾಗಿವೆ. ಬುಷ್‌ಮೆನ್ ಜನರು ಪೂರ್ವ ಮತ್ತು ದಕ್ಷಿಣ ಆಫ್ರಿಕದ ಭಾಗದಲ್ಲಿದ್ದು ತಮ್ಮದೇ ಆದ ಪ್ರತ್ಯೇಕ ಕಲಾ ಪರಂಪರೆಯನ್ನು ಬೆಳೆಸಿದವರಾಗಿದ್ದರು. ಅವರು ಗುಹೆಗಳ ಗೋಡೆಗಳ ಮೇಲೂ ಬಂಡೆಗಳ ಮಾಡುಗಳಲ್ಲಿಯೂ ಚಿತ್ರಿಸಿದ ಎಲಾಂಡ್, ಸ್ಪ್ರಿಂಗ್‌ಬಾಕ್, ಝೀಬ್ರಾ ಮತ್ತು ಘೇಂಡಾಮೃಗಗಳನ್ನು ಚಿತ್ರಿಸಿದ್ದು ಕೆಲವು ಏಕಾಂಗಿಯಾಗಿರುವಂತೆಯೂ ಇಲ್ಲವೇ ಗುಂಪುಗುಂಪಾಗಿದ್ದು ಬೇಟೆಯ ದೃಶ್ಯಗಳಂತೆಯೂ ಇರುತ್ತವೆ. ಈ ಚಿತ್ರಗಳಲ್ಲದೇ ಬುಷ್‌ಮೆನ್‌ರು ಚಿತ್ರಿಸಿದ ನೃತ್ಯಗಳು, ಸಮಾರಂಭಗಳು ಇಲ್ಲವೇ ಬುಷ್‌ಮೆನ್‌ರಿಗೂ ನಿಗ್ರೋಗಳಿಗೂ ನಡೆದ ಯುದ್ಧಗಳ ದೃಶ್ಯಗಳು ಮುಂತಾದವುಗಳು ಅಮೋಘವಾಗಿವೆ. ಈ ವರ್ಣಚಿತ್ರಗಳ ಜೊತೆಗೆ ಬಿರುಸಾದ ಕಲ್ಲುಬಂಡೆಗಳನ್ನು ಕೊರೆದು ಅಸಂಖ್ಯ ಪ್ರಾಣಿಗಳನ್ನು ಚಿತ್ರಿಸಲಾಗಿದ್ದು ಇವೆಲ್ಲ ದಕ್ಷಿಣ ಆಫ್ರಿಕೆಯಲ್ಲಿರುತ್ತವೆ.

ಈ ಎಲ್ಲ ಕಲಾಕೃತಿಗಳು ಬೇರೆ ಬೇರೆ ಕಾಲಗಳಲ್ಲಿ ರಚಿಸಲ್ಪಟ್ಟವುಗಳಾಗಿದ್ದು ಶೈಲಿಯ ಮುಂದುವರಿಕೆ-ಸ್ಪಷ್ಟವಾಗಿ ಗೋಚರಿಸುತ್ತದೆ.

ಗೋಥಿಕ್ ಕಲೆ

೧೩, ೧೪ ಮತ್ತು ೧೫ನೆಯ ಶತಮಾನಗಳಲ್ಲಿ ಯುರೋಪಿನ ಉತ್ತರ ಪ್ರಾಂತ್ಯಗಳಲ್ಲಿ ಬೆಳೆದ ಕಲೆಯನ್ನು ಗೋಥಿಕ್ ಕಲೆ ಎಂದು ಕರೆಯುತ್ತಾರೆ ಮಧ್ಯಕಾಲೀನ ಪುನರುತ್ಥಾನ ವಾಸ್ತುಶಿಲ್ಪಿಗಳೇ ಈ ಕಾಲದ ಕಲೆಯನ್ನು "ಗೋಥಿಕ್" ಎಂದು ಹೆಸರಿಸಿದರು. ವಾಸ್ತುಶಿಲ್ಪಕಲೆಯೇ ಈ ಕಾಲದ ಪ್ರಧಾನ ಕಲಾ ಪ್ರಕಾರವಾಗಿತ್ತು. ಚೂಪಾದ ಕಮಾನುಗಳ ಬಳಕೆ. ಗೋಥಿಕ್ ವಾಸ್ತುಶಿಲ್ಪದ ಪ್ರಧಾನ ಗುಣವಿಶೇಷಣವಾಗಿತ್ತು ಗೋಥಿಕ್ ಕಲೆಯನ್ನು ಕೆಲವು ಬಾರಿ "ಚೂಪುಕಮಾನಿನ ಕಲೆ" ಎಂದೂ ಕರೆಯಲಾಗುತ್ತಿತ್ತು. ಗೋಥಿಕ್ ಕಲೆಯು 'ಸಮತೋಲನ' ಪ್ರಧಾನವಾದುದಾಗಿದೆಯಲ್ಲದೆ ಮೂರ್ತಿಶಿಲ್ಪ, ವರ್ಣಚಿತ್ರಕಲೆಗಳೂ ಸಮತೋಲನ ತತ್ವವನ್ನೇ ಪ್ರಾಮುಖ್ಯವಾಗಿ ಅವಲಂಬಿಸಿರುತ್ತಿದ್ದವು.

ವಾಸ್ತು ಶಿಲ್ಪಕಲೆಯು ಗೋಥಿಕ್ ಕಾಲದ ಪ್ರಮುಖ ಕಲಾಪ್ರಕಾರವಾಗಿದ್ದರೂ ಮೂರ್ತಿಶಿಲ್ಪ ಕಾಷ್ಠ ಶಿಲ್ಪ ಮತ್ತು ಹಸ್ತಿದಂತದ ಕೆತ್ತನೆ, ಭಿತ್ತಿಚಿತ್ರಗಳು ಮತ್ತು ಅಲಂಕೃತ ಹಸ್ತಪ್ರತಿಗಳು, ಲೋಹದ ಕುಶಲ ಕಲೆಗಾರಿಕೆ, ನೇಕಾರಿಕೆ ಮತ್ತು ಹೆಣಿಕೆಯ ಕಲಾಕೃತಿಗಳೇ ಮೊದಲಾದವು ಕಲಾ ಪ್ರಕಾರಗಳೂ ಗೋಥಿಕ್ ಕಲಾ ಶೈಲಿಯಿಂದ ಹೊರತಾಗಿರಲಿಲ್ಲ.

ಪ್ರಪ್ರಥಮವಾಗಿ ಗೋಥಿಕ್ ಕಲಾಶೈಲಿಯು ಫ್ರಾನ್ಸ್‌ನಲ್ಲಿ ಪರಿಶುದ್ಧಗೊಂಡಿತು.

ನಂತರ ಅಲ್ಲಿಂದ ಯುರೋಪಿನಲ್ಲೆಲ್ಲಾ ಪ್ರಸರಿಸಿತು. ೧೩ನೆಯ ಶತಮಾನದ ಪ್ರಥಮಾರ್ಧದಲ್ಲಿ ಇಂಗ್ಲೆಂಡ್‌ನಲ್ಲಿ ಈ ಶೈಲಿಯನ್ನು "ಪೂರ್ವ ಇಂಗ್ಲಿಷ್ ಕಲೆ"(Early English Art) ಎಂದು ಕರೆಯಲಾಗುತ್ತಿತ್ತು. ಇದೇ ಶತಮಾನದ ಕೊನೆಯ ವೇಳೆಗೆ ನಿರ್ಮಾಣಗೊಂಡ ಇಗರ್ಜಿಗಳ ವಾಸ್ತುಶಿಲ್ಪದಲ್ಲಿ ಜಾಮಿತಿಕ(Geometric) ಮತ್ತು ಅಲಂಕಾರಕ ಸ್ವರೂಪದಲ್ಲಿ ಬೆಳೆದು ಅಭಿವೃದ್ಧಿಗೊಂಡಿತು. ಗೋಥಿಕ್ ಶೈಲಿಯ ಭವ್ಯವಾದ ಆರಾಧನಾ ಮಂದಿರ(Cathedral)ಗಳನ್ನು ಕಟ್ಟಿ ವೈಭವೀಕರಿಸಲು ಬೇಕಾಗುವ



೨೭) ಗೋಥಿಕ್

ಅಪಾರ ಹಣವನ್ನು ರಾಜ ಮಹಾರಾಜರು, ಧರ್ಮಗುರುಗಳು ಮತ್ತು ಸದ್ಗೃಹಸ್ತರುಗಳಿಂದಲೂ ಹೆಚ್ಚಾಗಿ ನಾಗರಿಕರಿಂದಲೂ ಸಂಗ್ರಹಿಸಲಾಗುತ್ತಿತ್ತು. ಕೆಲವು ಬಾರಿ ಜನರು ವಂತಿಗೆಯ ಹಣಕ್ಕೆ ಬದಲಾಗಿ ಕೆಲಸಮಾಡಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು.

ಈ ಕಾಲದಲ್ಲಿ ಶಿಲ್ಪಕಲಾವಿದರು ಭಾವಪ್ರತಿಮೆ(Portraits)ಗಳನ್ನು ರಚಿಸಲು ಯತ್ನಿಸಿದರಲ್ಲದೆ ಪ್ರತಿಮೆಗಳಲ್ಲಿ ವ್ಯಕ್ತಿಗಳ ವಯಸ್ಸು ಮತ್ತು ಗುಣಾವಗುಣಗಳನ್ನೂ ಸೂಚ್ಯವಾಗಿ ಬಿಂಬಿಸಿದ್ದಾರೆ. ಬಾಗಿಲುಗಳ ಮೇಲಿರುವ ಚಿತ್ರಪಟ್ಟಿಕೆಗಳಲ್ಲಿ ಹೆಚ್ಚಾಗಿ ಕ್ರಿಸ್ತನ, ದೇವದೂತರ ಇಲ್ಲವೆ ಹಳೆ ಒಡಂಬಡಿಕೆಗಳ ಸನ್ನಿವೇಶ ಅಥವಾ ಕ್ರಿಸ್ತನ ಮತ್ತು ಮಾತೃಕನ್ಯೆ(Virgin)ಯರ ಜೀವನದ ಸನ್ನಿವೇಶ ಮುಂತಾದವುಗಳಿರುತ್ತವೆಯಲ್ಲದೆ ದೇವರು ಮನುಷ್ಯನಂತೆ ಇನ್ನುಳಿದ ಸ್ವಾಭಾವಿಕ ವಸ್ತುಗಳನ್ನೂ ಪ್ರಾಣಿಗಳನ್ನೂ ಸೃಷ್ಟಿಸಿದನೆಂಬುದನ್ನು

ಪಾದಿಸಲು ಪ್ರಾಣಿಗಳು, ಪಕ್ಷಿಗಳು, ಸಸ್ಯಗಳು ಮುಂತಾದವುಗಳನ್ನೂ ಚಿತ್ರಿಸಲಾಗಿದೆ. ನೆಯ ಶತಮಾನವು ಗೋಥಿಕ್ ಕಲೆಯ ಸ್ವರ್ಣಯುಗವೆಂದು ಹೇಳಬಹುದು. ಮಾನ್ಯ ಜನಜೀವನವು ಆರ್ಥಿಕವಾಗಿ ಅಭಿವೃದ್ಧಿಗೊಂಡು ಶ್ರೀಮಂತವಾದಂತೆ ಕಲ ಧಾರ್ಮಿಕವಾಗಿ ಉಳಿದಿದ್ದ ಗೋಥಿಕ್ ಕಲೆಯು ಶ್ರೀಮಂತರ ಮನೆಗಳನ್ನು ಕರಿಸಲು ವಿಲಾಸೀವಸ್ತುವಾಗಿ ಬಳಸಲ್ಪಟ್ಟಿತು. ಪ್ರಣಯ ಸಾಹಿತ್ಯದ ಸನ್ನಿವೇಶಗಳನ್ನು ಚಿತ್ರ ಕಲೆಯ ಮೂಲಕವೂ ಹಸ್ತಿದಂತ ಕಲಾಕೃತಿಗಳ ಮೂಲಕವೂ ಅಭಿವ್ಯಕ್ತಿಸಲಾಯಿತು.

೧೪ನೆಯ ಶತಮಾನದಲ್ಲಿ ಗೋಥಿಕ್ ಕಲೆಯು ಫ್ರಾನ್ಸ್‌ನಲ್ಲಿ ಸೂಕ್ಷ್ಮಾತಿ ಕ್ಷ್ಮವಾಗಿ ಕಟ್ಟಡಗಳಲ್ಲಿ ವರ್ಣಚಿತ್ರಗಳೂ ಪ್ರತಿಮಾಶಿಲ್ಪಗಳೂ ಸಮ್ಮಿಳಿತವಾದವು. ೇ ಕಾಲದಲ್ಲಿ ಜರ್ಮನಿ ಮತ್ತು ಇಂಗ್ಲೆಂಡ್‌ಗಳಲ್ಲಿ ಹೊಸ ಕಲ್ಪನೆಗಳು ಈ ಶೈಲಿಯಲ್ಲಿ ಕೊಂಡವು. ಇಂಗ್ಲೆಂಡ್‌ನಲ್ಲಿ ಗೋಥಿಕ್ ಕಲೆಯನ್ನು "ಅಲಂಕಾರ ಶೈಲಿ" ಎಂದು ಯಲಾಗುತ್ತಿತ್ತು. ೧೪ನೆಯ ಶತಮಾನದ ಗೋಥಿಕ್ ಕಲಾಕೃತಿಗಳಲ್ಲಿ ಯೇಸುಕ್ರಿಸ್ತನು ದೇವದೂತನಾಗಿರದೇ ನೋವನ್ನು ಅನುಭವಿಸುವ ಸಾಮಾನ್ಯ ಮಾನವನಂತೆ ಸಿರುವುದನ್ನು ಕಾಣಬಹುದು. ಜರ್ಮನ್ ಕಲಾವಿದರು ಚಿತ್ರಿಸಿದ "ಶಿಲುಬೆಗೇರಿದ "ನ ಚಿತ್ರವು ನೋಡುಗರು ತಾಳಿಕೊಳ್ಳಲಾಗದಷ್ಟು ದುಃಖವನ್ನು ಕೊಡುತ್ತದೆ. ದೇ ಪದೆ ಪದೇ ಚಿತ್ರಿತವಾಗಿರುವ ಮಾತೃಕನ್ನೆಯು ಕ್ರಿಸ್ತನ ಶವವನ್ನು ತೊಡೆಯ ಲೆ ಹಾಕಿಕೊಂಡು ಕುಳಿತಿರುವಂತೆ ಚಿತ್ರಿಸಲ್ಪಟ್ಟ ಚಿತ್ರವಂತೂ ನೋಡುಗರ ಕಣ್ಣು ಗೂಡುವಂತಿದೆ.

೧೬ನೆಯ ಶತಮಾನದ ಮಧ್ಯಭಾಗದ ವೇಳೆಗೆ ಕೆಲವೇ ಚಿಕ್ಕ ಪುಟ್ಟ ವಿವರಗಳನ್ನು ರೆ ಗೋಥಿಕ್ ಕಲಾಪರಂಪರೆಯು ತನ್ನ ಮೂಲಸ್ವರೂಪವನ್ನು ಬದಲಿಸದೇ ಗಿಯೇ ಉಳಿದುಕೊಂಡು ಬಂದಿದೆ.

ರ್ಮನ್ ಕಲೆ

ಕ್ರಿ.ಶ. ೧೪ನೆಯ ಶತಮಾನದಲ್ಲಿ ಜರ್ಮನಿಯ ಕೊಲೋನ್(Cologne) ಮತ್ತು ಫಾಲಿಯ(Westpalia)ಗಳಲ್ಲಿ ಕಲಾಶಾಲೆಗಳು ಹುಟ್ಟಿಕೊಂಡವು. ಇವುಗಳಲ್ಲಿ ಕೋಲೋನ್ ಶಾಲೆಯು ಮಹತ್ವಪೂರ್ಣ ಕಲಾಶಾಲೆಯಾಗಿದ್ದು ಸ್ಟೀಫಾನ್ ಲೋಚ್ನರ್(Stefan nner) ಎಂಬವನು ಜರ್ಮನ್ ಕಲಾವಿದರಲ್ಲಿಯೇ ಅಗ್ರಗಣ್ಯನೆಂದು ಪರಿಗಣಿಸಲ್ಪಟ್ಟಿದ್ದಾನೆ. ರ್ಮನ್ ಕಲಾಕೃತಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಭಾವೋದ್ವೇಗಗಳ ಬದಲಾಗಿ ಚ್ನರನ ಕಲಾಕೃತಿಗಳಲ್ಲಿ ಪ್ರಾಮಾಣಿಕವಾದ ಲಾಲಿತ್ಯ ನಿರೂಪಣೆಯನ್ನು ಕಾಣಬಹುದು.

೧೪ನೆಯ ಶತಮಾನದಲ್ಲಿ ಜರ್ಮನಿಯಲ್ಲಿ ಮುದ್ರಣ ಕಲೆಯ ಪರಿಶೋಧನೆಯಾದ ರ ಮುದ್ರಣಗೊಳ್ಳಲಿರುವ ಪುಸ್ತಕಗಳಲ್ಲಿ ಅಚ್ಚುಮಾಡುವದಕ್ಕಾಗಿ ಸಂದರ್ಭ ಲಾಕೃತಿಗಳ ಕೆತ್ತನೆಯ ಕುಶಲ ಕಲೆಗಾರಿಕೆ(Engraving)ಯ ಬೆಳವಣಿಗೆಯಾಗ ತಗಿತು. ಮಾರ್ಟಿನ್‌ಸ್ಕೊನ್ಗಾಯೇರ(Martin Schonganer)ನು ಜರ್ಮನಿಯ ಪ್ರಪ್ರಥಮ ಗ್ರೇವಿಂಗ್ ಕಲಾವಿದನಾಗಿದ್ದನು. ಅವನ ನಂತರದ ಡೂರರ್(Durer),

ಹೋಲ್ಬೀನ್(Holbein), ಕ್ರನಾಚ್(Cranach), ಗ್ರೀನ್(Grien), ಆಲ್ಟ್‌ಡೋರ್ಫರ್ (Altdorfer) ಮತ್ತು ಗ್ರುನೆವಾಲ್ಡ್(Grunewald) ಮುಂತಾದವರು ಎನ್‌ಗ್ರೇವಿಂಗ್ ಕಲೆಯಲ್ಲಿ ವಿಶ್ವಖ್ಯಾತಿವೆತ್ತ ಕಲಾವಿದರೆಂದು ಪರಿಗಣಿಸಲ್ಪಟ್ಟಿದ್ದಾರೆ. ಈ ಎಲ್ ಕಲಾವಿದರೂ ೧೫ನೆಯ ಶತಮಾನದ ಮಧ್ಯಕಾಲದಿಂದ ೧೬ನೆಯ ಶತಮಾನ ಮಧ್ಯಕಾಲದವರೆಗೆ ಸುಮಾರು ನೂರುವರುಷಗಳ ಅವಧಿಯಲ್ಲಿ ಬಾಳಿದವರಾಗಿದ ಅವರೆಲ್ಲರ ಕಲಾಕೃತಿಗಳೂ ಸಾಮಾನ್ಯವಾಗಿ ಭಾವೋದ್ರೇಕ ಪೂರ್ಣವಾದ ಕಲಾಕೃತಿಗಳಾಗಿವ ಜರ್ಮನಿಯ ಕಲಾವಿದರು ಸಾಮಾನ್ಯವಾಗಿ "ಮೃತ್ಯು"ವಿನಂಥ ದಾರುಣ ವಸ್ತುವನ್



೨೮) ಡೂರರ್

ಕುರಿತು ತಮ್ಮ ಕಲಾಕೃತಿಗಳನ್ನು ರಚಿಸಿರುವದರಿಂದ ಭಾವೋದ್ರೇಕಗಳು ಸ್ವಾಭಾವಿಕವಾ ಅವರ ಕಲಾಕೃತಿಗಳಲ್ಲಿ ಸ್ಫುಟಗೊಂಡು ಚಿತ್ರಿತವಾಗಿವೆ.

೧೭ನೆಯ ಶತಮಾನದಲ್ಲಿ ಜರ್ಮನಿಯ ಯುದ್ಧದಿಂದಾಗಿ ತತ್ತರಿಸಲಾದ ಕಾರ ಈ ಅವಧಿಯಲ್ಲಿ ಹೇಳಿಕೊಳ್ಳುವಂಥ ಕಲಾಕೃತಿಗಳ ನಿರ್ಮಾಣವಾಗಲಿಲ್ಲ. ಆದರು

ಹೆಚ್ಚಾಗಿ ಇಟಲಿಯಲ್ಲಿಯೇ ಕೆಲಸಮಾಡುತ್ತಿದ್ದ ಆಡಮ್ ಎಲ್ಶೀಮರ್(Adam Elsheimer) ಎಂಬ ಸುಪ್ರಸಿದ್ಧ ಕಲಾವಿದನು ಹೆಚ್ಚಾಗಿ ತಾಮ್ರವನ್ನು ಬಳಸಿ ಚಿಕ್ಕ ಚಿಕ್ಕ ಕಲಾಕೃತಿಗಳನ್ನು ರಚಿಸಿದ್ದು ಈ ಕಲಾಕೃತಿಗಳ ವಸ್ತು ಧಾರ್ಮಿಕವಾದುದಾಗಿದ್ದರೂ ಕೃತಕ ನಿಸರ್ಗ ಚಿತ್ರಗಳ ಹಿನ್ನೆಲೆಯು ಪ್ರಾಮುಖ್ಯವಾಗಿ ಚಿತ್ರಿಸಲ್ಪಟ್ಟಿವೆ.

೧೮ನೆಯ ಶತಮಾನದಲ್ಲಿ ಬ್ಯಾರೋಕ್ ಶೈಲಿಯ ಅನೇಕ ಭವ್ಯವಾದ ಅರಮನೆಗಳು, ಚರ್ಚುಗಳು ದಕ್ಷಿಣ ಜರ್ಮನಿಯಲ್ಲಿ ನಿರ್ಮಾಣಗೊಂಡುವಲ್ಲದೇ ಜರ್ಮನ್ ಕಲೆಗೆ ಸುಭದ್ರತೆಯೂ ದೊರಕಿತು. ಜರ್ಮನ್ನರು ಇಟಾಲಿಯನ್ನರಿಗಿಂತ ಮುಕ್ಕಾಲು ಶತಮಾನ ತಡಮಾಡಿ ಬ್ಯಾರೋಕ್ ಶೈಲಿಯನ್ನು ಕೈಗೆತ್ತಿಕೊಂಡು ಅತ್ಯುನ್ನತ ಮಟ್ಟದ ಶೈಲಿಯನ್ನಾಗಿ ಅಭಿವೃದ್ಧಿಗೊಳಿಸಿದರು.

ಮೊದಲನೆಯ ಜಾಗತಿಕ ವಿಶ್ವಸಮರದ ಕಾಲದಲ್ಲಿ "ಅಭಿವ್ಯಕ್ತಿ ವಾದ"(Expressionist style)ಎಂಬ ಹೊಸ ಪಂಥವೊಂದರ ಉದಯವಾಯಿತು. ಅಸಂಖ್ಯಾತ ಖ್ಯಾತ ಕಲಾಕೃತಿಗಳ ಸೃಷ್ಟಿಯೂ ಆಯಿತು. ಆದರೆ ೧೯೩೩ರಲ್ಲಿ ಹಿಟ್ಲರ್‌ನು ಅಧಿಕಾರಕ್ಕೆ ಬಂದ ನಂತರ ಪ್ರಗತಿಗಾಮಿಯಾದ ಈ ಹೊಸ ಕಲಾಪಂಥಕ್ಕೆ ಗ್ರಹಣ ಹಿಡಿಯಿತೆಂದೇ ಹೇಳಬೇಕು. ಪ್ರಗತಿಪರ ಹೊಸ ಕಲಾಪಂಥವು ನಿಷೇದಿಸಲ್ಪಟ್ಟ ಪರಿಣಾಮವಾಗಿ ಅನೇಕ ಎಕ್ಸ್‌ಪ್ರೆಶನಿಷ್ಟ್ ಕಲಾವಿದರು ಅಮೇರಿಕಾ ಮತ್ತು ಬ್ರಿಟನ್‌ಗಳಲ್ಲಿ ವಲಸೆ ಹೋಗಿ ಆಶ್ರಯ ಪಡೆಯಬೇಕಾಯಿತು.

ಭಾರತೀಯ ಕಲೆಯ ಪ್ರಮುಖ ಕಲಾಕೃತಿಗಳು ಮತ್ತು ಕಾಲಗಳು

ಸಿಂಧೂ ಸಂಸ್ಕೃತಿ

ಸಿಂಧೂ ಸಂಸ್ಕೃತಿಯ ಕಾಲವು ಕ್ರಿಸ್ತ ಪೂರ್ವ ೩೦೦೦ದಿಂದ ಕ್ರಿಸ್ತ ಪೂರ್ವ ೧೫೦೦. ಸಿಂಧೂ ಸಂಸ್ಕೃತಿಯ ಅತ್ಯುತ್ತಮ ಕಲಾಕೃತಿಗಳ ಉದಾಹರಣೆಗಾಗಿ ಕಲ್ಲು ಮತ್ತು ಮಣ್ಣಿನ ಪ್ರತಿಮೆಗಳು, ಎರಕ-ಹೊಯ್ದು ತಯಾರಿಸಿದ ಕಂಚಿನ ಕಲಾಕೃತಿಗಳು, ಬಂಗಾರ-ಬೆಳ್ಳಿ ಮತ್ತು ಬೆಲೆಬಾಳುವ ಹರಳು, ಮಣಿಗಳಿಂದ ತಯಾರಿಸಿದ ಆಭರಣಗಳು, ಹಸ್ತಿದಂತದ ಕೆತ್ತನೆ ಮತ್ತು ನೇಯ್ಗೆಯ ಕಲಾಪೂರ್ಣ ವಸ್ತುಗಳು, ಮುಂತಾದವುಗಳಲ್ಲಿ ಕಂಚಿನ ನೃತ್ಯಗಾತಿ. ಕಂಚಿನ ಕಾಡುಕೋಣ, ಹಾಗೂ ಮಾನವರ ಮತ್ತು ಪ್ರಾಣಿಗಳ ಮುದ್ರಿಕೆಗಳಲ್ಲದೇ ಹಿಳಿಲುಳ್ಳ ಹೋರಿಯಂಥ ಶಕ್ತಿಶಾಲಿ ಪ್ರಾಣಿಗಳು ಮುಂತಾದವುಗಳನ್ನು ಹೆಸರಿಸಬಹುದು.

ಮೌರ್ಯರ ಕಾಲ

ಕ್ರಿಸ್ತ ಪೂರ್ವ ೩೨೧ರಿಂದ ಕ್ರಿಸ್ತ ಪೂರ್ವ ೧೮೪ರ ವರೆಗಿನ ಕಾಲವು ಮೌರ್ಯ ಸಾಮ್ರಾಟರ ಆಳ್ವಿಕೆಯ ಕಾಲವಾಗಿದೆ. ಮೌರ್ಯರ ಕಾಲದಲ್ಲಿ ನಿರ್ಮಿಸಲಾದ ಮಥುರಾ ಜಿಲ್ಲೆಯ ಪಾರ್ಖಮ್‌ನಲ್ಲಿರುವ ಯಕ್ಷ ಪ್ರತಿಮೆಗಳು ಉತ್ತಮ ಕಲಾಕೃತಿಗಳಾಗಿವೆ. ಇವರ ಕಾಲದಲ್ಲಿಯೇ ಮೂರ್ತಿಶಿಲ್ಪಕಲೆಯ ಪ್ರಾರಂಭವಾಯಿತು. ಪ್ರಾಣಿಗಳ ಸ್ತಂಭಾಗ್ರಗಳನ್ನೊಳಗೊಂಡ ೪೦-೫೦ ಅಡಿಗಳಷ್ಟು ಎತ್ತರದ ಏಕಶಿಲಾ ಸ್ತಂಭಗಳು. ಮೌರ್ಯರ ಕಾಲದಲ್ಲಿಯೇ ನಿರ್ಮಿಸಲ್ಪಟ್ಟವು. ಆಳವಾದ ಸಂಕೇತಗಳುಳ್ಳ ಸಾರನಾಥದ ಸಿಂಹಸ್ತಂಭಾಗ್ರದ ಏಕ ಶಿಲಾಸ್ತಂಭವು ಸಾಮ್ರಾಟ್ ಅಶೋಕನ ಕಾಲದಲ್ಲಿ ನಿರ್ಮಿಸಲ್ಪಟ್ಟ ಸ್ತೂಪಗಳ ಕಾಲಕ್ಕೆ ಸೇರಿದ ಕಲಾಕೃತಿಯಾಗಿದೆ.

ಶುಂಗರ ಕಾಲ

ಕ್ರಿಸ್ತ ಪೂರ್ವ ೧೮೫ರಿಂದ ಕ್ರಿಸ್ತ ಪೂರ್ವ ೭೨ರ ವರೆಗಿನ ಕಾಲವು ಶುಂಗ ಅರಸರ ಆಳ್ವಿಕೆಯ ಕಾಲವಾಗಿದೆ. ಭಾರ್ಹುಟ್ ಮತ್ತು ಸಾಂಚಿಸ್ತೂಪಗಳು ಶುಂಗ ಅರಸರ ಕಾಲದಲ್ಲಿಯೇ ನಿರ್ಮಿಸಲ್ಪಟ್ಟವು. ೧೨೦ ಅಡಿ ವ್ಯಾಸವುಳ್ಳ ಸಾಂಚಿಸ್ತೂಪದ ಸುತ್ತಲೂ ಕಲ್ಲಿನ ಬೇಲಿಯನ್ನೂ ಮತ್ತು ನಾಲ್ಕು ದಿಕ್ಕುಗಳಲ್ಲಿ ಮಹಾದ್ವಾರಗಳನ್ನೂ ಜೋಡಿಸಲಾಗಿದ್ದು ಈ ಮಹಾದ್ವಾರಗಳು ಕೆತ್ತನೆಯ ಕಲಾಕೃತಿಗಳಿಂದ ಅಲಂಕರಿಸಲ್ಪಟ್ಟಿವೆ.

ಆಂಧ್ರ ವಂಶ

ಕ್ರಿಸ್ತಪೂರ್ವ ೨೫ರಿಂದ ಕ್ರಿಸ್ತ ಶಕ ೩೦೦ರ ವರೆಗೆ ಆಳಿದ ಆಂಧ್ರವಂಶದ ಅರಸರ ಕಾಲದಲ್ಲಿ ಕೃಷ್ಣಾಕೊಳ್ಳದ ನಾಗಾರ್ಜುನಕೊಂಡ ಮತ್ತು ಅಮರಾವತಿಯ ಸ್ತೂಪಗಳು ನಿರ್ಮಿಸಲ್ಪಟ್ಟಿದ್ದು ಕಲಾಪೂರ್ಣವಾದ ಮೂರ್ತಿಶಿಲ್ಪ ಕಲಾಕೃತಿಗಳಿಂದ ಸುಪ್ರಸಿದ್ಧವಾಗಿವೆ. ಅಮರಾವತಿಯ ಅನೇಕ ಮೂರ್ತಿಶಿಲ್ಪ ಕಲಾಕೃತಿಗಳನ್ನೂ ಕಲ್ಲಿನ ಕೆತ್ತನೆ ಕಲಾಕೃತಿಗಳನ್ನೂ

ಟಿಷ್ ವಸ್ತು ಸಂಗ್ರಹಾಲಯ ಹಾಗೂ ಮದ್ರಾಸ್ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹಿಸಿ ಡಲಾಗಿದೆ. ನಾಗಾರ್ಜುನಕೊಂಡದ ಶಿಲ್ಪಕಲಾಕೃತಿಗಳು ಇದ್ದ ಸ್ಥಳದಲ್ಲಿಯೇ ಸಂರಕ್ಷಿಸಲ್ಪಟ್ಟಿವೆ.

ಷಾನರು

ಕ್ರಿಸ್ತಶಕ ೧೦೦ರಿಂದ ಕ್ರಿಸ್ತಶಕ ೬೦೦ ಕುಷಾನರ ಕಾಲವಾಗಿದೆ. ಮಥುರಾ ಕುಷಾನ ಲಿಯ ಪ್ರಾಮುಖ್ಯವಾದ ಕೇಂದ್ರಸ್ಥಾನವಾಗಿದೆ. ಕುಷಾನರ ಕಾಲದಲ್ಲಿ ಬುದ್ಧನ, ೀಧಿಸತ್ವರುಗಳ, ಯಕ್ಷ-ಯಕ್ಷಿಣಿಯರ, ನಾಗ-ನಾಗಿಣಿಯರ ಪ್ರತಿಮೆಗಳ ರಚನೆಯಾಯಿತು. ಪ್ರತಿಮೆಗಳಲ್ಲಿ ಗ್ರೀಕ್ ಕಲೆಯ ಪ್ರಭಾವವಾಗಿರುವುದನ್ನು ಕಾಣಬಹುದು. ಜೈನ ರ್ಥಂಕರರ ಪ್ರತಿಮೆಗಳಲ್ಲದೆ ಸರಸ್ವತಿ, ವಿಷ್ಣು, ಸೂರ್ಯ, ಶಿವ ಮತ್ತು ಕಾರ್ತಿಕೇಯ ಂತಾದ ಬ್ರಾಹ್ಮಣ ದೇವ-ದೇವತೆಗಳ ಪ್ರತಿಮೆಗಳು ಪ್ರಪ್ರಥಮವಾಗಿ ರೂಪುಗೊಂಡುವಲ್ಲದೇ ಮಲ ಮಧ್ಯದಲ್ಲಿ ಕಂಗೊಳಿಸುವ ಲಕ್ಷ್ಮಿದೇವತೆಯ ಪ್ರತಿಮೆಗಳೂ ಆಕಾರಗೊಂಡವು. ದೇ ಕಾಲದಲ್ಲಿಯೇ ಭಾರತದ ವಾಯವ್ಯ ಪ್ರದೇಶದ ತಕ್ಷಶಿಲೆಯಲ್ಲಿ ಮೂರ್ತಿಶಿಲ್ಪ ಗೂ ವಾಸ್ತುಶಿಲ್ಪಕಲೆಗಳ ಗಾಂಧಾರ ಶೈಲಿಯು ಅಭಿವೃದ್ಧಿಗೊಂಡಿತು. ಗಾಂಧಾರ ಲಿಯ ಬುದ್ಧ-ಬೋಧಿಸತ್ವರ ಪ್ರತಿಮೆಗಳೂ ನಿರ್ಮಾಣಗೊಂಡವು.

ಪ್ತ ಅರಸರು

ಕ್ರಿ.ಶ. ೩೨೦ರಿಂದ ಕ್ರಿ.ಶ. ೬೫೦ ಗುಪ್ತ ಅರಸರ ಕಾಲ. ಈ ಕಾಲವನ್ನು ಆರ್ಥಿಕ ವೃದ್ಧಿಯೊಂದಿ ಸಾಂಸ್ಕೃತಿಕ ಬೆಳವಣಿಗೆಯ ಕಾಲವೆಂದು ಗುರುತಿಸಲಾಗುತ್ತದೆ. ಗವತ ಚಳುವಳಿಯು ಹೊಸತಾದ ರಸಾಭಿಜ್ಞತೆಯನ್ನು ಎತ್ತರಿಸಿತು. ಈ ಕಾಲದಲ್ಲಿ ರ್ಮಾಣವಾದ ದೇವಾಲಯಗಳು, ಪ್ರತಿಮೆಗಳು, ವರ್ಣಚಿತ್ರಗಳು, ಮೃತ್ತಿಕಾ ಪ್ರತಿಮೆಗಳು, ಚಿನ ಪ್ರತಿಮೆಗಳೇ ಮೊದಲಾದ ಕಲಾಕೃತಿಗಳು ಹೃದಯದಲ್ಲಿ ಸ್ಫೂರ್ತಿಗೊಂಡ ದೃಶ್ಯ ಕೇತಗಳಾಗಿವೆ. "ಪಾಪರಹಿತ ಸೌಂದರ್ಯವೇ ಭಾರತೀಯ ಕಲೆಯ ಗುರಿಯಾಗಿದೆ" ಬ ಪರಮೋಚ್ಚ ಧ್ಯೇಯವನ್ನು ಪ್ರಪಂಚದಲ್ಲಿ ಬಿತ್ತರಿಸಿದ ಕಲಾಸಂಸ್ಕೃತಿಯ ಕಾಲ ತ್ತರ ಕಾಲವೆಂದು ಪರಿಗಣಿಸಲಾಗಿದೆ. ಗರ್ಭಗೃಹ ಮತ್ತು ಶಿಖರವನ್ನೊಳಗೊಂಡ ತ್ತ ಕಲಾಸ್ಮಾರಕಗಳು- ಉದಾಹರಣೆಗೆ ದೇವಗಢದ ದೇವಾಲಯ, ಬುದ್ಧನ ಮೆಗಳು, ವಿಷ್ಣು ಮತ್ತು ಅಜಂತದ ೧೯ನೆಯ ಗುಹಾಂತರ್ದೇವಾಲಯ ಗ'ರಾಜ ಹಾಗೂ ೨೬ನೆಯ ಗುಹಾಂತರ್ದೇವಾಲಯದ ಬುದ್ಧನ ಮಹಾಪರಿನಿರ್ವಾಣ ಂತಾದ ಕಲಾಕೃತಿಗಳನ್ನು ವೀಕ್ಷಿಸಿದಾಗ 'ಸೌಂದರ್ಯ ಮತ್ತು ಸುದೈವ"ಗಳು ಈ ಗದ ಆದರ್ಶಗಳಾಗಿದ್ದವೆಂಬುದನ್ನು ಯಾರಾದರೂ ಊಹಿಸಬಹುದಾಗಿದೆ. ಸಾಂಸಾರಿಕ ವನ ಮತ್ತು ಧಾರ್ಮಿಕ ಜೀವನಗಳಲ್ಲಿ ಅರ್ಥಪೂರ್ಣವಾದ ಸ್ವರ್ಣಸಾಮರಸ್ಯದಿಂದ ವಾದ ಮತ್ತು ಶಾಶ್ವತವಾದ ಆಕರ್ಷಣೆಗಳನ್ನು ಈ ಕಾಲದ ಕಲೆಯು ಉಳಿಸಿಕೊಂಡಿರುತ್ತದೆ. ಾತು ಮತ್ತು ವಿಚಾರಗಳಂತೆ ಬಾಹ್ಯ ರೂಪು ಮತ್ತು ಅಂತರಾಳದ ಅರ್ಥಗಳು ಈ ದ ಕಲೆಯಲ್ಲಿ ಒಂದನ್ನೊಂದು ಹೆಣೆದುಕೊಂಡಿವೆ" ಎಂದು ಅನೇಕ ವಿದ್ವಾಂಸರು ಕಲೆಯನ್ನು ಕುರಿತು ಹೇಳುತ್ತಾರೆ.

ಚಾಲುಕ್ಯರು ಮತ್ತು ರಾಷ್ಟ್ರಕೂಟರು

ಕ್ರಿ.ಶ. ೫೫೦ ರಿಂದ ಕ್ರಿ.ಶ. ೭೫೦ರ ವರೆಗಿನ ಕಾಲವು ಚಾಲುಕ್ಯ ಸಾಮ್ರಾಟರ ಕಾಲವಾಗಿದೆ. ಕ್ರಿ.ಶ. ೭೫೦ರಿಂದ ಕ್ರಿ.ಶ. ೯೭೫ರ ವರೆಗಿನ ಕಾಲವು ರಾಷ್ಟ್ರಕೂಟ ದೊರೆಗಳ ಕಾಲವಾಗಿದೆ. ಕರ್ನಾಟಕದ ಬಿಜಾಪುರ ಜಿಲ್ಲೆಯ ಬಾದಾಮಿಯ ಗುಹಾಂತರ ದೇವಾಲಯಗಳು, ಐಹೊಳೆ ಮತ್ತು ಪಟ್ಟದಕಲ್ಲಿನಲ್ಲಿರುವ ದೇವಾಲಯಗಳ ಸಮುಚ್ಚಯಗಳು ಚಾಲುಕ್ಯ ಕಲಾಕೃತಿಗಳಾಗಿವೆಯಲ್ಲದೇ ಪಟ್ಟದಕಲ್ಲಿನ ವಿರೂಪಾಕ್ಷದೇವಾಲಯ ಹಾಗೂ ಸಂಗಮೇಶ್ವರ ದೇವಾಲಯಗಳು ಚಾಲುಕ್ಯ ಶೈಲಿಯ ಅತ್ಯುತ್ತಮ ಉದಾಹರಣೆಗಳೆಂದು ಹೇಳಬಹುದು. ೭ನೆಯ ಶತಮಾನದಲ್ಲಿ ನಿರ್ಮಾಣಗೊಂಡ ಎಲ್ಲೋರದ ರಾಮೇಶ್ವರ ಗುಹಾಂತರ ದೇವಾಲಯವೂ ಚಾಲುಕ್ಯ ಕಲಾಕೃತಿಯಾಗಿದೆ. ರಾಷ್ಟ್ರಕೂಟ ದೊರೆ ೧ನೆಯ ಕೃಷ್ಣನು ಕಟ್ಟಿಸಿದ ಎಲ್ಲೋರದ ಕೈಲಾಸನಾಥ ದೇವಾಲಯವು ವಿಶ್ವವಿಖ್ಯಾತ ಕಲಾಕೃತಿಯಾಗಿದೆ. ಇದೇ ಕಾಲದಲ್ಲಿ ನಿರ್ಮಿಸಲಾದ ಮುಂಬಯಿ ಬಳಿಯ ಎಲಿಫಂಟಾ ಎಂಬಲ್ಲಿನ ಮಹೇಶ (ತ್ರಿಮೂರ್ತಿ) ಭವ್ಯವಾದ ಪ್ರತಿಮೆಯು ರಾಷ್ಟ್ರಕೂಟ ಶಿಲ್ಪಕಲಾವಿದರ ಸೌಂದರ್ಯಾನುಭೂತಿಯ ಪ್ರತ್ಯಕ್ಷ ನಿದರ್ಶನವಾಗಿದೆ.

ಪಲ್ಲವರು

ಕ್ರಿ.ಶ. ೬೦೦ ರಿಂದ ಕ್ರಿ.ಶ. ೮೫೦ ಪಲ್ಲವರ ಅರಸೊತ್ತಿಗೆಯ ಕಾಲವಾಗಿದೆ. ಪಲ್ಲವ ವಂಶವು ದಕ್ಷಿಣ ಭಾರತದಲ್ಲಿ ಆಳಿದ ಪ್ರಭಾವಶಾಲಿ ಆಳ್ವಿಕೆಯನ್ನು ನಡೆಸಿತಲ್ಲದೆ ಅನ್ಯಾದೃಶವಾದ ಕಲಾಪೋಷಣೆಯನ್ನೂ ನೀಡಿದ ಶ್ರೇಯಸ್ಸು ಈ ಮನೆತನಕ್ಕೆ ಸಲ್ಲುತ್ತದೆ. ಮಹೇಂದ್ರವರ್ಮನ್ ಮತ್ತು ನರಸಿಂಹ ವರ್ಮನ್ ದೊರೆಗಳು ಪಲ್ಲವ ದೊರೆಗಳಲ್ಲಿಯೇ ಶ್ರೇಷ್ಠ ಕಲಾಪೋಷಕರಾಗಿದ್ದರು. ಮಹಾಬಲಿಪುರ ಅಥವಾ ಮಾಮಲ್ಲಪುರದ ಬಂಡೆಗಳನ್ನು ಕತ್ತರಿಸಿ ನಿರ್ಮಿಸಲಾದ ಒಂಭತ್ತು ಗುಹಾಂತರ ದೇವಾಲಯಗಳು, ಆದಿ ವರಾಹ ಮತ್ತು ದುರ್ಗಾ ಗುಹಾಂತದೇವಾಲಯಗಳು, ಪಂಚ-ರಥಗಳು ಬಂಡೆಗಳನ್ನು ಕತ್ತರಿಸಿ ಗುಹಾಂತದೇವಾಲಯಗಳನ್ನು ನಿರ್ಮಿಸಿದ ಪಲ್ಲವರ ಅತ್ಯುತ್ತಮ ನಿದರ್ಶನಗಳಾಗಿವೆ. ತೀರ್ಥಮ್ ಇಲ್ಲವೆ ಬಯಲು ಬಂಡೆಗಳ ಮೇಲೆ ಕೆತ್ತನೆಯ ಭವ್ಯವಾದ ಕಲಾಕೃತಿಗಳು ಅಲ್ಲದೆ ಜಲಶಯನ ದೇವಾಲಯ ಕಾಂಚಿಯಲ್ಲಿರುವ ಕೈಲಾಸನಾಥ ದೇವಾಲಯ ಮುಂತಾದವು ಪಲ್ಲವರ ಕಲಾಭಿಜ್ಞತೆಗೆ ಪ್ರತ್ಯಕ್ಷ ಸಾಕ್ಷಿಗಳಾಗಿ ಇಂದಿಗೂ ನಿಂತಿವೆ.

ಚೋಳರು

ಚೋಳ ಅರಸರೂ ಸಹ ದಕ್ಷಿಣ ಭಾರತವನ್ನು ಆಳಿದ ಪ್ರಭಾವಶಾಲೀ ಅರಸರಾಗಿದ್ದರು. ಇವರು ಕ್ರಿ.ಶ. ೮೫೦ರಿಂದ ಕ್ರಿ.ಶ. ೧೧೫೦ರವರೆಗೆ ದಕ್ಷಿಣ ಭಾರತದಲ್ಲಿ ಅರಸೊತ್ತಿಗೆಯನ್ನು ನಡೆಸಿದರು. ತಂಜಾವೂರಿನ ದೇವಾಲಯವು ಗರ್ಭಗೃಹದ ಮೇಲೆ ಬೃಹದ್ಗೋಪುರದೊಂದಿಗೆ ಚೋಳ ಕಲಾಸಂಸ್ಕೃತಿಯ ಔನ್ನತ್ಯವನ್ನು ಸಾರುವ ಪ್ರತ್ಯಕ್ಷ ನಿದರ್ಶನವಾಗಿದೆಯಲ್ಲದೇ ಪರಿಶುದ್ಧ ದ್ರಾವಿಡ ಪದ್ಧತಿಯ ವಾಸ್ತುಶಿಲ್ಪ ಕಲಾಕೃತಿಯಾಗಿದೆ. ಚೋಳರ ಕಾಲದಲ್ಲಿ ಮೂರ್ತಿಶಿಲ್ಪ ಹಾಗೂ ಕೆತ್ತನೆಯ ಶಿಲ್ಪಗಳುಳ್ಳ ಬೃಹದ್ಗೋಪುರಗಳನ್ನು

ಸುವ ಪದ್ಧತಿಯು ಬೆಳೆದು ಬಂದಿತು. ಮಧುರೆ, ರಾಮೇಶ್ವರಮ್, ಶ್ರೀರಂಗಮ್ ತ್ತು ಚಿದಂಬರಮ್ ದೇವಾಲಯಗಳು ಚೋಳ ಶಿಲ್ಪ ಹಾಗೂ ವಾಸ್ತುಶಿಲ್ಪಕಲೆಯ ತ್ತಮ ಉದಾಹರಣೆಗಳಾಗಿವೆ.

ಯ್ಸಳರು

ಕರ್ನಾಟಕದ ಸುಪ್ರಸಿದ್ಧ ದೊರೆಗಳಾಗಿದ್ದರು. ಹೊಯ್ಸಳ ಅರಸರು ಅದ್ವಿತೀಯ ಪೋಷಕರಾಗಿದ್ದರೆಂಬುದಕ್ಕೆ ಹಾಸನ ಜಿಲ್ಲೆಯ ಹಳೆಬೀಡು, ಬೇಲೂರು ದೇವಾಲಯಗಳು ತ್ತಮ ಉದಾಹರಣೆಗಳಾಗಿವೆ. ನಕ್ಷತ್ರಾಕಾರದ ತಳಹದಿಯ ಮೇಲೆ ಗರ್ಭಗೃಹ ಗಳನ್ನುಳ್ಳ ನವರಂಗ, ಕಲಾಪೂರ್ಣ ಭುವನೇಶ್ವರಿಗಳನ್ನೊಳಗೊಂಡ ದೇವಾಲಯಗಳ ರ್ಣವು ಹೊಯ್ಸಳ ವಾಸ್ತುಶಿಲ್ಪಕಲೆಯ ವೈಶಿಷ್ಟ್ಯವಾಗಿದೆ. ಬಂಗಾರ, ಬೆಳ್ಳಿ ತಾದ ಮೆದುಲೋಹಗಳಲ್ಲಿ ಕಲಾಪೂರ್ಣ ಕೆತ್ತನೆಗಳನ್ನು ಮಾಡುವಂತೆ ಕಲ್ಲಿನಲ್ಲಿ ಸಿದ ಮದನಕ್ಕೆ ವಿಗ್ರಹಗಳು, ಆನೆ-ಕುದುರೆಗಳ ಸಾಲು, ಅಲಂಕೃತ ಬಾಗಿಲವಾಡಗಳು ಡುಗನನ್ನು ಚಕಿತಗೊಳಿಸುತ್ತವೆ. ನಾಜೂಕಾದ ಕೆತ್ತನೆಯು ವೀಕ್ಷಕರನ್ನು ಮಂತ್ರ ರನ್ನಾಗಿಸುತ್ತದೆ; ವಿಸ್ಮಿತರನ್ನಾಗಿ ಮಾಡುತ್ತದೆ. ಬೇಲೂರಿನ ಚನ್ನಕೇಶವದೇವಾಲಯ ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯಗ ಳಲ್ಲಿನ ನಾಜೂಕು ಕೆತ್ತನೆಯು ತೀತವಾದ ಸಮೃದ್ಧತೆಯಿಂದಾಗಿ ಭಾರತೀಯ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಕಲೆಯ ತೆಗೆ ಹಿಡಿದ ಕನ್ನಡಿಗಳಾಗಿವೆ.

ರು, ಸೇನರು ಮತ್ತು ಗಂಗರು

ಪಾಲ ಮತ್ತು ಸೇನ ಅರಸರ ಕಾಲವು ಕ್ರಿ.ಶ. ೭೩೦ರಿಂದ ಕ್ರಿ.ಶ. ೧೨೫೦ ಪಾಲ ಸೇನ ದೊರೆಗಳೂ-ಕಲಾಪೋಷಕರಾಗಿದ್ದು 'ನಲಂದಾ' ಪಾಲ ಮತ್ತು ಸೇನ ಪ್ರಧಾನ ಕೇಂದ್ರವಾಗಿತ್ತು. ಇವರ ಕಾಲದಲ್ಲಿ ನಿರ್ಮಿತವಾದ ಕಲಾಕೃತಿಗಳಲ್ಲಿ ಗಿ ಬುದ್ಧನ ಮತ್ತು ಬೋಧಿಸತ್ವರ ಪ್ರತಿಮೆಗಳು ಕಂಡುಬರುತ್ತವೆ.

ಭುವನೇಶ್ವರ, ಪುರಿ ಮತ್ತು ಕೋನಾರಕ ದೇವಾಲಯಗಳು ಓರಿಸಾದ ಗಂಗ ರ ಆಳ್ವಿಕೆಯ ಕಾಲಕ್ಕೆ ಸೇರಿದವುಗಳಾಗಿವೆ. ಈ ಎಲ್ಲ ದೇವಾಲಯಗಳಲ್ಲಿ ನಾರಕದ ಸೂರ್ಯದೇವಾಲಯವು ಎದ್ದು ಕಾಣುವ ಕಲಾಕೃತಿಯಾಗಿದೆ ಹನ್ನೆರಡು ಚಕ್ರ(ಗಾಲಿ)ಗಳುಳ್ಳ ರಥವನ್ನು ಏಳು ಕುದುರೆಗಳು ಎಳೆಯುತ್ತಿರುವಂತೆ ನಿರ್ಮಿಸಿಲಾದ ದೇವಾಲಯವು ವಿಸ್ತಾರವಾದ ಅಂಗಣದ ಮಧ್ಯದಲ್ಲಿ ನಿಲ್ಲಿಸಲ್ಪಟ್ಟಿದೆ.

ೀಲರು-

ಕ್ರಿ.ಶ. ೯೫೦ರಿಂದ ಕ್ರಿ.ಶ. ೧೩೫೫ ಚಂದೇಲ ಅರಸರ ಕಾಲವಾಗಿದೆ. ಮಧ್ಯ ದ ಖಜುರಾಹೋ ಚಂದೇಲ ಕಲೆಯ ಪ್ರಮುಖ ಕೇಂದ್ರವೆಂದು ಹೇಳಲಾಗಿದೆ. ರಾಹೋದಲ್ಲಿರುವ ಹನ್ನೆರಡು ದೇವಾಲಯಗಳಲ್ಲಿ ಕಂಡಾರಿಯ ಮಹಾದೇವ ಲಯವು ಎದ್ದುಕಾಣುವ ಕಲಾಕೃತಿಯಾಗಿದೆ. ಸುಮಾರು ಮೂವತ್ತು ದೇವಾಲಯಗಳು

ಶಿವ ಮತ್ತು ವಿಷ್ಣು ದೇವತೆಗಳಿಗೂ ಮತ್ತು ಜೈನ ಮುನಿಗಳಿಗೂ(ತೀರ್ಥಂಕರರು ಸೇರಿದವುಗಳಾಗಿವೆ.

ಮೇಲ್ಕಾಣಿಸಿದ ಭಾರತದ ಮಹತ್ವಪೂರ್ಣ ವಾಸ್ತುಶಿಲ್ಪ, ಶಿಲ್ಪ ಕಲಾಕೇಂದ್ರಗಳಲ್ಲದೆ ಇನ್ನೂ ಅನೇಕ ಹಿಂದೂ ದೇವಾಲಯಗಳು ಪೂರ್ವ ಮತ್ತು ಪಶ್ಚಿಮ ಭಾರತದಲ್ಲಿ ಹರಡಿಕೊಂಡಿದ್ದ-ವಡೋದರಾ ಇಲ್ಲವೆ ಬಡೋದೆಯ ಹತ್ತಿರದ ಮೊಧೇರಾದಲ್ಲಿ ಸೂರ್ಯ ದೇವಾಲಯ, ಗ್ವಾಲಿಯರ ಬಳಿಯ ಉದಯಪುರದ ಉದಯೇಶ್ವರ ದೇವಾಲಯ, ರಾಜಸ್ಥಾನದಲ್ಲಿನ ಮೌಂಟ್ ಅಬು ದೇವಾಲಯಗಳು, ದಾಭೋಯಿಯಲ್ಲಿರುವ ಮಹಾದ್ವಾರ, ೧೩ನೆಯ ಶತಮಾನದಲ್ಲಿ ನಿರ್ಮಿತವಾದ ಚಿತ್ತೋಡದ ಎಂಬತ್ತು ಅಡಿ ಎತ್ತರದ ಜಯಸ್ಥಂಭ, ಚಿತ್ತೋಡಿನಲ್ಲಿಯೇ ೧೫ನೆಯ ಶತಮಾನದಲ್ಲಿ ನಿರ್ಮಿತವಾದ ಎಂಟು ಅಂತಸ್ತುಗಳುಳ್ಳ ರಾಣಾಕುಂಭನ ಕೀರ್ತಿಸ್ಥಂಭ, ಬಿಕಾನೇರದ ಪಲ್ಲುವಿನಲ್ಲಿರುವ ಸರಸ್ವತಿ, ಅಲ್ಲದೇ ದಕ್ಷಿಣ ಭಾರತದ ಕರ್ನಾಟಕದ ಹಾಸನ ಜಿಲ್ಲೆಯ ಶ್ರವಣಬೆಳಗೊಳದ ಗೊಮ್ಮಟೇಶ್ವರ ೫೭ ಅಡಿ ಎತ್ತರದ ದೈತ್ಯ ಏಕಶಿಲಾ ವಿಗ್ರಹ ಮುಂತಾದವುಗಳು ವಿಶ್ವವಿಖ್ಯಾತ ಕಲಾಕೃತಿಗಳೆಂದು ಪ್ರಖ್ಯಾತವಾಗಿವೆ.

ಹಿಂದೂ-ಮುಸಲ್ಮಾನ ವಾಸ್ತುಶಿಲ್ಪ-

ಕ್ರಿ.ಶ. ೧೫೨೬ರಿಂದ ಕ್ರಿ.ಶ. ೧೮೫೭ರ ವರೆಗಿನ ಅವಧಿಯಲ್ಲಿ ಭಾರತದ ತುಂಬೆಲ್ಲ ಹಿಂದೂ ಮುಸಲ್ಮಾನ ವಾಸ್ತುಶಿಲ್ಪಕಲೆಯು (ಇಂಡೋ-ಇಸ್ಲಾಮಿಕ್ ಆರ್ಕಿಟೆಕ್ಚರ್) ವಿಪುಲವಾಗಿ ಬೆಳೆಯಿತು. ಮುಸಲ್ಮಾನ ಸ್ಮಾರಕಗಳಲ್ಲಿ ಮಸೀದೆಗಳು, ಸಮಾಧಿ ಭವನಗಳು, ಕೋಟೆಗಳು, ನಗರಗಳು, ಸಮಾವೇಶಗೊಳ್ಳತ್ತವೆ. ಗುಮ್ಮಟ, ಕಮಾನು ರಂಧ್ರಗಳ ಜಾಳಿಗೆಯ ಕುಶಲ ಕಲೆಗಾರಿಕೆ, ಒತ್ತಿಕೂಡಿಸಿದ ನಕ್ಷೆ(Inlay)ಗಳು ಮತ್ತು ಬರಹಗಳ ವಿನ್ಯಾಸಗಳು ಇಸ್ಲಾಂ ಕಲೆಯ ಪ್ರತ್ಯೇಕವಾದ ಗುಣವಿಶೇಷಗಳಾಗಿವೆ.

ದೆಹಲಿಯ ಗುಲಾಮ ಸಂತತಿಗೆ ಸೇರಿದ ೨೪೦ ಅಡಿ ಎತ್ತರದ ಕುತುಬ ಮಿನಾರ್, ಆಗ್ರಾದಿಂದ ಸುಮಾರು ೩೭ ಕಿ. ಮಿ. ದೂರದಲ್ಲಿ ಕ್ರಿ.ಶ. ೧೫೬೯ರಲ್ಲಿ ಅಕಬರ ಮಹಾಶಯನು ಕಟ್ಟಿಸಿದ ಫತ್ತೇಪೂರ ಸಿಕ್ರಿ, ಶಹಾಜಹಾನನಿಂದ ಕಟ್ಟಿಸಲ್ಪಟ್ಟ ದೆಹಲಿಯ ಕೆಂಪುಕೋಟೆ, ಶಹಾಜಹಾನನು ತನ್ನ ಹೆಂಡತಿ ಮುಮ್ತಾಜ ಮಹಲಳ ನೆನಪಿಗಾಗಿ ಕಟ್ಟಿಸಿದ ಅಮೃತ ಶಿಲೆಯ ತಾಜಮಹಲ, ಬಿಹಾರದ ಸಸಾರಮದಲ್ಲಿರುವ ಶೇರಷಹನ ಸಮಾಧಿ, ಬಿಜಾಪುರದ ಸುಲ್ತಾನ್ ಮಹಮ್ಮದ ಆಲಿಯ ಗೋಲಗುಂಬಜ ಇಬ್ರಾಹಿಮ ರೋಜಾ ಮುಂತಾದ ಸ್ಮಾರಕಗಳು ಇಂಡೋ-ಇಸ್ಲಾಮಿಕ್ ಕಲೆಯ ನಿದರ್ಶನಗಳಾಗಿವೆ.

ಪ್ರತಿಮಾ ನಿರ್ಮಾಣ ಕಲೆ (Iconography)

ಭಾರತೀಯ ಕಲೆಯ ಪರಂಪರೆಯಾಗಿ ಉತ್ತರ ಮತ್ತು ದಕ್ಷಿಣ ಭಾರತದ ಕಂಚಿನ ಪ್ರತಿಮೆಗಳ ನಿರ್ಮಾಣ ಕಲೆಯು ಬೆಳೆದು ಬಂದಿದೆ. ಉತ್ತರ ಭಾರತದ ಬುದ್ಧ ಮತ್ತು

ಬ್ರಹ್ಮರ ಪ್ರತಿಮೆಗಳು ಗುಪ್ತರ ಕಾಲಕ್ಕೆ ಸೇರಿದವುಗಳಾಗಿವೆ. ೧೦ನೆಯ ಶತಮಾನದಿಂದ ೩ನೆಯ ಶತಮಾನಗಳ ಅವಧಿಯಲ್ಲಿ ನಿರ್ಮಿತವಾದ ದಕ್ಷಿಣ ಭಾರತದ ಕಂಚಿನ ಗ್ರಹಗಳು ಎದ್ದುಕಾಣುವ ರಸಾಭಿಜ್ಞತೆಯನ್ನು ತೋರ್ಪಡಿಸುವ ಗುಣಧರ್ಮಗಳನ್ನು ಡೆದಿವೆ. ಅವುಗಳಲ್ಲಿ ನಟರಾಜನ ಕಂಚಿನ ವಿಗ್ರಹವು ಭಾರತೀಯ ಕಲಾಪ್ರಪಂಚದ ನವಂತ ಕಲಾಕೃತಿಯಾಗಿದೆ. ಸೃಷ್ಟಿ ಮತ್ತು ಲಯಗಳನ್ನು ಪ್ರತಿಬಿಂಬಿಸುವ ಸಂಕೇತವಾಗಿ ವೀಶಕ್ತಿಯ ಶಕ್ತಿಯುತ ನೃತ್ಯದಲ್ಲಿ ಲೀನನಾದ ಶಿವನ ಅತ್ಯದ್ಭುತ ಕಲಾಕೃತಿಯಾಗಿ ಪೂರ್ಣ ಸ್ಥಳವ್ಯಾಪಿಯಾಗಿ ಮನಮೆಚ್ಚುವ ಸಮತೋಲನದಲ್ಲಿ ರಚಿಸಲ್ಪಟ್ಟ ಅನ್ಯಾದೃಶ ಲಾಕೃತಿಯಾಗಿದೆ ಎಂದು ಆನಂದಕುಮಾರಸ್ವಾಮಿಯವರಂಥ ಕಲಾವಿಮರ್ಶಕರು, ದ್ವಾಂಸರು ಈ ಕೃತಿಯನ್ನು ಕುರಿತು ಹೇಳಿದ್ದಾರೆ.

ರ್ಣಚಿತ್ರಕಲೆ

ಭಾರತೀಯ ವಾಸ್ತುಶಿಲ್ಪ ಹಾಗೂ ಶಿಲ್ಪಕಲೆಗಳಂತೆ ವರ್ಣಚಿತ್ರ ಕಲೆಯೂ ಬುದ್ಧವಾದುದಾಗಿದೆ. ವರ್ಣಚಿತ್ರಕಲೆಯ ಪ್ರಮುಖ ಉದಾಹರಣೆಗಳಾಗಿ ಅಜಂತಾ, ಲ್ಲೋರಾ, ನಾಸಿಕ, ಭಾಜ, ಬದಾಮಿ, ಸಿಗೀರಿಯ ಮತ್ತು ಸಿತ್ತನವಾಶಲ್ ತ್ತಿಚಿತ್ರಗಳೂ ೧೬ ಮತ್ತು ೧೭ನೆಯ ಶತಮಾನಗಳ ರಾಜಸ್ಥಾನೀ ಕಿರುಚಿತ್ರ(miniature)ಗಳೂ ದವಾಲ ಮತ್ತು ಕಾಂಗ್ರಾ ಮುಂತಾದ ಹಿಮಾಚಲ ಕಿರುಚಿತ್ರಗಳೂ ಹಾಗೂ ಮೊಗಲ್ ರುಚಿತ್ರಗಳು ಮತ್ತು ಬಟ್ಟೆಯ ಮೇಲಿನ ಚಿತ್ರಗಳೂ ಡೆಕ್ಕನೀ ಕಿರುಚಿತ್ರಗಳೂ ತ್ಯುತ್ತಮ ಮಾದರಿಗಳಾಗಿವೆಯಲ್ಲದೇ ವಿಶ್ವಮಾನ್ಯ ಕಲಾಕೃತಿಗಳಾಗಿರುತ್ತವೆ.

ಧುನಿಕ ಭಾರತದಲ್ಲಿ ಚಿತ್ರಕಲೆ

ಬ್ರಿಟಿಷರು ಭಾರತದಲ್ಲಿ ಬಂದನಂತರ ಕಲಾಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಾದವು. ಟಿಷ ವ್ಯಾಪಾರಿಗಳಿಗಾಗಿ ಭಾರತೀಯ ಚಿತ್ರಕಲಾವಿದರು ವ್ಯಾಪಾರಿಗಳನ್ನು ತುಷ್ಟಗೊಳಿಸುವದಕ್ಕಾಗಿ ಭಾರತೀಯ ಜನಜೀವನವನ್ನು ಪ್ರತಿಬಿಂಬಿಸುವ ಚಿತ್ರಕಲಾ ತಿಗಳ ರಚನೆಗೆ ತೊಡಗಿದರು. ಬ್ರಿಟಿಷ್ ಕಂಪನಿಯ ಜನರು ಭಾರತೀಯ ಕಲಾವಿದರ ಷ್ಟಿಯನ್ನು ಜಲವರ್ಣ ತಂತ್ರಗಳತ್ತ ತಿರುಗಿಸಿದರು. ಇದರಿಂದಾಗಿ ಭಾರತೀಯ ಭವ್ಯ ತ್ರಕಲೆಯು ಅವನತಿಯ ಮಾರ್ಗವನ್ನು ಹಿಡಿಯಿತೆನ್ನಬಹುದು. ಭಾರತೀಯ ರೂಪುರೇಷೆಗಳಲ್ಲಿ ಶ್ಚಿಮಾತ್ಯ ತಂತ್ರಗಳು ಬೆರೆತುಕೊಂಡು ಹೊಸ ಶೈಲಿಯೊಂದರ ಉದಯವಾಯಿತಾದರೂ ಬ್ಬನಾದರೂ ಅತ್ಯುತ್ತಮ ಕಲಾವಿದನ ಉದಯವಾಗಲಿಲ್ಲ. ಬ್ರಿಟಿಷ್ ಪ್ರಭುತ್ವವು ತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಕಲ್ಕತ್ತಾ, ಮುಂಬಯಿ, ಮದ್ರಾಸ್ ತ್ತು ಲಾಹೋರ್‌ಗಳಲ್ಲಿ ಕಲಾಶಾಲೆಗಳನ್ನು ಸ್ಥಾಪಿಸಿತು. ಈ ಕಲಾಶಾಲೆಗಳಲ್ಲಿ ಲಾಭ್ಯಾಸವನ್ನು ಪಾಶ್ಚಿಮಾತ್ಯ ಶೈಲಿಯಲ್ಲಿಯೇ ಮಾಡಿಸಲಾಗುತ್ತಿತ್ತು. ಹೀಗಾಗಿ ಲೆಯು ವ್ಯಾಪಾರೀ ಮನೋವೃತ್ತಿಯಲ್ಲಿ ಬೆಳೆಯತೊಡಗಿ ಭಾರತೀಯ ಕಲಾ ರಂಪರೆಯು ತೀವ್ರಗತಿಯಲ್ಲಿ ಅವಸಾನದತ್ತ ಸಾಗಿತು. ಇಂಥ ಪರಿಸ್ಥಿತಿಯನ್ನು ನಗಂಡು ೧೯ನೆಯ ಶತಮಾನದ ಕೊನೆಯ ವೇಳೆಗೆ ಸುಪ್ರಸಿದ್ಧ ಭಾರತೀಯ



೨೯) ರಾಜ ರವಿವರ್ಮ

ಕಲಾವಿದನಾದ ರಾಜಾ ರವಿವರ್ಮನು ಪಾಶ್ಚಿಮಾತ್ಯ ಶೈಲಿಯಲ್ಲಿ ಭಾರತೀಯ ಕಲೆಯನ್ನು ಪುನಃ ಪ್ರತಿಷ್ಠಾಪಿಸಲು ಪ್ರಯತ್ನಿಸಿದನು. ರವಿವರ್ಮನು ಸುಪ್ರಸಿದ್ಧ ಯುರೋಪಿಯನ್ ಕಲಾವಿದನಾದ ಥಿಯೋಡೂರ್ ಜೆನ್ಸನ್(Theodore Jenson) ಎಂಬವನಿಂದ ತೈಲವರ್ಣದ ಅಭ್ಯಾಸ ಮಾಡಿದನು. ಪರಂಪರಾನುಗತ ಪೌರಾಣಿಕ ವಿಷಯಗಳು ಮತ್ತು ಭಾರತೀಯ ಜನಜೀವನಗಳನ್ನು ತೈಲವರ್ಣಗಳಲ್ಲಿ ಚಿತ್ರಿಸುವುದೇ ರವಿವರ್ಮನ ಮುಖ್ಯ ಧ್ಯೇಯವಾಗಿತ್ತು. ಈ ದಿಶೆಯಲ್ಲಿ ರವಿವರ್ಮನು ಅದ್ಭುತವಾದ ಸಾಧನೆಯನ್ನು ಮಾಡಿದನಾದರೂ "ಭಾರತೀಯತೆಗೆ ಯುರೋಪೀಯತೆಯ ರೂಪಕೊಟ್ಟುದರಿಂದ ಈ ಕಲಾಕೃತಿಗಳು ಗೌರವಾರ್ಹವಾದುವಲ್ಲ" ಎಂಬ ವಿಮರ್ಶಕರ ಟೀಕೆಗೆ ಗುರಿಯಾದವಷ್ಟೇ ಅಲ್ಲ ಭಾರತೀಯ ಯಾವ ಕಲಾವಿದನಿಗೂ ರವಿವರ್ಮನ ಶೈಲಿಯನ್ನು ಅನುಸರಿಸಲು ಸ್ಫೂರ್ತಿಯನ್ನು ಕೊಡಲಿಲ್ಲ.

೧೯ನೆಯ ಶತಮಾನದ ಕೊನೆಯ ಎರಡು ದಶಕಗಳ ಅವಧಿಯಲ್ಲಿ ಮದ್ರಾಸಿನ ಕಲಾಶಾಲೆಯಲ್ಲಿ ಶಿಕ್ಷಕನಾಗಿದ್ದ ಈ.ಬಿ. ಹ್ಯಾವೆಲ್‌ನು" ಪಾಶ್ಚಿಮಾತ್ಯ ಕಲಾಶೈಲಿಗೆ ಭಾರತದಲ್ಲಿ ಸ್ಥಾನವಿಲ್ಲ; ಭಾರತೀಯ ಪಾರಂಪರಿಕ ಕಲಾಶೈಲಿಯನ್ನೇ ಪುನರುಜ್ಜೀವನ ಗೊಳಿಸಬೇಕು" ಎಂಬ ನಿರ್ಣಯಕ್ಕೆ ಬಂದನು. ಹ್ಯಾವೆಲ್ ಮದ್ರಾಸನ್ನು ಬಿಟ್ಟು ಕಲ್ಕತ್ತೆಗೆ ಬಂದು ತನ್ನ ಅನಿಸಿಕೆಯಂತೆ ಪ್ರಯೋಗಗಳಲ್ಲಿ ತೊಡಗಿದನು. ಹ್ಯಾವೆಲ್‌ನ ಪ್ರಾಮಾಣಿಕ

ಯುತ್ನವು ಭಾರತೀಯ ಕಲಾವಿದರ ಕಣ್ಣು ತೆರೆಸಿತು; ತಮ್ಮ ಪ್ರಾಚೀನ ಭವ್ಯ ಂಪರೆಯತ್ತ ಹೊರಳುವಂತೆ-ಮಾಡಿತು. ಅಷ್ಟೇ ಅಲ್ಲ ಹ್ಯಾವೆಲ್‌ನು ಈ ಸಾಹಸದಿಂದ ರತೀಯ ಕಲೆಯ ಉಜ್ವಲವಾದ ಪರಂಪರೆಯನ್ನು ಪ್ರಪಂಚಕ್ಕೆ ತೋರಿಸಿದ ಕೀರ್ತಿಗೆ ತ್ರನಾದನು.

ಈ. ಬಿ. ಹ್ಯಾವೆಲ್‌ನಂಥವರಿಂದ ಸ್ಫೂರ್ತಿಗೊಂಡ ಭಾರತೀಯ ಕಲಾವಿದರ ಶುದ್ಧ ಶೈಲಿಯೊಂದರ ಉದಯವಾಯಿತು. ಈ ಹೊಸಶೈಲಿಯ ಪ್ರವರ್ತಕರಲ್ಲಿ



೩೦) ನಂದಲಾಲ್ ಬೋಸ್

ವೆಲ್‌ನ ಸಹೋದ್ಯೋಗಿಯಾಗಿದ್ದ ಅಬನೀಂದ್ರನಾಥ ಟಾಗೋರ ಅವರೂ ಒಬ್ಬರು. ನೀಂದ್ರನಾಥ ಟಾಗೋರರು ತಮ್ಮ ಕಲಾಕೃತಿಗಳಲ್ಲಿ ಪ್ರಾಚೀನ ಮತ್ತು ಮಧ್ಯಕಾಲೀನ ರತೀಯ ಕಲೆಯನ್ನು ಆಧುನಿಕ ವ್ಯವಸ್ಥೆಗೊಳಪಡುವ ಹೊಸ ದೃಷ್ಟಿಯ ಪ್ರಯೋಗಗಳನ್ನು ಡಿದರು. ಅಬನೀಂದ್ರ ಟಾಗೋರರು ವಿದೇಶೀ ಕಲಾಗುರುಗಳಿಂದ ಕಲಾಶಿಕ್ಷಣವನ್ನು ದವರಾಗಿದ್ದರೂ ಅವರು ರಚಿಸಿದ "ಕೃಷ್ಣಲೀಲಾ" ಚಿತ್ರಕಲಾಕೃತಿಗಳ ಸರಣಿಯಲ್ಲಿ ರ ಸ್ವತಂತ್ರವಾದ, ಪರಿಶುದ್ಧ ಭಾರತೀಯತೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ವೆಲ್‌ರಿಗೂ ಇಂಥ ವ್ಯಕ್ತಿಯ ಅವಶ್ಯಕತೆ ಬಹಳವಾಗಿತ್ತು. ಅಬನೀಂದ್ರನಾಥರು ತ್ತಾ ಕಲಾಶಾಲೆಯ ಸಹಾಯಕ ಪ್ರಾಂಶುಪಾಲರಾದರು. ಹ್ಯಾವೆಲ್ ಮತ್ತು ನೀಂದ್ರನಾಥ ಟಾಗೋರ ಅವರಿಬ್ಬರ ಪ್ರಯತ್ನದಿಂದಾಗಿ ನಂದಲಾಲಬೋಸ,

ಸುರೇಂದ್ರನಾಥ ಗಂಗೂಲಿ, ಶಾರದಾ ಚರಣ ಉಕಿಲ್, ಹಕೀಮಖಾನ, ಕೆ.ವೆಂಕಟಪ್ಪ, ಅಸಿತ್ ಕುಮಾರ ಹಲ್ದಾರ್, ಕ್ಷಿತೀಂದ್ರನಾಥ ಮಝುಮದಾರ, ಅಬ್ದುಲ್ ರಹಮಾನ್ ಚುಗ್ತಾಯಿ, ಮುಕುಲಚಂದ್ರ ಡೇ ಅವರಂಥ ಪ್ರತಿಭಾಶಾಲಿ ಹಾಗೂ ಪರಂಪರೆಯನ್ನು ನಿರ್ಮಾಣ ಮಾಡುವಂಥ ಕಲಾವಿದರು ಬೆಳಕಿಗೆ ಬಂದರು.

ಭಾರತೀಯ ಇಂದಿನ ಕಲೆಯ ರೂಪು ಮತ್ತು ಭಾಷೆಗಳ ಸ್ವರೂಪವೇ ಬದಲಾಗಿದ್ದು ಪ್ರಪಂಚದ ಸಮಕಾಲೀನ ಕಲೆಯ ಸರಿಸಮಾನವಾಗಿ ತಲೆಯೆತ್ತಿ ನಿಲ್ಲಲು ಜಾಮಿನಿರಾಯ್, ಅಮೃತಾಷೇರ್‌ಗಿಲ್, ಬಿರೇಶ್ವರ ಸೇನ್, ಸುಧೀರ ಖಾಸ್ತಗೀರ್, ಕೆ.ಕೆ.ಹೆಬ್ಬಾರ್, ಕೆ. ಹೆಚ್. ಆರಾ, ಎಸ್. ಎಚ್. ರಾಝಾ, ಎನ್. ಎಸ್. ಬೇಂದ್ರೆ, ಸತೀಶ್ ಗುಜ್ರಾಲ್, ಎಮ್. ಎಫ್. ಹುಸೇನ್, ರಾಮ್‌ಕುಮಾರ್, ಕೆ. ಸಿ. ಎಸ್. ಪಣಿಕ್ಕರ್, ಲಕ್ಷ್ಮಣ ಪೈ, ಪಿ. ಟಿ. ರೆಡ್ಡಿ, ಜಿ. ಆರ್. ಸಂತೋಷ್, ಎಸ್. ಜಿ. ವಾಸುದೇವ, ಜಿ. ಎಸ್. ಶೆಣಾಯ್ ಮುಂತಾದ ಅಸಂಖ್ಯ ಕಲಾವಿದರು



೩೧) ಎಂ. ಎಫ್ ಹುಸೇನ್

ಕಾರಣರಾಗಿರುವಲ್ಲದೇ ಆಧುನಿಕ ಭಾರತೀಯ ಕಲಾಪ್ರಪಂಚಕ್ಕೆ ತಮ್ಮದೇ ಆದ ಮಹತ್ತರ ಕಾಣಿಕೆಯನ್ನು ನೀಡಿದವರಾಗಿದ್ದಾರೆ.

ವರ್ಣಗಳು ಮತ್ತು ವರ್ಣಚಿತ್ರಣ ವಿಧಾನಗಳು

ರ್ಣಗಳು

ಖನಿಜಗಳು, ಸಸ್ಯಗಳು ಇಲ್ಲವೇ ಪ್ರಾಣಿಗಳಿಂದ ವರ್ಣಗಳನ್ನು ತಯಾರಿಸುತ್ತಾರೆ. ಿಡಿಗೆ ಅಥವಾ ಇಂಗಾಲದಿಂದ ಕಪ್ಪು ಬಣ್ಣವನ್ನು ಮಣ್ಣು ಮತ್ತು ಖನಿಜಗಳಿಂದ ಳದಿ ಮತ್ತು ಹಸಿರು ಬಣ್ಣಗಳನ್ನೂ ಒಂದು ಜಾತಿಯ ಕಾಚಿ ನೀಲಿ ಎಂಬ ಟದಿಂದ ಕಡುಗೆಂಪು ಅಥವಾ ರಕ್ತವರ್ಣವನ್ನೂ ನಸುಹಳದಿಯಹೂವು ಬಿಡುವ ಂದು ಜಾತಿಯ ಅಡರು ಬಳ್ಳಿಯ ಬೇರುಗಳಿಂದ "ಮ್ಯಾಡರ್" ವರ್ಣವನ್ನೂ ಯಾರಿಸಲಾಗುತ್ತದೆ.ಹಿಂದೆ ಪ್ರತಿಯೊಬ್ಬ ಕಲಾವಿದ ಇಲ್ಲವೇ ಅವನ ಸಹಾಯಕನು ನಗೆ ಬೇಕಾದಂತೆ ಕುಟ್ಟಿ, ಅರೆದು ನುಣ್ಣಗೆ ಮಾಡಿ ಬಣ್ಣಗಳನ್ನು ತಯಾರಿಸಿಕೊಳ್ಳಬೇಕಾಗುತ್ತಿತ್ತು. ದರೆ ಈಗ ಎಲ್ಲ ತರದ ಬಣ್ಣಗಳೂ ಬಳಕೆಗೆ ಸಿದ್ಧವಾದ ರೂಪದಲ್ಲಿಯೇ ೊರೆಯುತ್ತವೆ.

ಕಾಲಾನುಕ್ರಮದಲ್ಲಿ ಬಣ್ಣಗಳ ಬಳಕೆಯ ವಿಧಾನವು ಬೇರೆ ಬೇರೆ ಮಾಧ್ಯಮಗಳಲ್ಲಿ ಾಢಿಗೆ ಬಂದಿತು. ಆಯಾ ಮಾಧ್ಯಮಗಳಿಗನುಸಾರವಾಗಿ ವರ್ಣಚಿತ್ರಣ ವಿಧಾನ ainting method)ವನ್ನು ಗುರುತಿಸಲಾಗುತ್ತದೆ. ಉದಾಹರಣೆಗೆ ಮೇಣವರ್ಣ ವಿಧಾನ, ೊಟ್ಟೆ, ತೈಲವರ್ಣವಿಧಾನ, ಜಲವರ್ಣವಿಧಾನಗಳು. ಮೇಣ, ಮೊಟ್ಟೆ, ತೈಲ ಮತ್ತು ಲ(ನೀರು)ಗಳು ಮಾಧ್ಯಮಗಳಾಗಿವೆ. ಬಣ್ಣ ಇಲ್ಲವೇ ಕುಟ್ಟಿ, ಅರೆದು, ನುಣ್ಣಗೆ ಾಡಿದ ಬಣ್ಣದ ಹುಡಿಗಳನ್ನು ಇಂಥ ಮಾಧ್ಯಮಗಳಲ್ಲಿ ಬೆರೆಸಿ ವರ್ಣಚಿತ್ರಗಳನ್ನು ತ್ರಿಸಲಾಗುತ್ತದೆ.

ೇಣವರ್ಣ ಚಿತ್ರಣ(Encaustic) ವಿಧಾನ

ಗ್ರೀಕ್ ಮತ್ತು ರೋಮನ್ನರು ಈ ವಿಧಾನದಲ್ಲಿ ವರ್ಣಚಿತ್ರಣವನ್ನು ಮಾಡುವುದನ್ನು ಳಕೆಯಲ್ಲಿ ತಂದಿದ್ದರು. ಮೇಣವನ್ನು ಕುದಿಸಿ ನೀರಾಗುವಂತೆ ಮಾಡಿ ಈ ಮೇಣದ ರು ಇನ್ನೂ ಬಿಸಿಯಾಗಿರುವುಗಲೇ ಬಣ್ಣಗಳನ್ನು ಅದರಲ್ಲಿ ಬೆರೆಸುತ್ತಿದ್ದರಲ್ಲದೇ ಈ ಣ್ಣದ ಮೇಣದ ದ್ರವವು ಬಿಸಿಯಾಗಿರುವಾಗಲೇ ತಾವು ಚಿತ್ರಿಸಲಿರುವ ಚಿತ್ರದ ೇಲೆ ಲೇಪಿಸಿ ಚಿತ್ರವನ್ನು ಪೂರ್ಣಗೊಳಿಸುತ್ತಿದ್ದರು. ಈ ವಿಧಾನದಲ್ಲಿ ಚಿತ್ರಿಸಿದ ಾವೇ ಗ್ರೀಕ್ ಮತ್ತು ರೋಮನ್ ಕಲಾಕೃತಿಗಳು ಈವರೆಗೂ ಉಳಿದುಕೊಂಡಿದ್ದು ಂದಿಗೂ ವರ್ಣಗಳ ಉಜ್ವಲತೆಯನ್ನು ಗುರುತಿಸಬಹುದಾಗಿದೆ.

ಂಪೆರಾ(ಹುಡಿವರ್ಣಗಳು)(Tempera) ವಿಧಾನ

ಈ ವಿಧಾನದಲ್ಲಿ ಬಣ್ಣಗಳನ್ನು ಸಾಮಾನ್ಯವಾಗಿ ಮೊಟ್ಟೆಯೊಳಗಿನ ಬಿಳಿದ್ರವ(Yolk)ದಲ್ಲಿ ಶ್ರಗೊಳಿಸಿ ಬಳಸಲಾಗುತ್ತದೆ. ಈ ಪದ್ಧತಿಯು ಇಟಾಲಿಯಲ್ಲಿ ಮಧ್ಯಕಾಲದಲ್ಲಿ ್ಹಾಗಿ ಬಳಕೆಯಲ್ಲಿದ್ದು ಈಜಲ್ ಪಿಕ್ಚರ್(ಚಿತ್ರಾಧಾರ)ಗಳಿಗೆ ಅತ್ಯುತ್ತಮವಾದ ಪದ್ಧತಿಯಾಗಿತ್ತು. ಾಲಿಯ ಪುರಾತನ ಟೆಂಪೆರಾ ಚಿತ್ರಕಲಾಕೃತಿಗಳು ಮರದ ಹಲಗೆ ಇಲ್ಲವೆ

ಕ್ಯಾನುವಾಸು ಬಟ್ಟೆಗಳ ಮೇಲೆ ಚಿತ್ರಿತವಾಗಿವೆ. ಇಟಾಲಿಯ ಪುನರುತ್ಥಾನ ಕಾಲ ಪ್ರಾರಂಭದಲ್ಲಿ ಈ ವಿಧಾನವು ಹೆಚ್ಚಾಗಿ ಬಳಕೆಯಲ್ಲಿತ್ತು ಕ್ಯಾನುವಾಸು ಇಲ್ಲವೆ ಮರ ಹಲಗೆಯ ಮೇಲ್ಮೈಯ ಮೇಲೆ ಗೆಸ್ಸೋ (ಪ್ಲಾಸ್ಟರ್ ಆಫ್ ಪ್ಯಾರಿಸ್ ಎಂಬ ಸುಣ್ಣ ಧಾತು ಕೂಡಿದ ಹಿಟ್ಟಿನಂಥ ಪದಾರ್ಥ) ಎಂದು ಕರೆಯಲ್ಪಡುವ ಒಂದು ತರದ ಬಿ ಸಿಮೆಂಟ್‌ನ್ನು ಲೇಪಿಸಿ ಚಿತ್ರವೇದಿಕೆಯನ್ನು ಸಿದ್ಧಗೊಳಿಸಿಕೊಂಡು ನಂತರ ಅದರ ಮೇ ಚಿತ್ರಕಲಾಕೃತಿಗಳನ್ನು ರಚಿಸಲಾಗುತ್ತಿತ್ತು. ಬೈಝಂಟಾಯಿನ್ ಮತ್ತು ಸಿನೀಜ ಟೆಂಪೆರ ಚಿತ್ರಗಳಿಗಾಗಿ ತಯಾರಿಸಿಕೊಂಡ ಗೆಸ್ಸೋ ಚಿತ್ರವೇದಿಕೆಯ ಮಲೆ ಮಣ್ಣಿನಿಂ ತಯಾರಿಸಿದ ಹಸಿರು ಬಣ್ಣವನ್ನು ತೆಳುವಾಗಿ ಲೇಪಿಸಿರುವುದು ಚಿತ್ರದ ಬಾಹ್ಯರೇಷೆಗಳ ಮತ್ತು ನೆಳಲುಗಳಗುಂಟ ಕಂಡು ಬರುತ್ತದೆ. ಚಿತ್ರಕ್ಕೆ ಅವಶ್ಯವಾದ ಬಣ್ಣದ ಹುಡಿಯನ ನೀರಿನಲ್ಲಿ ನುಣ್ಣಗಾಗಿ ಅರೆದು ನಂತರ ಬಣ್ಣದ ಪ್ರಮಾಣದಷ್ಟೇ ಮೊಟ್ಟೆಯ ಬಿಳಿಯ ದ್ರವ್ಯವನ್ನು ಬೆರೆಸಲಾಗುತ್ತಿತ್ತು. ಚಿತ್ರದ ಹಿನ್ನೆಲೆ ಮತ್ತು ವಿವರಗಳಿಗಾಗಿ ಹೆಚ್ಚಾ ಬಂಗಾರದ ಬಣ್ಣವನ್ನು ಬಳಸಿ, ಒಪ್ಪಹಾಕಿ ಹೊಳೆಯುವಂತೆ ಮಾಡಲಾಗಿದೆ. ೧೫ನೆಯ ಶತಮಾನದ ವೇಳೆಗೆ ಇಲ್ಲವೇ ಅದಕ್ಕೂ ಮೊದಲು ಹೀಗೆ ಪೂರ್ಣಗೊಳಿಸಿದ ಚಿತ್ರದ ಮೇಲೆ ಗಚ್ಚಿಎಣ್ಣೆ(Varnish)ಯನ್ನು ಸವರಿ ಚಿತ್ರವು ಕೆಟ್ಟು ಹಾಳಾಗದಂತೆ ರಕ್ಷಿಸುವ ವಿಧಾನವು ಬಳಕೆಯಲ್ಲಿ ಬಂದಿತು.

ವರ್ಣದ ತಿಳುವು (Tone) ಟೆಂಪೆರಾ ಪದ್ಧತಿಯ ಜೀವಾಳವಾಗಿದ್ದು ಈ ಪದ್ಧತಿಯು ಬಹು ಕಠಿಣವಾಗಿರುತ್ತದೆಯಲ್ಲದೆ ವರ್ಣಗಳು ತೀರ ಹಸಿಯಾಗಿರದಂತೆ ಒಂದು ನಿರ್ದಿಷ್ಟ ಓಟದಲ್ಲಿ ಚಿತ್ರಣಕಾರ್ಯ ಮುಗಿಯಲೇ ಬೇಕು. ಬೊಟಿಶೆಲಿಯ "ಮಾರ್ಸ್ ಮತ್ತು ವ್ಹೀನಸ್" ಚಿತ್ರವು ಈ ಪದ್ಧತಿಯಲ್ಲಿ ಚಿತ್ರಿಸಿದ ಅತ್ಯುತ್ತಮ ಉದಾಹರಣೆಯಾಗಿದೆ.

ಫ್ರೆಸ್ಕೋ(ಭಿತ್ತಿಚಿತ್ರ)(Fresco) ವಿಧಾನ

ಗೋಡೆಯ ಮೇಲೆ ಸುಣ್ಣವನ್ನು ಲೇಪಿಸಿ ಸುಣ್ಣವು ಇನ್ನೂ ಹಸಿಯಾಗಿರುವಾಗಲೆ ಚಿತ್ರವು ಪೂರ್ಣವಾಗಿ ಚಿತ್ರಿತವಾಗುವಂತೆ ಚಿತ್ರಿಸುವುದು ಫ್ರೆಸ್ಕೋ ಪದ್ಧತಿಯ ವೈಶಿಷ್ಟ್ಯವಾಗಿದೆ. ಸುಣ್ಣವು ಒಣಗಿದ ನಂತರ ಆದರೊಂದಿಗೆ ಚಿತ್ರವೂ ಗಟ್ಟಿಗೊಂಡು ಶಾಶ್ವತವಾಗಿ ಉಳಿಯುತ್ತದೆ. ಪುನರುತ್ಥಾನ ಕಾಲದಲ್ಲಿ ಗೋಡೆಗಳ ಮೇಲೆ ಚಿತ್ರಿಸಲ್ಪಟ್ಟ ಅನೇಕ ಫ್ರೆಸ್ಕೋ ಚಿತ್ರಗಳು ಉತ್ಕೃಷ್ಟ ಕಲಾಕೃತಿಗಳಾಗಿವೆ. ಗೋಡೆಗಳಿಗೆ ಬಣ್ಣವನ್ನು ಹಚ್ಚುವ ವಿಧಾನಗಳೂ ಅನೇಕ ವಿಧಗಳಾಗಿವೆ. ತೈಲವರ್ಣ ಮತ್ತು ಮೇಣ ವರ್ಣಗಳನ್ನೂ ಸಹ ಬಳಸಬಹುದೆಂಬುದಕ್ಕೆ ವೆನಿಸ್ ಮತ್ತಿತ್ತರ ಕಡೆಗಳಲ್ಲಿ ಕ್ಯಾನವಾಸಿನ ಮೇಲೆ ಚಿತ್ರಿಸಿ ನಂತರ ಗೊಡೆ ಇಲ್ಲವೆ ಒಳಮಾಳಿಗೆಯಲ್ಲಿ ಅಂಟಿಸಿರುವುದು ಕಂಡು ಬರುತ್ತದೆ. ಸುಣ್ಣವು ಹಸಿಯಾಗಿರುವಾಗಲೇ ಚಿತ್ರಣಕಾರ್ಯವು ಮುಗಿಯಲೇ ಬೇಕಾಗಿರುವುದರಿಂದ ಈ ಪದ್ಧತಿಯು ಸಹ ಬಹು ಕಠಿಣವಾಗಿದೆ. ಚಿತ್ರಣ ಕಾರ್ಯವು ಸಾಧ್ಯವಾಗುವ ಮಟ್ಟಿಗೆ ಗೋಡೆಯ ಭಾಗದ ಮೇಲೆ ಸುಣ್ಣವನ್ನು ಲೇಪಿಸಿ ಅದರ ಮೇಲೆ ವರ್ಣಚಿತ್ರಗಳನ್ನು ರಚಿಸ ಬೇಕಾಗುತ್ತದೆಯಲ್ಲದೇ ಸುಣ್ಣದ ಲೇಪವ

ಹಸಿಯಾಗಿರಬೇಕಾದುದು ಅಗತ್ಯವಾಗಿದೆ. ಒಂದು ಬಾರಿ ಬಣ್ಣವನ್ನು ಬಳಿದ ನಂತರ ತಿದ್ದುಪಡಿ ಮಾಡಲು ಸಾಧ್ಯವಾಗಲಾರದು. ಅಲ್ಲದೆ ಬಣ್ಣವು ಒಣಗಿದ ಬಳಿಕ ಬಣ್ಣದ ರೂಪು ಬದಲಾವಣೆಗೊಳ್ಳುವದರಿಂದ ಸರಿಯಾದ ಬಣ್ಣವನ್ನು ತಯಾರಿಸಿಕೊಳ್ಳುವಲ್ಲಿ ಕಲಾವಿದನಿಗೆ ಅಸಾಮಾನ್ಯ ಜಾಣ್ಮೆ ಇರಬೇಕಾದುದು ಅತ್ಯವಶ್ಯವಾಗಿದೆ.

ನೇರವಾಗಿ ಗೋಡೆಯ ಮೇಲೆ ಚಿತ್ರದ ಬಾಹ್ಯ ರೇಷೆಗಳನ್ನು ಎಳೆಯಲು ಸಾಧ್ಯವಿಲ್ಲದಿರುವದರಿಂದ ಇಟಾಲಿಯನ್ ಫ್ರೆಸ್ಕೋ ಕಲಾವಿದರು ಇಡೀ ಗೊಡೆಯ ಮೇಲೆ ಚಿತ್ರಿಸಲಿರುವ ಸಂಪೂರ್ಣ ಚಿತ್ರದ ಬಾಹ್ಯರೇಷೆಗಳನ್ನು ದೊಡ್ಡದಾದ (ಗೋಡೆಯನ್ನಾವರಿಸುವಷ್ಟು ಕಾಗದದ ಮೇಲೆ ಚಿತ್ರಿಸಿ ನಂತರ ಬಾಹ್ಯ ರೇಷೆಯಗುಂಟ ಪಿನ್ ಇಲ್ಲವೆ ಮೊನಚಾದ ಮೊಳೆಯಿಂದ ಸಣ್ಣ ಸಣ್ಣ ತೂತುಗಳನ್ನು ಮಾಡಿಕೊಂಡು ಇಲ್ಲವೇ ಗೆರೆಗಳನ್ನು ಎಳೆದುಕೊಂಡು ಕಾಗದವನ್ನು ಗೋಡೆಗೆ ಅಂಟಿಸಿ ಚಿತ್ರದ ಬಾಹ್ಯರೇಖೆಗಳನ್ನು ಹಸಿಸುಣ್ಣದ ಲೇಪದ ಮೇಲೆ ಮೂಡಿಸಿಕೊಂಡು ಚಿತ್ರಣ ಕಾರ್ಯವನ್ನು ಮುಂದುವರಿಸುತ್ತಿದ್ದರು. ಹೀಗೆ ಕಾಗದದ ಮೇಲೆ ಚಿತ್ರಿಸಿಕೊಳ್ಳುವುದಕ್ಕೆ ಕಾರ್ಟೂನ್(Cartoon) ಎಂದು ಕರೆಯಲಾಗುತ್ತಿತ್ತು. ಸುಣ್ಣವು ಒಣಗಿದ ನಂತರ ಟೆಂಪೆರಾ ವಿಧಾನದಿಂದ ಚಿತ್ರಕ್ಕೆ ಮುಕ್ತಾಯ ಸ್ಪರ್ಶಗಳನ್ನು ಕೊಡುತ್ತಿದ್ದರು. ಆದರೆ ದೈತ್ಯ ಫ್ರೆಸ್ಕೊ ಕಲಾವಿದರು ಟೆಂಪೆರಾ ವಿಧಾನದಿಂದ ಚಿತ್ರವನ್ನು ಮುಕ್ತಾಯಗೊಳಿಸಿದಲ್ಲಿ ನೈಜ



೩೨) ಶ್ರವಣಬೆಳಗೊಳದ ಭಿತ್ತಿಚಿತ್ರ

ಫ್ರೆಸ್ಕೋ ವಿಧಾನದಂತೆ ಚಿತ್ರವು ಶಾಶ್ವತವಾಗಲಾರದೆಂದು ಸಾಧ್ಯವಾದ ಮಟ್ಟಿಗೆ ಫ್ರೆಸ್ಕೋ ವಿಧಾನದಲ್ಲಿಯೇ ಚಿತ್ರಗಳಿಗೆ ಮುಕ್ತಾಯ ಸ್ಪರ್ಶಗಳನ್ನು ಕೊಡುತ್ತಿದ್ದರು. ಟೆಂಪೆರಾ ಮತ್ತು ಫ್ರೆಸ್ಕೋ ವಿಧಾನಗಳೆರಡರಲ್ಲಿಯೂ ಸರಿ ಮತ್ತು ತಪ್ಪುಗಳು ಸರಿಸಮಾನವಾಗಿವೆ. ಎರಡು ವಿಧಾನಗಳಲ್ಲಿಯೂ ತೆಳುವರ್ಣ ಛಾಯೆ, ದಟ್ಟ ಮಸುಕಿನ ಪರಿಣಾಮಗಳ ಚಿತ್ರಣ ಕಷ್ಟಸಾಧ್ಯವಾಗಿದೆ. ಫ್ಲೋರೆಂಟಾಯಿನ್ ಪಂಥವು ಟೆಂಪೆರಾ ವಿಧಾನದಲ್ಲಿ ಅತ್ಯದ್ಭುತವಾದ ಬೆಳವಣಿಗೆಯನ್ನು ತೋರಿಸಿದಂತೆ ಫ್ರೆಸ್ಕೋ ವಿಧಾನದಲ್ಲಿಯೂ ಅದ್ಭುತವಾದ ಸಾಧನೆಯನ್ನು ತೋರಿಸಿದೆ. ವೆನೀಷಿಯನ್ ಪಂಥವು ತೈಲವರ್ಣ ವಿಧಾನವನ್ನು ಧಾರಾಳವಾಗಿ ಬಳಸಿದಂತೆ ಟೆಂಪೆರಾ ಇಲ್ಲವೆ ಫ್ರೆಸ್ಕೋ ಪದ್ಧತಿಗಳನ್ನು ಬಳಸಲು ಉತ್ಸುಕವಾಗಿರಲಿಲ್ಲ. ಉತ್ತರ ಯುರೋಪಿನಂಥ ತಂಪು ಮತ್ತು ಆರ್ದ್ರ ವಾತಾವರಣವಿರುವ ದೇಶಗಳಲ್ಲಿ ಫ್ರೆಸ್ಕೋ ಪದ್ಧತಿಯನ್ನು ಹೆಚ್ಚಾಗಿ ಬಳಸಲಿಲ್ಲ. ೧೫ ಮತ್ತು ೧೬ನೇ ಶತಮಾನಗಳಲ್ಲಿ ಟೆಂಪೆರಾ ಮತ್ತು ಫ್ರೇಸ್ಕೊ ವಿಧಾನಗಳು ಇಟಾಲಿಯಲ್ಲಿ ಪರಿಶುದ್ಧ ರೂಪಕ್ಕೆ ತಲುಪಿದ್ದವು. ಅದರಲ್ಲೂ ಫ್ಲೋರೆಂಟಾಯಿನ್ ವರ್ಣಚಿತ್ರಕಲಾಕೃತಿಗಳು ಈ ವಿಧಾನಗಳಲ್ಲಿ ಚಿತ್ರಿಸಿದ ಅಸಾಮಾನ್ಯ ಕಲಾಕೃತಿಗಳೆಂದು ಪರಿಗಣಿಸಲ್ಪಟ್ಟಿವೆ.

ಭಾರತದಲ್ಲಿ ಫ್ರೆಸ್ಕೊ ವಿಧಾನವು ಕ್ರಿ. ಪೂ. ೧ನೆಯ ಶತಮಾನದಿಂದಲೂ ಬಳಕೆಯಲ್ಲಿತ್ತು ಎಂಬುದಕ್ಕೆ ಅಜಂತಾ, ಎಲ್ಲೋರಾ, ನಾಸಿಕ್, ಬಾಗ್, ಸಿಗೀರಿಯ ಮುಂತಾದ ಕಡೆಗಳಲ್ಲಿರುವ ಭಿತ್ತಿಚಿತ್ರಗಳು ಪ್ರತ್ಯಕ್ಷ ಉದಾಹರಣೆಗಳಾಗಿವೆ.

ತೈಲವರ್ಣ(Oil Painting) ವಿಧಾನ

ಹಿಂದೆ ಟೆಂಪೆರಾ ವಿಧಾನದಲ್ಲಿ ಚಿತ್ರಿಸಿದ ಚಿತ್ರಗಳ ಮೇಲೆ ಗಚ್ಚಿ ಎಣ್ಣೆ ಅಥವಾ ವಾರ್ನಿಷ್ ಅನ್ನು ಸವರಿ ಚಿತ್ರಕ್ಕೆ ಹೊಳಪು ಬರುವಂತೆ ಮಾಡುವದಲ್ಲದೇ ಚಿತ್ರದ ರಕ್ಷಣೆಯನ್ನೂ ಮಾಡುತ್ತಿದ್ದ ಪದ್ಧತಿಯು ಬಳಕೆಯಲ್ಲಿದ್ದುದರಿಂದ ಈ ತೈಲವರ್ಣ ಮಾಧ್ಯಮವು ವ್ಯಾನ್ ಆಯಿಕ್(Van Eyck)ಸೋದರರು ಕಂಡು ಹಿಡಿಯುವದಕ್ಕಿಂತ ಮುಂಚಿತವಾಗಿಯೇ ಬಳಕೆಯಲ್ಲಿತ್ತು ಎಂದು ಹೇಳಬಹುದು. ೧೫ನೆಯ ಶತಮಾನದ ಪ್ರಾರಂಭದಲ್ಲಿ ಚಿತ್ರಿತವಾದ ಅನೇಕ ತೈಲವರ್ಣಚಿತ್ರಗಳು ಟೆಂಪೆರಾ ವಿಧಾನದಲ್ಲಿಯೇ ಚಿತ್ರಿಸಿ ನಂತರ ಅದರ ಮೆಲೆ ವಾರ್ನಿಷನ್ನು ಲೇಪಿಸಿ ರಕ್ಷಿಸಲಾಗಿದೆ. ೧೬ನೆಯ ಶತಮಾನಕ್ಕಿಂತ ಮೊದಲಿನ ತೈಲವರ್ಣ ಚಿತ್ರಗಳು ಮರದ ಹಲಗೆಯ ಮೇಲೆ ಚಿತ್ರಿಸಿದವುಗಳಾಗಿದ್ದು ೧೬ನೆಯ ಶತಮಾನದ ನಂತರದ ತೈಲಚಿತ್ರಗಳು ಕ್ಯಾನವಾಸು ಬಟ್ಟೆಯ ಮೇಲೆ ಚಿತ್ರಿಸಿದವುಗಳಾಗಿವೆ. ೧೭ನೆಯ ಶತಮಾನದ ವಿಶ್ವ ವಿಖ್ಯಾತ ಚಿತ್ರಕಾರ ರೂಬೆನ್ಸ(Rubens)ನು ಮರದ ಹಲಗೆಯ ಮೆಲೆ ಚಿತ್ರಿಸಲು ಹೆಚ್ಚು ಒಲವು ತೋರಿಸುತ್ತಿದ್ದನಾದರೂ ಕ್ಯಾನವಾಸು ಬಟ್ಟೆಯ ಮೇಲೆಯೂ ಸಹ ಹೆಚ್ಚಿನ ಸಂಖ್ಯೆಯ ತೈಲವರ್ಣಚಿತ್ರಗಳನ್ನು ರಚಿಸಿದ್ದಾನೆ.

"ಸ್ಟ್ರೆಚರ್" ಎಂದು ಕರೆಯಲ್ಪಡುವ ಮರದ ಚೌಕಟ್ಟಿಗೆ ಕ್ಯಾನುವಾಸು ಬಟ್ಟೆಯನ್ನು ಬಿಗಿಯಾಗಿ ಬಡಿದು, ಹಲಗೆಯಂತೆ ಮಾಡಿ ಅದರ ಮೇಲೆ "ಚಿತ್ರವೇದಿಕೆ"ಯನ್ನು

ಿದ್ಧಗೊಳಿಸಿಕೊಂಡು ತೈಲವರ್ಣಚಿತ್ರಗಳನ್ನು ಚಿತ್ರಿಸಲಾಗುತ್ತದೆ. ಈ ಚಿತ್ರವೇದಿಕೆಯನ್ನು ಸಹ ಮರದ ಹಲಗೆಯ ಮೇಲೆ ಸಿದ್ಧಗೊಳಿಸಿಕೊಳ್ಳುವ ಚಿತ್ರವೇದಿಕೆಯ ಪದ್ಧತಿಯನ್ನೇ ಅನುಸರಿಸಲಾಗುತ್ತದೆ. ಹೀಗೆ ಸಿದ್ಧಪಡಿಸಿದ ಚಿತ್ರವೇದಿಕೆಯ ಮೇಲೆ ಚಿತ್ರಿಸಿದ ತೈಲವರ್ಣಚಿತ್ರಗಳಿಗಾಗಿ ಬಳಸಿದ ವರ್ಣಗಳ ಉಜ್ವಲತೆಯನ್ನು ಬಟ್ಟೆಯು ಹೀರಿಕೊಳ್ಳಲಾರದು. ಚಿತ್ರವೇದಿಕೆ ಅಥವಾ ಪ್ರಥಮ ಬಳಿತಕ್ಕೆ ಉಪಯೋಗಿಸುವ ಮಿಶ್ರಣಕ್ಕಾಗಿ ಸೀಮೆಸುಣ್ಣ (Chalk) ಇಲ್ಲವೆ ಗೆಸ್ಸೊಗಳನ್ನಾಗಲೀ ಬಿಳಿ, ಹಸಿರು ಇಲ್ಲವೆ ಕೆಂಪು ವರ್ಣಗಳನ್ನಾಗಲೀ ಬಳಸಿ ಸಿದ್ಧಪಡಿಸಿಕೊಳ್ಳಲಾಗುತ್ತದೆ. ವಿಶ್ವವಿಖ್ಯಾತ ಕಲಾವಿದ ಟಿಂಟೊರೆಟೊ(Tintoretto) ಮತ್ತು ಸ್ಪ್ಯಾನಿಷ್ ಕಲಾವಿದ ಎಲ್‌ಗ್ರೇಕೊ(El Greco) ಅವರು ಚಿತ್ರವೇದಿಕೆಯನ್ನು ಸಿದ್ಧಪಡಿಸಿಕೊಳ್ಳಲು ಕೆಂಪುವರ್ಣವನ್ನೇ ಬಳಸುತ್ತಿದ್ದರು.

ತೈಲವರ್ಣಗಳ ಬಳಕೆಯು ಕಲಾವಿದನಿಂದ ಕಲಾವಿದನಿಗೆ ಬದಲಾವಣೆಗೊಳ್ಳುತ್ತಲೆ ಬಂದಿದೆ. ವೆಲಾಸ್ಕ್ವೆ(Velazquez) ಮತ್ತು ಗೇನ್ಸಬರೋ(Gainsborough) ಅವರು ತೈಲವರ್ಣಗಳನ್ನೂ ಸಹ ಜಲವರ್ಣಗಳಂತೆ ತೈಲವರ್ಣಗಳು ನೀರಿನಲ್ಲಿ ಈಜುತ್ತಿರುವಂತೆ ಬಳಸಿರುವುದು ಕಂಡು ಬರುತ್ತದೆ. ಈ ರೀತಿಯ ವರ್ಣಲೇಪನವನ್ನು ಮೆರುಗು ಇಲ್ಲವೆ ಗ್ಲೇಝ್(Glaze)ಎಂದು ಕರೆಯುತ್ತಾರೆ. ಇನ್ನೊಬ್ಬ ವಿಶ್ವವಿಖ್ಯಾತ ಡಚ್ ಕಲಾವಿದ ರೆಂಬ್ರಾಂಟ್(Rembrant)ನು ತೈಲವರ್ಣಚಿತ್ರಣದಲ್ಲಿ ತೈಲವನ್ನು ಅಲ್ಪಪ್ರಮಾಣದಲ್ಲಿಯೋ ಅಥವಾ ತೈಲವಿಲ್ಲದೆಯೋ ನೇರವಾಗಿ ಬಣ್ಣಗಳನ್ನು ಬಳಸುತ್ತಿದ್ದರು. ಈ ವಿಧಾನವನ್ನು ಇಂಪ್ಯಾಸ್ಟೊ(Impasto) ಇಲ್ಲವೆ ದಪ್ಪನಾಗಿ ಬಣ್ಣಹಾಕುವ ವಿಧಾನ ಎಂದು ಕರೆಯುತ್ತಾರೆ. ತೈಲವರ್ಣಚಿತ್ರಣಕ್ಕಾಗಿ ಸಾಮಾನ್ಯವಾಗಿ ಗಸಗಸಿಎಣ್ಣೆ(Poppy oil) ಅಕ್ರೋಟ (Walnut Oil) ಮತ್ತು ನಾರಗಸೆಯಬೀಜದ(Linseed Oil) ಎಣ್ಣೆಗಳನ್ನು ಮಾಧ್ಯಮವಾಗಿ ಬಳಸುತ್ತಾರೆ. ಬಣ್ಣವು ಆರಿ ಗಟ್ಟಿಯಾದಾಗ ಕ್ಯಾನವಾಸಿನ ಮೇಲೆ ಕುಂಚವು(Brush) ಸುಲಭವಾಗಿ ಓಡಾಡುವಂತೆ ಮಾಡಿಕೊಳ್ಳುವುದಕ್ಕಾಗಿ ದೇವದಾರುತೈಲ ಇಲ್ಲವೆ ಕರ್ಪೂರ ತೈಲ(Turpentine)ವನ್ನು ಗಟ್ಟಿಯಾದ ಬಣ್ಣದಲ್ಲಿ ಬೆರೆಸಿ ಬಣ್ಣವನ್ನು ತಿಳಿಗೊಳಿಸಿಕೊಳ್ಳಲಾಗುತ್ತದೆ. ತೈಲವರ್ಣಚಿತ್ರಗಳು ಟೆಂಪೆರಾ ಚಿತ್ರಗಳಿಗಿಂತಲೂ ವಾಸ್ತವಕ್ಕೆ ಹೆಚ್ಚು ಹತ್ತಿರದವಾಗಿ ಕಾಣಿಸುತ್ತವೆಯಲ್ಲದೆ ಈ ಮಾಧ್ಯಮದಲ್ಲಿ ತಿದ್ದುಪಡಿಗೆ ಸಾಕಷ್ಟು ಅವಕಾಶವೂ ದೊರೆಯುತ್ತದೆ. ಈ ಮಾಧ್ಯಮದ ಬದಲಾವಣೆಯಲ್ಲಿ ವೆನೇಷಿಯನ್ ವರ್ಣ ಚಿತ್ರಕಾರರು ಅತಿ ಪ್ರಾಮುಖ್ಯವಾದ ಪಾತ್ರವನ್ನಾಡಿದರು. ಮರದ ಹಲಗೆಯ ಮೇಲೆ ಟೆಂಪೆರಾ ವಿಧಾನದಿಂದ ಚಿತ್ರಿಸುವದನ್ನು ವೆನೆಷಿಯನ್ನರು ಕ್ಯಾನವಾಸು ಬಟ್ಟೆಗೆ ಬದಲಾಯಿಸಿ ಅಥವಾ ವರ್ಗಾವಣೆ ಮಾಡಿ ತೈಲವರ್ಣಚಿತ್ರಗಳನ್ನು ಚಿತ್ರಿಸಲು ತೊಡಗಿದರು. ಟಿಷಿಯಾನ್(Titian)ನು ವಿಶ್ವವಿಖ್ಯಾತ ವೆನೇಷಿಯನ್ ತೈಲವರ್ಣ ಚಿತ್ರಕಾರನೆಂದು ಖ್ಯಾತನಾಗಿದ್ದಾನೆ.

ಜಲವರ್ಣ(Water-Colour) ವಿಧಾನ

ಜಲವರ್ಣ ಚಿತ್ರಗಳನ್ನು ಸಾಮಾನ್ಯವಾಗಿ ಕಾಗದಗಳ ಮೇಲೆ, ಕೆಲವು ವೇಳೆ ರೇಷ್ಮೆ

ಬಟ್ಟೆ, ಹಸ್ತಿದಂತ ಇಲ್ಲವೇ ಎಲುಬುಗಳ ಮೇಲೆ ಚಿತ್ರಿಸುತ್ತಾರೆ. ಬಣ್ಣಗಳನ್ನು ನೀರಿನಲ್ಲಿ ಮಿಶ್ರಮಾಡಿ ಚಿತ್ರಗಳನ್ನು ಚಿತ್ರಿಸುವುದೇ ಜಲವರ್ಣ ವಿಧಾನ. ಬಹುದಿನಗಳಿಂದಲು ರೇಖಾಚಿತ್ರಗಳಿಗೆ(Drawings) ಜಲವರ್ಣಗಳಿಂದ ಮುಕ್ತಾಯ ಸ್ಪರ್ಶ(Finishing Touches)ಗಳನ್ನು ಕೊಡಲಾಗತ್ತಿತ್ತೆಂಬುದನ್ನು ಲಿಯೋನಾರ್ಡೋ ಡಾ ವಿನ್ಸಿ(Leonardo Da Vinci) ಮತ್ತು ಡ್ಯೂರರ್(Durer) ಅವರ ಅಸಂಖ್ಯಾತ ರೇಖಾಚಿತ್ರಗಳಿಂದ ತಿಳಿಯಬಹುದಾಗಿದೆ. ಈಗಲೂ ಈ ಪದ್ಧತಿಯು ರೂಢಿಯಲ್ಲಿರುತ್ತದೆಯಲ್ಲದ ಕಿರುವರ್ಣಚಿತ್ರಗಳನ್ನು(Miniature Paintings) ಹೆಚ್ಚಾಗಿ ಜಲವರ್ಣ ಮಾಧ್ಯಮದಲ್ಲಿಯೇ ಚಿತ್ರಿಸಲಾಗುತ್ತದೆ ಎಂಬುದು ಸರ್ವವಿದಿತ. ಇಂಗ್ಲೆಂಡ್‌ನಲ್ಲಿ ೧೮ನೇ ಶತಮಾನದ ಕೊನೆ ನಿಸರ್ಗದೃಶ್ಯಚಿತ್ರ(Landscape)ಗಳನ್ನು ಚಿತ್ರಿಸುವ ಕಲಾವಿದರ ತಂಡವೊಂದು ಉದಯಿಸಿತು ಈ ತಂಡದ ಕಲಾವಿದರೇ ಈ ವಿಧಾನದಲ್ಲಿ ಘನವಂತರಾದ ಯುರೋಪಿಯನ್ ವರ್ಣಚಿತ್ರಕಾರರಾಗಿದ್ದರೆನ್ನಬಹುದು. ಜಲವರ್ಣಮಾಧ್ಯಮವು ಇನ್ನುಳಿದ ಯಾವುದೇ ಮಾಧ್ಯಮಗಳಿಗಿಂತಲೂ ನಿಸರ್ಗ ದೃಶ್ಯ ಚಿತ್ರಕಲಾಕೃತಿಗಳ ರಚನೆಗೆ ಅತ್ಯುತ್ತಮವಾದ ಮಾಧ್ಯಮವಾಗಿದೆಯಲ್ಲದೆ ಬಹು ಕಠಿಣವಾದ ಮಾಧ್ಯಮವೂ ಆಗಿದೆ. ಮಧ್ಯಯುಗೀನ ಅನೇಕ ಅಲಂಕೃತ ಹಸ್ತಪ್ರತಿಗಳು(Illuminated Manuscripts) ಜಲವರ್ಣ ಮಾಧ್ಯಮದಲ್ಲಿಯೇ ರಚಿಸಲ್ಪಟ್ಟಿವೆ. ಫ್ರೆಸ್ಕೊ ವಿಧಾನವು ಜಲವರ್ಣಗಳನ್ನು ಬಳಸಿ ಕಲಾಕೃತಿಗಳನ್ನು ರಚಿಸುವ ಜಲವರ್ಣಮಾಧ್ಯಮದ ಇನ್ನೊಂದು ಪ್ರತ್ಯೇಕ ರೂಪವಾಗಿದೆ.



೩೩) ಕೃಷ್ಣದೇವಸ್ಥಾನ- ಹಂಪಿ, ಪಿ. ಆರ್. ತಿಪ್ಪೇಸ್ವಾಮಿ

ಜೆ. ಆರ್. ಕಝೆನ್ಸ್, ಥಾಮಸ್ ಜೆರ್ಟಿನ್, ಜೆ. ಎಸ್. ಕಾಟ್ಮನ್, ಪೀಟರ್. ಡಿ. ವಿಕಟ್ ಮುಂತಾದವರು ಸುಪ್ರಸಿದ್ಧ ಜಲವರ್ಣ ಚಿತ್ರಕಾರರಾಗಿದ್ದರು. ಪ್ರಾಯಶಃ ಇವರ ಸಮಕಾಲಿನ ಕಲಾವಿದನಾದ ಜೆ. ಎಮ್. ಡಬ್ಲೂ ಟರ್ನರನು ಸರ್ವೋತ್ಕೃಷ್ಟ ನಿಸರ್ಗದೃಶ್ಯಚಿತ್ರ ಕಲಾವಿದನಾಗಿದ್ದನು. ತೈಲವರ್ಣ ಮಾಧ್ಯಮದಲ್ಲಿ ಟರ್ನರನ ಪ್ರತಿಸ್ಪರ್ಧಿಯಾಗಿದ್ದ ಕಾನ್ಸ್ಟೇಬಲ್‌ನೂ ಕೆಲವು ಚಿತ್ರಗಳನ್ನು ಜಲವರ್ಣ ಮಾಧ್ಯಮದಲ್ಲಿ ಚಿತ್ರಿಸಿದ್ದಾನೆ. ೧೮೫೧ರಲ್ಲಿ ಟರ್ನರನು ಕಾಲವಾದನಂತರ ಜಲವರ್ಣ ಮಾಧ್ಯಮದ ಕಲಾವಿದರಲ್ಲಿ ಸಿಝಾನೆಯು ಸುಪ್ರಸಿದ್ಧ ಕಲಾವಿದನೆಂದು ಪರಿಗಣಿಸಲ್ಪಟ್ಟಿದ್ದಾನೆ.

ಗ್ವಾಷ್(Gouache) ಮತ್ತು ಪೋಸ್ಟರ್(Poster) ವರ್ಣ ವಿಧಾನ

ಈ ವಿಧಾನಗಳೂ ಜಲವರ್ಣ ವಿಧಾನದ ಶಾಖೆಗಳಾಗಿದ್ದು ವರ್ಣಗಳನ್ನು ನೀರಿನಲ್ಲಿಯೇ ಬೆರೆಸಲಾಗುತ್ತಿದ್ದರೂ ವರ್ಣಗಳು ದಪ್ಪವಾಗಿದ್ದು ಅಪಾರದರ್ಶಕಗಳಾಗಿರುತ್ತವೆ. ಕಾಗದದ ಮೇಲೆ ಬಳಿದ ಬಣ್ಣವು ಒಣಗಿದ ನಂತರ ಗದುವು ಗದುವಾಗಿರದೇ ಒಂದೇ ಸಮನಾಗಿ ಲೇಪಿಸಿದಂತಿರುತ್ತವೆಯಾದ್ದರಿಂದ ಈ ವಿಧಾನಗಳು ವಾಣಿಜ್ಯ ಕಲಾಕೃತಿಗಳಿಗೆ ಇಲ್ಲವೇ ಪ್ರಚಾರ ಚಿತ್ರಗಳಿಗೆ ಹೆಚ್ಚು ಯೋಗ್ಯವಾಗಿವೆ. ಈ ವಾಣಿಜ್ಯ ಇಲ್ಲವೇ ವ್ಯಾವಹಾರಿಕ ಕಲಾಕೃತಿಗಳಲ್ಲಿ ಬಳಸಲಾಗುವ ಬಣ್ಣಗಳು ಪ್ರಕಾಶಮಾನವಾಗಿಯೂ ಜನಸಾಮಾನ್ಯರ ಕಣ್ಣುಕೋರೈಸುವಂತೆಯೂ ರಂಜನೀಯವಾಗಿಯೂ ಇರಬೇಕಾದುದು ಅತ್ಯವಶ್ಯಕವಾಗಿದೆ. ಸಾಮಾನ್ಯ ಜಲವರ್ಣ ವಿಧಾನದಲ್ಲಿ ಬಣ್ಣಗಳನ್ನು ಪಾರದರ್ಶಕವಾಗಿ ಬಳಸಿ ವ್ಯವಹಾರಿಕ ಕಲಾಕೃತಿಗಳಿಗಿಂತ ಸೂಕ್ಷ್ಮವಾದ ವರ್ಣಸಾಂದ್ರತೆಗಳ ವೈವಿಧ್ಯ ಚಿತ್ರಣವು ಪ್ರಾಮುಖ್ಯವಾಗಿದೆ. ಹಳೆಯ ಪದ್ಧತಿಯ ಜಲವರ್ಣ ವಿಧಾನದಲ್ಲಿ ಪರಿಣಿತರೆನಿಸಿದ ಸರ್ ವಿಲಿಯಂ ನಿಕೋಲ್ಸನ್‌ರಂಥ ಕಲಾವಿದರು ಸಹ ಗ್ವಾಷ್ ಇಲ್ಲವೆ ಅಪಾರದರ್ಶಕ ವರ್ಣಗಳ ಬಳಕೆ ಹಾಗೂ ಪ್ರಚಾರ ಚಿತ್ರಕಲಾಕೃತಿಗಳ ರಚನೆಯಲ್ಲಿ ಅಂತರ್ರಾಷ್ಟ್ರೀಯ ಮನ್ನಣೆಗೆ ಪಾತ್ರರಾಗಿದ್ದರು. ಟೂಲೂಸ್ ಲಾತ್ರೆಕ್ ಮತ್ತೊಬ್ಬ ವಿಶ್ವವಿಖ್ಯಾತ ಪೋಸ್ಟರ್ ಚಿತ್ರಕಲಾವಿದನಾಗಿದ್ದನಲ್ಲದೇ ಭಾರತದಲ್ಲಿ ಪ್ರಪ್ರಥಮವಾಗಿ ಪೋಸ್ಟರ್ ವರ್ಣಗಳನ್ನು ಬಳಕೆಯಲ್ಲಿ ತಂದ ಕೀರ್ತಿಗೆ ಪಾತ್ರರಾಗಿದ್ದ ಕನ್ನಡಿಗ ದಿ. ಡಾ|| ಎಸ್. ಎಂ. ಪಂಡಿತರಂಥ ಕಲಾವಿದರ ಮೇಲೆ ಪ್ರಭಾವ ಬೀರಿದ ಕಲಾವಿದನಾಗಿದ್ದನು.

ಪ್ರಾರಂಭಿಕ ಪಾಠಗಳು

ಚಿತ್ರಕಲೆಯನ್ನು ಕಲಿಯುವ ಪ್ರಾರಂಭದ ಪಾಠಗಳ ವಿಷಯಗಳು, ವಿಧಾನಗಳು ಸುಲಭ ಹಾಗೂ ಗ್ರಾಹ್ಯವಾದವುಗಳಾಗಿರುತ್ತವೆ. ತಾಂತ್ರಿಕ ಕಟ್ಟಳೆಗಳಿರುವ ವಸ್ತುಚಿತ್ರರೇಖನ (Model drawing), ನಿಸರ್ಗ ಚಿತ್ರ, ನಕ್ಷಾಚಿತ್ರ ಮುಂತಾದವುಗಳ ಪಾಠಗಳನ್ನು ಕೈಗೆತ್ತಿಕೊಳ್ಳದೇ ಪ್ರಾರಂಭದಲ್ಲಿ ಕೇವಲ ಮುಕ್ತಾಭಿವ್ಯಕ್ತಿಚಿತ್ರಣ(Free Expressional drawings) ಅಥವಾ ಭಾವಬೋಧಕ(Expressional drawing) ಚಿತ್ರಲೇಖನ, ಸ್ಮರಣಚಿತ್ರಲೇಖನ(Memory drawing), ಇಲ್ಲವೇ ದಂತಕಥೆ, ಪೌರಾಣಿಕ, ಐತಿಹಾಸಿಕ ಘಟನೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಕಲ್ಪನೆಯಿಂದ ಚಿತ್ರಿಸುವ(Imagination

drawing) ಸುಲಭಸಾಧ್ಯವಾದ ವಿಷಯಗಳೊಂದಿಗೆ ಚಿತ್ರಕಲೆಯ ಅಭ್ಯಾಸವ ಪ್ರಾರಂಭಿಸಬೇಕಾಗುತ್ತದೆ.

ಭಾವಭೋಧಕ ಚಿತ್ರಲೇಖನ

ಸಾಮಾನ್ಯವಾಗಿ ಮಗುವು ಚಿಕ್ಕದಾಗಿರುವಾಗ ಚಿತ್ರಿಸುವದನ್ನು ಭಾವಬೋ ಚಿತ್ರಲೇಖನದ ಮೂಲಕವೇ ಪ್ರಾರಂಭಿಸಬೇಕಾಗುತ್ತದೆ. ಚಿಕ್ಕಮಕ್ಕಳು ರಚಿಸು ಭಾವಭೋಧಕ ಚಿತ್ರಗಳಲ್ಲಿ ಮಗುವು ತನ್ನದೇ ಆದ ಭಾವನೆಗಳನ್ನು ತನ್ನದೇ ಶೈಲಿಯಲ್ಲಿ ತನಗೆ ತಿಳಿದುದನ್ನು ಅಭಿವ್ಯಕ್ತಿಸುತ್ತದೆ. ಆದ್ದರಿಂದ ಮಗುವಿನ ಇ ಚಿತ್ರಗಳಲ್ಲಿ ತಾಂತ್ರಿಕ ನೈಪುಣ್ಯತೆಯಾಗಲೀ, ವೈಚಾರಿಕ ಪ್ರಬುದ್ಧತೆಯಾಗ ಇರುವುದಿಲ್ಲವಾದ್ದರಿಂದ ಕೆಲವು ಸಂಕೇತಗಳು ಮತ್ತು ಮಗುವಿನ ಕಲ್ಪನೆಗ ಪ್ರಧಾನವಾಗಿ ಕೃತಿಯ ರಚನೆಯಾಗುತ್ತದೆ. ಇದನ್ನೇ ಭಾವಬೋಧಕ ಚಿತ್ರಲೇಖ ಅಥವಾ ಮುಕ್ತಾಭಿವ್ಯಕ್ತಿ ಚಿತ್ರಲೇಖನವೆಂದು ಕರೆಯಲಾಗುತ್ತದೆ.

ಸ್ಮರಣ ಚಿತ್ರಲೇಖನ

ನಾವು ನೋಡಿದ ಯಾವುದೇ ವಸ್ತು, ಪಶು-ಪಕ್ಷಿ, ಸನ್ನಿವೇಶಗಳನ್ನು ಕೇವ ನೆನಪಿನಿಂದ ಚಿತ್ರಿಸುವ ವಿಧಾನವನ್ನು ಸ್ಮರಣಚಿತ್ರಲೇಖನವೆನ್ನುತ್ತಾರೆ. ಸ್ಮರಣಚಿತ್ರಲೇಖನದಿಂ ನಿರೀಕ್ಷಣಾಶಕ್ತಿಯೂ ಬುದ್ಧಿಯ ವಿಕಾಸವೂ ವೃದ್ಧಿಗೊಳ್ಳುತ್ತವೆ. ಸ್ವಭಾವಜನ್ಯವಾ ನಿರೀಕ್ಷಣಾ ಶಕ್ತಿಯು ತನ್ನ ಅಪರಿಮಿತವಾದ ಶಕ್ತಿವೈಶಿಷ್ಟ್ಯದಿಂದ ನಮ್ಮ ಸ್ಮರಣಶಕ್ತಿ ಪುಷ್ಟಿಯನ್ನು ಕೊಡುತ್ತದೆ. ಅದರಿಂದಾಗಿ ನಾವು ನೋಡಿದ ಯಾವುದೇ ವಸ್ತು ಪಶು-ಪಕ್ಷಿ, ಸನ್ನಿವೇಶಗಳು ನಮ್ಮ ಸ್ಮತಿಪಟಲದ ಮೇಲೆ ಅಚ್ಚಳಿಯದಂತೆ ಉಳಿಯುತ್ತವೆ ಅದರಿಂದಾಗಿಯೇ ನಮ್ಮ ಮನಸ್ಸು ಸ್ಮರಣಚಿತ್ರಗಳನ್ನು ರಚಿಸಲು ಪ್ರೇರೇಪಣೆಗೊಳ್ಳುತ್ತದ ಸ್ಫೂರ್ತಿಯುತವಾಗುತ್ತದೆ. ಸ್ಮರಣಚಿತ್ರ ಲೇಖನದಿಂದ ಎಳೆಯ ಮನಸ್ಸಿನಲ್ಲಿ ಸುಪ್ತವಾಗಿರುವ ರಸಾಭಿಜ್ಞತೆ(Aesthetic) ಜಾಗೃತಗೊಳ್ಳುತ್ತದೆ; ಮೆದುಳಿಗೆ ಸಾಕಷ್ಟು ವ್ಯಾಯಾಮ ದೊರೆತು ಆರೋಗ್ಯಕರವಾಗಿ ಬೆಳೆಯುವುದಲ್ಲದೆ ವಿಚಾರಶಕ್ತಿ, ಕಲ್ಪನಾಶಕ್ತಿ ಹಾಗೂ ನೆನಪಿನ ಶಕ್ತಿಗಳು ಪ್ರಬಲವಾಗುತ್ತವೆ.

ಕಲ್ಪನಾಚಿತ್ರಲೇಖನ

ಸ್ವತಃ ಕಣ್ಣಿನಿಂದ ಹಿಂದೆಯಾಗಲೀ ಈಗಾಗಲೇ ನೋಡದೇ ಇದ್ದವಸ್ತು ಪಶು-ಪಕ್ಷಿ ಮಾನವರು, ದೇವ-ದೇವತೆಗಳು ಮುಂತಾದವುಗಳನ್ನಾಗಲಿ ಸನ್ನಿವೇಶಗಳನ್ನಾಗಲೀ ಕೇವಲ ಕಲ್ಪನೆ ಮಾಡಿಕೊಂಡು ಚಿತ್ರಿಸುವ ಚಿತ್ರಗಳು ಕಲ್ಪನಾ ಚಿತ್ರಗಳೆನಿಸುತ್ತವೆ. ಐತಿಹಾಸಿಕ, ಪೌರಾಣಿಕ ಸನ್ನಿವೇಶಗಳನ್ನಾಗಲೀ, ಘಟನೆಗಳನ್ನಾಗಲೀ ನಾವು ಕಣ್ಣಿನಿಂದ ಕಂಡವರಲ್ಲ; ಅವುಗಳಿಗೆ ಸಂಬಂಧಿಸಿದ ವ್ಯಕ್ತಿಗಳನ್ನಾಗಲೀ ವಸ್ತುಗಳನ್ನಾಗಲೀ ನಾವು ನೋಡಿಲ್ಲ, ಇಂಥ ಚಿತ್ರಗಳನ್ನು ಚಿತ್ರಿಸುವಾಗ ಅವುಗಳಿಗೆ ಸಂಬಂಧಿಸಿದ ಕಾಲಮಾನ ಆಚಾರ-ವಿಚಾರ, ವೇಷ-ಭೂಷಣಗಳು, ವ್ಯಕ್ತಿಗಳು ಹೀಗಿದ್ದಿರಬೇಕು' ಎಂದು

ಲ್ಪಿಸಿಕೊಳ್ಳಬೇಕಾಗುತ್ತದೆ; ಕಲ್ಪನೆಯಂತೆ-ಚಿತ್ರ ಸಿದ್ಧವಾಗುತ್ತದೆ. ಇಲ್ಲಿ ಕಲ್ಪನೆ ಪ್ರಧಾನವಾಗಿ ರಣೆ ಗೌಣವಾಗುತ್ತದೆ.

ಸರ್ಗ ಚಿತ್ರಲೇಖನ(Nature Drawing)

ಪ್ರಕೃತಿಯಲ್ಲಿ ಕಂಡುಬರುವ ನೈಸರ್ಗಿಕ ವಸ್ತುಗಳನ್ನು ಎದುರಿಗಿಟ್ಟುಕೊಂಡು ತ್ರಿಸುವ ವಿಧಾನಕ್ಕೆ ನಿಸರ್ಗಚಿತ್ರ ಲೇಖನವೆನ್ನುತ್ತಾರೆ. ನಿಸರ್ಗ ಚಿತ್ರಲೇಖನದ ಾರಂಭದಲ್ಲಿ ಸಾಮಾನ್ಯವಾಗಿ ಎಲ್ಲಕಡೆಗಳಲ್ಲಿ ದೊರೆಯುವ ಆಲದ ಎಲೆ, ಅರಳಿ ಲೆ, ಮಾವಿನ ಎಲೆ, ಕಣಗಿಲ ಎಲೆ, ಗುಲಾಬಿ, ಕ್ರೋಟನ್ ಎಲೆ ಮುಂತಾದವುಗಳನ್ನೂ ವಿಧ ಬಗೆಯ ಹೂವುಗಳನ್ನೂ ಪಕ್ಷಿಗಳ ಗರಿಗಳು, ಹಣ್ಣು-ಹಂಪಲ, ಕಾಯಿ-ಸೊಪ್ಪುಗಳನ್ನೂ ಭ್ಯಾಸ ಮಾಡಬೇಕಾಗುತ್ತದೆ. ಪ್ರಾರಂಭದಲ್ಲಿ ಒಂದೇ ಎಲೆ, ಒಂದೇ ಹೂವು, ಒಂದೇ ಣ್ಣು ಹೀಗೆ ಚಿತ್ರಿಸುವದನ್ನು ಕಲಿತ ನಂತರ ನಾಲ್ಕಾರು ಎಲೆಗಳುಳ್ಳ ಟೊಂಗೆ, ಾಲ್ಕಾರು ಹೂವುಗಳ ಗೊಂಚಲು, ನಾಲ್ಕಾರು ಹಣ್ಣುಗಳ ಗುಂಪು ಇತ್ಯಾದಿಗಳನ್ನು ದುರಿಗಿಟ್ಟುಕೊಂಡು ಆಕಾರ-ರಚನೆಗಳನ್ನೂ ಟೊಂಗೆಗಳನ್ನು ಚಿತ್ರಿಸುವಾಗ ದೇಟು, ೊಂಗೆಗೆ ಹೊಂದಿಕೊಂಡ ಎಲೆಗಳ ಭಾಗ(Joint)ಗಳನ್ನೂ ಅಭ್ಯಸಿಸಬೇಕಾಗುತ್ತದೆ. ಸರ್ಗ ಚಿತ್ರಲೇಖನದಲ್ಲಿಯೂ ಚಿತ್ರಿಸಲಿರುವ ವಸ್ತುವಿನ ಆಕಾರ, ರಚನೆ, ಬಣ್ಣ ೊದಲಾದವುಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಬೇಕಾಗುತ್ತದೆ. ನಿಸರ್ಗಚಿತ್ರವನ್ನು ಬಣ್ಣಗಳಿಂದ ಚಿಸಬೇಕಾಗುತ್ತದೆಯಾದ್ದರಿಂದ ರಬ್ಬರನ್ನು ಹೆಚ್ಚಾಗಿ ಬಳಸದೇ ಸಂಪೂರ್ಣ ಚಿತ್ರವನ್ನು ಸುಕಡ್ಡಿಯಿಂದ ಚಿತ್ರಿಸುವಾಗ ತೇಲಿಸಿ ಬರೆದ ರೇಖೆಗಳಿಂದ ಚಿತ್ರಿಸಬೇಕಾಗುತ್ತದೆ.

ಎಲೆ, ಹೂವು, ಹಣ್ಣು ಕಾಯಿಗಳಲ್ಲದೇ ಗಿಳಿ, ಬಾತುಗೋಳಿ, ಹುಂಜ, ರಕುಟಿಕ, ಕೌಜುಗ ಮುಂತಾದ ಪಕ್ಷಿಗಳು ಸತ್ತಾಗ ಅವುಗಳ ದೇಹದಲ್ಲಿರುವ ಲುಬು, ಮಾಂಸಗಳನ್ನು ತೆಗೆದೊಗೆದು ಹುಲ್ಲು ತುಂಬಿರುತ್ತಾರೆ. ಇಂಥ ಹುಲ್ಲು ಂಬಿದ (Stuffed)ಪಕ್ಷಿಗಳು ಹುಲಿ, ಕರಡಿ ಮುಂತಾದ ಪ್ರಾಣಿಗಳನ್ನೂ ಎದುರಿಗಿಟ್ಟು ತ್ರಿಸುವುದಕ್ಕಾಗಿ ಬಳಸುತ್ತಾರೆ.

ುಕ್ತ ಹಸ್ತ ಚಿತ್ರಲೇಖನ(Free Hand Drawing)

ಭೂಮಿತಿಯ(Geometrical) ಯಾವುದೇ ಉಪಕರಣಗಳು ಅಂದರೆ ಸ್ಕೇಲು ಚುಪಟ್ಟಿ, ಅಡಿಪಟ್ಟಿ, ಕಂಪಾಸು ಅಥವಾ ಕೈವಾರ ಮುಂತಾದವುಗಳನ್ನು ಬಳಸದೇ ಗಳನ್ನೂ ವಿವಿಧ ವಸ್ತುಗಳನ್ನೂ ಕೇವಲ ಕೈಯಿಂದಲೇ ಚಿತ್ರಿಸುವುದನ್ನು ಮುಕ್ತ ಹಸ್ತ ್ರಲೇಖನವೆಂದು ಕರೆಯುತ್ತಾರೆ. ಸ್ಮರಣ ಚಿತ್ರ , ನಿಸರ್ಗ ಚಿತ್ರಲೇಖನಗಳೂ ಒಂದು ತಿಯಲ್ಲಿ ಮುಕ್ತಹಸ್ತ ಚಿತ್ರಗಳೇ ಆಗಿರುತ್ತದೆಯಾದರೂ ಉದ್ದೇಶವು ಬೇರೆಯಾಗಿರುತ್ತದೆ. ುಕ್ತಹಸ್ತ ಚಿತ್ರಲೇಖನದಲ್ಲಿ ಕೈ ಮತ್ತು ತೋಳುಗಳ ಮಾಂಸಖಂಡಗಳಿಗೆ ಸುಲಭವಾಗಿ ಾಡುವಂತೆ ವ್ಯಾಯಾಮ ನೀಡಬೇಕಾಗುತ್ತದೆ. ಸ್ಮರಣಶಕ್ತಿ ಹಾಗೂ ಬುದ್ಧಿಯ ವಣಿಗೆಯೊಂದಿಗೆ ಕೈಯನ್ನೂ ತರಬೇತುಗೊಳಿಸುವುದೇ ಮುಕ್ತಹಸ್ತ ಚಿತ್ರಲೇಖನದ ದ್ದೇಶವಾಗಿದೆ. ವಿವಿಧ ವಸ್ತುಗಳ ಆಕಾರ, ಸ್ಥಿತಿ; ಪ್ರಮಾಣಗಳ ನಿರೀಕ್ಷಣೆ ಹಾಗೂ

ನಕ್ಷೆಯ ಸುಳಿದಾಟದೊಂದಿಗೆ ಸುಲಭವಾಗುವಂತೆ-ಕೈಗಳ ಹರಿದಾಟವನ್ನೂ ಸ್ಥಿರಪಡಿಸಿಕೊಳ್ಳಬೇಕಾಗುತ್ತದೆ. ದೇವಾಲಯಗಳಲ್ಲಿರುವ ಕಲ್ಲಿನ ಕೆತ್ತನೆಯ ನಕ್ಷೆಗಳನ್ನೂ ಪಾತ್ರೆಗಳ ಮೇಲಿನ ಬೇರೆ ಬೇರೆ ರೀತಿಯ ಕೆತ್ತನೆಯ ಕೃತಿಗಳನ್ನೂ ನಕಲು ಮಾಡುವುದಿರಂದ ಮುಕ್ತಹಸ್ತ ಚಿತ್ರಲೇಖನಕ್ಕೆ ಹೆಚ್ಚು ಪ್ರಯೋಜನವಾಗುತ್ತದೆ.

ವಸ್ತುಚಿತ್ರಲೇಖನ(Model Drawing)

ಚಿತ್ರಕಲೆಯ ಅಭ್ಯಾಸಕ್ರಮದಲ್ಲಿ ವಸ್ತುಚಿತ್ರಲೇಖನ ಕಲೆಯು ಮಹತ್ವದ ವಿಷಯವಾಗಿ ತಾಂತ್ರಿಕ ಕಟ್ಟಳೆಗಳಿಂದ ಕೂಡಿದ ಕ್ಲಿಷ್ಟ ವಿಷಯವಾಗಿದೆ. ಕೊಡ, ಬಕೆಟ್ ತಂಬಿಗೆ ಮೊದಲಾದ ವಸ್ತುಗಳನ್ನು ಎದುರಿಗಿಟ್ಟು ಅವುಗಳ ಆಕಾರ, ಪ್ರಮಾಣಗಳಿಗನುಸಾರವಾಗಿ ಇದ್ದಕ್ಕಿದ್ದಂತೆ ಚಿತ್ರಿಸಬೇಕಾಗುತ್ತದೆ; ಛಾಯಾವರಣವನ್ನೂ ಮಾಡಬೇಕಾಗುತ್ತದೆ.

ನೇರವಾಗಿ ಈ ವಿಷಯದ ಚಿತ್ರಣಕ್ಕೆ ತೊಡಗುವದಕ್ಕಿಂತ ಮೊದಲು ಯಥಾದರ್ಶನ(Perspective)ದ ಮೂಲತತ್ವಗಳ ತಿಳುವಳಿಕೆಯು ಅಗತ್ಯವಾಗಿರುತ್ತದೆ ಇದರಿಂದಾಗಿ ಯಾವುದೇ ವಸ್ತುವಿನ ಮೂರೂ ಪರಿಮಾಣಗಳನ್ನು ರೂಪಿಸಲು ಸುಲಭವಾಗುತ್ತದೆ. ಯಥಾದರ್ಶನದಲ್ಲಿ ಬಳಸುವ ಕೆಲವು ಪದಗಳ ಅರ್ಥವನ್ನು ತಿಳಿದಿರಲೇಬೇಕಾಗುತ್ತದೆ. ಉದಾಹರಣೆಯಾಗಿ

ಚಿತ್ರಪಾತಳಿ(Picture Plane), ಸ್ಥಿರದೃಷ್ಟಿ ಬಿಂದು(Station Point) ಭೂ ಪಾತಳಿ (Ground Plane) ಎದುರಿನಿಂದ ನೋಡಿದ ನೋಟ(Front Elevation), ಬದಿಯಿಂದ ನೋಡಿದ ನೋಟ(Side Elevation) ಮತ್ತು ಮೇಲಿನಿಂದ ನೋಡಿದ ನೋಟ (Plan)ಮುಂತಾದವುಗಳ ಅರ್ಥವನ್ನು ಅರಿತಿರುವದು ಅವಶ್ಯವಾಗಿದೆ. ಆದರೆ ನಾವು ಚಿತ್ರಿಸಲಿರುವ ವಸ್ತು ನಮ್ಮೆದುರಿನಲ್ಲಿಯೇ ಇರುವುದರಿಂದ ಮೇಲ್ಕಾಣಿಸಿದ ಎಲ್ಲ ಪಾತಳಿಗಳನ್ನೂ ಊಹೆಯಿಂದಲೇ ಗ್ರಹಿಸಬೇಕಾಗುತ್ತದೆ. ವಸ್ತುಚಿತ್ರವನ್ನು ರಚಿಸುವಾಗ ಕೆಳಗೆ ಕಾಣಿಸಿದ ಸೂಚನೆಗಳು ಹೆಚ್ಚು ಉಪಯುಕ್ತವಾಗಿವೆ.

೧. ವಸ್ತು ಚಿತ್ರಲೇಖನಕ್ಕೆ H ಮತ್ತು H.B ಗುರುತಿನ ಸೀಸುಕಡ್ಡಿಗಳನ್ನೇ ಬಳಸಿ.

೨. ಮಾದರಿಯಾಗಿ ಎದುರಿಗಿಟ್ಟ ವಸ್ತು ಇಲ್ಲವೆ ವಸ್ತುಸಮೂಹಗಳ ನಿರ್ದಿಷ್ಟ ಆಕಾರ, ಪ್ರಮಾಣ ಮೊದಲಾದವುಗಳ ಕೋನಗಳನ್ನಾಗಲೀ ಪ್ರಮಾಣಗಳನ್ನಾಗಲೀ ಪರೀಕ್ಷಿಸುವಾಗ ಒಂದು ಕಣ್ಣನ್ನು ಮುಚ್ಚಿ ಒಂದೇ ಕಣ್ಣಿನಿಂದ ನೋಡಿ ನಿರ್ಧರಿಸಿಕೊಳ್ಳಿ

೩. ವಸ್ತುಗಳ ತುಲನಾತ್ಮಕ ಪ್ರಮಾಣಗಳನ್ನು ನಿರ್ಧರಿಸಿಕೊಳ್ಳಲು ಸುಮಾರು ಒಂದು ಅಡಿ ಉದ್ದದ ಅಂಕುಡೊಂಕಾಗಿರದ ಅಳತೆ-ಕಡ್ಡಿಯನ್ನು ಉಪಯೋಗಿಸಿ.

೪. ಅಳತೆ ಕಡ್ಡಿಯನ್ನು ದೇಹಕ್ಕೆ ಲಂಬಕೋನವಾಗುವಂತೆ ಪೂರ್ಣತೋಳನ್ನು ಚಾಚಿ ಕಡ್ಡಿಯು ತೋಳಿಗೆ ಲಂಬಕೋನವಾಗಿರುವಂತೆ ಹಿಡಿಯಿರಿ.

೫. ಎದುರಿಗೆ ಜೋಡಿಸಿಟ್ಟ ವಸ್ತು ಇಲ್ಲವೆ ವಸ್ತುಸಮೂಹದಿಂದ ತೀರ ಸಮೀಪದಲ್ಲಾಗಲೀ ಎಡ ಬಲಗಳ ತೀರ ಪಕ್ಕದಲ್ಲಾಗಲೀ ಕುಳಿತುಕೊಳ್ಳಬೇಡಿ.

ವಸ್ತುಚಿತ್ರ ಬಾಹ್ಯರೇಖೆಯು ಸಿದ್ಧಗೊಂಡನಂತರ ಛಾಯಾವರಣ ಇಲ್ಲವೆ ಲು-ಬೆಳಕುಗಳನ್ನು ರೂಪಿಸಲು 2B ಅಥವಾ 4B ಮುಂತಾದ ಸೀಸುಕಡ್ಡಿಗಳನ್ನು ಸಬೇಕಾಗುತ್ತದೆ. ನೆಳಲು- ಬೆಳಕುಗಳ ಭಾಗಗಳನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಡುವದರಿಂದ ನಿರ್ಧಾರ ಸುಲಭವಾಗುತ್ತದೆ. ಈ ನಿರೀಕ್ಷಣೆಯಿಂದ ಮಿಂಚುವ ವೆ ಹೊಳಪುಳ್ಳ ಭಾಗ, ಬೆಳಕಿನ ಭಾಗ, ನೆಳಲು ಮಿಶ್ರಿತ ಬೆಳಕು, ನೆಳಲು ನೆಳಲು ಪ್ರತಿಫಲಿತ ಬೆಳಕು(Reflected Light) ಮತ್ತು ಕವಿನೆಳಲುಗಳ ಭಾಗಗಳು ವಾಗಿ ಗೋಚರಿಸುತ್ತವೆ.

ಚಿತ್ರಲೇಖನ ಮತ್ತು ಮಾದರಿ ಚಿತ್ರಲೇಖನ(Design and Pattern Drawing)

ಚಿತ್ರಲೇಖನ ಕಲೆಯಲ್ಲಿ ನಕ್ಷಾಚಿತ್ರ ಹಾಗೂ ನಕ್ಷಾಮಾದರಿ ಚಿತ್ರಲೇಖನಗಳು ಷ್ಟ ಸ್ಥಾನವುಳ್ಳವುಗಳಾಗಿದ್ದು ಚಿತ್ರಕಾರನ ಬುದ್ಧಿ ಚಾತುರ್ಯ ಕೃತಿಗಳೆಂದು ಯಬಹುದು.

ನಕ್ಷೆ ಹಾಗೂ ಪಡಿಕಟ್ಟಿನ ಮಾದರಿಗಳನ್ನು ಬಾಗಿಲು, ಕಿಟಕಿ, ಬಟ್ಟೆ, ನೆಲಗಟ್ಟು ಂತಾದವುಗಳ ಮೇಲೆ ಚಿತ್ರಿಸಿರುವುದನ್ನೋ ಕೆತ್ತನೆ ಮಾಡಿರುವುದನ್ನೋ ನೋಡುತ್ತೇವೆ ಗಿಲು ಪರದೆಗಳ ಮೇಲೆ, ಚೀಟುಬಟ್ಟೆಯ ಮೇಲೆ ಅಂದವಾಗಿ ಅಚ್ಚುಹಾಕಿದ ಹೂ ಗಳು, ಮೊಗ್ಗು, ನೆಲಗಟ್ಟಿನ ಮೇಲೆ ಅಚ್ಚಾದ ಜಾಮಿತಿಕ ಆಕೃತಿಗಳಲ್ಲಿ ಬಣ್ಣ ತುಂಬಿ ದವಾಗಿ ಕಾಣಿಸುವಂತೆ ಅಲಂಕರಿಸಿದ ಆಕೃತಿಗಳು, ರತ್ನಗಂಬಳಿಗಳ ಮೇಲಿನ ಂಕಾರಗಳು ಅಲಂಕಾರಯುಕ್ತ ಗೋಡೆ, ಕಟ್ಟಿಗೆ, ಕಲ್ಲು, ತಾಮ್ರ ಹಿತ್ತಾಳೆ, ಚಿನ್ನ, ಬೆಳ್ಳಿ ದಲಾದವುಗಳ ಮೇಲಿನ ಅಲಂಕಾರಗಳೆಲ್ಲವೂ ನಕ್ಷೆಗಳಾಗಿವೆ.

ನಕ್ಷಾ ಚಿತ್ರಲೇಖನದಲ್ಲಿ ಸಾಮಾನ್ಯವಾಗಿ ಸಂಪೂರ್ಣ ಸ್ಥಳವ್ಯಾಪಕ(All over ern), ವಿಶಿಷ್ಟಸ್ಥಳ ವ್ಯಾಪಕ(Panels) ಮತ್ತು ಅಂಚುಗಳು(Border) ಎಂದು ರು ವರ್ಗಗಳನ್ನು ವಿಂಗಡಿಸಲಾಗಿದೆ.

ಜಾಮಿತಿಕ ಆಕೃತಿಗಳಲ್ಲಿ ಜಾಳಿಗೆಯನ್ನು ಹೆಣೆದಂತೆ ಅಡ್ಡ ಉದ್ದ ರೇಖೆಗಳನ್ನೆಳೆದು ಂಕರಿಸುವ ನಕ್ಷೆಗಳ ಚಿತ್ರಣವು ಪ್ರಾರಂಭಿಕ ಅಭ್ಯಾಸಕ್ಕೆ ಅತ್ಯುತ್ತಮ ಮಾದರಿಯಾಗಿದೆ. (Square), ಚೌಕವಜ್ರಾಕೃತಿ(Square Diamond) ಹಾಗೂ ಸಮಭುಜ ತ್ರಿಭುಜ uilateral Triangle)ಮುಂತಾದ ಆಕೃತಿಗಳನ್ನು ಜಾಳಿಗೆಯನ್ನು ಹೆಣೆಯಲು ಯೋಗಿಸಬಹುದು.

ನಕ್ಷಾ ಚಿತ್ರಲೇಖನಕ್ಕೆ ತೊಡಗುವದಕ್ಕೆ ಮೊದಲು ನಕ್ಷಾಚಿತ್ರಲೇಖನದ ಮೂಲ ಗಳನ್ನು ತಿಳಿದುಕೊಂಡಿರಬೇಕಾಗುತ್ತದೆ.

ಸಮವಿಂಗಡಣೆ(Even Distribution), ಪುನರಾವರ್ತನೆ(Repetation), ಸಮದರ್ಶನ (Symmetry), ಸಮತೋಲನ(Balance), ಛಂದೋಬದ್ಧತೆ(Rhythm) ವಿಷಮ(Contrast), ಕಿರಣ ವಿಸ್ತಾರ(Radiation), ಅದಲು-ಬದಲು(Alternation), ತಿರುವು-ಮುರುವು (Counterchange), ಅಂತರಭೇದ(Interchange) ಅಂಶಾಚ್ಛಾದನ (Over lapping), ತಳಕು(Inter lacing), ಸರಪಳಿ(Chain) ವೈವಿಧ್ಯತೆ(Variety), ಸ್ಥಬ್ಧಚಾಲನೆ (Repose) ದೃಢತೆ(Stability) ಮೇಚ್ಛಾದನೆ(Superposition) ಹಾಗೂ ಸ್ಪರ್ಶಮಿಲನ (Tangential Junction)ಮುಂತಾಗಿ ನಕ್ಷಾಚಿತ್ರಲೇಖನ ಮೂಲತತ್ವಗಳಿದ್ದು ಅವುಗಳ ವಿವರಣಾತ್ಮಕ ಅಭ್ಯಾಸ ಅವಶ್ಯವಾಗಿದೆ. ನಕ್ಷೆಗಳಲ್ಲಿ ನೈಸರ್ಗಿಕ ವಸ್ತುಗಳನ್ನು ಚಿತ್ರಿಸುವದಕ್ಕೆ ಸಾಂಪ್ರದಾಯಕ ರೀತಿ(Conventional Treatment) ಎಂದು ಕರೆಯುತ್ತಾರೆ. ಸಾಂಪ್ರದಾಯಕ ರೀತಿಯಲ್ಲಿ 'ಬಹಿರ್ವಕ್ರ' ಮತ್ತು 'ಅಂತರ್ವಕ್ರ'ಗಳೆಂದು ರೇಖಾ ಸಂಕೇತಗಳುಂಟು.

ಬಣ್ಣಗಳು

ಚಿತ್ರಲೇಖನ ಕಲೆಯಲ್ಲಿ ಬಣ್ಣವು ಬಹುಮುಖ್ಯವಾದ ವಸ್ತುವಾಗಿದೆ. ಪ್ರತಿಯೊಂದು ಬಣ್ಣವೂ ವಿಶಿಷ್ಟ ಗುಣಸ್ವಭಾವವನ್ನು ಹೊಂದಿರುವದರಿಂದ ಬಣ್ಣದ ವಿಷಯವಾಗಿ ಆಳವಾದ ಅಭ್ಯಾಸವನ್ನು ಮಾಡಬೇಕಾಗುತ್ತದೆ. ಬಣ್ಣದ ಉತ್ಪತ್ತಿ, ಬೆಳವಣಿಗೆಗಳನ್ನು ಕುರಿತು ಅಭ್ಯಾಸ ಮಾಡುವದರಿಂದ ಬಣ್ಣದ ವಿಷಯದಲ್ಲಿ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಲು ಸಾಧ್ಯವಾದೀತು.

ಜನಸಾಮಾನ್ಯರು ಹಸಿರು, ನೀಲಿ, ಕೆಂಪು ,ಹಳದಿ, ಕೇಸರಿ, ಊದು ಹಾಗೂ ಶಾಮವರ್ಣಗಳು ಮೂಲ ಬಣ್ಣಗಳೆಂದು ತಿಳಿದಿರುತ್ತಾರೆ. ಆದರೆ ಚಿತ್ರಕಲೆಯಲ್ಲಿ ನೀಲಿ, ಹಳದಿ ಮತ್ತು ಕೆಂಪು ಮೂರು ಮಾತ್ರ ಮೂಲಬಣ್ಣಗಳೆಂದು ಪರಿಗಣಿಸಲಾಗುತ್ತದೆ. ಮೂಲ ಬಣ್ಣಗಳನ್ನು ಪ್ರಥಮ ವರ್ಣಗಳೆಂದೂ ಕರೆಯುತ್ತಾರೆ. ಹಸಿರು, ಕೇಸರಿ ಮತ್ತು ಶಾಮ ವರ್ಣಗಳು ಪ್ರಥಮ ವರ್ಣಗಳ ಮಿಶ್ರಣವಾಗಿರುತ್ತವೆ. ಇಂಥ ಹಲವಾರು ಮಿಶ್ರ ವರ್ಣಗಳಿಗೆ ಪ್ರಥಮ ವರ್ಣಗಳು ಜನಕ ವರ್ಣಗಳಾಗಿರುತ್ತವೆ ಬಣ್ಣಗಳ ಅಭ್ಯಾಸಕ್ಕೆ ಅನುಕೂಲವಾಗಲೆಂದು ಪ್ರಥಮವರ್ಗ(Primary), ದ್ವಿತೀಯ ವರ್ಗ(Secondary) ತೃತೀಯವರ್ಗ(Teritory) ಮತ್ತು ಚತುರ್ಥ ವರ್ಗ(Quarternery)ಗಳೆಂದು ನಾಲ್ಕು ವರ್ಗಗಳೆಂದು ವಿಂಗಡಿಸಲಾಗಿದೆ.

೧. ನೀಲಿ, ಕೆಂಪು, ಹಳದಿ ಪ್ರಥಮ ವರ್ಗದ ಬಣ್ಣಗಳು

ಎರಡು ಪ್ರಥಮವರ್ಗ ಬಣ್ಣಗಳನ್ನೂ ಸಮಪ್ರಮಾಣದಲ್ಲಿ ಬೆರೆಸಿದಾಗ ದ್ವಿತೀಯ ವರ್ಗದ ವರ್ಣಗಳು ಹುಟ್ಟಿಕೊಳ್ಳತ್ತವೆ.

ಉದಾ:

- ನೀಲಿ ಮತ್ತು ಕೆಂಪು ಬಣ್ಣಗಳ ಸಮಪ್ರಮಾಣದ ಮಿಶ್ರಣದಿಂದ ಜಾಂಬಳಿ(ಶಾಮ) ಬಣ್ಣವು ಹುಟ್ಟಿಕೊಳ್ಳುತ್ತದೆ.

- ಕೆಂಪು ಮತ್ತು ಹಳದಿ ಬಣ್ಣಗಳ ಸಮಪ್ರಮಾಣದ ಮಿಶ್ರಣದಿಂದ ಕೇಸರಿ ಬಣ್ಣವು ಹುಟ್ಟಿಕೊಳ್ಳುತ್ತದೆ.
- ಹಳದಿ ಮತ್ತು ನೀಲಿ ಬಣ್ಣಗಳ ಸಮಪ್ರಮಾಣದ ಮಿಶ್ರಣದಿಂದ ಹಸಿರು ಬಣ್ಣವು ಹುಟ್ಟಿಕೊಳ್ಳುತ್ತದೆ.

೨. ಜಾಂಬಳಿ, ಕೇಸರಿ ಮತ್ತು ಹಸಿರು ಬಣ್ಣಗಳು ದ್ವಿತೀಯ ವರ್ಗದ ಬಣ್ಣಗಳು.

ಎರಡು ದ್ವಿತೀಯ ವರ್ಗದ ಬಣ್ಣಗಳ ಸಮಪ್ರಮಾಣದ ಮಿಶ್ರಣದಿಂದ ತೃತೀಯ ವರ್ಗದ ಬಣ್ಣಗಳು ಹುಟ್ಟಿಕೊಳ್ಳುತ್ತವೆ.

ಉದಾ:

- ಜಾಂಬಳಿ ಮತ್ತು ಕೇಸರಿ ಬಣ್ಣಗಳ ಸಮಪ್ರಮಾಣದ ಮಿಶ್ರಣದಿಂದ ಕಂದು ಗೆಂಪು ಬಣ್ಣವು ಹುಟ್ಟಿಕೊಳ್ಳುತ್ತದೆ.
- ಕೇಸರಿ ಮತ್ತು ಹಸಿರು ಬಣ್ಣಗಳ ಸಮಪ್ರಮಾಣದ ಮಿಶ್ರಣದಿಂದ ಇಪ್ಪೆ ಎಲೆ ಬಣ್ಣವು ಹುಟ್ಟಿಕೊಳ್ಳುತ್ತದೆ.
- ಹಸಿರು ಮತ್ತು ಜಾಂಬಳಿ ಬಣ್ಣಗಳ ಸಮಪ್ರಮಾಣದ ಮಿಶ್ರಣದಿಂದ ಪಾಟಿಯ ಬಣ್ಣವು ಹುಟ್ಟಿಕೊಳ್ಳುತ್ತವೆ.

೩. ಕಂದುಗೆಂಪು, ಇಪ್ಪೆ ಎಲೆ ಬಣ್ಣ ಹಾಗೂ ಪಾಟಿಯ ಬಣ್ಣಗಳು ತೃತೀಯ ವರ್ಗದ ಬಣ್ಣಗಳು

ಹೀಗೆಯೇ ತೃತೀಯ ವರ್ಗದ ಎರಡು ಬಣ್ಣಗಳ ಸಮಪ್ರಮಾಣದ ಮಿಶ್ರಣದಿಂದ ಚತುರ್ಥವರ್ಗದ ವರ್ಣಗಳು ಹುಟ್ಟಿಕೊಳ್ಳುತ್ತವೆ. ಇವುಗಳನ್ನು ಮಿಶ್ರವರ್ಣಗಳೆಂದೂ ಕರೆಯುತ್ತಾರೆ ಮಿಶ್ರವರ್ಣಗಳು ಸಾವಿರಾರು ಮುಂದೆ ಹೆಸರಿಸದಷ್ಟು ವರ್ಣಗಳ ಉತ್ಪತ್ತಿಯಾಗುತ್ತ ಹೋಗುತ್ತದೆ.

ಬಿಳಿ ಮತ್ತು ಕಪ್ಪು(Black & White) ಬಣ್ಣಗಳು ಎಲ್ಲ ಬಣ್ಣಗಳ ನೆಳಲು ಬೆಳಕುಗಳನ್ನು ವಿಂಗಡಿಸುವ ಬಣ್ಣಗಳಾಗಿರುವದರಿಂದ ಅವುಗಳನ್ನು ಬಣ್ಣಗಳೆಂದು ಪರಿಗಣಿಸುವದಿಲ್ಲ.

ವರ್ಣಗಳಲ್ಲಿ 'ಪ್ರಖರ ವರ್ಣಗಳು' ಮತ್ತು 'ಸೌಮ್ಯವರ್ಣ'ಗಳೆಂದು ಎರಡು ಬಗೆಯ ಬಣ್ಣಗಳನ್ನು ವಿಂಗಡಿಸಲಾಗಿದೆ. ಕಣ್ಣಿಗೆ ಚುಚ್ಚುವಂತೆಯೂ ಬಿಸಿಯಾಗಿಯೂ ಕಾಣಿಸುವ ಬಣ್ಣಗಳು ಪ್ರಖರ ವರ್ಣಗಳು(Warm Colours) ಕಣ್ಣಿಗೆ ಸೌಮ್ಯವಾಗಿಯೂ ತಂಪಾಗಿಯೂ ಕಾಣಿಸುವ ವರ್ಣಗಳು ಸೌಮ್ಯ ವರ್ಣಗಳು(Cold Colours)

ಉದಾ:-

೧. ಕೆಂಪು, ಕೇಸರಿ ಮತ್ತು ಹಳದಿ ವರ್ಣಗಳು ಪ್ರಖರ ವರ್ಣಗಳು

೨. ನೀಲಿ, ಜಾಂಬಳಿ ಮತ್ತು ಪಾಟಿಯ ವರ್ಣಗಳು ಸೌಮ್ಯ ವರ್ಣಗಳು

ಪಾರದರ್ಶಕ ವರ್ಣಗಳು(Transparent Colours)

ಗಾಜಿನಂತೆ ಹಿಂಭಾಗವನ್ನೂ ತೋರಿಸುವ ವರ್ಣಗಳು ಪಾರದರ್ಶಕ ವರ್ಣಗಳು. ಸಾಮಾನ್ಯವಾಗಿ ವರ್ಣಗಳೆಲ್ಲವೂ ಪಾರದರ್ಶಕ ವರ್ಣಗಳೇ ಆಗಿವೆ ಯಾವುದೇ ವರ್ಣದಲ್ಲಿ ನೀರನ್ನು ಬೆರೆಸಿ ಕಾಗದದ ಮೇಲೆ ಬಳಿದಾಗ ವರ್ಣ ಪಾರದರ್ಶಿಕೆಯನ್ನು ಕಾಣಬಹುದು.

ಅಪಾರ ದರ್ಶಕ ವರ್ಣಗಳು(Opaque Colours)

ಬಿಳಿಯ ಬಣ್ಣವು ಅಪಾರದರ್ಶಕ ವರ್ಣವಾಗಿದೆ. ಪಾರದರ್ಶಕ ವರ್ಣದಲ್ಲಿ ಬಿಳಿಯ ಬಣ್ಣವನ್ನು ಬೆರೆಸುವದರಿಂದ ಅಪಾರದರ್ಶಕ ವರ್ಣಗಳು ಹುಟ್ಟಿಕೊಳ್ಳುತ್ತವೆ. ಬಣ್ಣದ ಪುಡಿಯಲ್ಲಿ ಅಂಟಿನ(ಗೋಂದು) ನೀರು, ವಜ್ರ(ಮೀನಸರಿ), ಗ್ಲಿಸರೀನ್ ಮುಂತಾದವುಗಳನ್ನು ಬೆರೆಸುವದರಿಂದಲೂ ಅಪಾರದರ್ಶಕ ವರ್ಣಗಳು ಸಿದ್ಧವಾಗುತ್ತವೆ.

ವಿರೋಧ ವರ್ಣಗಳು(Contrasting Colours)

ಪ್ರಥಮ ವರ್ಗದ ಮೂರೂ ಬಣ್ಣಗಳು ಒಂದಕ್ಕೊಂದು ವಿರೋಧಿ ಬಣ್ಣಗಳಾಗಿವೆ. ಅದರಂತೆ-ಕೆಂಪು-ಕಪ್ಪು, ಹಸಿರು-ಕೆಂಪು, ಕಪ್ಪು-ಹಳದಿ, ಹಾಗೂ ಕಪ್ಪು-ಬಿಳಿ ಬಣ್ಣಗಳೂ ಸಹ ಪರಸ್ಪರ ವಿರೋಧಿ ವರ್ಣಗಳಾಗಿವೆ.

ಪೂರಕ ವರ್ಣಗಳು(Complementary Colours)

ಯಾವುದಾದರೂ ಒಂದು ವಿರೋಧ ಬಣ್ಣಕ್ಕೆ ಬೇರೆ ಬೇರೆ ಎರಡು ಮೂಲ ಬಣ್ಣಗಳ ಮಿಶ್ರಣದಿಂದ ಉಂಟಾದ ದ್ವಿತೀಯ ವರ್ಗದ ಬಣ್ಣವು ಪೂರಕ ವರ್ಣವಾಗುತ್ತದೆ.

ಉದಾ:

೧. ಕೇಸರೀ ದ್ವಿತೀಯ ವರ್ಗದ ಬಣ್ಣವು ಪ್ರಥಮ ವರ್ಗದ ನೀಲಿ ಬಣ್ಣಕ್ಕೆ ಪೂರಕ ಬಣ್ಣವಾಗಿದೆ.
೨. ಹಸಿರು ದ್ವಿತೀಯ ವರ್ಗದ ಬಣ್ಣವು ಪ್ರಥಮ ವರ್ಗದ ಕೆಂಪು ಬಣ್ಣಕ್ಕೆ ಪೂರಕ ಬಣ್ಣವಾಗಿದೆ.
೩. ಜಾಂಬಳಿ ದ್ವಿತೀಯ ವರ್ಗದ ಬಣ್ಣವು ಪ್ರಥಮ ವರ್ಗದ ಹಳದಿ ಬಣ್ಣಕ್ಕೆ ಪೂರಕ ಬಣ್ಣವಾಗಿದೆ.

ಸಾದೃಶ್ಯ ವರ್ಣಗಳು(Anelogous Colours)

ಎರಡು ದ್ವಿತೀಯ ವರ್ಗದ ಬಣ್ಣಗಳಿಗೆ ಅವುಗಳ ಜನಕ ವರ್ಣವು ಸಾಮಾನ್ಯವಾದ(Common) ಮೂಲ ವರ್ಣದ ಜೊತೆಗೆ ಹೊಂದಿಕೊಳ್ಳುವದರಿಂದ ಅಂಥ ವರ್ಣಗಳನ್ನು ಸಾದೃಶ್ಯವರ್ಣಗಳೆಂದು ಕರೆಯುತ್ತಾರೆ.

೧. ಹಸಿರು ಹಾಗೂ ಜಾಂಬಳಿ ಎರಡು ದ್ವಿತೀಯ ವರ್ಗದ ಬಣ್ಣಗಳು. ನೀಲಿ ಬಣ್ಣವು ಈ ಎರಡೂ ಬಣ್ಣಗಳಲ್ಲಿ ಬೆರೆತಿರುವದರಿಂದ ಈ ಎರಡೂ ಬಣ್ಣಗಳಿಗೆ ನೀಲಿ ಬಣ್ಣವು ಸಾಮಾನ್ಯವಾಗಿದೆ.

೨. ಕೇಸರಿ ಹಾಗೂ ಜಾಂಬಳಿ ಎರಡು ದ್ವಿತೀಯ ವರ್ಗದ ಬಣ್ಣಗಳು ಕೆಂಪು ಬಣ್ಣವು ಈ ಎರಡೂ ಬಣ್ಣಗಳಲ್ಲಿ ಬೆರೆತಿರುವದರಿಂದ ಈ ಎರಡೂ ಬಣ್ಣಗಳಿಗೆ ಕೆಂಪು ಬಣ್ಣವು ಸಾಮಾನ್ಯವಾಗಿದೆ.

೩. ಹಸಿರು ಮತ್ತು ಕೇಸರಿ ಎರಡು ದ್ವಿತೀಯ ವರ್ಗದ ಬಣ್ಣಗಳು ಹಳದಿ ಬಣ್ಣವು ಈ ಎರಡೂ ಬಣ್ಣಗಳಲ್ಲಿ ಬೆರೆತಿರುವದರಿಂದ ಈ ಎರಡೂ ಬಣ್ಣಗಳಿಗೆ ಹಳದಿ ಬಣ್ಣವು ಸಾಮಾನ್ಯವಾಗಿದೆ.

ಇದರಿಂದ ತಿಳಿಯುವದೇನೆಂದರೆ-

(ಅ) ಹಸಿರು, ಜಾಂಬಳಿ ಹಾಗೂ ನೀಲಿ ಬಣ್ಣಗಳು ಸಾದೃಶ್ಯವರ್ಣಗಳು.

(ಬ) ಕೇಸರಿ, ಜಾಂಬಳಿ ಹಾಗೂ ಕೆಂಪು ಬಣ್ಣಗಳು ಸಾದೃಶ್ಯ ವರ್ಣಗಳು.

(ಕ) ಹಸಿರು, ಕೇಸರಿ .ಹಾಗೂ ಹಳದಿ ಬಣ್ಣಗಳು ಸಾದೃಶ್ಯ ವರ್ಣಗಳು.

ವರ್ಣಯೋಜನೆಯಲ್ಲಿ ಬಳಸುವ ಕೆಲವು ತಾಂತ್ರಿಕ ಪದಗಳು-

೧. ಛಾಯೆ(Tone)

ಬಣ್ಣಗಳ ಏರಿಳಿತಗಳನ್ನು ಛಾಯೆ ಇಲ್ಲವೆ ಟೋನ್ ಎನ್ನುವರು. ದಟ್ಟಛಾಯೆ, ತಿಳಿಛಾಯೆ ಮುಂತಾಗಿ ಏರಿಳಿತಗಳಾಗುತ್ತವೆ.

೨. ತೆಳುವರ್ಣ (Tint)

ಯಾವುದಾದರೂ ಒಂದು ಬಣ್ಣದಲ್ಲಿ ಬಿಳಿಬಣ್ಣವನ್ನು ಬೆರೆಸುವದರಿಂದ ಉಂಟಾಗುವ ಬಣ್ಣವನ್ನು ತೆಳುವರ್ಣ ಇಲ್ಲವೆ ಟಿಂಟ್ ಎನ್ನುತ್ತಾರೆ.

೩. ದಟ್ಟ ವರ್ಣ (Shades)

ಕಪ್ಪು ಬಣ್ಣದಿಂದ ಕೂಡಿದ ವರ್ಣಗಳು.

೪. ದಟ್ಟ ಛಾಯೆ(Shaded Tint)

ಯಾವುದಾದರೂ ಒಂದು ಬಣ್ಣದಲ್ಲಿ ಕಪ್ಪು ಬಣ್ಣವನ್ನು ಬೆರೆಸುವದರಿಂದ ಉಂಟಾಗುವ ಬಣ್ಣಗಳಿಗೆ ದಟ್ಟಛಾಯೆ ಎನ್ನುವರು.

೫. ಸಂಕರವರ್ಣ(Hue)

ಬೇರೆ ಬೇರೆ ರೀತಿಯ ಬಣ್ಣಗಳ ಮಿಶ್ರಣ ಮಧ್ಯಭಾಗವನ್ನು ಸಂಕರವರ್ಣ ಎನ್ನುವರು.

೬. ತರತಮ ವರ್ಣ(Value)

ಯಾವುದಾದರೂ ಒಂದು ಇಲ್ಲವೆ ಹಲವು ವರ್ಣಗಳಲ್ಲಿ ಏರಿಳಿತವನ್ನು ತೋರಿಸುವದನ್ನು ತರತಮ ವರ್ಣವೆನಿಸುವದು. ಒಂದೇ ವರ್ಣದಲ್ಲಿ ಬಿಳಿ-ಕಪ್ಪು ಬಣ್ಣಗಳನ್ನು ಬೆರೆಸುವುದರಿಂದ ವರ್ಣ ತಾರತಮ್ಯವನ್ನು ತೋರಿಸಬಹುದು.

ಕಲಾ ಶಾಲೆಗಳಲ್ಲಿ ಕಲಿಯುವ ಪಾಠಗಳು

ಪ್ರಾರಂಭಿಕ ಪಾಠಗಳನ್ನು ಅಭ್ಯಸಿಸಿದ ನಂತರ ಸ್ತಬ್ಧ ಚಿತ್ರ(still life), ಭಾವಚಿತ್ರ (Portraits), ಚಿತ್ರಸಂಯೋಜನೆ(Composition), ಅಂಗ ರಚನಾ ಶಾಸ್ತ್ರ(Anatomy) ಪ್ರತಿಮಾ ಚಿತ್ರಣ(Antique) ನಿಸರ್ಗ ರಮಣೀಯ ದೃಶ್ಯಚಿತ್ರಣ(Landscape) ಸಾಂಪ್ರದಾಯಕ (Traditional) ಚಿತ್ರ ಮುಂತಾಗಿ ಅನೇಕ ವಿಷಯಗಳನ್ನು ಕಲಾಶಾಲೆಗಳಲ್ಲಿ ಕಲಿಸಲಾಗುತ್ತದೆ. ಈ ಎಲ್ಲ ವಿಷಯಗಳ ಸಂಕ್ಷಿಪ್ತ ಪರಿಚಯವನ್ನು ಈ ಕೆಳಗೆ ಕಾಣಿಸಲಾಗಿದೆ.

ಕಲಾಭ್ಯಾಸ ಕ್ರಮದಲ್ಲಿ 'ಕಲಿಸುವುದಕ್ಕಿಂತ ಕಲಿಯುವುದು ಹೆಚ್ಚಾಗಿರುತ್ತದೆ- ಎಂಬುದನ್ನು ಕಲಾಭ್ಯಾಸಿಗಳು ತಿಳಿದಿರಬೇಕಾದುದು ಅವಶ್ಯವಾಗಿದೆ. ಮೇಲ್ಕಾಣಿಸಿದ ವಿಷಯಗಳ ಅಭ್ಯಾಸದೊಂದಿಗೆ ಕರಡು ಚಿತ್ರಣದ(Sketeling) ಸತತಾಭ್ಯಾಸವೂ ಅತ್ಯವಶ್ಯವಾಗಿದೆ. ಕರಡು ಚಿತ್ರಣದ ಅಭ್ಯಾಸದಿಂದ ಚಿತ್ರ ಸಂಯೋಜನೆಗೆ ಅವಶ್ಯವಾದ ಪಶು-ಪಕ್ಷಿ, ಮಾನವಾಕೃತಿಗಳು, ಗಿಡ-ಮರಗಳು ಮುಂತಾದವುಗಳ ಪ್ರಮಾಣಬದ್ಧ ಚಿತ್ರಣಕ್ಕೆ ಹೆಚ್ಚು ಪ್ರಯೋಜನವಾಗುತ್ತದೆ. ಮಾನವರ ಪ್ರತಿಕ್ಷಣದ ಚಲನವಲನೆಗಳು, ಪಶುಪಕ್ಷಿಗಳ ಚಲನವಲನಗಳೇ ಮುಂತಾದವುಗಗಳನ್ನು ಕರಡು ಚಿತ್ರಣದಿಂದಲೇ ತಿಳಿಯಬೇಕಾಗುತ್ತದೆ. ಕಲಾಭ್ಯಾಸಿಗಳು ಪ್ರತಿನಿತ್ಯ ಕರಡು ಚಿತ್ರಗಳನ್ನು ರಚಿಸುವ ಅಭ್ಯಾಸವನ್ನು ತಪ್ಪದೇ ಮಾಡಬೇಕಾಗುತ್ತದೆ.

ಪ್ರತಿಮಾ ಚಿತ್ರಣ (Antique Study)

ಮಾನವ ದೇಹದ ಕಣ್ಣು, ಕಿವಿ, ಕಾಲು, ಬಾಯಿ, ಮೂಗು, ಹಸ್ತ ಮುಂತಾದ ಅಂಗಗಳ ಪ್ರತ್ಯೇಕವಾದ ಪ್ರತಿಮೆಗಳನ್ನು ಎದುರಿಗಿಟ್ಟುಕೊಂಡು ಬೇರೆ ಬೇರೆ ಕೋನಗಳಿಂದ ಕಾಣುವ ರೀತಿಯಲ್ಲಿ ಅಭ್ಯಾಸ ಮಾಡುವದರಿಂದ ಪ್ರತಿಯೊಂದು ಅಂಗದ ರಚನೆಯ ತಿಳುವಳಿಕೆಯುಂಟಾಗುತ್ತದೆಯಲ್ಲದೇ ಬೇರೆ ಬೇರೆ ಕೋನಗಳಲ್ಲಿ ಅಭ್ಯಾಸ ಮಾಡುತ್ತಿರುವ ಅಂಗದ ರೇಷೆಗಳ ಚಲನವಲನಗಳ ಕಲ್ಪನೆಯೂ ಬರುತ್ತದೆ. ನಂತರ ಕೇವಲ ತಲೆಯ ಪ್ರತಿಮೆ, ಅರ್ಧಾಕೃತಿಗಳ(Bust) ಪ್ರತಿಮೆಗಳು, ಪೂರ್ಣಾಕಾರದ ಪ್ರತಿಮೆಗಳನ್ನು ಬೇರೆ ಬೇರೆ ಕೋನಗಳಿಂದ ಅಭ್ಯಸಿಸಿದಾಗ ಪೂರ್ಣ ಮಾನವಾಕೃತಿಯ ಪ್ರತಿಯೊಂದು ಅಂಗದ, ಬೇರೆ ಬೇರೆ ಭಂಗಿಗಳ ಅಭ್ಯಾಸವಾಗುತ್ತದೆ. ಇದನ್ನೇ ಪ್ರತಿಮಾ ಚಿತ್ರಣ (Antique) ಎಂದು ಕರೆಯಲಾಗುತ್ತದೆ. ಪ್ರತಿಮೆಗಳು ನಿರ್ಜೀವಿಗಳಾದುದರಿಂದ ಪ್ರಪ್ರಥಮವಾಗಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಅವುಗಳ ಚಿತ್ರಣದಲ್ಲಿ ಯಾವ ತೊಡಕೂ ಉಂಟಾಗುವುದಿಲ್ಲ. ಎದುರಿಗಿರುವ ಪ್ರತಿಮೆಯ ಬಾಹ್ಯ ರೇಖಾಕೃತಿಯ ರಚನೆಯ

ನಂತರ ಪ್ರತಿಮೆಯ ಮೇಲಿರುವ ನೆರಳು-ಬೆಳಕುಗಳನ್ನು ಚಿತ್ರಿಸಿ ಚಿತ್ರವನ್ನು ಪೂರ್ಣಗೊಳಿಸಬೇಕಾಗುತ್ತದೆ. ಹೀಗೆ ಛಾಯಾವರಣವನ್ನು ತುಂಬುವಾಗ ಪ್ರತಿಮೆಯ ಬಣ್ಣ ಬಿಳಿಯದೋ, ಕಪ್ಪಾಗಿದೆಯೋ ಎಂಬುದನ್ನು ಗಮನದಲ್ಲಿಟ್ಟುಕೊಂಡು ದಟ್ಟನೆರಳು, ನೆರಳು, ಮಧ್ಯವಿನ್ಯಾಸ, ಬೆಳಕು, ಮಿಂಚುವ ಭಾಗಗಳು ಹಾಗೂ ಪ್ರತಿಫಲಿತ ಬೆಳಕುಗಳನ್ನು ರಚಿಸಿದಾಗ ವಾಸ್ತವ ಪ್ರತಿಮೆಯ ಪ್ರತಿರೂಪ ಚಿತ್ರಣವಾಗುತ್ತದೆ. ಚಲನವಲನಗಳಿಲ್ಲದ ನಿರ್ಜೀವ ಪ್ರತಿಮೆಗಳ ಅಭ್ಯಾಸದ ಮುಂದಿನ ಹಂತದ ಜೀವಂತ ವ್ಯಕ್ತಿಗಳ ಚಿತ್ರಣದ ಅಭ್ಯಾಸ ಮಾಡಲು ಸುಲಭವಾಗುತ್ತದೆಯಾದ್ದರಿಂದ ಅಭ್ಯಾಸ ಕ್ರಮದಲ್ಲಿ ಪ್ರತಿಮಾ ಚಿತ್ರಣವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಸ್ತಬ್ಧಚಿತ್ರ ಅಥವಾ ಸ್ಟಿಲ್ ಲೈಫ್ (Still - life)

ಚಿಕ್ಕ ಚಿಕ್ಕ ವಸ್ತುಗಳನ್ನು ಒಂದು ಮೇಜಿನ ಮೇಲೆ ಜೋಡಿಸಿಟ್ಟು ಆ ವಸ್ತುಗಳ ವರ್ಣ ಚಿತ್ರವನ್ನು ರಚಿಸುವುದೇ ಸ್ತಬ್ಧ ಚಿತ್ರ ಇಲ್ಲವೆ ಸ್ಟಿಲ್‌ಲೈಫ್ ಎನಿಸುತ್ತದೆ. ಸ್ತಬ್ಧ ಚಿತ್ರಗಳನ್ನು ರಚಿಸಲು ಸಾಮಾನ್ಯವಾಗಿ ಗಾಜಿನ ಇಲ್ಲವೇ ಲೋಹದ ಗ್ಲಾಸುಗಳು, ಗಾಜಿನ ಬಣ್ಣ ಬಣ್ಣದ ಶೀಶೆಗಳು, ಬಣ್ಣ ಬಣ್ಣದ ಪಿಂಗಾಣಿಗಳು, ಹೂವು, ಹಣ್ಣು ಕಾಯಿ ಗುಡ್ಡೆಗಳು, ಬ್ರೆಡ್, ಮೊಟ್ಟೆ, ಚಾಕು ಮುಂತಾದ ವಸ್ತುಗಳನ್ನು ಮೇಜಿನ ಮೇಲೆ ಜೋಡಿಸಿಡಲಾಗುತ್ತದೆ. ಸ್ತಬ್ಧ ಚಿತ್ರಗಳು ಸಾಮಾನ್ಯರ ಅಭಿರುಚಿಗೆ ತಕ್ಕಂತೆ- ಅವರ



೩೪) ಡಬ್ಲ್ಯೂ. ಸಿ. ಹೀಡಾ

ಮೆಚ್ಚುಗೆಗಳಿಸುವುದಕ್ಕಾಗಿಯೇ ಚಿತ್ರಿಸಲ್ಪಡುತ್ತವೆ ಎಂದು ಹೇಳಬಹುದಾದರೂ ಚಿತ್ರಕಲಾಭ್ಯಾಸಿಗಳಿಗೆ ಇದರಿಂದ ಬಹುವಾದ ಪ್ರಯೋಜನಗಳಿವೆ. ಮುಖ್ಯವಾಗಿ ವಸ್ತುಗಳ ಚಲಿಸುವಿಕೆ ಇಲ್ಲದಿರುವುದರಿಂದಲೂ ಕಲಾವಿದನನ್ನು ತೊಂದರೆಗೀಡುಮಾಡುವ ಹೊರಗಡೆಯಲ್ಲಿರುವ ಬೆಳಕಿನ ಬದಲಾವಣೆಗಳು ಇಲ್ಲದಿರುವದರಿಂದಲೂ ಕಲಾವಿದನು ತನ್ನ ಕೊಠಡಿಯಲ್ಲಿಯೇ ಕುಳಿತು ಪ್ರಕ್ಷುಬ್ಧನಾಗದೇ ಹಾಯಾಗಿ ತನ್ನ ಚಿತ್ರಣ ಕಾರ್ಯವನ್ನು ಮಾಡಲು, ಮುಂದುವರಿಸಲು ಹೆಚ್ಚು ಅನುಕೂಲವಾಗುತ್ತದೆ. ಭಾವುಕರಾದ ಕಲಾವಿದರಿಗೆ ಸ್ತಬ್ಧಚಿತ್ರವು ಬಹುಮಹತ್ವದ ಅಭ್ಯಾಸ ಯೋಗ್ಯವಾದ ಕಲಾಪ್ರಕಾರವಾಗಿದೆ.

ಈ ಸ್ತಬ್ಧಚಿತ್ರ ಪ್ರಕಾರವು ಕ್ರಿ. ಶ. ೧೫ನೆಯ ಶತಮಾನದಿಂದಲೂ ಬೆಳೆದುಬಂದ ಪ್ರಕಾರವಾಗಿದ್ದು ಆ ಕಾಲದಲ್ಲಿ ಚಿತ್ರಿತವಾದ ಸ್ತಬ್ಧಚಿತ್ರಗಳಲ್ಲಿ ಅನೇಕ ಫ್ಲೆಮಿಷ್ ಮತ್ತು ಇಟಾಲಿಯನ್ ಕಲಾಕೃತಿಗಳು ಮುಖ್ಯಾವಾಗಿವೆ. ಅವುಗಳಲಲ್ಲಿ ಸೂಕ್ಷ್ಮಾತಿಸೂಕ್ಷ್ಮ ಹಾಗೂ ವಿವರಣಾತ್ಮಕ್ರವಾಗಿ ವರ್ಣರಂಜಿತ ಹೂವು ಮತ್ತು ಹಣ್ಣುಗಳನ್ನು ಚಿತ್ರಿಸಲಾಗಿದೆ. ಆದರೂ ಕ್ರಿ.ಶ. ೧೭ನೆಯ ಶತಮಾನದವರೆಗೆ ಸ್ತಬ್ಧಚಿತ್ರವೂ ಸಹ ವರ್ಣಚಿತ್ರಕಲೆಯ ಒಂದು ಶಾಖೆಯೆಂದು ಪರಿಗಣಿಸಲ್ಪಟ್ಟಿರಲಿಲ್ಲ. ಇಂದು ಚಿಕ್ಕಪುಟ್ಟ "ಅಗಣ್ಯ ಕಲಾ ಪ್ರವೀಣರ" ಪಟ್ಟಿಯಲ್ಲಿರುವ ಅನೇಕ ಡಚ್ ಮತ್ತು ಫ್ಲೆಮಿಷ್ ವರ್ಣಚಿತ್ರಕಲಾವಿದರು ಬಹುಸಂಖ್ಯೆಯ ಸ್ತಬ್ಧಚಿತ್ರಗಳನ್ನು ರಚಿಸಿದ್ದರು. ಇವೇ ಕೆಲವು ಕಲಾವಿದರು ಆಶ್ಚರ್ಯಕರವಾದ ಬುದ್ಧಿವಂತಿಕೆಯಿಂದಲೂ ಕಣ್ಣುಕೋರೈಸುವ ಸೂಕ್ಷ್ಮಾತಿಸೂಕ್ಷ್ಮವಾದ ವಿವರಗಳಿಂದಲೂ ಕೂಡಿದ ಹೂವುಗಳನ್ನು ಚಿತ್ರಿಸುವಲ್ಲಿ ತಮ್ಮದೇ ಆದ ಸ್ವತಂತ್ರ ಪ್ರಬುದ್ಧತೆಯನ್ನು ಗಳಿಸಿಕೊಂಡಿದ್ದರೆಂಬುದನ್ನು ಅವರ ಸ್ತಬ್ಧ ಚಿತ್ರಗಳನ್ನು ಕಾಣಬಹುದು. ೧೮ನೆಯ ಶತಮಾನದ ಸ್ತಬ್ಧಚಿತ್ರಕಲಾವಿದರಲ್ಲಿ ಫ್ರೆಂಚ್ ಕಲಾವಿದನಾದ ಚಾರ್ಡಿನ್‌ನು ಅತ್ಯಂತ ಘನತೆವೆತ್ತ ಕಲಾವಿದನಾಗಿದ್ದನು. ಇದೇ ಕಾಲದಲ್ಲಿ ಫ್ರಾನ್ಸ್‌ನಲ್ಲಿ ಅನೇಕ ಸ್ತಬ್ಧ ಚಿತ್ರಕಲಾವಿದರಿದ್ದು ಸುಮಾರು ಒಂದು ನೂರು ವರುಷಗಳ ಅವಧಿಯಲ್ಲಿ ಅತ್ಯುತ್ತಮವಾದ ಸ್ತಬ್ಧ ಚಿತ್ರಗಳ ರಚನೆಯಾಯಿತು. ಸಮಷ್ಟಿ ಪರಿಣಾಮೋತ್ತರ ಪಂಥದ ಸುಪ್ರಸಿದ್ಧ ಕಲಾವಿದನೆಂದು ಪರಿಗಣಿಸಲ್ಪಟ್ಟ ಪಾಲ್ ಸಿಝಾನೆ(Paul Cizanne) ಸ್ತಬ್ಧಚಿತ್ರರಚನೆಯಲ್ಲಿಯೇ ಬಹುತೇಕ ಕಾಲವನ್ನು ಕಳೆದನು. ಸಿಝಾನೆಯ ಸಮಕಾಲೀನ ಡಚ್ ಕಲಾವಿದ ವಿನ್ಸೆಂಟ್ ವ್ಯಾನ್ ಗಾಘ್‌ನೂ ಅನೇಕ ಸ್ತಬ್ಧಚಿತ್ರಗಳನ್ನು ರೂಪಿಸಿದನು. ಆದರೆ ಅವನ ದೃಷ್ಟಿಕೋನವೇ ವಿಭಿನ್ನವಾದುದಾಗಿತ್ತು. ಅವನು ಚಿತ್ರಿಸಿದ ಅಡುಗೆ ಮನೆಯ ಕುರ್ಚಿಗಳಾಗಲೀ ಹೂವಿನ ಕುಂಡಗಳಾಗಲೀ ನಿರ್ಜೀವ ವಸ್ತುಗಳಂತಿರದೇ ಜೀವಂತವಾಗಿದ್ದು ಚಲಿಸುತ್ತಿರುವಂತೆ ಭಾಸವಾಗುತ್ತೆ. ಸ್ತಬ್ಧಚಿತ್ರವು ಎಷ್ಟೊಂದು ವೈಶಿಷ್ಟ್ಯಪೂರ್ಣವೂ ಪ್ರಯೋಜನಕಾರಿಯೂ ಆದುದೆಂದರೆ ಬ್ರೇಕ್ ಮತ್ತು ಲೀಗರ್‌ರಂಥ ಕ್ಯೂಬಿಸ್ಟ್ ಪಂಥದ ಕಲಾವಿದರೂ ಕೂಡ ಸ್ತಬ್ಧಚಿತ್ರಣದಲ್ಲಿ ತಮ್ಮನ್ನು ಕೇಂದ್ರೀಕರಿಸಿಕೊಂಡಿದ್ದರು.

ಭಾವಚಿತ್ರ (Portrait Painting or Painting from life)

ಜೀವಂತ ವ್ಯಕ್ತಿಗಳನ್ನು ಎದುರಿಗೆ ಕುಳ್ಳಿರಿಸಿ ಅವರ ರೂಪವನ್ನು ತದ್ರೂಪವಾಗಿ



೩೫) ಲಿಯೋನಾರ್ಡೋ ಡಾ ವಿಂಚಿ

ಕ್ಯಾನ್‌ವಾಸ್, ಮರದ ಹಲಗೆ, ಕಾಗದ ಅಥವಾ ಹಸ್ತಿದಂತಗಳಂತಹ ಸಪಾಟಾದ ಮೇಲ್ಮೈಯ ಮೇಲೆ ವರ್ಣಗಳಿಂದ ಚಿತ್ರಿಸುವ ಇಲ್ಲವೆ ಶಿಲ್ಪಕಲಾಕೃತಿಗಳನ್ನಾಗಿ ತಯಾರಿಸುವ ಕಲಾಪ್ರಕಾರವನ್ನು ಭಾವಚಿತ್ರ ಇಲ್ಲವೆ ಪೋಟ್ರೇಟ್ ಎಂದು ಕರೆಯುತ್ತಾರೆ. ಭಾವಚಿತ್ರವು ಅರ್ಧಾಕೃತಿಯಲ್ಲಾಗಲೀ ಪೂರ್ಣಪ್ರಮಾಣದಲ್ಲಾಗಲೀ ರಚಿತವಾಗುತ್ತವೆ.

ಭಾವಚಿತ್ರದಲ್ಲಿ ವ್ಯಕ್ತಿಯ ಮುಖದ ಬಾಹ್ಯಲಕ್ಷಣಗಳು, ಬಣ್ಣಗಳು ಯಥಾವತ್ತಾಗಿ ರೂಪಿತವಾಗಿರಬೇಕಾದುದು ಅತ್ಯವಶ್ಯವಾಗಿದೆ. ಮೊದಮೊದಲು ಭಾವಚಿತ್ರ ಪ್ರಕಾರವನ್ನು 'ಕಲಾಕೃತಿ' ಎಂದು ಪರಿಗಣಿಸುತ್ತಲೇ ಇರಲಿಲ್ಲವಾದರೂ ಅವು ಅತ್ಯುತ್ತಮ ಕಲಾಕೃತಿಗಳಾಗಿವೆ. ಈ ಪ್ರಕಾರವು ಈಜಿಪ್ಟ್, ಅಸ್ಸೀರಿಯ ಮತ್ತು ಇನ್ನುಳಿದ ಪುರಾತನ ಕಲಾಕೃತಿಗಳು ವ್ಯಕ್ತಿಗಳ ತದ್ರೂಪಿನ ಅರ್ಧಾಕೃತಿಯ ಭಾವಚಿತ್ರಗಳನ್ನೊಳಗೊಂಡವುಗಳಾಗಿದ್ದವಾದರೂ ಗ್ರೀಕ್ ಮತ್ತು ರೋಮನ್ನರ ಕಾಲದಿಂದೀಚೇಗೆ ರೂಪುಗೊಂಡ ಅರ್ಧಾಕೃತಿಯ ಭಾವಚಿತ್ರಗಳು ದೊಡ್ಡ ಸಂಖ್ಯೆಯಲ್ಲಿ ಉಳಿದುಕೊಂಡು ಬಂದಿವೆ. ಕ್ರಿ.ಶ. ೧೫ ನೆಯ ಶತಮಾನದ ಪುನರುಜ್ಜೀವನ ಕಾಲದಲ್ಲಿ ಇಟಲಿ ಮತ್ತು ಫ್ಲ್ಯಾಂಡರ್ಸ್‌ಗಳಲ್ಲಿ ಅಸಂಖ್ಯ ಭಾವಚಿತ್ರಗಳ ರಚನೆಯಾಯಿತು. ಈ ಪುರಾತನ ಭಾವಚಿತ್ರಗಳು ಸರಳವಾಗಿ ಬಣ್ಣಗಳಿಂದ ಚಿತ್ರಿಸಲ್ಪಟ್ಟಿವೆ ಇಲ್ಲವೆ ಕೆತ್ತನೆಯ ಕಲಾಕೃತಿಗಳಾಗಿವೆ. ಈ ಇದ್ದದ್ದನ್ನು ಇದ್ದಂತೆ ಚಿತ್ರಿಸುವ ಕಲಾಪ್ರಕಾರವು ಉತ್ತರ ಯುರೋಪಿನಲ್ಲಿ ಬಹುಕಾಲದವರೆಗೆ

ಮುಂದುವರೆದುಕೊಂಡು ಬಂದಿತು. ಕ್ರಿ.ಶ. ೧೬ನೆಯ ಶತಮಾನದಲ್ಲಿ ಜರ್ಮನಿಯ ಕಲಾವಿದ ಲ್ಯೂಕಾಸ್ ಕ್ರನಾಚ್ ಮತ್ತು ಅವನ ಸಮಕಾಲೀನನಾದ ಮತ್ತೊಬ್ಬ ಘನತೆವೆತ್ತ ಕಲಾವಿದನಾದ ಕಿರಿಯ ಹಾನ್ಸ್ ಹೋಲ್ಬೀನ್(Hans Holbein the younger) ರಂಥ ವಿಶ್ವವಿಖ್ಯಾತ ಕಲಾವಿದರು ಭಾವಚಿತ್ರ ಕಲಾಕೃತಿಗಳನ್ನು ಯಥೇಚ್ಛವಾಗಿ ತಯಾರಿಸಿದರು. ವೇನಿಸ್‌ನಲ್ಲಿ ತಯಾರಾದ ಭಾವಚಿತ್ರಗಳು ಇನ್ನೊಂದು ಹೆಜ್ಜೆ ಮುಂದೆ ಹೋಗಿ ವ್ಯಕ್ತಿಯ ಯಥಾವತ್ ರೂಪದೊಂದಿಗೆ ಸಮಾಜದಲ್ಲಿರುವ ಅವನ ಸ್ಥಾನಮಾನಗಳನ್ನೂ ಚಿತ್ರಿಸಿ ಅವನ ಘನತೆ, ಶ್ರೀಮಂತಿಕೆ- ಮುಂತಾದವುಗಳು ಸ್ಪಷ್ಟವಾಗಿ ಗೋಚರಿಸುತ್ತಿರುವಂತೆ ಚಿತ್ರಿಸಲ್ಪಟ್ಟವುಗಳಾಗಿವೆ. ಈ ಮಾದರಿಯ ಭಾವಚಿತ್ರಗಳ ರಚನೆಯು ವೆನೇಷಿಯನ್ ಟಿಷ್ಯನ್(Titian) ಮಹಾಶಯನಿಂದ ಪ್ರಾರಂಭವಾಗಿ ೧೭ನೆಯ ಶತಮಾನದ ವ್ಯಾನ್‌ಡೈಕ್(Van Dyck) ಕಲಾಕೃತಿಗಳಲ್ಲಿ ಅತ್ಯುನ್ನತ ಮಟ್ಟವನ್ನು ತಲುಪಿತು. ವ್ಯಾನ್‌ಡೈಕ್‌ನ ಸಮಕಾಲೀನ ಮಹಾ ಶಿಲ್ಪಿ ಬರ್ನಿನಿ(Bernini)ಯೂ ಸಹ ಅನೇಕ ಭಾವಪ್ರತಿಮೆಗಳನ್ನು ಡೈಕ್‌ನ ಭಾವಚಿತ್ರಗಳಿಗೆ ಸರಿದೂಗುವ ರೀತಿಯಲ್ಲಿ ಕೆತ್ತನೆ ಮಾಡಿದ್ದಾನೆ. ೧೭ನೆಯ ಶತಮಾನದ ಇನ್ನಿಬ್ಬರು ಅದ್ಭುತ ಭಾವಚಿತ್ರ ಕಲಾವಿದರೆನಿಸಿದ ಡಚ್ ಕಲಾವಿದ ರೆಂಬ್ರಾಂಟ್ ಮತ್ತು ಸ್ಪೇನ ವೆಲಾಸ್ಕಿ(Velazquez)ಯವರನ್ನು ಮೀರಿಸುವಂಥ ಭಾವಚಿತ್ರ ಕಲಾವಿದರು ಈವರೆಗೆ ಕಂಡುಬಂದಿಲ್ಲ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ವೆಲಾಸ್ಕಿಯು ಸ್ಪೇನದ ಅರಸನ ಆಸ್ಥಾನ ಕಲಾವಿದನಾಗಿದ್ದು ಗಮನಾರ್ಹವಾದ ವ್ಯಕ್ತಿಗಳ ಗಮನಾರ್ಹ ಭಾವಚಿತ್ರಗಳನ್ನು ರಚಿಸಿದ್ದರೆ ರೆಂಬ್ರಾಂಟನು ತಾನು ಪ್ರೀತಿಸುವ, ಅನುಕಂಪಿಸುವ ವ್ಯಕ್ತಿಯ, ಅವನ ಕುಟುಂಬವರ ಭಾವಚಿತ್ರಗಳನ್ನು ಚಿತ್ರಿಸಲು ಇಚ್ಛಿಸುತ್ತಿದ್ದನು. ರೆಂಬ್ರಾಂಟನು ತನ್ನದೇ ಅರವತ್ತಕ್ಕೂ ಹೆಚ್ಚು ಭಾವಚಿತ್ರಗಳನ್ನು ಬೇರೆ ಬೇರೆ ಕಾಲಗಳಲ್ಲಿ ಚಿತ್ರಿಸಿದ್ದು ಅವುಗಳಲ್ಲಿ ವ್ಯಕ್ತಿಯ ವಯಸ್ಸಿನ ಅಂತರದಲ್ಲಿ ಉಂಟಾಗುವ ಬದಲಾವಣೆಗಳ ಸ್ವಾಭಾವಿಕ ಮುಖಲಕ್ಷಣಗಳನ್ನು ಗುರುತಿಸಬಹುದಾಗಿದೆ. ಅಲ್ಲದೇ ಅವನಿಂದ ಚಿತ್ರಿಸಲ್ಪಟ್ಟ ತುಳಿತಕ್ಕೊಳಪಟ್ಟ ಬಡಮನುಷ್ಯ ವೃದ್ಧರು, ವೃದ್ಧ ಯಹೂದ್ಯರು ಮುಂತಾದ ಭಾವಚಿತ್ರಗಳನ್ನು ಸರಿದೂಗುವ ಭಾವಚಿತ್ರಗಳು ಈ ವರೆಗೆ ರಚನೆಯಾಗಿಲ್ಲವೆಂದರೆ ಅತಿಶಯೋಕ್ತಿಯೇನಲ್ಲ ವೆಲಾಸ್ಕಿಯು ಅರಸು ಮನೆತನದವರ ವೈಭವೋಪೇತ. ಉಡಿಗೆ ತೊಡಿಗೆಗಳನ್ನು ಉಜ್ವಲವಾಗಿಯೂ ವೈಭವಪೂರ್ಣವಾಗಿಯೂ ಚಿತ್ರಿಸುತ್ತಿದ್ದ ರೀತಿ ನೀತಿಗಳನ್ನು ವೆಲಾಸ್ಕಿಯ ಉತ್ತರಾಧಿಕಾರಿಯೂ ಶೀಘ್ರಕೋಪಿಯೂ, ಕಠೋರನೂ ಆಗಿದ್ದ ಗೋಯಾ(Goya)ನು ವಿಡಂಬನ ಚಿತ್ರಗಳಾಗಿ ಮಾರ್ಪಾಡಿಸಿದನು. ಅರಸು ಮನೆತನದವರ ದೌರ್ಬಲ್ಯ ಮತ್ತು ಅವಿವೇಕಿಗಳನ್ನು ಧಿಕ್ಕರಿಸಿ ಅವರ ಭಾವಚಿತ್ರಗಳನ್ನು ರಚಿಸಿದ್ದು ಅವನ ಭಾವಚಿತ್ರಗಳಲ್ಲಿ ಅರಸನು ಎಷ್ಟೊಂದು ಅವಿವೇಕಿಯಾಗಿ ಕಾಣುತ್ತಿರುವನೆಂದರೆ ಏನು ನಡೆಯುತ್ತಿದೆ ಎಂಬುದನ್ನೂ ಗ್ರಹಿಸದ ಮೂರ್ಖನಾಗಿ ನೋಡುಗರಿಗೆ ಗೋಚರಿಸುತ್ತಾನೆ.

೧೬ನೆಯ ಶತಮಾನದ ಎಲಿಝಬೆತ್ ರಾಣಿ ಮತ್ತು ಒಂದನೆಯ ಜೇಮ್ಸ್ ದೊರೆಯ ಕಾಲದಲ್ಲಿ ಬ್ರಿಟನ್‌ನಲ್ಲಿ ಅತ್ಯುತ್ತಮವಾದ ಕಿರು ಅಳತೆ(Miniatures)ಯ

ತೈಲವರ್ಣದ ಭಾವಚಿತ್ರಗಳು ರಚನೆಯಾದವು. ಇದೇ ಕಾಲದಲ್ಲಿಯೇ ರೇನಾಲ್ಡ್(Reynolds) ಮತ್ತು ಗೇನ್ಸ್‌ಬರೋ(Gainsborough) ರವರಂಥ ವಿಶ್ವವಿಖ್ಯಾತ ಭಾವಚಿತ್ರ ಕಲಾವಿದರು ಭಾವಚಿತ್ರಗಳ ರಾಷ್ಟ್ರೀಯ ಕಲಾಶಾಲೆಯನ್ನು ಪ್ರಾರಂಭಿಸಿದರು. ೨೦ನೆಯ ಶತಮಾನದಲ್ಲಿ ಛಾಯಾಚಿತ್ರ(Photography)ವು ಭಾವಚಿತ್ರಗಳಿಗೆ ಪ್ರತಿಸ್ಪರ್ಧಿಯಾಯಿತು.

ಚಿತ್ರ ಸಂಯೋಜನೆ (Compostion)

ಕಲಾವಿದನು ಚಿತ್ರಿಸಲಿರುವ ವಸ್ತು(Subject)ವಿಗೆ ಸಂಬಂಧಿಸಿದಂತೆ ಮಾನವಾಕೃತಿಗಳು, ವರ್ಣಗಳು ಅಥವಾ ಕೇವಲ ಬೇರೆ ಬೇರೆ ಆಕೃತಿಗಳನ್ನು ಹೊಂದಿಸಿ ವರ್ಣಚಿತ್ರಗಳನ್ನು ರಚಿಸುವ ಕಲಾತ್ಮಕ ಕೃತಿ ಸಂಯೋಜನೆ ಅಥವಾ ಕಂಪೋಜಿಷನ್ ಎಂದು ಕರೆಯುತ್ತಾರೆ. ಚಿತ್ರ ಸಂಯೋಜನೆಯು ಚಿತ್ರಕಲೆಯ ಎಲ್ಲ ವಿಷಯಗಳಲ್ಲಿ ಅತಿ ಪ್ರಾಮುಖ್ಯ ಹಾಗೂ ಮಹತ್ವದ ವಿಷಯವಾಗಿರುತ್ತದೆ. ಕಲಾವಿದನ ಬುದ್ಧಿಮತ್ತೆಯು ಚಿತ್ರ ಸಂಯೋಜನೆಯಿಂದಲೇ ಪ್ರಕಟಗೊಳ್ಳುತ್ತದೆ. ಕಲಾವಿದನ ರಚನಾತ್ಮಕ, ಕ್ರಿಯಾತ್ಮಕ, ಅಭಿವ್ಯಕ್ತಿ ಕೌಶಲಗಳು ಚಿತ್ರ ಸಂಯೋಜನೆಯ ಮುಖಾಂತರವೇ ಬೆಳಕಿಗೆ ಬರುತ್ತವೆ ಪ್ರಾಯಶಃ ಇದೇ ಕಾರಣದಿಂದಲೇ ಅನೇಕ ಪಂಥಗಳ ಸೃಷ್ಟಿಯಾಯಿತು.

ಪ್ರಾರಂಭಿಕವಾಗಿ ಕಲಾವಿದ್ಯಾರ್ಥಿಯು ಸಾಮಾನ್ಯ ವಸ್ತು(ವಿಷಯಗಳು)ಗಳ ಸಂಯೋಜನೆಯ ಚಿತ್ರಣಗಳ ಮೂಲಕ ಅಭ್ಯಸಿಸಬೇಕಾಗುತ್ತದೆ. ಚಿತ್ರ ಸಂಯೋಜನೆಯ ಮೂಲತತ್ವಗಳಾದ ವರ್ಣ, ರೇಖೆ, ಆಕೃತಿ, ವರ್ಣವಿನ್ಯಾಸ, ಹೊರಮೈರಚನೆ(Texture) ಮತ್ತು ಸ್ಥಳಾವಕಾಶ ಮುಂತಾದವುಗಳ ಅರ್ಥವ್ಯಾಪ್ತಿಗಳನ್ನೂ ಐಕ್ಯತೆ(Unity) ಸಾಮರಸ್ಯತೆ(Harmony) ಸಮತೂಕದ(Balance) ತರಂಗ ಬದ್ಧತೆ(Rhythm) ಒತ್ತು (Emphasis) ಮತ್ತು ಪ್ರಮಾಣ ಮುಂತಾದ ಚಿತ್ರ ಸಂಯೋಜನೆಯ ನಿಯಮಗಳನ್ನೂ ತಿಳಿದಲ್ಲದೆ ಚಿತ್ರ ಸಂಯೋಜನೆ"ಯ ಪರಿಪೂರ್ಣಕೃತಿಯೆನಿಸಲು ಸಾಧ್ಯವಿಲ್ಲ. ಪ್ರತಿಯೊಂದು ರೇಖೆ, ವರ್ಣಗಳಿಗೆ ಪ್ರತ್ಯೇಕವಾದ ಗುಣ ಸ್ವಭಾವಗಳಿರುವದರಿಂದ ಕಲಾವಿದನು ಚಿತ್ರಿಸಲಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಗುಣ-ವಿಶೇಷಗಳ ವರ್ಣಗಳನ್ನು ರೇಖೆಗಳನ್ನೂ ಚಿತ್ರಿಸಿದಾಗಲೇ ಚಿತ್ರವು ಅರ್ಥಪೂರ್ಣವಾಗುತ್ತದೆ. ಚಿತ್ರ ಸಂಯೋಜನೆಯು ಸಾಂಪ್ರದಾಯಕವಾಗಿರಲಿ, ಆಧುನಿಕವಾಗಿರಲಿ, ಆಧುನಿಕ ಪಂಥಗಳಿಗನುಸಾರವಾಗಿರಲಿ, ಸಮಕಾಲೀನ ಕೃತಿಯಾಗಿರಲಿ ಆದರಲ್ಲಿ ಚಿತ್ರ ಸಂಯೋಜನೆಯ ಮೂಲತತ್ವಗಳಾಗಲಿ, ನಿಯಮ ನಿಬಂಧನೆಗಳಾಗಲೀ ಇಲ್ಲದೇ ಹೋದಲ್ಲಿ ಅದೊಂದು ಮೂರ್ಖ ಕಲಾಕೃತಿಯಾದೀತು. ಇತ್ತೀಚಿನ ಕೆಲವು ಕಲಾವಿದರು "ವರ್ಣ, ರೇಖೆಗಳಿಗೆ ಯಾವ ಅರ್ಥವೂ ಇಲ್ಲ; ಚಿತ್ರಗಳಲ್ಲಿ ಅರ್ಥವನ್ನು ಹುಡುಕುವುದೇ ಮೂರ್ಖತನ"- ಎಂಬರ್ಥದ ಸಿದ್ಧಾಂತಗಳನ್ನು ಮುಂದಿಡುವ ಸಾಹಸವನ್ನೂ ಮಾಡಿದ್ದಾರೆ. ಅದು ಅವರ ಅಭಿವ್ಯಕ್ತಿ ಸ್ವಾತಂತ್ರ್ಯ. ಅಷ್ಟೇ ಬರೆದುದೆಲ್ಲವೂ ಸಾಹಿತ್ಯವಲ್ಲ; ಹಾಡಿದುದೆಲ್ಲ ಚಿತ್ರವಲ್ಲ ಎಂಬ ಪರಿಕಲ್ಪನೆ ಇಲ್ಲದೇ ಹೋದಲ್ಲಿ ಸಮಕಾಲೀನ ಕಲೆ ಅವಹೇಳನಕ್ಕೆ ಗುರಿಯಾಗುವದರಲ್ಲಿ ಸಂದೇಹವಿಲ್ಲ.



೩೮) ಪಾಬ್ಲೋ ಪಿಕಾಸೋ

ಕಾಗದ, ರಟ್ಟು, ಬಣ್ಣ ಬಣ್ಣದ ಚಿತ್ರಗಳು, ವೃತ್ತ ಪತ್ರಿಕೆಯ ತುಂಡುಗಳೇ ಮೊದಲಾದವುಗಳನ್ನು ಅಂಟಿಸಿ ಕೊಲಾಜ್ ಕೃತಿಯನ್ನು ತಯಾರಿಸುವುದು, ಬಣ್ಣದ ಕಲ್ಲಿನ ತುಂಡುಗಳು, ಗಾಜಿನ ತುಣುಕುಗಳೇ ಮೊದಲಾದವುಗಳನ್ನು ಜೋಡಿಸಿ ಮೊಸಾಯಿಕ್ ಕೃತಿಗಳನ್ನು ತಯಾರಿಸುವುದು; ವರ್ಣಚಿತ್ರಗಳನ್ನು ಕ್ಯಾನವಾಸು ಇಲ್ಲವೇ ಕಾಗದ, ಮರದ ಹಲಗೆಗಳ ಮೇಲೆ ಚಿತ್ರಿಸುವುದು; ಗೋಡೆಗಳ ಮೇಲೆ ನೇರವಾಗಿ ವರ್ಣಚಿತ್ರಗಳನ್ನು ರಚಿಸುವುದು; ಅಥವಾ ಕ್ಯಾನವಾಸಿನ ಮೇಲೆ ವರ್ಣಚಿತ್ರವನ್ನು ರಚಿಸಿ ಗೋಡೆಗೆ ಶಾಶ್ವತವಾಗಿರುವಂತೆ ಅಂಟಿಸಿ ಮ್ಯುರಲ್ ಕೃತಿಯನ್ನು ರಚಿಸುವುದು; ಗೋಡೆಗಳಿಗೆ ಬಳಿದ ಹಸಿಗಾರೆಯಲ್ಲಿ ಜಲವರ್ಣಗಳಿಂದ ಚಿತ್ರಗಳನ್ನು ರಚಿಸಿ ಗೋಡೆಗಳೊಂದಿಗೆ ಬೆರೆತುಕೊಳ್ಳುವ ಭಿತ್ತಿಚಿತ್ರ ಅಥವಾ ಫ್ರೆಸ್ಕೋ ಚಿತ್ರಗಳನ್ನು ರಚಿಸುವುದು ಮತ್ತು ಬಾಟಿಕ್ ಕೃತಿಗಳನ್ನು ತಯಾರಿಸುವುದೇ ಮೊದಲಾದವುಗಳೆಲ್ಲ ಚಿತ್ರ ಸಂಯೋಜನೆಯ ಮಾಧ್ಯಮಗಳಾಗಿರುತ್ತವೆ.

ಪ್ರಾರಂಭದ ಹಂತದಲ್ಲಿ ಸಾಂಪ್ರದಾಯಕ ವಿಧಾನಗಳಲ್ಲಿ (ಉದಾ: ಅಜಂತಾ, ವಿಜಯನಗರ, ತಂಜಾವೂರು, ರಜಪೂತ, ಮೊಗಲ್, ಜಾನಪದ ಮುಂತಾದ ಕಲಾ ಪ್ರಕಾರಗಳು)ಯೇ ಚಿತ್ರ ಸಂಯೋಜನೆಯ ಅಭ್ಯಾಸ ಮಾಡುವುದರಿಂದ ಸಾಂಪ್ರದಾಯಕ ಕಲಾಪಂಥಗಳ ಮೌಲ್ಯಗಳನ್ನು ತಿಳಿಯಲು ಸಾಧ್ಯವಾಗುತ್ತದೆಯಾದ್ದರಿಂದ ನೇರವಾಗಿ ಸಮಕಾಲೀನ ಶೈಲಿಗಳಿಗಂಟಿಕೊಳ್ಳುವುದಕ್ಕಿಂತ ಮೊದಲು ಚಿತ್ರಸಂಯೋಜನೆಯ ಮೂಲತತ್ತ್ವ

ಗಳನ್ನರಿಯಲು ಸಾಂಪ್ರದಾಯಕ ಶೈಲಿಗಳನ್ನು ಅಭ್ಯಸಿಸುವದು ಅಗತ್ಯವಾಗಿರುತ್ತದೆ. ಆದರ ನಂತರ ಹೊಸ ಹೊಸ ಪಂಥಗಳನ್ನು ಅಭ್ಯಸಿಸಿ ಸ್ವತಂತ್ರವಾದ ಶೈಲಿಯ ನಿರೂಪಣೆಗಳನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಹೊಸ ಶೈಲಿಯನ್ನು ಹುಟ್ಟು ಹಾಕುವ ಮೊದಲು "ಅಜ್ಜ ನೆಟ್ಟ ಮರಕ್ಕೆ ನೇಣು ಹಾಕಿಕೊಳ್ಳುವದಕ್ಕಿಂತ ಆ ಮರದ ನೆರಳಿನಲ್ಲಿ ಬದುಕ ಬೇಕಾದುದು ಅವಶ್ಯವಾಗಿದೆ; ಅಜ್ಜ ಹಾಕಿದ ಮರದ ನೆರಳಿನಲ್ಲಿಯೇ ನಾವೇಕೆ-ಬಾಳಬೇಕು? ಎಂಬ ಹುಚ್ಚು ಕಲ್ಪನೆಯಿಂದ ಹೊರಬಂದು ಬಿಸಿಲು ಚಳಿ, ಮಳೆ, ಗಾಳಿಗೆ ಮೈಯೊಡ್ಡಿ ನಿಲ್ಲುವುದು ದುಸ್ಸಹನೀಯ ಬದುಕಿಗೆಡೆ ಮಾಡಿಕೊಡುತ್ತದೆ"-ಎಂಬ ಪ್ರಾಥಮಿಕ ಪರಿಕಲ್ಪನೆಯಿರಬೇಕಾದುದೂ ಅವಶ್ಯವಾಗಿದೆ.

ಅಂಗರಚನಾ ಶಾಸ್ತ್ರ (Anotomy)

ಮಾನವಾಕೃತಿಗಳನ್ನು ಚಿತ್ರಿಸುವಾಗ ಮಾನವ ದೇಹದ ಅಂಗಾಗಗಳ ರಚನೆಯನ್ನು ಅವಶ್ಯವಾಗಿ ತಿಳಿದಿರಬೇಕಾಗುತ್ತದೆ. ಅದರಂತೆ ಪಶುಪಕ್ಷಿಗಳ ದೇಹರಚನೆಯನ್ನೂ ತಿಳಿದಿರಬೇಕಾಗುತ್ತದೆಯಾದ್ದರಿಂದ ಕಲಾಶಾಲೆಗಳಲ್ಲಿ ಅಂಗರಚನಾಶಾಸ್ತ್ರ ಅನಾಟೊಮಿ (Anotomy) ಶಾಸ್ತ್ರವನ್ನೂ ಅಭ್ಯಾಸ ಕ್ರಮದಲ್ಲಿ ಸೇರಿಸಲಾಗಿದೆ.

ಮಾನವ ದೇಹದ ತಲೆಬುರುಡೆ, ಪಕ್ಕೆಲುಬುಗಳ ಹಂದರ ಮತ್ತು ಇನ್ನುಳಿದ ಎಲುಬುಗಳ ರಚನೆ, ಜೋಡಣೆಗಳೊಂದಿಗೆ ಎಲುಬುಗಳನ್ನು ಸುತ್ತಿಕೊಂಡ ಮಾಂಸಖಂಡಗಳ ಪಟ್ಟಿಗಳು ಮೊದಲಾದವುಗಳ ರಚನೆಯನ್ನೂ ಅವುಗಳ ಚಲನವಲನೆಗಳ ರೀತಿಯನ್ನೂ ತಿಳಿಯುವುದರಿಂದ ಕಲಾವಿದನು ಚಿತ್ರಿಸುವ ಮಾನವಾಕೃತಿಗಳು ಅಂಗರಚನಾಶಾಸ್ತ್ರಕ್ಕನುಗುಣವಾಗಿ ಚಿತ್ರಿತವಾಗುತ್ತವೆ. ಮಾನವನ ಚಲನವಲನೆಗಳಿಂದುಂಟಾಗುವ ಅವನ ಅಂಗಾಂಗಗಳಲ್ಲಿ ಉಂಟಾಗುವ ಬದಲಾವಣೆಗಳನ್ನು ಗಮನಿಸಿ ಸ್ವಾಭಾವಿಕವಾಗಿ ಅವನ ಚಿತ್ರವನ್ನು ಚಿತ್ರಿಸಲು ಸಾಧ್ಯವಾಗುತ್ತದೆ. ಅನಾಟೊಮಿ ಅಭ್ಯಾಸವು ವಾಸ್ತವ ಪಂಥದ ಕಲಾವಿದರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂಬುದನ್ನು ರೆಂಬ್ರಾಂಟ್ ಮೈಕೆಲೆಂಜಲೋ, ಡಾವಿನ್ಸಿ, ರಫಾಯೆಲ್ ಮುಂತಾದ ವಿಶ್ವವಿಖ್ಯಾತ ಕಲಾವಿದರ ಕಲಾಕೃತಿಗಳಿಂದ ತಿಳಿದು ಕೊಳ್ಳಬಹುದಾಗಿದೆ. ರೆಂಬ್ರಾಟ್‌ನ ಕಾಲದಿಂದ ಈವರೆಗೆ ಕಲಾಶಾಲೆಗಳಲ್ಲಿ ಅನಾಟಮಿಯ ಅಭ್ಯಾಸವು ಅವಿಚ್ಛಿನ್ನವಾಗಿ ಬೆಳೆದು ಬಂದ ಒಂದು ವಿಷಯವಾಗಿದೆ. "ಅನಾಟೊಮಿ ಲೆಸನ್" (Anotomy lesson)ಎಂಬ ರೆಂಬ್ರಾಂಟ್‌ನ ವರ್ಣಚಿತ್ರ ಕಲಾಕೃತಿಯೊಂದು ಈ ವಿಷಯಕ್ಕೆ ಸಂಬಂಧಿಸಿದುದಾಗಿಯೆ ಚಿತ್ರಿತವಾಗಿದೆ. ಪ್ರತಿಯೊಂದು ಎಲುಬು, ಎಲುಬುಗಳಲ್ಲಿರುವ ಗಂಟುಗಳು, ತೂತುಗಳಲ್ಲದೇ ಪ್ರತಿಯೊಂದು ಮಾಂಸಖಂಡದ ರಚನೆ ಹಾಗೂ ಚಲನವಲನಗಳಿಂದುಂಟಾಗುವ ಮಾನವಾಕೃತಿಯ ಬಾಹ್ಯರೇಖೆ(Countour) ಗಳಲ್ಲಿ ಉಂಟಾಗುವ ಬದಲಾವಣೆಗಳ ಅಭ್ಯಾಸದೊಂದಿಗೆ ಪಶು-ಪಕ್ಷಿಗಳ, ಪ್ರಾಣಿಗಳ ದೇಹರಚನೆ, ಎಲುಬು, ಮಾಂಸಖಂಡಗಳ ರಚನೆ ಹಾಗೂ ಅವುಗಳ ಚಲನ-ವಲನಗಳಿಂದುಂಟಾಗುವ ಬಾಹ್ಯರೇಖೆಗಳ ಬದಲಾವಣೆಗಳನ್ನು ಅಭ್ಯಸಿಸಿ ಕಲಾವಿದನು ಚಿತ್ರಗಳನ್ನು ಚಿತ್ರಿಸಿದಾಗ ಚಿತ್ರವು ವಾಸ್ತವತೆಗೆ ಹತ್ತಿರವಾಗುತ್ತದೆ.

ನಿಸರ್ಗ ರಮಣೀಯ ದೃಶ್ಯ ಚಿತ್ರಣ (Landscape Painting)

ಪ್ರಕೃತಿಯಲ್ಲಿ ಕಂಡುಬರುವ ಸುಂದರ ನೋಟಗಳ ವರ್ಣಚಿತ್ರವನ್ನು ಲ್ಯಾಂಡ್‌ಸ್ಕೇಪ್ ಎಂದು ಕರೆಯುತ್ತಾರೆ. ಲ್ಯಾಂಡ್‌ಸ್ಕೇಪ್ ಪೇಂಟಿಂಗ್ ಕಲೆಯು ಬಹು ಪುರಾತನಕಾಲದಿಂದಲೂ ಬೆಳೆದು ಬಂದಿದೆ ಎಂಬುದಕ್ಕೆ ರೋಮನ ಸಾಮ್ರಾಜ್ಯದ ಪಾಂಪೇ(Popeii)ಯಲ್ಲಿ ಇಂದಿಗೂ ಉಳಿದು ಬಂದಿರುವ ಕಲಾಕೃತಿಗಳು ಸಾಕ್ಷಿಯಾಗಿವೆ. ಆದರೂ ೧೬ನೆಯ ಶತಮಾನದವರೆಗೂ ಯುರೋಪಿನಲ್ಲಿ ಲ್ಯಾಂಡ್‌ಸ್ಕೇಪ್ ಪೇಂಟಿಂಗ್ ಸಹ ಒಂದು ಕಲಾಪ್ರಾಕಾರವೆಂದು ಪರಿಗಣಿಸಲ್ಪಟ್ಟಿರಲಿಲ್ಲ. ಜರ್ಮನ್ ಕಲಾವಿದ ಆಲ್ಪ್ ಡಾರ್ಫರನು ಪ್ರಪ್ರಥಮ ನಿಸರ್ಗ ರಮ್ಯದೃಶ್ಯಗಳನ್ನು ಚಿತ್ರಿಸಿದ ಕಲಾವಿದನೆಂಬ ಕೀರ್ತಿಗೆ ಪಾತ್ರನಾಗಿದ್ದಾನೆ. ೧೭ನೆಯ ಶತಮಾನದಲ್ಲಿ ಮರಗಳ, ಬಂಡೆ-ಬೆಟ್ಟಗಳ ಸಾಂಪ್ರದಾಯಕ ಜೋಡಣೆಗಳೊಂದಿಗೆ ಲ್ಯಾಂಡ್‌ಸ್ಕೇಪ ಚಿತ್ರಣ ಕಲೆಯು ಅಭಿವೃದ್ಧಿಗೊಂಡಿತು. ಇದೇ ಕಾಲದ ರುಯಿಸ್ಡೇಲ್ (Ruisdale), ಹೋಬ್ಬೇಮಾ(Hobbema), ಸೆಘರ್ಸ್(Seghers), ಮತ್ತು ರೆಂಬ್ರಾಂಟ್‌ರಂಥ ಮಹಾನ್ ಕಲಾವಿದರು ಲ್ಯಾಂಡ್‌ಸ್ಕೇಪ್ ಚಿತ್ರಗಳನ್ನು ಚಿತ್ರಿಸಿದ್ದಾರೆ. ಇದೇ ಅವಧಿಯಲ್ಲಿ ಅನ್ನಿಬೇಲ್ ಕರಾಸ್ಸಿ (Annibale Carracci) ಎಂಬ ಕಲಾವಿದನಿಂದ ಲ್ಯಾಂಡ್‌ಸ್ಕೇಪ್ ಚಿತ್ರಣಕ್ಕೆ ಒಂದು ಆದರ್ಶರೂಪು ಬಂದದಿತು. ಈ ಶೋಧನೆಯ ಫಲವಾಗಿ ಕ್ಲಾಡ್(Claude) ಮತ್ತು ಪೌಸಿನ್(Poussin) ಅವರು ಕರಾಸ್ಸಿಯ ಆದರ್ಶತೆಗಳನ್ನು ತಮ್ಮ ಲ್ಯಾಂಡ್‌ಸ್ಕೇಪ್ ಚಿತ್ರಗಳಲ್ಲಿ ಬಳಸಿಕೊಂಡರು. ರಮ್ಯಪಂಥದ(Romantic) ಫ್ರೀಡ್‌ರಿಚ್(Friedrich) ಮತ್ತು ಟರ್ನರ(Turner)ರಂಥ ಅದ್ವಿತೀಯ ಕಲಾವಿದರು ಲ್ಯಾಂಡ್‌ಸ್ಕೇಪ್ ಚಿತ್ರಣಕ್ಕೆ ವೈಭವವನ್ನು ತಂದುಕೊಟ್ಟರು. ಈ ವೇಳೆಗಾಗಲೇ ಲ್ಯಾಂಡ್‌ಸ್ಕೇಪ್ ಚಿತ್ರಣದಲ್ಲಿ ವಿವಿದ ಋತುಮಾನಗಳಲ್ಲಿ ಕಂಡು ಬರುವ ನಿಸರ್ಗದ ವೈವಿಧ್ಯತೆಗಳು, ವಾಯುಮಂಡಲದ ಬದಲಾವಣೆಗಳು, ಸೂರ್ಯನ ಬೆಳಕಿನ ಚಲ್ಲಾಟಗಳು ಮುಂತಾದ ವೈವಿಧ್ಯತೆಗಳನ್ನು ತುಂಬಿ ಚಿತ್ರವು ಹೆಚ್ಚು ಸ್ವಾಭಾವಿಕವಾಗಿ ಕಾಣುವಂತೆ. ಚಿತ್ರಿಸುವ ಪ್ರಯತ್ನಗಳು ಸಾಕಷ್ಟು ಪ್ರಮಾಣದಲ್ಲಿ ಬೆಳೆದು ಬಂದವು. ಅಲ್ಲದೇ ಲ್ಯಾಂಡ್‌ಸ್ಕೇಪ್ ಚಿತ್ರಣವೂ ಪ್ರತ್ಯೇಕ ಕಲಾಪ್ರಕಾರವಾಗಿ ಬೆಳೆಯತೊಡಗಿತು. ಆನಂತರ ೧೯ ಮತ್ತು ೨೦ನೆಯ ಶತಮಾನಗಳಲ್ಲಿ ಸಮಷ್ಟಿ ಪರಿಣಾಮವಾದಿ ಕಲಾವಿದರು ಮತ್ತು ಸರ್ರಿಯಲಿಸ್ಟ್ ಕಲಾವಿದರು ಲ್ಯಾಂಡ್‌ಸ್ಕೇಪನ್ನು ತಮ್ಮದೇ ಆದ ರೀತಿಯಲ್ಲಿ ಚಿತ್ರಿಸಿದರಲ್ಲದೇ ಲ್ಯಾಂಡ್‌ಸ್ಕೇಪ ಚಿತ್ರಣವು ವಿಶ್ವವ್ಯಾಪಿಯಾಗಿ ವಿರಾಟ್‌ಸ್ವರೂಪವನ್ನು ತಳೆಯುವಂತೆ ಮಾಡಿದರು. ಅವರಲ್ಲಿ ಸಿರಝಾನೆ(Ceganne), ವ್ಯಾನ್ ಗಾಫ್(Van Gogh) ಕೋರ್ಬೆ(Corbet), ಮಾನೆ(Monet) ಮುಂತಾದವರು ಅಗ್ರಗಣ್ಯ ಲ್ಯಾಂಡ್‌ಸ್ಕೇಪ್ ಚಿತ್ರಕಲಾವಿದರೆಂದು ವಿಶ್ವವಿಖ್ಯಾತರಾಗಿದ್ದಾರೆ.

ಕಲಾವಿದ್ಯಾರ್ಥಿಗಳಿಗಾಗಿ ಕೆಲವು ಉಪಯುಕ್ತ ಮಾಹಿತಿಗಳು

ವಾಯುವಿನ ಯಥಾದರ್ಶನ (Aerial Perspective)

ವರ್ಣಚಿತ್ರದಲ್ಲಿ ವಾತಾವರಣದ ಪರಿಣಾಮವನ್ನು ತುಂಬುವ ಒಂದು ವಿಧಾನ. ಈ ವಿಧಾನವನ್ನು ಅನುಸರಿಸುವದರಿಂದ ನೋಡುಗನಿಂದ ವಸ್ತುಗಳ ದೂರವನ್ನು ತೋರಿಸಿ, ಚಿತ್ರದಲ್ಲಿ ಆಳವನ್ನು ಬಿಂಬಿಸಬಹುದು. ವಸ್ತುಗಳ ನೋಡುಗನಿಂದ ದೂರದೂರವಿದ್ದಂತೆ ನೀಲದಿಂದ ತಿಳಿನೀಲವಾಗಿ ಗೋಚರಿಸುತ್ತವೆಯಾದ್ದರಿಂದ ಚಿತ್ರದಲ್ಲಿನ ವಸ್ತುಗಳ ದೂರವನ್ನು ಗುರುತಿಸಬಹುದು. ಹೀಗೆ ಚಿತ್ರದಲ್ಲಿ ಆಳವನ್ನು ಬಿಂಬಿಸುವ ವಿಧಾನವನ್ನು ವಾಯುವಿನ ಯಥಾದರ್ಶನ ಇಲ್ಲವೇ ಏರಿಯಲ್ ಪರ್ಸ್ಪೆಕ್ಟಿವ್ ಎಂದದು ಕರೆಯಲಾಗುತ್ತದೆ. ಈ ವಿಧಾನವು ಲಿಯೋನಾರ್ಡೋ ಡ ವಿನ್ಸಿಯಿಂದ ಸಂಶೋಧಿಸಲ್ಪಟ್ಟಿತಾದರೂ ಅವನಿಗಿಂತ ಮೊದಲಿನ ಚಿತ್ರಕಲಾವಿದರು ತಮ್ಮ ಚಿತ್ರಗಳಲ್ಲಿ ವಾತಾವರಣವನ್ನು ತುಂಬಲು ಯತ್ನಿಸಿದ್ದರೆಂಬುದನ್ನು ರೋಮನ್ ಕಾಲದ ಭಿತ್ತಿಚಿತ್ರ(Mural) ಗಳಲ್ಲಿ ಕಂಡುಕೊಳ್ಳಬಹುದು.

ವಾತಾವರಣದ ಯಥಾದರ್ಶನ ಚಿತ್ರಣವು ಸಾಮಾನ್ಯವಾಗಿ ಉತ್ತರ ಯೂರೋಪಿನಲ್ಲಿ ಒಂದು ಸಾಹಸಕಾರ್ಯ ಸಿದ್ಧಿಯಾಗಿ ವ್ಯಾಪಕವಾಗಿ ಬೆಳೆದುಬಂದಿತು. ಟರ್ನರನ ಕೊನೆಕೊನೆಯ ಕಲಾಕೃತಿಗಳಲ್ಲಿ ವಾತಾವರಣವು ಪ್ರಭಾವಪೂರ್ಣ ಚಿತ್ರೀಕರಣದ ವಸ್ತುವಾಗಿತ್ತೆಂಬುದನ್ನು ಅವನ ಇತ್ತೀಚಿನ ಚಿತ್ರಗಳಲ್ಲಿ ಕಂಡುಕೊಳ್ಳಬಹುದು.

ಯಥಾದರ್ಶನ (Perspective)

ಸಮತಟ್ಟಾದ ಇಲ್ಲವೆ ಸಪಾಟಾದ ಮೇಲ್ಮೈಯ ಮೇಲೆ ಚಿತ್ರಿಸುವ ಚಿತ್ರದಲ್ಲಿನ ವಸ್ತುಗಳ ಆಕಾರದೊಳಕ್ಕೆ ತೂರಿಕೊಂಡಂತೆ ತೋರುವ ಭ್ರಮೆಯನ್ನುಂಟುಮಾಡುವ ಚಿತ್ರೀಕರಣ ಶೈಲಿಯ ಒಂದು ವಿಧಾನ. ಪಾಶ್ಚಾತ್ಯ ಕಲೆಯಲ್ಲಿ ಯಥಾದರ್ಶನ ತಂತ್ರವನ್ನು ಭೌಮಿತಿಕ ರೇಖಾದೃಷ್ಟಿ(Geometric Linear), ಗಣಿತಕ್ಕೆ ಸಂಬಂಧಿಸಿದ(Mathematical), ಚಾಕ್ಷುಷ(Optical) ವೈಜ್ಞಾನಿಕ ದೃಗ್ದರ್ಶನ(Scientific perspective) ಮುಂತಾಗಿ ಗುರುತಿಸಲಾಗುತ್ತಿದ್ದು ಕ್ರಿ.ಶ. ೧೫ನೆಯ ಶತಮಾನದ ಆರಂಭದಲ್ಲಿ ಬ್ರೂನೆಲೆಷಿ (Brunelleschi)ಯಿಂದ ಫ್ಲಾರೆನ್ಸ್‌ನಲ್ಲಿ ಪ್ರಾರಂಭವಾಗಿ ಮಸಾಕಿಯೊ(Masaccio) ಮತ್ತು ಯುಸೆಲ್ಲೋ(Uccello)ರಂಥ ಕಲಾವಿದರಿಂದ ಬಳಕೆಯಲ್ಲಿ ಬಂದಿತು.

ಈ ತಂತ್ರದ ಬಳಕೆಯಿಂದ ಚಿತ್ರದಲ್ಲಿ ನೈಜ ಪ್ರಪಂಚದಲ್ಲಿ ನಾವು ನೋಡಬಹುದಾದ ವಸ್ತುಗಳಿಗೂ ದೂರದ ಆಕಾಶಕ್ಕೂ ಇರುವ ಸಂಬಂಧದ ಚಿತ್ರಣ ಹಾಗೂ ನೋಡುಗನಿಂದ ವಸ್ತುಗಳು ಇರಬಹುದಾದ ದೂರದ ಚಿತ್ರಣಗಳಿಂದಾಗಿ ಸ್ಪಷ್ಟವಾಗಿ ಕಾಣುವ ಪ್ರತ್ಯಕ್ಷ ಪರಿಚ್ಛಿನ್ನತೆಯ ಭ್ರಮೆಯನ್ನುಂಟುಮಾಡುವ ಸಮಾಂತರ ರೇಖೆಗಳು

ದೂರ ದೂರ ಸರಿದಂತೆ ಒಂದನ್ನೊಂದು ಕೂಡುವಂತೆ ಕಾಣಿಸುವ ಚಿತ್ರಣವು ನೋಡುಗನ ನೋಟದ ಮೇಲೆ ಅದ್ಭುತವಾದ ಪರಿಣಾಮವನ್ನು ಬೀರುತ್ತದೆ. ಇದರಿಂದದ ನೋಡುಗನಿಂದ ದೂರ ದೂರದಲ್ಲಿರುವ ವಸ್ತುಗಳು ತಮ್ಮ ನೈಜ ಆಕಾರಗಳಿಗಿಂತ ಚಿಕ್ಕವಾಗಿ ಕಾಣಿಸುತ್ತವೆಯೆಂಬುದು ಸ್ಪಷ್ಟವಾಗುತ್ತದೆ.

ಯಥಾದರ್ಶನ ತಂತ್ರದ ಶೋಧನೆಯ ನಂತರ ಸುಮಾರು ಐದು ಶತಮಾನಗಳ ಕಾಲ ಯೂರೋಪಿನಲ್ಲಿ ಅವಿಚ್ಛಿನ್ನವಾಗಿ ಬಳಕೆಯಲ್ಲಿದ್ದು ಚಿತ್ರೀಕರಣದ ಮೂಲಾಧಾರವಾಗಿತ್ತು. ಆದಿಮಾನವನ ಜನಾಂಗಗಳ ಹಾಗೂ ತರ್ಕಾಭಾಸ ಸಂಸ್ಕೃತಿಯ ಜನಾಂಗಗಳ ಕಲೆಯಲ್ಲಿ ಈ ಯಥಾದರ್ಶನ ತಂತ್ರದ ಕಡೆಗೆ ಒಲವಿಲ್ಲದಿರುವುದು ಅಥವಾ ಅದನ್ನು ನಿರ್ಲಕ್ಷಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.


ಮೊಜಾಯಿಕ್ (Mosaic)

ಸಿಮೆಂಟ್ ಇಲ್ಲವೆ ಗಾರೆಯ ಹಾಸಿನ ಮೇಲೆ ಬಣ್ಣ ಬಣ್ಣದ ಗಾಜಿನ ತುಂಡುಗಳು, ಹಾಲುಗಲ್ಲಿನ ತುಂಡುಗಳು ಇಲ್ಲವೇ ಯೋಗ್ಯವೆನಿಸುವ ಬೇರೆ ವಸ್ತುವಿನ ತುಣುಕುಗಳನ್ನು ಜೋಡಿಸಿ ಅಂಟಿಸಿ ಚಿತ್ರದ ನಮೂನೆಯನ್ನಾಗಲೀ ಪೂರ್ಣ ಚಿತ್ರವನ್ನಾಗಲೀ ಸಿದ್ಧಪಡಿಸುವ ಒಂದು ವಿಧಾನ. ನೂತನ ಶಿಲಾಯುಗದ ಕಾಲದಲ್ಲಿ ರಚಿತವಾದ ಸಾದಾ ರೀತಿಯ 'ಮೊಜಾಯಿಕ್' ಚಿತ್ರಗಳು ಅಲ್ಪ ಪ್ರಮಾಣದಲ್ಲಿ ಕಂಡುಬಂದಿದ್ದರೂ ಪ್ರಾಚೀನ ಗ್ರೀಕರಿಂದ ತಯಾರಿಸಲಾದ ಸಚಿತ್ರ ದೃಶ್ಯಗಳ ಮೊಜಾಯಿಕ್‌ಗಳು ಮೊಸಿಡೋನಿಯದಲ್ಲಿ ಉಳಿದುಕೊಂಡು ಬಂದಿದ್ದು ಇವು ಅತ್ಯಂತ ಹಳೆಯ ಕಲಾಕೃತಿಗಳಾಗಿವೆ. ಈ ಮೊಸಾಯಿಕ್ ಕೃತಿಗಳು ಪೌರಾಣಿಕ ವಸ್ತುಗಳ ಮತ್ತು ಹೋಮರನ ದೃಶ್ಯಗಳಾಗಿದ್ದು ಬಹುತೇಕ ಕೃತಿಗಳು ಕಪ್ಪು ಮತ್ತು ಬಿಳಿ ಬಣ್ಣದವಾಗಿದ್ದು ಅಲ್ಲಲ್ಲಿ ತಿಳಿಹಸಿರು ಮತ್ತು ಕೆಂಪು ವರ್ಣವನ್ನೂ ಕೂಡಿಸಲಾಗಿದೆ. ರೋಮನ್ನರು ರಸ್ತೆಯ ಪಕ್ಕದ ನೆಲಗಟ್ಟಿನ ದಾರಿಗಳ ಅಲಂಕಾರವಾಗಿ ಮೊಜಾಯಿಕ್‌ಗಳನ್ನು ಹೆಚ್ಚಾಗಿ ಬಳಸಿದ್ದಾರೆ ಎಂಬುದಕ್ಕೆ ಸಂಯುಕ್ತ ಸಂಸ್ಥಾನಗಳ(U.K.) ಛೆಡ್ವರ್ಥ್(Chedwartth), ಗ್ಲೌಸೆಸ್ಟರ್‌ಶಾಯರಗಳಲ್ಲಿರುವಂತಹ ಮೊಸಾಯಿಕಗಳಂತೆ ರೋಮನ ಸಾಮ್ರಾಜ್ಯದಲ್ಲೆಲ್ಲಾ ಉಳಿದುಕೊಂಡು ಬಂದಿವೆ. ಅವರು ಸುಂದರವಾದ ಮೊಜಾಯಿಕ್‌ಗಳನ್ನು ಗೋಡೆಗಳ ಮೇಲೂ ರಚಿಸಿದ್ದರೆನ್ನಲು ಪಾಂಪೇ(Pompeii) ಮತ್ತು ಹರ್ಕ್ಯುಲೇನಿಯಂಗಳಲ್ಲಿ ಸಂರಕ್ಷಿಸಲ್ಪಟ್ಟ ಮೊಜಾಯಿಕ್‌ಗಳಿಂದ ತಿಳಿದುಕೊಳ್ಳಬಹುದಾಗಿದೆ. ಕ್ರಿ.ಶ. ೪ ಮತ್ತು ೫ನೆಯ ಶತಮಾನಗಳ ಪೂರ್ವ ಕ್ರಿಶ್ಚಿಯನ್ ಕಾಲದಲ್ಲಿ ಈ ಕಲೆಯು ತ್ವರಿತಗತಿಯಲ್ಲಿ ಅಭಿವೃದ್ಧಿಗೊಂಡಿತು. ಈ ಕಾಲದ ಶ್ರೀಮಂತ ಮೊಸಾಯಿಕ್‌ಗಳು ರವೆನಾ(Ravenna), ರೋಮನ್ ಮಹಾ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಇಟಲಿಗಳಲ್ಲಿ ಕಾಣಬರುತ್ತವೆ. ಜಸ್ಟೀನಿಯನ್(Justinion) ಸಾಮ್ರಾಟನ ಕಾಲದಲ್ಲಿ ಎಸ್. ವಿಟಾಲೆ(S. Vitale)ಯಲ್ಲಿ ರಚನೆಯಾದ ಮೊಜಾಯಿಕ್‌ಗಳು ಈ ಕಲೆಯ ವಿಷಯದಲ್ಲಿ ಹೊಸ ಗ್ರಹಿಕೆಯನ್ನು ಬಹಿರಂಗಪಡಿಸುತ್ತವೆ.

ಕ್ರಿ.ಶ. ೧೨ರಿಂದ ೧೪ನೆಯ ಶತಮಾನಗಳ ಅವಧಿಯ ಬೈಝಂಟಾಯಿನ್ ರ್ಚ್‌ಗಳ ಕಾಲದಲ್ಲಿ ಅತ್ಯಂತ ಉನ್ನತ ಮಟ್ಟದ ಮೊಜಾಯಿಕ್‌ಗಳ ರಚನೆಯಾಯಿತು. ಯಾತ್ರಿಕರು ಮತ್ತು ಧಾರ್ಮಿಕ ಯುದ್ಧಾಸಕ್ತರು ಬೈಝಾಂಟಾಯಿನ್ ಮೊಜಾಯಿಕ್ ಲೆಗಾರರ ಪ್ರಸಿದ್ಧಿಯನ್ನು ಪ್ರಚುರಗೊಳಿಸಿದ ಪ್ರಯುಕ್ತ ಈ ಕಲಾವಿದರನ್ನು ಕರೆಸಿಕೊಂಡು ೂರದ ಚರ್ಚ್‌ಗಳನ್ನು ಮೊಸಾಯಿಕ್ ಕೃತಿಗಳಿಂದ ಅಲಂಕರಣಗೊಳಿಸಲಾಯಿತು. ಂಥ ಚರ್ಚ್‌ಗಳಲ್ಲಿ ಕೀವ್(Kier)ನಲ್ಲಿರುವ ಸ್ಯಾಂಟಾ ಸೋಫಿಯಾ(Santa Sophia) ರ್ಚ್‌ನಲ್ಲಿ ರಚಿತವಾದ ಸರಣಿ ಮೊಜಾಯಿಕ್‌ಗಳು ಅತ್ಯುತ್ತಮ ಉದಾಹರಣೆಗಳಾಗಿವೆ. .ಶ. ೧೧೦೦ರ ವೇಳೆಗೆ ಬೈಜಂಟಾಯಿನ್ ಕಲಾವಿದರು ವೇನಿಸ್‌ನಗರಕ್ಕೆ ಬಂದರು ುತ್ತು ಸಂತ ಮಾರ್ಕ್(St. Mark)ನ ಆರಾಧನಾ ಮಂದಿರವು ಗ್ರೀಕ್ ಮೊಜಾಯಿಕ್ ಲಾವಿದರ ಕೃತಿಗಳನ್ನೊಳಗೊಂಡಿರುತ್ತದೆ. ಮೊಜಾಯಿಕ್ ಕಲೆಯು ಪುನರುತ್ಥಾನ ಾಲದಲ್ಲಿ ವ್ಯಾಪಕವಾಗಿ ಪ್ರಸಾರಗೊಂಡಿತು. ರೋಮದಲ್ಲಿರುವ "ಸ್ಟಾ ಮರಿಯಾಡೆಲ್ ೋಪೋಲೊ"(Chigi Chopel)ದ ಚಿಗಿ ಆರಾಧನಾ ಮಂದಿರವು ವೇನೇಷ್ಯನ್ ೊಜಾಯಿಕ್ ಕಲಾವಿದ ಲುಯಿಗಿ ಡಾ ಫೇಸ್(Luigi da Pace)ನ ಮೊಜಾಯಿಕ್ ತಿಗಳಿಂದ ಅಲಂಕರಿಸಲ್ಪಟ್ಟದ್ದು ರಾಫೆಲ್‌ನಿಂದ ರಚಿತವಾದ ಒಂದು ಕರಡುಪ್ರತಿ Cartoon)ಯಿಂದ ರಚಿಸಲ್ಪಟ್ಟವುಗಳಾಗಿವೆ. ಇತ್ತೀಚೆಗೆ. ಇಂಥ ಮೊಸಾಯಿಕ್ ಕೃತಿಗಳಿಗೆ ಗಲಬಹುದಾದ ಮಿತಿಮೀರಿದ ವೆಚ್ಚಗಳಿಂದಾಗಿ ಸೀಮಿತ ಸಂಖ್ಯೆಯಲ್ಲಿ ಇಂಥ ಕೃತಿಗಳ ಚನೆಯಾಗತೊಡಗಿದೆ. ಆದರೂ ಮೆಕ್ಸಿಕೋ ನಗರದ ರಾಷ್ಟ್ರೀಯ ವಿಶ್ವವಿದ್ಯಾಲಯದ ಂಥಾಲಯದಲ್ಲಿ ೧೯೫೧-೫೩ರಲ್ಲಿ ಅತ್ಯದ್ಭುತವಾದ ಆಧುನಿಕ ಮೊಜಾಯಿಕ್ ಕಲಾ ತಿಗಳ ರಚನೆಯಾಗಿರುವುದನ್ನು ಕಾಣಬಹುದು.

ಮ್ಯೂರಲ್ ಕಲಾಕೃತಿಗಳು

ಮ್ಯುರಲ್ ಅಥವಾ ಭಿತ್ತಿಚಿತ್ರ ಒಂದು ಕಟ್ಟಡದ ಗೋಡೆಗಳ ಅಲಂಕೃತ ಶಾಶ್ವತ ಾಗವಾಗಿ ಉಳಿಯುವಂತೆ ಚಿತ್ರಿಸುವ, ಸಾಮಾನ್ಯವಾಗಿ ದೊಡ್ಡದಾದ ವರ್ಣಚಿತ್ರವನ್ನು ್ಯುರಲ್ ಎಂದು ಕರೆಯಲಾಗುತ್ತದೆ. ಈ ಮ್ಯುರಲ್ ಕಲೆಯು ಬಹು ಪ್ರಾಚೀನ ಲೆಯಾಗಿದ್ದು ಮಿನೋನ್‌ರಿಂದಲೂ ಗ್ರೀಕರಿಂದಲೂ ಬಳಕೆಯಲ್ಲಿತ್ತು. ಈ ಮ್ಯುರಲ್ ದ್ಧತಿಗೆ ಶ್ರೇಷ್ಠತಮ ತಂತ್ರವೆಂದರೆ ಫ್ರೆಸ್ಕೋ(ಭಿತ್ತಿಚಿತ್ರ) ತಂತ್ರವೇ. ಆದರೆ ಶೀತ ್ರದೇಶಗಳಲ್ಲಿ ವಿಶೇಷತಃ ಉತ್ತರ ಯುರೋಪಿನಲ್ಲಿ ಫ್ರೇಸ್ಕೋ ಪದ್ಧತಿಯಲ್ಲಿ ಬಳಸಲಾಗುವ ಂತ್ರಕ್ಕೆ ಬದಲಾಗಿ ಕ್ಯಾನವಾಸಿನ ಮೇಲೆ ವರ್ಣಗಳಿಂದ ಚಿತ್ರಿಸಿ ಕ್ಯಾನವಾಸನ್ನು ಗೋಡೆಗೆ ಂಟಿಸುವ ವಿಧಾನ ಸೂಕ್ತವಾಗಿದೆ. ಈ ತಂತ್ರವನ್ನು "ಮ್ಯಾರಾನ್ ಫ್ಲೇಜ್"(Maran age) ಎಂದು ಕರೆಯುತ್ತಾರೆ. ಈ ತಂತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ ಸುಪ್ರಸಿದ್ಧ ೯ನೆಯ ಶತಮಾನದ ಈಚಿನ ಮ್ಯುರಲ್ ಚಿತ್ರಕಲಾವಿದ ಪೀರ್ರೆ ಮ್ಯೂವಿಸ್ ಡಿ ವನ್ನರ್ಸ್(Pierre Paris de Chavanners) ಉಪಯೋಗಿಸಿದ ತೈಲುವರ್ಣಗಳು "ಫ್ರೇಸ್ಕೋ ರಿಣಾಮವನ್ನು ಬಿಂಬಿಸಲು ಬಹು ಎಚ್ಚರಿಕೆಯಿಂದ ಅನುಕರಿಸಲ್ಪಟ್ಟವುಗಳಾಗಿವೆ. ಷ್ಯದಲ್ಲಿ ಭಿತ್ತಿಚಿತ್ರಗಳ ಸಾಂಪ್ರದಾಯಕ ವಿಧಾನವು ಗೋಂದು ಇಲ್ಲವೆ ಒಣಗಾರೆಗಳನ್ನು ಳಗೊಂಡುದಾಗಿದೆ. ಆದರೆ ಕ್ರಿ.ಶ. ೧೧ ಮತ್ತು ೧೨ನೇ ಶತಮಾನಗಳಲ್ಲಿ ಫ್ರೇಸ್ಕೋ



೬.೭) ಭಿತ್ತಿಚಿತ್ರ - ಶ್ರೀರಂಗಪಟ್ಟಣ

ವಿಧಾನವು ಬಳಕೆಯಲ್ಲಿತ್ತು. ಇಂಡಿಯದ ತಂಜಾವೂರಿನಲ್ಲಿ ಮ್ಯುರಲ್ ವಿಧಾನವ ತಾಂತ್ರಿಕ ಪರೀಕ್ಷೆಯಾಗಿ ಪ್ರದರ್ಶಿತವಾಯಿತು.

ಅಂಟುಚಿತ್ರ ಅಥವಾ ಕೋಲಾಜ್ (Collage) **ಕಲೆ**

ಇದೊಂದು ಚಿತ್ರಾತ್ಮಕ ತಂತ್ರವಾಗಿದ್ದು ಛಾಯಾಚಿತ್ರಗಳು ವೃತ್ತ ಪತ್ರಿಕೆಗಳಿಂದ ಕತ್ತರಿಸಿದ ಭಾಗಗಳು ಮತ್ತು ಯೋಗ್ಯವೆನಿಸುವ ವಸ್ತುಗಳನ್ನು ಕಾಗದ ಇಲ್ಲವೆ ರಟ್ಟು ಮುಂತಾದ ಸಪಾಟಾದ ಮೇಲ್ಮೈಯ ಮೇಲೆ ಅಂಟು ಅಥವಾ ಗೋಂದಿನಿಂದ ಅಂಟಿಸಿ ಬೇಕಾದ ಚಿತ್ರವನ್ನು ರಚಿಸುವ ರೀತಿ. ಅವಶ್ಯವಾದಲ್ಲಿ ಬಣ್ಣಗಳನ್ನೂ ಬಳಸಬಹುದು. ಕ್ರಿ.ಶ. ೨೦ನೆಯ ಶತಮಾನದ ಆದಿಭಾಗದಲ್ಲಿ ಈ ತಂತ್ರವು ಒಂದು ಮಹತ್ವದ ಕಲಾತ್ಮಕ ತಾಂತ್ರಿಕ ನೈಪುಣ್ಯವೆಂದು ಪರಿಗಣಿಸಲ್ಪಟ್ಟಿತ್ತು. ಅಲ್ಲದೇ ಘನಾಕೃತಿ ಪಂಥ (Cubists), ಭವಿಷ್ಯವಾದ(Futurism), ಡಾಡಾಪಂಥ(Dadaists) ಮತ್ತು ಸರ್ರಿಯಾಲಿಸ (Surrealist) ಮುಂತಾದ ಆಧುನಿಕ ಪಂಥದ ಬಹುತೇಕ ಕಲಾವಿದರು ಈ ಅಂಟುಚಿತ್ರ ಅಥವಾ ಕೋಲಾಜ್ ವಿಧಾನವನ್ನು ಅನುಸರಿಸಿದರು.

ವರ್ಣಕ್ಷೇತ್ರ ಚಿತ್ರಣ (Colour field Painting)

ಒಂದು ರೀತಿಯ ಅಮೂರ್ತ ಚಿತ್ರಣ ಒಂದಕ್ಕೊಂದು ಹೊಂದಿಕೊಳ್ಳ

ಬಣ್ಣವನ್ನು ವೈಶಿಷ್ಟ ಸೂಚಕವಾಗಿಯೂ ವಿಸ್ತೃತವಾಗಿಯೂ ಲೇಪಿಸಿ ಸಂಪೂರ್ಣ ಕ್ಯಾನವಾಸನ್ನು ಆವರಿಸಿಕೊಳ್ಳುವಂತೆ ಮಾಡುವ ವಿಧಾನ. ಕ್ರಿ. ಶ. ೧೯೫೦ರ ಕೊನೆಯ ಅವಧಿಯಲ್ಲಿಯೂ ಕ್ರಿ. ಶ. ೧೯೬೦ ಆದಿಭಾಗದಲ್ಲಿಯೂ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಮಾರ್ಕ್ ರೊಥ್ಕೋ(Mark Rothko) ಹಾಗೂ ಮೊರಿಸ್ ಲೂಯಿಸ್ (Morries Louis)ರಂತಹ ಕಲಾವಿದರ ಕಲಾಕೃತಿಗಳ ಮೂಲಕ ಮುಂದೆ ಬಂದಿತು. ಕೆಲವು ಕಲಾವಿದರು ಪೀಠಿಕಾವರ್ಣವನ್ನು ಬಳಿಯದ ಕ್ಯಾನವಾಸನ್ನು(Unprimed Canvas) ಅತೀ ತೆಳುವಾದ ಬಣ್ಣದಲ್ಲಿ ಅದ್ದಿ ತೋಯಿಸಿ, ವರ್ಣಕ್ಷೇತ್ರ ಚಿತ್ರಣಗಳನ್ನು ಮಾಡಿದರು. ಹೀಗೆ ಮಾಡುವದರಿಂದ ಬಣ್ಣವು ಸಿದ್ಧಪಡಿಸಿದ ಅಂದರೆ ಪೀಠಿಕಾವರ್ಣಲೇಪನದ ಮೇಲೆ ಮತ್ತೊಂದು ಬಣ್ಣವನ್ನು ಲೇಪಿಸುವುದಕ್ಕಿಂತ ಏಕೀಭವಿಸುವದರಲ್ಲಿ ಯಾವ ಅನುಮಾನವೂ ಇಲ್ಲ. ಕಲರ್ ಸ್ಟೇನ್ ಪೇಂಟಿಂಗ್ ಎನ್ನುವ ಪದವನ್ನೇ ಈ ವಿಧಾನದಲ್ಲಿ ಚಿತ್ರಿಸುವುದಕ್ಕೆ ಅನ್ವಯಿಸಲಾಗುತ್ತದೆ.

ಭಾವನಾತ್ಮ ಕಲೆ (Conceptual Art)

ಪೂರ್ಣಗೊಳಿಸಿದ ಕೃತಿಗಿಂತ ಕಲ್ಪನಾ ಬಿಂಬವೇ ಪ್ರಧಾನವಾಗಿರುವ ವಿವಿಧ ಕಲಾ ಪ್ರಕಾರಗಳಿಗೆ ಈ ಪದವನ್ನು ಅನ್ವಯಗೊಳಿಸಲಾಗುತ್ತದೆ. ಈ ಅಭಿಪ್ರಾಯವು ಮಾರ್ಸೆಲ್ ಡಚಾಂಪ್(Marcel Dutchamp)ನ ಕಾಲಕ್ಕೆ ಸರಿಯುತ್ತದಾದರೂ ಕ್ರಿ.ಶ. ೧೯೬೦ರವರೆಗೂ ಭಾವನಾತ್ಮಕ ಕಲಾಪಂಥದ ಕಲಾವಿದರು ತಾವು ಪ್ರಕಟಿಸುವ ಕಲ್ಪನಾ ಬಿಂಬದೆಡೆಗೆ ದೃಷ್ಟಿಯನ್ನು ಹೊರಳಿಸಲು ಜಾಗರೂಕತೆಯಿಂದ ತಮ್ಮ ಕೃತಿಗಳನ್ನು ನಿರ್ವಹಿಸುವಾಗ ದೃಗ್ಗೋಚರತೆಯೆಡೆಗೆ ಅಷ್ಟಾಗಿ ಉತ್ಸುಕತೆಯನ್ನು ತೋರುತ್ತಿರಲಿಲ್ಲ. ಭಾವನಾತ್ಮಕ ಕಲಾ ಪಂಥದ ಕಲಾವಿದರು ಕಲೆಯ ಸ್ವಭಾವ ಹಾಗೂ ಉದ್ದೇಶಪೂರ್ವಕವಾಗಿ ಕುತೂಹಲವನ್ನು ಕೆರಳಿಸುವ ಸೀಮೋಲ್ಲಂಘನ ಮುಂತಾದ ವಿಚಾರವಾಗಿ ಭ್ರಾಂತಿಯನ್ನುಂಟುಮಾಡುವ ಸಮಸ್ಯೆಗಳೆಡೆಗೆ ಹೆಚ್ಚು ನಿಗಾವಹಿಸುತ್ತಿದ್ದರು.

ವಸ್ತು ವಾಚಕ ವರ್ಣಚಿತ್ರಕಲೆ (Concrete Painting)

ಯಾವುದೇ ವಸ್ತುವಿನ ಚಿತ್ರಣವನ್ನು ಮಾಡುವಾಗ ಮಾನವಾಕೃತಿ, ಇಲ್ಲವೇ ಬೇರೆ ಯಾವುದೇ ಆಕೃತಿಗಳನ್ನು ಕೈಬಿಟ್ಟು ಪ್ರಾಥಮಿಕ ಚಿತ್ರಾತ್ಮಕ ಮೂಲಾಂಶಗಳಾದ ಆಯತ, ಇಲ್ಲವೇ ಚೌಕ ಮುಂತಾದ ಜ್ಯಾಮಿತಿಕ ಆಕೃತಿಗಳನ್ನು ಬಳಸಿ ಚಿತ್ರಸಂಯೋಜನೆಯನ್ನು ಮಾಡುವ ಆಧುನಿಕ ಕಲಾಪ್ರಕಾರಗಳಿಗೆ ಈ ಪದವನ್ನು ಅನ್ವಯಿಸಲಾಗುತ್ತದೆ. ಅಲ್ಲದೇ ಈ ಪದವನ್ನು ಅಮೂರ್ತ ಪಂಥದ ಸುಸ್ಪಷ್ಟವಾದ ಚಳವಳಿಗೆ ಅನ್ವಯಿಸಲಾಗುತ್ತದೆಯಲ್ಲದೇ ರಚನಾತ್ಮಕ ಪಂಥ(Constructivism) ಸೂಪರಮ್ಯಾಟಿಜಂ(Supermatism) ಮತ್ತು ಆಧುನಿಕ ರೂಪ ನಿರ್ಮಾಪನ ಪಂಥ(Neo-Plasticism) ಮುಂತಾದ ಪಂಥಗಳೂ ಈ ಪಂಥದ ವ್ಯಾಪ್ತಿಗೆ ಒಳಪಡುತ್ತವೆ. ಅಮೂರ್ತ ಆಕೃತಿಗಳನ್ನೇ ವಸ್ತುವಾಚಕಗಳೆಂದು ಬಣ್ಣಿಸಬಹುದು.

ದಪ್ಪ ವರ್ಣಗಳು (Gouache) ಗ್ವಾಷ್

ದಪ್ಪನಾದ ಜಲವರ್ಣಗಳು, ಬಣ್ಣದ ದಪ್ಪವು ಅದರಲ್ಲಿ ಮಿಶ್ರಣಗೊಳಿಸಿದ ಬಿಳಿಬಣ್ಣದ ಪ್ರಮಾಣಕ್ಕನುಗುಣವಾಗಿರುತ್ತದೆ. ಆದರೆ ಬಣ್ಣದಿಂದ ಹೊರಚಾಚಿ ಕಾಗದವು ಕಾಣದಂತೆ ಅಥವಾ ಕಾಗದ ಬಿಂಬವು ಬಣ್ಣದಿಂದ ಮೇಲೆದ್ದು ಕಾಣದಂತೆ ಮಾಡಲು ಅಷ್ಟೇ ಸಾಕು. ಯಾವುದೇ ಬಣ್ಣದಲ್ಲಿ ಬಿಳಿಬಣ್ಣವನ್ನು ಯಾವುದೇ ಪ್ರಮಾಣದಲ್ಲಿ ಬೆಲೆಸಿದರೂ ಅದು ದಪ್ಪಬಣ್ಣವಾಗುತ್ತದೆ. ಬಣ್ಣದ ಹೊಳಪನ್ನು ಕಡಿಮೆಗೊಳಿಸುತ್ತದೆ. ಗ್ವಾಷ್ ಇಲ್ಲವೇ ದಪ್ಪವರ್ಣಗಳನ್ನು ಹಸ್ತಪ್ರತಿಗಳ ಅಲಂಕಾರಕ್ಕೆ ಬೀಸಣಿಕೆಗಳಿಗೆ ಹಾಗೂ ಪ್ರಾಥಮಿಕ ಕರಡು ಚಿತ್ರಗಳ ರಚನೆಗೆ ಬಳಸಲಾಗುತ್ತಿತ್ತು. “ದೇಹದ ಬಣ್ಣ” ಪದವು ಗ್ವಾಷ್ ಇಲ್ಲವೇ ‘ದಪ್ಪವರ್ಣ’ ಪದಕ್ಕೆ ಪರ್ಯಾಯ ಪದವಾಗಿ ಬಳಕೆಯುಲ್ಲಿದೆ.

ದಪ್ಪವಾಗಿ ಬಣ್ಣ ಹಾಕುವದು ಅಥವಾ ಇಂಪ್ಯಾಸ್ಟೋ (Impasto)

ಕುಂಚಗಳ, ಚಾಕುವಿನ(Knife) ಇಲ್ಲವೇ ಬೇರೆ ಯಾವುದೇ ಚಿತ್ರೀಕರಣದ ಉಪಕರಣಗಳ ಗುರುತುಗಳು ಉಳಿಯುವಂತೆ- ದಪ್ಪನಾಗಿ ಬಣ್ಣವನ್ನು ಲೇಪಿಸುವ ವಿಧಾನವನ್ನು ಇಂಪ್ಯಾಸ್ಟೋ ಎಂದು ಕರೆಯುತ್ತಾರೆ. ಈ ವಿಧಾನದಿಂದ ಉಂಟಾಗುವ ಹೊರಮೈ ರಚನೆಯ ಗುಣಧರ್ಮಗಳು ತೈಲವರ್ಣ ಚಿತ್ರಣ ದೃಷ್ಟಿಯಿಂದ ಕಲಾವಿದನ ವೈಯಕ್ತಿಕ ನೋಟಗಳಾಗುತ್ತವೆ. ಇಂಪಾಸ್ಟೋ ಗುಣಧರ್ಮಗಳನ್ನು ಅಕ್ರಿಲಿಕ್ ವರ್ಣಗಳಲ್ಲಿಯೂ ಕಾಣಬಹುದು. ಆದರೆ ಜಲವರ್ಣ ಇಲ್ಲವೇ ಟೆಂಪೆರಾ ವರ್ಣಗಳಲ್ಲಿ ಈ ಗುಣವನ್ನು ಕಾಣುವುದು ಸಾಧ್ಯವಿಲ್ಲ. ರೆಂಬ್ರಾಂಡ್ಟ್‌ನು ಈ ಇಂಪ್ಯಾಸ್ಟೋ ವಿಧಾನವನ್ನು ಶ್ರೀಮಂತ ರೀತಿಯಲ್ಲಿ ಬಳಸಿದ ಕಲಾವಿದರಲ್ಲಿ ಅಗ್ರಗಣ್ಯ ಕಲಾವಿದನಾಗಿದ್ದಾನೆ.

ಆಧುನಿಕ ರೂಪನಿರ್ಮಾಪನ ಪಂಥ (Neo-Plasticism)

ಪಿಯೆಟ್ ಮಾಂಡ್ರಿಯನ್‌ನ ಶೈಲಿಯನ್ನು ನಿಯೋ-ಪ್ಲಾಸ್ಟಿಸಿಝು ಇಲ್ಲವೇ ಆಧುನಿಕ ರೂಪ ನಿರ್ಮಾಪನ ಪಂಥವೆಂದು ಕರೆಯಲಾಗಿದೆ. ಮೊಂಡ್ರಿಯನ್‌ನು ಕಠಿಣ ನಿಯಮಗಳಿಗೆ ಬದ್ಧವಾದ ಜಾಮಿತಿಗ ಅಮೂರ್ತ ಶೈಲಿಯನ್ನು ಸೃಷ್ಟಿಸಿದನು. ಅವನು ಚಿತ್ರಾತ್ಮಕ ನಕ್ಷೆಯ ಮೂಲಾಂಶಗಳನ್ನು ಸರಳ ರೇಖೆ ಹಾಗೂ ಆಯತಾಕಾರಗಳಿಗೆ ಸೀಮಿತಗೊಳಿಸಿದನಲ್ಲದೇ ಕೆಂಪು,ನೀಲಿ ಮತ್ತು ಹಳದಿ ಮುಂತಾದ ಪ್ರಾಥಮಿಕ ವರ್ಣಗಳಿಗೆ ಸೀಮಿತಗೊಳಿಸಿ ಬಿಳಿ, ಕಪ್ಪು ಮತ್ತು ಬೂದು ಬಣ್ಣಗಳನ್ನೊಳಗೊಳ್ಳುವಂತೆ ಮಾಡಿದನು. ಈ ವಿಧಾನದಲ್ಲಿ ಅವನು ವಿಶ್ವಸಾಮರಸ್ಯದ ಆದರ್ಶವಾದ ಅಭಿವ್ಯಕ್ತಿ ಮಾರ್ಗವನ್ನು ಕಂಡುಕೊಂಡನು.

ಓಪ್‌ಕಲೆ (Op Art)

ಓಪ್‌ಕಲೆಯೂ ಒಂದು ಅಮೂರ್ತ ಮಾದರಿಯಾಗಿದ್ದು ಚಾಕ್ಷುಷ ಇಂದ್ರಿಯ

ಗೋಚರದಿಂದಾಗಿ ನೋಡುಗನಲ್ಲಿ ಸ್ಪಂದನ, ತುಡಿತ ಹಾಗೂ ಮಿನುಗುವಿಕೆಯ ಭ್ರಮೆಯನ್ನುಂಟು ಮಾಡುವ ನೈಪುಣ್ಯವನ್ನು ಓಪ್‌ಕಲೆ ಅಥವಾ ಚಾಕ್ಷುಷ ಕಲೆ ಎಂದು ತಿಳಿಯಲಾಗಿದೆ. ಓಪ್ ಕಲಾವಿದರು ಅನೇಕ ಚಿತ್ರವೃತ್ತಿಗಳನ್ನು ಕೃತಿ ರಚನೆಯಲ್ಲಿ ಬಳಸಿಕೊಂಡು ಕಣ್ಣುಗಳಿಗೆ ಭ್ರಮೆಯನ್ನುಂಟು ಮಾಡುವಂಥ ಕಲಾಕೃತಿಗಳನ್ನು ರಚಿಸುತ್ತಾರೆ. ಅಲ್ಲದೆ ಮನೋಭಾವನೆಗಳು ಎದ್ದು ಬರುವಂತೆ ನಿಷ್ಕೃಷ್ಟವಾದ ಜಾಮಿತಿಕ ಆಕೃತಿಗನ್ನು ಯಥೇಚ್ಛವಾಗಿ ಉಪಯೋಗಿಸುತ್ತಾರೆ. ಹೀಗೆ ರಚಿತವಾದ ಕೃತಿಗಳ ಗುರಿಯು ಅಕ್ಷಿಪಟಲದ ಪ್ರತಿಕ್ರಿಯೆಗಳಿಗೆ ಸಂಬಂಧಿಸಿರುತ್ತದೆ ಈ ಶೈಲಿಯು ಕ್ರಿ.ಶ. ೧೯೬೦ರ ದಶಕದಲ್ಲಿ ವಿಕಾಸಗೊಂಡಿತು. ವಿಕ್ಟರ್ ವಾಸರೆಲಿ(Victor Vasarely) ಮತ್ತು ಬ್ರಿಜೆಟ್ ರಿಲೇ(Bridget Riley) ಅವರುಗಳು ಈ ಶೈಲಿಯ ಪ್ರಧಾನ ಪ್ರತಿಪಾದಕರಾಗಿದ್ದಾರೆ.

ಬಿಂದುವಾಚಕ ಪಂಥ (Pointilism)

ಪದವೇ ಸೂಚಿಸುವಂತೆ ಬಣ್ಣಬಣ್ಣದ ಬಿಂದುಗಳಿಂದ ಚಿತ್ರಕಲಾ ಕೃತಿಯನ್ನು ರಚಿಸುವ ತಂತ್ರವೇ ಬಿಂದುವಾಚಕ ಪಂಥ ಇಲ್ಲವೇ ಪಾಯಿಂಟಲಿಜಂ ಎಂದು ಕರೆಯುತ್ತಾರೆ. ಈ ತಂತ್ರದಲ್ಲಿ ಕಲಾವಿದನು ಯಾವುದೇ ಬಣ್ಣವನ್ನು ಇನ್ನೊಂದು ಬಣ್ಣದಲ್ಲಿ ಬೆರೆಸದಂತೆ ನೇರವಾಗಿ ಶುದ್ಧವರ್ಣವನ್ನೇ ತೆಗೆದುಕೊಂಡು ಬಿಂದುಗಳನ್ನಾಗಲೀ ಚುಕ್ಕೆಗಳನ್ನಾಗಲೀ ಕ್ಯಾನವಾಸಿನ ಮೇಲೆ ಪದ್ಧತಿಗನುಸಾರವಾಗಿ ಇಡುತ್ತಾ ಹೋಗುತ್ತಾನೆ. ಇದೇ ರೀತಿಯಲ್ಲಿ ಚಿತ್ರವನ್ನು ಪೂರ್ಣಗೊಳಿಸುತ್ತಾನೆ. ಹೀಗೆ ಚಿತ್ರಿತವಾದ ಚಿತ್ರವನ್ನು ಸರಿಯಾದ ದೂರದಲ್ಲಿ ನಿಂತು ನೋಡಿದಾಗ ಎಲ್ಲ ಚುಕ್ಕೆಗಳೂ ಒಂದುಗೂಡಿದಂತೆ ಕಂಡು ಕಣ್ಣುಗಳಿಗೆ ಸ್ಪಂದನ ಪರಿಣಾಮವನ್ನುಂಟುಮಾಡುತ್ತವೆಯಲ್ಲದೇ ಬಣ್ಣದಲ್ಲಿ ಬೇರೆ ಬೇರೆ ಬಣ್ಣಗಳನ್ನು ಮಿಶ್ರಗೊಳಿಸಿ ಚಿತ್ರಿಸಿದಾಗ ಸಾಮರಸ್ಯ, ಹೊಂದಾಣಿಕೆಗಳು ದೃಗ್ಗೋಚರವಾಗುವಂತೆಯೇ ಇಲ್ಲಿಯೂ ಕಂಡುಬರುತ್ತವೆ. ಸ್ಯೂರಾತ್(Seurat)ನು ಈ ತಂತ್ರದ ಪ್ರಮುಖ ಪ್ರತಿಪಾದಕನಾಗಿದ್ದನು. ಈ ತಂತ್ರವನ್ನು ಆಧುನಿಕ ಸಮಷ್ಟಿ ಪರಿಣಾಮ ಪಂಥ(Neo-Impressionist)ದ ಕಲಾವಿದರು ಬಳಸಿದರು.

ಮುಗ್ಧ ಕಲಾ ಪಂಥ (Naive Art)

ಆಭಾಸಯುಕ್ತ ತರ್ಕಕ್ಕೊಳಪಟ್ಟ ಇಲ್ಲವೇ ಒಂದು ರೀತಿಯ ಭ್ರಾಂತಿಗೊಳಪಟ್ಟ ಆಧುನಿಕ ಸಮಾಜಗಳಲ್ಲಿ ಬಳಕೆಯಲ್ಲಿರುವ, ಸಾಂಪ್ರದಾಯಕ ಪ್ರಾತಿನಿಧಿಕ ಜಾಣ್ಮೆಯಿಲ್ಲದೆ ವರ್ಣಚಿತ್ರ ಕಲಾಕೃತಿಗಳನ್ನು ನಿರ್ಮಿಸುವ ಕಲಾ ಪ್ರಕಾರವನ್ನು ಮುಗ್ಧ ಕಲೆ ಇಲ್ಲವೆ ನೇವ್ ಕಲೆ ಎಂದು ಕರೆಯುತ್ತಾರೆ. ಕಣ್ಣು ಕುಕ್ಕುವ ಪ್ರಖರ ಹೊಳಪುಳ್ಳ ಹಾಗೂ ಅಸ್ವಾಭಾವಿಕ ವರ್ಣಗಳನ್ನು ಬಳಸಿ, ಅವೈಜ್ಞಾನಿಕ ಯಥಾದರ್ಶನ, ಬಾಲಿಶ ನೋಟ ಅಥವಾ ಸಾಹಿತ್ಯಿಕ ಕಟ್ಟುಪಾಡುಗಳಿಗೊಳಪಟ್ಟ ಬುದ್ಧಿ ಮತ್ತೆಯನ್ನು ಪ್ರದರ್ಶಿಸುವ ರೀತಿಗಳು ಈ ಮುಗ್ಧ ಕಲೆಯ ಗುಣಧರ್ಮಗಳಾಗಿವೆ. ತಾಜಾತನದಲ್ಲಿ ಒಲವು, ನೇರ ನೋಟಗಳ ಸುಪ್ರಸಿದ್ಧ ಮುಗ್ಧಕಲೆಯ ಪ್ರತಿಪಾದಕ ಹೆನ್ರಿ ರೊಸೋ(Henri Rousseau)

ನಂತಹ ಕಲಾವಿದರಿಂದ ಕ್ರಿ.ಶ. ೨೦ನೆಯ ಶತಮಾನದ ಪ್ರಾರಂಭ ಕಾಲದಲ್ಲಿ ಫ್ರಾನ್ಸ್‌ನಲ್ಲಿ ಈ ಕಲೆಯ ಬೆಳವಣಿಗೆಯಾಯಿತು. ಆನಂತರದ ಮುಗ್ಧಕಲಾ ಪಂಥದ ಅನೇಕ ಕಲಾವಿದರು ಉದಾಹರಣೆಗೆ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ಗ್ರ್ಯಾಂಡ್ಮಾ ಮಾಜೆಸ್(Grandma Moses)ನಂಥ ಕಲಾವಿದರು ಕಷ್ಟಸಾಧ್ಯದಿಂದ ತಮ್ಮ ಇರುವಿಕೆಗೆ ಮನ್ನಣೆಯನ್ನು ಗಳಿಸಿಕೊಳ್ಳಬೇಕಾಯಿತು.

ಪ್ಯಾನಲ್ (Panel)

ಕ್ಯಾನವಾಸಿಗೆ ಬದಲಾಗಿ ಮರದ ಹಲಗೆ, ತಗಡು ಅಥವಾ ಬೇರೇ ಯಾವುದಾದರೂ ಗಡುಸಾದ ಗುಣಧರ್ಮದ ವಸ್ತುಗಳ ಮೇಲೆ ವರ್ಣಚಿತ್ರಗಳನ್ನು ರಚಿಸುವ ವಿಧಾನವನ್ನು ಪ್ಯಾನಲ್ ಪೇಂಟಿಂಗ್ ಎಂದು ಕರೆಯುತ್ತಾರೆ. ಕ್ರಿ.ಶ. ೧೫ ನೆಯ ಶತಮಾನದಲ್ಲಿ ಕ್ಯಾನ್‌ವಾಸ್ ಶೋಧವಾಗುವವರೆಗೆ ಯುರೋಪಿನಲ್ಲಿ ವರ್ಣಚಿತ್ರಗಳನ್ನು ಸಂಚಾರ ಯೋಗ್ಯವಾದ ಮರದ ಹಲಗೆಗಳ ಮೇಲೆಯೇ ರಚಿಸಲಾಗುತ್ತಿತ್ತು. ಇದಕ್ಕಾಗಿ ಓಕ್ ಪಾಪ್ಲರ್ ಮತ್ತು ಸೂಚಿಪಣಿ ಅಥವಾ ಫೈನ್ ಮರಗಳನ್ನು ಬಳಸಲಾಗುತ್ತಿತ್ತು. ಮರದ ಹಲಗೆಯು ಚೆನ್ನಾಗಿ ಒಣಗಿದ ನಂತರ ಗೆಸ್ಸೋನಂಥ ವಸ್ತುವನ್ನು ಅದರ ಮೇಲೆ ಲೇಪಿಸಿ ನಂತರ ಬೇಕಾದ ಚಿತ್ರವನ್ನು ವರ್ಣಗಳಿಂದ ಚಿತ್ರಿಸಲಾಗುತ್ತಿತ್ತು. ಅಲ್ಲದೇ ತಾಮ್ರದ ತಗಡು, ಪಾಚಿ ಮತ್ತು ಒತ್ತಿ ತಯಾರಿಸಿದ ರಟ್ಟು (Mill board) ಮುಂತಾದವುಗಳ ಬಳಕೆಯೂ ಇದ್ದೀತು. ಕ್ರಿ.ಶ. ೨೦ನೆಯ ಶತಮಾನದ ಪ್ಯಾನಲ್ ಚಿತ್ರಕಾರರು ಪ್ಲಾಯ್‌ವುಡ್ ಮತ್ತು ಬೇರೆ ರೀತಿಯ ಕೃತಕ ವಸ್ತುಗಳನ್ನು ಉಪಯೋಗಿಸತೊಡಗಿದರು.

ಅಟೋಮ್ಯಾಟಿಜಂ (Automatism)

ಕಲಾವಿದನು ತನ್ನ ಸುಪ್ತ ಮನಸ್ಸನ್ನು ತೊಡಗಿಸಿ ಕೈಯ ಚಲನವಲನಗಳನ್ನು ನಿಗ್ರಹಿಸಿ ರಚಿಸುವ ವರ್ಣಚಿತ್ರ ಕಲಾಕೃತಿಗಳನ್ನು ರಚಿಸುವ ವಿಧಾನವನ್ನೇ ಆಟೋಮ್ಯಾಟಿಜಂ ಅಥವಾ ಬುದ್ಧಿಗಮನವಿಲ್ಲದೇ ತನ್ನಷ್ಟಕ್ಕೇ ತಾನೇ ನಡೆಯುವ ಚಿತ್ರಣ ಕಾರ್ಯವಿಧಾನವೆಂದು ಕರೆಯಲಾಗುತ್ತದೆ. ಆದರೂ ಕೆಲವು ಹಿಂದಿನ ಕಲಾವಿದರು ಈ ವಿಧಾನದಲ್ಲಿ ಕಲ್ಪನೆಗಳನ್ನು ನಿರೀಕ್ಷಿಸುತ್ತಿದ್ದರು. ಆಟೋಮ್ಯಾಟಿಜಂ ಪದ್ಧತಿಯನ್ನು ಸರ್ರಿಯಲಿಸ್ಟ್ ಮತ್ತು ಅಮೂರ್ತ ಅಭಿವ್ಯಕ್ತಿ ಪಂಥದ ಜಾಂಕ್ಸನ್ ಪೊಲಾಕ್(Jockson Pollock) ನಂತಹ ಚಾಲನಾಚಿತ್ರಕಲಾವಿದರು(Action Painters) ಸಂಪೂರ್ಣ ಅಭಿವೃದ್ಧಿಗೊಂಡ ರೂಪದಲ್ಲಿ ಬೆಳೆಸಿದರೆಂದು ಹೇಳಬಹುದು.

ಪೇಸ್ಟಲ್ (Pastel) ಕಲಾಕೃತಿಗಳು

ಡ್ರಾಯಿಂಗ್ ಇಲ್ಲವೇ ವರ್ಣಚಿತ್ರಗಳನ್ನು ರಚಿಸುವ ಒಂದು ಸಾಧನೆ. ಹುಡಿವರ್ಣವನ್ನು ಅಂಟಿನಲ್ಲಿ ಬೆರೆಸಿ ಕಡ್ಡಿಯಾಕಾರದಲ್ಲಿತಯಾರಿಸಿದ ಬಣ್ಣದ ಕಡ್ಡಿಗಳನ್ನೇ ಪೇಸ್ಟಲ್ ವರ್ಣಗಳೆಂದು ಕರೆಯುತ್ತಾರೆ. ಈ ಬಣ್ಣದ ಕಡ್ಡಿಗಳನ್ನು ನೇರವಾಗಿ ಕಾಗದದ ಮೇಲೆ

ಬಳಸಬಹುದು. ಬದಲಾವಣೆಗೆ ಅವಕಾಶವಿರುವದಿಲ್ಲವಾದ್ದರಿಂದ ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗುತ್ತದೆ. ಈ ಬಣ್ಣದ ಕಡ್ಡಿಗಳನ್ನು ಬಳಸಿ ಚಿತ್ರಿಸಿದ ಚಿತ್ರವು ಒಡೆದು, ಹುಡಿಯುದುರಿ ಹಾಳಾಗಿ ಹೋಗುವ ಸಂಭವವಿರುವದರಿಂದ ಚಿತ್ರದ ಹಾಳಾಗುವಿಕೆಯನ್ನು ನಿವಾರಿಸಲು ಚಿತ್ರದ ಪರುಶುಭ್ರತೆಯನ್ನು ಕುಗ್ಗಿಸಿದರೂ ಸಹ ಅದರ ಮೇಲೆ ಒಂದು ರೀತಿಯ ಅಂಟು (Fixative) ಪದಾರ್ಥವನ್ನು ಲೇಪಿಸಲೇ ಬೇಕಾದುದು ಅವಶ್ಯವಾಗಿದೆ. ಕ್ರಿ.ಶ. ೧೮ನೆಯ ಶತಮಾನದ ಕಲಾವಿದರು ಈ ಬಣ್ಣದ ಕಡ್ಡಿಗಳನ್ನು ಭಾವಚಿತ್ರ(Portraits)ಗಳ ರಚನೆಗೆ ಬಳಸುತ್ತಿದ್ದರು. ಕ್ರಿ.ಶ.೧೯ನೆಯ ಶತಮಾನದ ಡೇಗಾ(Degas) ನಂತಹ ಸಮಷ್ಟಿ ಪರಿಣಾಮ ಪಂಥದ ಕಲಾವಿದರು ಮತ್ತೆ ಬಳಕೆಯಲ್ಲಿ ತಂದರು.

ಕಂಪನಿ ಪೇಂಟಿಂಗ್ (Company Painting)

ಕ್ರಿ. ಶ. ೧೮ ಮತ್ತು ೧೯ನೆಯ ಶತಮಾನಗಳಲ್ಲಿ ಭಾರತೀಯ ವರ್ಣ ಚಿತ್ರಕಲಾವಿದರು ಬ್ರಿಟಿಷ್ ವಸಾಹತುದಾರರಿಗಾಗಿ ಕಲಾಕೃತಿಗಳನ್ನು ರಚಿಸಿಕೊಡುತ್ತಿದ್ದರು. ಈ ವಸಾಹತುದಾರ ಗಿರಾಕಿಗಳು ಹೆಚ್ಚಾಗಿ ಈಸ್ಟ್ ಇಂಡಿಯಾ ಕಂಪನಿಗೆ ಸೇರಿದವರಾಗಿದ್ದರು. ಹೀಗಾಗಿ ಈ ಕಲಾಕೃತಿಗಳಿಗೆ 'ಕಂಪನಿ ಪೇಂಟಿಂಗ್' ಎಂಬ ಹೆಸರೇ ನಿಯುಕ್ತವಾಯಿತು. ಕಲ್ಕತ್ತಾ, ದೆಹಲಿ, ಲಾಹೋರ್, ಲಖನೌ ಮತ್ತು ಪಟ್ನಾಗಳು ಈ ಕಂಪನಿ ವರ್ಣಚಿತ್ರಗಳ ಪ್ರಮುಖ ಕೇಂದ್ರಗಳಾಗಿದ್ದವು. ಈ ವರ್ಣಚಿತ್ರಗಳು ಸಾಮಾನ್ಯವಾಗಿ ಜಲವರ್ಣಗಳಲ್ಲಿ ಚಿತ್ರಿಸಲ್ಪಡುತ್ತಿದ್ದು ಭಾರತೀಯ ಮತ್ತು ಯುರೋಪಿನ ಸಾಂಪ್ರದಾಯಗಳ ಮಿಶ್ರಣ ಶೈಲಿಯಲ್ಲಿರುತ್ತಿದ್ದವು. ನಿಸರ್ಗ(Landscapes)ಚಿತ್ರಗಳು, ಭಾವಚಿತ್ರಗಳು, ಪ್ರಾಣಿಗಳು, ಮತ್ತು ಸಸ್ಯಗಳು ಚಿತ್ರದ ವಸ್ತುಗಳಾಗಿರುತ್ತಿದ್ದವು. ೧೯ನೆಯ ಶತಮಾನದಲ್ಲಿ ಭಾರತದ ಜನತೆಯ ದಿನನಿತ್ಯದ ಚಟುವಟಿಕೆಗಳು ದೇವ-ದೇವತೆಗಳು, ಹಬ್ಬಗಳು, ಸ್ಮಾರಕಗಳು ಮತ್ತು ಕ್ಯಾಮರಾ ಬಳಕೆಯಲ್ಲಿ ಬರುವ ಮುನ್ನ, ವಸಾಹತುದಾರರ ಬ್ರಿಟನ್ನಿನಲ್ಲಿರುವ ಅವರ ಬಂಧುಗಳ ಚಿತ್ರಗಳು ಮುಂತಾದವುಗಳ ರಚನೆಯಾಯಿತು.

ಮೊಂಟೇಜ (Mantage)

ಕತ್ತರಿಸಿದ ಸಂದರ್ಭ ಚಿತ್ರಗಳನ್ನಾಗಲೀ ಇಲ್ಲವೇ ಅವುಗಳ ಸಣ್ಣ ಸಣ್ಣ ತುಂಡುಗಳನ್ನಾಗಲೀ ಸರಿಯಾಗಿ ಹೊಂದಿಸಿ ಜೋಡಿಸಿ ಬಣ್ಣದ ರಟ್ಟು ಅಥವಾ ಮೌಂಟ್‌ಗಳ ಮೇಲೆ ಅಂಟಿಸುವ ಚಿತ್ರಾತ್ಮಕ ತಂತ್ರವನ್ನು ಮೊಂಟೇಜ ಎಂದು ಕರೆಯುತ್ತಾರೆ. ಈ ರೀತಿಯಲ್ಲಿ ತಯಾರಿಸಿದ ಚಿತ್ರವನ್ನು ಮೊಂಟೇಜ ಎಂದು ಕರೆಯುತ್ತಾರೆ. ಮಾಂಟೇಜ ಹಾಗೂ ಕೋಲಾಜ್‌ಗಳಲ್ಲಿ ವ್ಯತ್ಯಾಸವಿರುತ್ತದೆ. ಕೊಲಾಜ್‌ನಲ್ಲಿ ಕಲಾವಿದನು ತಾನು ಚಿತ್ರಿಸಲಿರುವ ಕೃತಿಗೆ ಯೋಗ್ಯವೆನಿಸುವ ಆಕೃತಿಗಳನ್ನು(Images) ಆರಿಸಿ ಹುಡುಕಿಕೊಳ್ಳಬೇಕಾಗುತ್ತದೆ, ಆದರೆ ಮಾಂಟೇಜ ಕೃತಿಗಾಗಿ ಸಿದ್ಧ ಆಕೃತಿಗಳನ್ನೇ ಜೋಡಿಸಿಕೊಳ್ಳಬೇಕಾಗುತ್ತದೆ. ಈ ತಂತ್ರವನ್ನು ಹೆಚ್ಚಾಗಿ ಪ್ರಚಾರ ಚಿತ್ರಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಉದಾಹರಣೆಗಾಗಿ ರಾಜಕೀಯ ವಿಡಂಬನಾತ್ಮಕ. ಮಾಂಟೇಜ

ಕೃತಿಗಳೆಂದು ಹೆಸರಿಸಬಹುದು. ಛಾಯಾಚಿತ್ರಗಳನ್ನು ಬಳಸಿ ತಯಾರಿಸುವ ಮಾಂಟೇಜಗಳನ್ನು ಫೋಟೋ ಮಾಂಟೇಜ(Photo Montage) ಎಂದು ಕರೆಯಲಾಗುತ್ತದೆ. ಇದೇ ತಂತ್ರದ ಆಧಾರದಿಂದಲೇ ಪ್ರತ್ಯೇಕವಾದ ಫಿಲ್ಮ್‌ಗಳ ತುಣುಕುಗಳನ್ನು ಬಳಸಿ ಯಾವುದೇ ಒಂದು ಸನ್ನಿವೇಶವನ್ನು ಸೂಚಿಸುವ ಮಾಂಟೇಜನ್ನು ತಯಾರಿಸಿ ಚಲನಚಿತ್ರಗಳಿಗಾಗಿ ಉಪಯೋಗಿಸುತ್ತಾರೆ.


ಏರ್‌ಬ್ರಶ್ (Air Brush)

ವರ್ಣ ಇಲ್ಲವೆ ವಾರ್ನಿಷ್‌ಗಳನ್ನು ತುಂತುರು ಹನಿಗಳ ರೂಪದಲ್ಲಿ ಸಿಂಪಡಿಸಲು ಬಳಸುವ ಉಪಕರಣವನ್ನು ಸಿಂಪರಣಾ ಕುಂಚ ಅಥವಾ ಏರ್‌ಬ್ರಶ್ (Air Brush) ಎಂದು ಕರೆಯುತ್ತಾರೆ. ಈ ಸಿಂಪರಣಾ ಕುಂಚವು ಫೌಂಟನ್ ಪೆನ್ನಿನಂತಿದ್ದು ಪೆನ್ನನ್ನು ಬಳಸುವ ರೀತಿಯಲ್ಲಿಯೇ ಬಳಸಲ್ಪಡುತ್ತದೆ. ಆದರೆ ತೋರುಬೆರಳಿನ ಒತ್ತುವಿಕೆಯಿಂದ ಸಿಂಪರಣಾ ಕುಂಚದ ಮೊನೆಯಿಂದ ನುಸುಳುವ ವಾಯು(ಗಾಳಿ)ವಿನಿಂದಾಗಿ ಬಣ್ಣ ಅಥವಾ ವಾರ್ನಿಷ್ ಸಣ್ಣ ಸಣ್ಣ ತುಂತುರು ಹನಿಗಳಲ್ಲಿ ಕಾಗದ ಇಲ್ಲವೇ ಕ್ಯಾನವಾಸಿನ ಮೇಲೆ ಪಸರಿಸಿ ಏಕೀಭವಿಸಿ ಕಣ್ಣಿಗೆ ಅಂದವಾಗಿ ಗೋಚರಿಸುತ್ತದೆ. ಹೀಗೆ ತೋರುಬೆರಳನ್ನು ಒತ್ತುವಾಗ ಅವಶ್ಯಕಗಳಿಗೆ ತಕ್ಕಂತೆ ಹೊಂದಿಕೆಯಾಗುವ ರೀತಿಯಲ್ಲಿ ಗಾಳಿಯನ್ನು ಹೆಚ್ಚು ಕಡಿಮೆಯಾಗಿ ಒದಗಿಸಿಕೊಳ್ಳಬೇಕಾಗುತ್ತದೆ. ಈ ಸಿಂಪರಣಾ ಕುಂಚವನ್ನು ಬೇಕಾದ ರೀತಿಯಲ್ಲಿ ನಿಗ್ರಹಿಸಿಕೊಂಡು ವರ್ಣಗಳು ವಿಸ್ತೃತ ಕ್ಷೇತ್ರವನ್ನು ಸಪಾಟಾಗಿ ವ್ಯಾಪಿಸುವಂತೆಯೂ ಸೂಕ್ಷ್ಮಾತಿಸೂಕ್ಷ್ಮವಾದ ವರ್ಣವಿನ್ಯಾಸ ಇಲ್ಲವೇ ಪರಿಶುದ್ಧವಾದ ನೀಟಾದ ರೇಖೆಗಳನ್ನೂ ಚಿತ್ರಿಸಬಹುದು. ಹೆಚ್ಚಾಗಿ ಅನ್ವಯ ಕಲಾಕೃತಿಗಳ ರಚನೆಗಾಗಿಈ ಸಿಂಪರಣಾ ಕುಂಚವನ್ನು ಬಳಸಲಾಗುತ್ತದೆ.

ಜನಪ್ರಿಯ ಕಲೆ ಅಥವಾ ಪಾಪ್‌ಕಲೆ (Pop Art)

ಜನಪ್ರಿಯ ಸಂಗೀತದಂತೆಯೇ(Pop music) ಜನಪ್ರಿಯ ಕಲೆಯೂ ಅದಕ್ಕೆ ಸಮಾನಂತರವಾಗಿಯೇ ಬೆಳೆದು ಬಂದ ಕಲೆಯಾಗಿದ್ದು ನಮ್ಮ ಕಾಲದ ಕಲಾಪ್ರಪಂಚಕ್ಕೆ ಅಮೇರಿಕೆಯ ಗಮನಾರ್ಹ ಕೊಡುಗೆಯಾಗಿದೆ. ಈ ಪಂಥವನ್ನು ನ್ಯೂಯಾರ್ಕ್‌ನ ಗಜೆನ್‌ಹೀಮ(Guggenheim) ವಸ್ತು ಸಂಗ್ರಹಾಲಯದ ಕ್ಯುರೇಟರ್ ಆಗಿದ್ದ ಲಾರೆನ್ಸ್ ಅಲೋವೇ(Lawrence Alloway) ಅವರು ಜನಪ್ರಿಯ ಕಲೆ ಅಥವಾ ಪಾಪ್‌ಕಲೆ ಎಂದು ಹೆಸರಿಸಿದರು. ತಕ್ಷಣವೇ ಈ ಪಂಥವು ಪ್ರಪಂಚದಾದ್ಯಂತ ಪ್ರಸರಿಸಿತು. ಕ್ರಿ. ಶ. ೧೯೬೦ ದಶಕದಲ್ಲಿ ವೇನಿಸ್ ನಗರದಲ್ಲಿ ನಡೆದ ಅಂತರ್ರಾಷ್ಟ್ರೀಯ ಕಲಾಪ್ರದರ್ಶನ ಬಾಯನಾಲೆ(Biennale)ಯಲ್ಲಿ ಈ ಪಂಥದ ಮಹಾಪ್ರತಿಪಾದಕನೆಂದು ಖ್ಯಾತನಾದ ರಾಬರ್ಟ್ ರಾಷನ್‌ಬರ್ಗ್(Robert Rauschenberg)ನು ಪ್ರಥಮ ಬಹುಮಾನದ ಪುರಸ್ಕಾರವನ್ನು ಪಡೆದಾಗ ಈ ಕಲೆಗೆ ಮಾನ್ಯತೆ ಮತ್ತು ಸ್ವೀಕೃತಿಗಳು ದೊರಕಿದವು.

ಜನಪ್ರಿಯ ಕಲೆ ಅಥವಾ ಪಾಪ್‌ಕಲಾವಿದರು ಅಮೇರಿಕೆಯ ಧ್ವಜ "ಲೈಫ್"



೩೮) ಆ್ಯಂಡಿ ವಾರ್ಹೋಲ್

ಮಾಸಿಕ ಪತ್ರಿಕೆಯ ಮುಖಪುಟಗಳು, ಮರ್ಲಿನ್ ಮುನ್ರೋ, ಎಲಿಜಬೆತ್ ಟೇಲರ್ ಅಂಥ ಸುಪ್ರಸಿದ್ಧ ಚಲಚ್ಚಿತ್ರ ನಟಿಯರ ಛಾಯಾಚಿತ್ರಗಳು, ಗ್ರಾಹಕರ ಮನೆಮಾತಾಗಿದ್ದ ಕ್ಯಾಂಪ್‌ಬೆಲ್ ಕಂಪನಿಯ ಸೂಪ್(ತಿಳಿಯಾದ ಸಾರ) (Soup)ನ ಡಬ್ಬಿಗಳು, ಬಂದೂಕಿನ ಗುಂಡುಗಳು, ವರ್ಣಮಾಲೆಯ ಅಕ್ಷರಗಳು, ರಸ್ತೆಯ ಮಾರ್ಗದರ್ಶಿಗಳು(Road Signs), ಹುಲ್ಲುತುಂಬಿದ ಪಕ್ಷಿಗಳುStuffed Birds) ಕರಿದ್ರಾಕ್ಷಿಹಣ್ಣುಗಳು ಮುಂತಾದ ಸಮೂಹ ಮಾಧ್ಯಮದ ಜನಪ್ರಿಯ ವಸ್ತುಗಳನ್ನು ಲಾಂಛನಗಳಾಗಿಯೂ(Symbols) ಮಾದರಿಗಳನ್ನಾಗಿಯೂ ತಮ್ಮ ವರ್ಣ ಚಿತ್ರ ಕಲಾಕೃತಿಗಳಲ್ಲಿ ಬಳಸಿಕೊಂಡರಲ್ಲದೇ ಪ್ರತಿದಿನದ ಸಾಮಾನ್ಯ ಬಳಕೆಯೇ ಈ ವಸ್ತುಗಳೇ ಅವರ ಚಿತ್ರಣ ವಸ್ತುಗಳಾದವು.

ಪಾಪ್‌ಕಲಾ ಪಂಥದ ಅಗ್ರಗಣ್ಯಕಲಾವಿದ ರಾಯ್ ಲಿಚ್‌ಟೆನ್‌ಸ್ಟೀನ(Roy Lichtenstein)ನು ಪಾಪ್‌ಕಲೆಯು ಪ್ರಯೋಗರಹಿತ, ಉದ್ದೇಶ ರಹಿತ, ಅಭಿವ್ಯಕ್ತಿರಹಿತ, ನಿಬಂಧನ ರಹಿತ, ಚಾಲನೆ-ಬೆಳಕು ರಹಿತ, ವರ್ಣಗುಣಧರ್ಮರಹಿತವಾಗಿದ್ದು ಅಗ್ರಗಾಮಿ ಪಂಥಗಳ ಎಲ್ಲ ಉಜ್ವಲ ಪರಿಕಲ್ಪನೆಗಳಿಂದಲೂ ಮುಕ್ತವಾಗಿರುತ್ತದೆ"- ಎಂದು ಪಾಪ್‌ಕಲೆಯು ಕಣ್ಣಿಗೆ ಕಟ್ಟುವ ರೀತಿಯಲ್ಲಿ ಬಣ್ಣಿಸಿದ್ದಾನೆ. ರಾಬರ್ಟ್ ರಾಷನ್ ಬರ್ಗ್ ಮತ್ತು ಜಸ್ಪರ್ ಜಾನ್ಸ್(Jasper Johns) ಅವರಿಂದ ಈ ಪಂಥವು ಪ್ರಾರಂಭವಾಯಿತೆಂದು ತಿಳಿಯಲಾಗಿದೆ. ರಾಷೆನ್‌ಬರ್ಗನು "ಜೋಡಣೆ"ಗಳಲ್ಲಿ(Combines)

ಪ್ರಾವೀಣ್ಯತೆಯನ್ನು ಪಡೆದವನಾಗಿದ್ದನು. ಅವನು ವೃತ್ತಪತ್ರಿಕೆಗಳ ಕತ್ತರಿಸಿದ ತುಂಡುಗಳು, ಚಿಂದಿ ಬಟ್ಟೆಗಳು, ಹಗ್ಗಗಳು, ಚಪ್ಪಟೆಯಾದ ಡಬ್ಬಿಗಳು, ಹುಲ್ಲು ತುಂಬಿದ ಪಕ್ಷಿಗಳನ್ನು ಅನಿಶ್ಚಿತ ಕ್ರಮದಲ್ಲಿ ತನ್ನ ಕ್ಯಾನವಾಸಿನ ಮೇಲೆ ಅಂಟಿಸುತ್ತಿದ್ದನು. ಜಸ್ಪರ್ ಜಾನ್ಸ್‌ನು ತನ್ನ ಶಿಲ್ಪಕಲಾಕೃತಿಗಳಿಂದ ಪ್ರಸಿದ್ಧಿಯನ್ನು ಪಡೆದವನಾಗಿದ್ದನು. ಮುರಿದ ಬ್ಯಾಟರಿಯನ್ನು ಎರಡು ಮೊಳೆಗಳನ್ನು ಹೊಡೆದು ನಿರ್ಮಿಸಿದ ಪ್ರಥಮ ಕೃತಿಯಿಂದ ಪ್ರಸಿದ್ಧಿಯನ್ನು ಪಡೆದ ನಂತರ ಅವನು ಬೀಯರ್ ಡಬ್ಬಿಗಳನ್ನು ಹೆಚ್ಚಾಗಿ ತನ್ನ ಶಿಲ್ಪಗಳಲ್ಲಿ ಬಳಸತೊಡಗಿದನು. ದಿನದಿಂದ ದಿನಕ್ಕೆ ತಿರಸ್ಕೃತವಾಗುವ ನಿತ್ಯೋಪಯೋಗಿ ವಸ್ತುಗಳಿಗೆ ಹೊಸ ರೂಪುಕೊಟ್ಟು ಭೋಗ್ಯವಸ್ತುವನ್ನಾಗಿ ಪರಿವರ್ತಿಸುವ ಜನಪ್ರಿಯ ಶಿಲ್ಪ ಕಲಾವಿದ ಜಸ್ಪರ್ ಜಾನ್ಸ್. ಆ್ಯಂಡಿ ವಾರ್ಹೋಲ್ (Andy Warhol) ಈ ಪಾಪ್ ಕಲಾಪಂಥದ ಮತ್ತೊಂದು ದೊಡ್ಡ ಹೆಸರು. ಅವನು ಆರು ಅಡಿಗಳಷ್ಟು ಎತ್ತರದ ರೇಷ್ಮೆ ಜವನಿಕೆಗಳ ಮಾದರಿಗಳ ರಚನೆಯಲ್ಲಿ ಸಿದ್ಧಹಸ್ತನಾಗಿದ್ದು ಕ್ಯಾಂಪ್‌ಬೆಲ್ ಕಂಪನಿಯ ಸೂಪ್‌ಡಬ್ಬಿಗಳು, ಅಳತೆ ಮೀರಿದ ಕೋಕಾಕೋಲಾ ಬಾಟಲಿಗಳನ್ನು ಬಳಸಿ ಕೃತಿಗಳನ್ನು ರಚಿಸುವ ವಾರ್ಹೋಲ್‌ನ ಕೈಚಳಕ. ಬೆರಳು ಕಚ್ಚುವಂಥದು.

ಚಲನಾತ್ಮಕ ಕಲೆ ಅಥವಾ ಕೈನೆಟಿಕ್ ಕಲೆ (Kinetic Art)

ಚಲನಾತ್ಮಕ ಇಲ್ಲವೇ ಕೈನೇಟಿಕ್ ಕಲೆಯು ವರ್ಣಚಿತ್ರಗಳ ಶಿಲ್ಪ ಕಲಾಕೃತಿಗಳ ಪರಿಮಾಣಗಳನ್ನು ವಿಸ್ತೃತಗೊಳಿಸಿದೆ ಎಂದು ಹೇಳಬಹುದು. ಕೈನೆಟಿಕ್ ಕಲೆಯ ಅಧಿಕಾರವಾಗಲೀ ಋಣಾಂಶವಾಗಲೀ ಚಲನೆ'ಗೆ ಸಂಬಂಧಿಸಿದುದಾಗಿದೆ. ಕೈನೆಟಿಕ್ ಕಲಾವಿದರು ಇಂದಿನ ಕಲೆಯಲ್ಲಿ ಈ ಕಾಲದ ಸ್ಫೂರ್ತಿಯನ್ನು ಪ್ರತಿಬಿಂಬಿಸಬೇಕು, ಕಲೆಗೆ ಹೊಸ ನೋಟವನ್ನು ಕೊಡಬೇಕು, ಅದಕ್ಕಾಗಿ ಸಾಂಪ್ರದಾಯಕ ಸ್ಥಾಯೀ ಸ್ವಭಾವದ ವರ್ಣಚಿತ್ರಗಳಲ್ಲಿ ಶಿಲ್ಪಕಲಾಕೃತಿಗಳಲ್ಲಿ ಚಲನೆಯನ್ನು ತುಂಬುವುದು ಅವಶ್ಯವಾಗಿದೆ ಎಂದು ಭಾವಿಸಿದರು. "ಅಂತರಿಕ್ಷ ಪ್ರವಾಸದ ಈ ಯುಗದಲ್ಲಿ ಸ್ಥಾಯೀಭಾವದ ಅಥವಾ ನಿಂತ ನೀರಿನಂತಿರುವ ಕಲೆಯು ಕಣ್ಮರೆಯಾಗಬೇಕು"- ಇದು ಕೈನೆಟಿಕ್ ಕಲಾವಿದರ ಅನಿಸಿಕೆ. ಈ ಅನಿಸಿಕೆ ಪ್ರಥಮವಾದದ್ದೇನಲ್ಲ. ನಲ್ವತ್ತು ವರುಷಗಳಿಗೂ ಹಿಂದೆಯೇ ಲಾಸ್‌ರ್ಝ್ಲೋ ಮೊಹೋಲಿ-ನೇಗಿ(Laszlo Moholi - Nagy) ಫ್ರಾನ್ಸಿಸ್ ಪಿಕೇಬಿಯ(Franicis Picabia), ಮಾರ್ಸೆಲ್ ಡಚಾಂಪ್ (Marsel Duchamp) ಮತ್ತು ಮಾನ್‌ರೇ(Man Ray) ಮುಂತಾದವರು ವಿಚಾರಹೀನ ಯಾಂತ್ರಿಕತೆ, ಆವರ್ತಕ ಗೋಳಾರ್ಧಗಳು ಮತ್ತು ಬೇರೆ ಬೇರೆ ತಂತ್ರಗಳನ್ನು ಕುರಿತು ಚರ್ಚಿಸಿದರಲ್ಲದೇ ಪ್ರಯೋಗಗಳನ್ನೂ ಮಾಡಿದರು. ಈ ಎಲ್ಲ ಕಲಾವಿದರಲ್ಲಿ ಅಗ್ರಗಣ್ಯ ಕಲಾವಿದನೆನಿಸಿದ ಅಮೇರಿಕೆಯ ಶಿಲ್ಪಕಲಾವಿದ ಅಲೆಕ್ಸಾಂಡರ್ ಕಾಲ್ಡರ್(Alexander Calder)ನು ತನ್ನ "ಸುಲಭ ಸಾಗಣೆಗಳು" ಅಥವಾ "ಮೊಬ್ಯಾಲ್ಸ್"ನಂಥ ಕ್ರಾಂತಿಕಾರಿ ಶಿಲ್ಪಕಲಾಕೃತಿಗಳಿಂದ ಕೈನೆಟಿಕ್ ಕಲಾಪಂಥವನ್ನು ಕ್ರಾಂತಿಕಾರೀ ಪಂಥವನ್ನಾಗಿ ಮಾಡಿದನು. ಅವನ ಲೋಹ ಶಿಲ್ಪಕಲಾಕೃತಿಗಳು ಗಾಳಿಯಲ್ಲಿ ತೂಗಾಡುತ್ತಿದ್ದವು, ಚಲಿಸುತ್ತಿದ್ದವು ಮತ್ತು ತಿರುಗುತ್ತಿದ್ದವು.

ಅವನ ಕ್ರಾಂತಿಕಾರೀ ಕಲ್ಪನೆಯಿಂದಾಗಿ ಶಿಲ್ಪಗಳು ಒಳಮಾಳಿಗೆಯಿಂದ ತೂಗಾಡುತ್ತಿದ್ದವು. ಗಾಳಿಯೊಂದಿಗೆ ಚಲಿಸುತ್ತಿದ್ದವು ಅಲ್ಲದೇ ಶಬ್ದವನ್ನೂ ಮಾಡುತ್ತಿವೆ. ಅವನ "ಸುಲಭ ಸಾಗಣೆಗಳು"ಗಳು ಆಟದ ವೈಲಕ್ಷಣಪೂರ್ಣ ಸಂಪನ್ಮೂಲಭರಿತ ಸಂಶೋಧನಾಯುಕ್ತ ಕಲಾಕೃತಿಗಳಾಗಿವೆ. ಇದಕ್ಕಾಗಿ ಅವನು ತೆಳುವಾದ ಹಾಗೂ ಹಗುರವಾದ ತಂತಿಗಳನ್ನೂ ವಿಚಿತ್ರ ಆಕಾರದ ಲೋಹಫಲಕಗಳನ್ನೂ ಬಳಸಿಕೊಂಡಿದ್ದಾನೆ. ಅವನಿಂದಾಗಿ ಶಿಲ್ಪಕಲೆಗೆ ಆಗಸದಲ್ಲಿ ಚಲಿಸಬಲ್ಲ ರೂಪು ಬಂದಿತು.

ಫ್ರಾಂಕ್ ಮಲಿನಾ(Frank Malina) ಅವರು ವಿದ್ಯುತ್ತನ್ನು ಬಳಸಿ ವರ್ಣಚಿತ್ರಗಳ ರಚನೆಗೈದು(Electro - Paintings) ಕೈನೆಟಿಕ್ ಕಲೆಗೆ ಜೋಡಿಸಿದ್ದಾರೆ. ಮಲಿನಾ ಅವರ ವರ್ಣಚಿತ್ರಗಳ ಚಿತ್ರ ಸಂಯೋಜನೆಯು ಮಾಮೂಲು ರೀತಿಯಲ್ಲಿಯೇ ಪಾರದರ್ಶಕ ತಿರುಗದ ತಂತಿದಂಡದ ಮೇಲೆ ಚಿತ್ರಸಲ್ಪಟ್ಟಿವೆ. ಗೋಡೆಗೆ ತೂಗುಹಾಕಲಾಗುತ್ತಿತ್ತು. ತಂತಿ ದಂಡದ ಹಿಂದೆ ಅನೇಕ ವರ್ಣಲೇಪಿತ ಪರಿಭ್ರಾಮಕಗಳಿದ್ದು ವಿದ್ಯುತ್ತಿನಿಂದ ಅಲ್ಲಾಡುತ್ತಿದ್ದವು. ಹೀಗೆ ತಂತಿದಂಡದ ಮೇಲೆ ಬಣ್ಣಗಳ ಆಕಾರಗಳನ್ನು ಚೆಲ್ಲಿ ನೋಡುಗರಿಗೆ ತೋರಿಸಲಾಗುತ್ತಿತ್ತು. ನಿಕೊಲಸ್ ಶ್ಫೊಫರ್(Nicholas Schoffer) ಎಂಬ ಫ್ರೆಂಚ್ ಕಲಾವಿದನು ರಚಿಸಿದ ಶಿಲ್ಪಕೃತಿಗಳು ಇನ್ನೂ ಆಶ್ಚರ್ಯಕರವಾಗಿವೆ. ಅಂಕುಡೊಂಕಾದ ಮತ್ತು ಕೋನಯುತ ಲೋಹಗಳ ತುಣುಕುಗಳನ್ನು ಲಂಬವಾಗಿಯೂ ಅಡ್ಡವಾಗಿಯೂ ವರ್ಣಲೇಪಿತ ತಿರುಗುವ ಚಕ್ರ ಮತ್ತು ವಿದ್ಯುತ್ ಬೆಳಕುಗಳೊಂದಿಗೆ ತನ್ನ ಶಿಲ್ಪಕೃತಿಗಳನ್ನು ರಚಿಸಿದ್ದಾನೆ. ಕುತೂಹಲಕರವಾದ ಆಕೃತಿಗಳನ್ನು ದೊಡ್ಡದಾದ ದಟ್ಟ ಜವನಿಕೆಯೊಂದರ ಮೇಲೆ ಚೆಲ್ಲಿ ಕರ್ಣಾನಂದಕರ ಕೈನೆಟಿಕ್ ಶಿಲ್ಪಕೃತಿಗಳನ್ನು ರಚಿಸಲಾಗಿದೆ.

ಹಾಡುವ ವರ್ಣಚಿತ್ರಗಳು (Musical Paintings)

ಜರ್ಮನ್ ಕಲಾವಿದ ಗುಂಟೇರ್‌ಮಾಸ್(Gunter Mass)ನ "ವರ್ಣಚಿತ್ರಗಳನ್ನು ನೋಡಬಹುದು; ಅವುಗಳು ಹಾಡುವ ಸಂಗೀತವನ್ನು ಕೇಳಬಹುದು"- ಆಶ್ಚರ್ಯವೆನಿಸುತ್ತದೆಯಲ್ಲವೆ? ಅವನು ಯುರೋಪ, ಈಜಿಪ್ಟ್ ಮತ್ತು ಇಂಡಿಯಾಗಳಲ್ಲಿ ತನ್ನ ಪ್ರವಾಸ ಮುಗಿಸಿಕೊಂಡು ಬಂದನಂತರ "ಶ್ರವ್ಯ+ದೃಶ್ಯ ವರ್ಣಚಿತ್ರ" ಕಲೆಯನ್ನು ಶೋಧಿಸಿದನು. ಅವನ ಕೃತಿಗಳಲ್ಲಿ ಸಂಗೀತವು ವರ್ಣಚಿತ್ರಕ್ಕೆ ಕೇವಲ ಜೊತೆ ಮಾತ್ರ(ಸಾಥಿ)ವಾಗಿಲ್ಲ. ಆಕೃತಿಗಳು ಮತ್ತು ವರ್ಣಗಳು ಧ್ವನಿಯಾಗಿ ಪರಿವರ್ತಿಸಲ್ಪಟ್ಟಿವೆ. ಅವನ ವರ್ಣಚಿತ್ರಗಳಲ್ಲಿ ಜಾಮಿತಿಯ ಅಸಂಯುಕ್ತ ಆಕೃತಿಗಳು ಧ್ವನಿಗಳಾಗಿ ರೂಪಾಂತರಗೊಳ್ಳುತ್ತವೆ. ಹೀಗೆ ವೃತ್ತವು ಒಂದು ಧ್ವನಿಯನ್ನು ಕೊಡುತ್ತಿದ್ದರೆ ತ್ರಿಭುಜವು ಮತ್ತೊಂದು ಧ್ವನಿಯನ್ನೂ ಆಯತವು ಇನ್ನೊಂದು ಧ್ವನಿಯನ್ನೂ ಕೊಡುತ್ತವೆ.

ನಿಯಾನ್ ಅನಿಲಕಲೆ (Neon Art)

ಪರಿಶೀಲನೆಯಿಂದ ನಿಯಾನ್ ಅನಿಲ ಶಿಲ್ಪ ಮತ್ತು ವರ್ಣಚಿತ್ರಗಳೂ ಇದೇ

ದೃಷ್ಟಿ ವ್ಯಾಪ್ತಿಗೊಳಪಡುತ್ತವೆ. ಈರ್ವರು ಯುರೋಪಿಯನ್ ಕಲಾವಿದರು ನ್ಯೂಯಾರ್ಕ್‌ನ ಟಾಯಮ್ಸ್ ಚೌಕದಲ್ಲಿ ನಿಯಾನ್ ಅನಿಲದ ಬೆಳಕನ್ನು ಬಳಸಿದ ಪ್ರಚಾರ ಫಲಕಗಳನ್ನು ರಚಿಸುವ ಉದ್ದೇಶದಿಂದಲೇ ಅವುಗಳನ್ನು ರಚಿಸಿದರು. ಈ ಕೃತಿಗಳು ಕಣ್ಣುಕೋರೈಸುವ ಉಜ್ವಲತೆ, ಸಜೀವ ಶಿಲ್ಪ ವರ್ಣಚಿತ್ರ ಕಲಾಕೃತಿಗಳಾಗಿವೆ. ಮಾರ್ಷಲ್ ರೇಸೇ (Mortial Raysse) ಎಂಬ ಫ್ರೆಂಚ್ ಶಿಲ್ಪಕಾರನು ರೇಡಿಯೋದ ಅಂಗಗಳು ಮತ್ತು ಹಲ್ಲುಜ್ಜುವ ಬ್ರಷ್‌ಗಳನ್ನು ನಿಯಾನ್ ಅನಿಲದ ಬೆಳಕಿನಲ್ಲಿ ಕಾಲ್ಪನಿಕ ಆಕೃತಿಗಳನ್ನು ರಚಿಸಿದ್ದಾನೆ. "ಇವು ಗಲ್ಲಿಯ ಗುರುತುಗಳಲ್ಲ ಕಲಾವಸ್ತುಗಳು" ಎಂದು ಅವನು ಹೇಳುತ್ತಾನೆ. ಉದಾಹರಣೆಗೆ ಅವನ "ಹೂವಿನ ಕುಂಡ" ಕೃತಿಯು ದೀಪವನ್ನು ಹೊತ್ತಿಸಿದಾಗ ಮೊದಲು ಕೊಡ ನಂತರ ಹೂಗಳ ದೇಟು ಆನಂತರ ಹೂಗಳು ಕಂಡುಬರುತ್ತವೆ.

ಕೆತ್ತನೆ ಕಲೆಯ ಸಂಕ್ಷಿಪ್ತ ಚರಿತ್ರೆ

ಲೋಹ ಕೆತ್ತನೆಯ ಕಲೆ ಅಥವಾ ಎನ್‌ಗ್ರೇವಿಂಗ್ ಕುಶಲ ಕೈಗಾರಿಕೆಯು ಬಹು ಪ್ರಾಚೀನ ಕೈಗಾರಿಕೆಯಾಗಿದ್ದು ೧೫ನೆಯ ಶತಮಾನದಲ್ಲಿ ಲೋಹಫಲಕಗಳ ಕೆತ್ತನೆಯಾಗುವವರೆಗೆ ಮುದ್ರಣದ ಪ್ರತಿಗಳನ್ನು ತೆಗೆಯುವ ಒಂದೇ ಉದ್ದೇಶವನ್ನು ಹೊಂದಿದುದಾಗಿತ್ತು. ಪ್ರಪ್ರಥಮವಾದ ಲೋಹಫಲಕಗಳ ಮೇಲೆ ರೇಖಾ ಕೆತ್ತನೆಯನ್ನು 'ನೋವು' ಫ್ಯಾಷನ್(Passion) ಸನ್ನಿವೇಶಗಳ ಸರಣಿಯ ಕೆತ್ತನೆ ಕಲಾಕೃತಿಗಳಾಗಿದ್ದು ಕ್ರಿ.ಶ. ೧೪೪೬ರಲ್ಲಿ ತಯಾರಾದವುಗಳಾಗಿವೆ. ಪ್ರಾಚೀನ ಲೋಹಫಲಕಗಳ ಕೆತ್ತನೆಯನ್ನು ಮಾಡಿದವರು ಜರ್ಮನಿಯವರಾದರೂ ಆವರ ಹೆಸರುಗಳು ಎಲ್ಲಿಯೂ ಉಲ್ಲೇಖಿಸಲ್ಪಟ್ಟಿಲ್ಲ.

ಎನ್‌ಗ್ರೇವಿಂಗ್ ಅಥವಾ ಲೋಹ ಫಲಕಗಳ ಕೆತ್ತನೆಯ ಕಲೆಯಲ್ಲಿ ನಿಪುಣಾಗ್ರೇಸರನಾದ ಆಲ್‌ಬ್ರೆಟ್ ಡೂರರ್(Albercht Durer)ನು ಕೆಲವು ಎಚಿಂಗ್‌ಗಳನ್ನು ಡ್ರಾಯ್ ಪಾಯಿಂಟ್‌ಗಳನ್ನೂ ಮಾಡಿದ್ದಾನೆ. ಅವನು ಈ ಕೃತಿಗಳಿಗಾಗಿ "ನಗ್ನ' ಹಾಗೂ "ಕ್ರಿಸ್ತನ ನೋವುಗಳು ವಸ್ತುಗಳಾಗಿದ್ದವು. ಅವನ ಸಮಕಾಲೀನ ಕಲಾವಿದರೂ ಹೆಚ್ಚಾಗಿ ಧಾರ್ಮಿಕ ಅಥವಾ ನೈತಿಕ ವಸ್ತುಗಳನ್ನು ಚಿತ್ರಗಳ ಮೂಲಕ ಕತೆ ಹೇಳುವ ರೀತಿಯಲ್ಲಿ ಆನೇಕ ಲೋಹಫಲಕಗಳ ಕೆತ್ತನೆಯಿಂದ ಮುದ್ರಿತ ಪ್ರತಿಗಳನ್ನು ತಯಾರಿಸಿದ್ದಾರೆ. ಕ್ರಿ.ಶ. ೧೫೧೩ರಲ್ಲಿ ಜರ್ಮನ್ ಕಲಾವಿದ ಅರ್ಸ್ ಗ್ರಾಫ್(Urs Graf)ನು ತಯಾರಿಸಿದ "ತನ್ನ ಪಾದಗಳನ್ನು ತೊಳೆದುಕೊಳ್ಳುತ್ತಿರುವ ಹುಡುಗಿ"ಯ ಎಚಿಂಗ್ ಕೃತಿಯು ಅತ್ಯಂತ ಪ್ರಚೀನವಾದದ್ದೆಂದು ತಿಳಿಯಲಾಗಿದೆ. ಇನ್ನೊಬ್ಬ ಜರ್ಮನ್ ಕಲಾವಿದ ಆಲ್ಟ್‌ಡಾರ್ಫರ್ (Altdorfer)ನು ಸಮೃದ್ಧವಾದ ಮತ್ತು ಹೃದಯಂಗಮವಾದ ನಿಸರ್ಗರಮಣೀಯ ದೃಶ್ಯಗಳ(Landscapes) ಎಚಿಂಗ್‌ಗಳನ್ನು ತಯಾರಿಸುವಲ್ಲಿ ಅಗ್ರಗಣ್ಯ ಕೆತ್ತನೆ ಕಲಾವಿದನಾಗಿದ್ದನು. ಡಚ್‌ಕಲಾವಿದ ರೆಂಬ್ರಾಡ್ಟನ ಎಚಿಂಗ್ ಕಲಾಕೃತಿಗಳು ಎಚಿಂಗ್ ತಂತ್ರಕ್ಕೆ ಉನ್ನತೋನ್ನತ ಸ್ಥಾನವನ್ನು ಕಲ್ಪಿಸಿಕೊಟ್ಟವು. ಅಷ್ಟೇ ಅಲ್ಲ ಅವನನ್ನು ಸರಿಗಟ್ಟುವ ಮತ್ತೊಬ್ಬ ಎಚಿಂಗ್ ಕಲಾವಿದ ಈವರೆಗೂ ಬರಲಿಲ್ಲ ಸ್ವತಂತ್ರವಾಗಿ ಚಿತ್ರಿಸಿದ ನಿಸರ್ಗ ಚಿತ್ರವೇ ಇರಲಿ, ಕಷ್ಟಸಾಧ್ಯವಾದ ಭಾವಚಿತ್ರವೇ ಆಗಲಿ ಅಥಧ್ಯಾನಯುಕ್ತ ಧಾರ್ಮಿಕ ವಸ್ತುವೇ ಆಗಿರಲಿ ಅವುಗಳಲ್ಲಿ ರೆಂಬ್ರಾಂಡ್ಟ್‌ನ ಪ್ರಬುದ್ಧ ಕಲಾವಂತಿಕೆಯ ಸ್ಪರ್ಶವಿದ್ದೇ ಇದೆ. ಅವನು ಸಾಮಾನ್ಯವಾದ ಎಚಿಂಗ್‌ನಲ್ಲಿ ಡ್ರಾಯ್‌ಪಾಯಿಂಟನ್ನೂ ಪದೇ ಪದೇ ಬೆರೆಸಿರುವುದೂ ಕಂಡುಬರುತ್ತದೆ.

೧೭ನೆಯ ಶತಮಾನದಿಂದ ಎನ್‌ಗ್ರೇವ್ ತಂತ್ರವು ವರ್ಣಚಿತ್ರಗಳ ಮುದ್ರಣದ ಪ್ರತಿಗಳನ್ನು ತೆಗೆಯುವದಕ್ಕಾಗಿ ಉಪಯೋಗಿಸಲ್ಪಟ್ಟಿತು. ಆನೇಕ ಸುಪ್ರಸಿದ್ಧ ಕಲಾವಿದರ ಕಲಾಕೃತಿಗಳು ಎನ್‌ಗ್ರೇವ್ ತಂತ್ರದಿಂದಲೇ ಜನತೆಗೆ ಪರಿಚಿತವಾದವು. ೧೭ನೆಯ ಶತಮಾನವು ಭಾವಚಿತ್ರಗಳ ಎನ್‌ಗ್ರೇವಿಂಗ್, ಎಚಿಂಗ್ ಕಲಾವಿದರ ಯುಗವೆಂದೇ ಪರಿಗಣಿಸಲಾಗಿದೆ. ರೆಂಬ್ರಾಂಡ್ಟನ ನಂತರ ಆ್ಯಂಥನಿ ವಾನ್ ಡೈಕ್(Anthony Van Dyck)ನು ಅತ್ಯುತ್ತಮ ಕೆತ್ತನೆ ಕಲಾವಿದನೆಂದು ಎಣಿಸಲ್ಪಟ್ಟಿದ್ದಾನೆ. ಅವನ ಕೆತ್ತನೆಯ

ಭಾವಚಿತ್ರಗಳು ಉತ್ತಮಿಕೆಯಲ್ಲಿ ಎಷ್ಟು ಶ್ರೇಷ್ಠವಾಗಿದ್ದವೆಂದರೆ ಅವುಗಳಿಂದ ಪ್ರಭಾವಿತರಾದ ಅನೇಕ ಕಲಾವಿದರು ಅವನ ರೇಖಾಚಿತ್ರಗಳನ್ನೇ ತಮ್ಮ ಕೆತ್ತನೆಗೆ ಉಪಯೋಗಿಸಿಕೊಂಡರು. ಜಾಕ್ವಿಸ್ ಕ್ಯಾಲಾಟ್(Jucques Callot)ನು ಜಿಪ್ಸಿಗಳ, ಭಿಕ್ಷುಕರ, ಕೈದಿಗಳ ಎಚಿಂಗ್ ಕೃತಿಗಳನ್ನು ತಯಾರಿಸಿದ್ದು ಅವನು ಯುದ್ಧದ ಸಂಕಟಗಳು"(Miseries of War) ಎಂಬ ಮೂವತ್ತು ವರುಷಗಳ ಸಮರದ ಭೀಕರತೆಯನ್ನು ಸರಣ ಕೆತ್ತನೆಯ ಕಲಾಕೃತಿಗಳಲ್ಲಿ ಸೆರೆಹಿಡಿದಿದ್ದಾನೆ. ವಿನ್ಸೆಸ್‌ಲಾಸ್ ಹಾಲ್ಲರ್(Wenseles Hollar)ನ ಎಚ್ಚಿಂಗ್‌ಗಳಲ್ಲಿ ೧೭ನೆಯ ಶತಮಾನ ಲಂಡನ್ ನಗರವು ಹೇಗಿದ್ದಿತೆಂದು ತಿಳಿದು ಬರುತ್ತಿದ್ದರೆ, ಕ್ಲಾಡ್(Claude)ನು ಈ ಮಾಧ್ಯವು ಎಷ್ಟೊಂದು "ಭಾವ ಪ್ರದರ್ಶನ ಮಾಧ್ಯಮ"-ವಾಗಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾನೆ.

ಕ್ರಿ.ಶ. ೧೬೪೨ರ ಸುಮಾರಿಗೆ ವನ್‌ಸೀಜೆನ್(Van Siegen)ನು ಮೆಝೋಟಿಂಟ್ ಪದ್ಧತಿಯನ್ನು ಶೋಧಿಸಿದನು. ಮೊದಮೊದಲು ಮೂಲಕಲಾಕೃತಿಗಳ ರಚನೆಗೆ ಮಾತ್ರ ಸೀಮಿತವಾಗಿದ್ದ ಈ ಪದ್ಧತಿಯು ನಂತರ ಮುದ್ರಣ ಪ್ರತಿಗಳನ್ನು ತೆಗೆಯುವದಕ್ಕೂ ಉಪಯೋಗವಾಗತೊಡಗಿತು. ೧೮ನೆಯ ಶತಮಾನದ ಹೋಗಾರ್ಥ್(Hogarth), ಇಟಾಲಿಯ ಕಲಾವಿದ ಪಿರಾನೇಸಿ(Piranesi) ಅವರು ಅತ್ಯುತ್ತಮವಾದ ಎನ್‌ಗ್ರೇವಿಂಗ್ ಕೃತಿಗಳನ್ನು ರಚಿಸಿದ್ದಾರೆ ನಂತರ ಥಾಮಸ್ ರೋಲ್ಯಾಂಡ್ಸನ್(Thomas Rowlandson)ನಂಥ ಇಂಗ್ಲೀಷ್ ವಿಡಂಬನ ಚಿತ್ರಕಾರನಿಂದಲೂ ಸ್ಪೇನ ಕಲಾವಿದ ಗೋಯಾ(Goya)ನಿಂದಲೂ ಆಕ್ವಾಟಿಂಟ್ ಶೋಧನೆಯ ಫಲವಾಗಿ ಅನೇಕ ಆಕ್ವಾಟಿಂಟ್ ಕಲಾಕೃತಿಗಳ ಸೃಷ್ಟಿಯಾಯಿತು. ವಿಲಿಯಂ ಬ್ಲೇಕ್(William Blake) ಸ್ಯಾಮ್ಯುಯೆಲ್ ಪಾಮೆರ್(Samuel Palmer) ಅವರ ಎಚಿಂಗ್‌ಗಳು ಮತ್ತು ಎನ್ಗ್ರೇವಿಂಗ್‌ಗಳು ಗಮನಾರ್ಹವಾದ ಪರ್ಯಾಲೋಚಿಸ ಬಹುದಾದ ಕಲಾಕೃತಿಗಳಾಗಿವೆ. ೧೮ ಮತ್ತು ೧೯ನೆಯ ಶತಮಾನಗಳಲ್ಲಿ ಎಚಿಂಗ್, ಎನ್‌ಗ್ರೇವಿಂಗ್ ಮತ್ತು ಆಕ್ವಾಟಿಂಟ್‌ಗಳು ಪುಸ್ತಕಗಳ ಸಂದರ್ಭ ಚಿತ್ರಗಳಿಗಾಗಿ ಉಪಯೋಗಿಸಲ್ಪಟ್ಟವು. ಥಾರ್ನ್‌ಟನ್(Thornton) ಹಾಗೂ ಜಾರ್ಜ್ ಕ್ರುಯಿಕ್ಷಾಂಕ್George Cruikshank), ಚಾರ್ಲಸ್ ಮೇರಿಯನ್(Charles Maryon) ಅವರು ರಚಿಸಿದ ವರ್ಣರಂಜಿತ ಸಂದರ್ಭ ಚಿತ್ರಗಳು ಕರ್ಣಾನಂದಕರವೂ ಮನೋಹರವೂ ಆದ ಕಲಾಕೃತಿಗಳಾಗಿವೆ.

೨೦ನೆಯ ಶತಮಾನದಲ್ಲಿ ಈ ಎಲ್ಲ ತಂತ್ರಗಳೂ ಮತ್ತೆ ಪ್ರಾಧಾನ್ಯತೆಯನ್ನು ಗಳಿಸಿಕೊಂಡವು. ವ್ಹಿಸ್ಲರ್(Whistler), ರೂಆಲ್ಟ್(Rouault) ಮತ್ತು ಪಿಕಾಸೋ ಅವರುಗಳು ಸಹ ಎಚಿಂಗ್, ಎನ್‌ಗ್ರೇವಿಂಗ್, ಮೆಝೋಟಿಂಟ್, ಆಕ್ವಾಟಿಂಟ್ ವಿಧಾನಗಳನ್ನು ಬಳಸಿ ಅತ್ಯುತ್ತಮವಾದ ಕೃತಿಗಳನ್ನು ರಚಿಸಿದ್ದಾರೆ.

ಮುದ್ರಣ ಫಲಕ ತಯಾರಿಕಾ ಕಲೆ (Graphic Art)

ಮುದ್ರಣ ಫಲಕಗಳನ್ನು ತಯಾರಿಸುವ ಕಲೆಯನ್ನು ಗ್ರಾಫಿಕ್ ಕಲೆ (Graphic Art) ಎಂದು ಕರೆಯುತ್ತಾರೆ. ರೇಖೆ ಮತ್ತು ವರ್ಣವಿನ್ಯಾಸ(Tone)ಗಳನ್ನೇ ಅವಲಂಬಿಸಿದ

ಮುದ್ರಣ ಫಲಕಗಳನ್ನೂ ವರ್ಣಚಿತ್ರಕಲಾಕೃತಿಗಳನ್ನು ರಚಿಸುವ ಮಾದರಿಯಲ್ಲಿಯೇ ರಚಿಸಲಾಗುತ್ತದೆ. ಕೆಲವರು ಈ ಪದವನ್ನು ಅರ್ಥೈಸುವಾಗ ಚಿತ್ರರೇಖನ(Drawing)ವನ್ನು ಹೊರತುಪಡಿಸಿ ಅರ್ಥೈಸುತ್ತಾರೆ. ವಾಣಿಜ್ಯ ಕ್ಷೇತ್ರದಲ್ಲಿ ಮುದ್ರಣ ಕಲೆಯು ಹೆಚ್ಚಾಗಿ ಉಪಯೋಗವಾಗುತ್ತದೆ. ಮುದ್ರಣ ಫಲಕಗಳನ್ನು ತಯಾರಿಸಲು ಸತು(Zinc)ವು ಇಲ್ಲವೆ ತಾಮ್ರ(Copper)ದ ತಗಡುಗಳು, ಶಿಲೆ, ಲಿನೋ ಹಾಳೆ, ಮರ, ಪೇಪರಕಾರ್ಡ ಬೋರ್ಡು ಮತ್ತು ರೇಷ್ಮೆ ಬಟ್ಟೆ ಮುಂತಾಗಿ ವಿವಿಧ ಪದಾರ್ಥಗಳನ್ನು ಬಳಸುತ್ತಾರೆ.

ಮುದ್ರಣ ಫಲಕಗಳನ್ನು ತಯಾರಿಸುವ ಕೆಲವು ವಿಧಾನಗಳನ್ನು ತಿಳಿಯೋಣ.

ಕಲ್ಲಚ್ಚು ಅಥವಾ ಶಿಲಾ ಮುದ್ರಣ (Lithography)

ಕಲ್ಲಚ್ಚು ಅಥವಾ ಶಿಲಾ ಮುದ್ರಣ ಕಲೆಯು ಕ್ರಿ.ಶ. ೧೭೯೮ರಲ್ಲಿ ಶೋಧವಾಯಿತು. ಈ ವಿಧಾನದಲ್ಲಿ ಮುದ್ರಿಸಲಿರುವ ನಕ್ಷೆಯನ್ನು ನೇರವಾಗಿ ಕಲ್ಲಿನ ಹಲಗೆಯ ಮೇಲೆ ಕೊಬ್ಬು ಬೆರೆತ (greasy) ಬಣ್ಣದ ಕಡ್ಡಿಯಿಂದ ಚಿತ್ರಿಸಲಾಗುತ್ತದೆ. ಯಾಕೆಂದರೆ ಸ್ವಭಾವಸಿದ್ಧ ವೈರಗುಣಧರ್ಮದ ಕೊಬ್ಬು(grease) ಮತ್ತು ನೀರುಗಳ ಆಧಾರದಿಂದಲೇ ಈ ಪಡಿಯಚ್ಚನ್ನು ತಯಾರಿಸಿಕೊಳ್ಳಬೇಕಾಗುತ್ತದೆ. ಬಣ್ಣದ ಕಡ್ಡಿಯಿಂದ ಚಿತ್ರಿಸಿದ ನಂತರ ರಾಸಾಯನಿಕಗಳಿಂದ ಅದನ್ನು ಧೃಢೀಕರಿಸಿ (Fix) ಕಲ್ಲನ್ನು ತೋಯಿಸಲಾಗುತ್ತದೆ. ನಂತರ ಕೊಬ್ಬಿನ ಚಿತ್ರವನ್ನು ಮಾತ್ರ ಹಿಡಿದುಕೊಳ್ಳುವಂತೆ ಸ್ನಿಗ್ಧಶಾಯಿ(Oily ink)ಯನ್ನು ಪ್ರತಿಭಟಿಸುತ್ತದೆ. ನಂತರ ಈ ಪಡಿಯಚ್ಚನ್ನು ಮುದ್ರಣ ಶಾಲೆಗೆ ಕೊಂಡೊಯ್ದು ಮುದ್ರಿಸಿ ಅನೇಕ ಪ್ರತಿಗಳನ್ನು ತೆಗೆಯಲು ಸಾಧ್ಯವಾಗುತ್ತದೆ. ಡಾಮಿಯರ್(Daumier) ನಂತಹ ೧೯ನೆಯ ಶತಮಾನದ ವಿಶ್ವವಿಖ್ಯಾತ ಕಲಾವಿದರು ಶಿಲಾ ಮುದ್ರಣ ತಂತ್ರವನ್ನು ಬಳಸಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ.

ಇಳಿಕೆತ್ತನೆ ಅಥವಾ ಇಂಟ್ಯಾಲ್ಯೋ (Intaglio)

ಇಟಾಲಿಯನ್ ಇನ್ಸಿಜನ್ ಎಂಬ ಮೂಲ ಪದದಿಂದ ಇಂಟ್ಯಾಲ್ಯೋ(Intaglio) ಅಥವಾ ಇಳಿಕೆತ್ತನೆ ಶಬ್ದದ ಉತ್ಪತ್ತಿಯಾಗಿದೆ. ಪಡಿಯಚ್ಚನ್ನು ತಯಾರಿಸಲಿರುವ ವಸ್ತುವಿನ ಮೇಲ್ಮೈಯ ಮೇಲೆ ಹಳ್ಳ ಕೊರೆದು ಮುದ್ರಣ ವಸ್ತುವನ್ನು ಚಿತ್ರಿಸಲಾಗುತ್ತದೆ. ಅಂದರೆ ಚಿತ್ರವು ಮೇಲ್ಮೈಗಿಂತ ಕೆಳಗಿಳಿದು ಚಿತ್ರಿತವಾಗುತ್ತದೆ. ಒಂದು ರೀತಿಯಲ್ಲಿ ಉಬ್ಬುಚಿತ್ರ(relief)ದ ವಿರುದ್ಧವಾದ ರೀತಿ ಎನ್ನಬಹುದು. ಉಬ್ಬು ಚಿತ್ರದಲ್ಲಿ ಚಿತ್ರಿತ ವಸ್ತು ಪಡಿಯಚ್ಚಿಗೆ ಉಪಯೋಗಿಸಿದ ಮೇಲ್ಮೈಯ ಮೇಲೆ ಎದ್ದು ಕಾಣುವಂತೆ ಕೆತ್ತನೆ ಮಾಡಲಾಗುತ್ತದೆ ಇಳಿಕೆತ್ತನೆಯಲ್ಲಿ ಅದಕ್ಕೆ ವಿರುದ್ಧವಾಗಿ ಹಳ್ಳಗಳನ್ನು ತೋಡಲಾಗುತ್ತದೆ. ಈ ತಂತ್ರವು ಅತ್ಯಂತ ಹಳೆಯ ತಂತ್ರವಾಗಿದ್ದು ಇದರ ಕಾಲವು ಬ್ಯಾಬಿಲೋನ ಕಾಲದ ಮುದ್ರಿಕೆಗಳ ಕ್ರಿಸ್ತಪೂರ್ವ ೪೦೦೦ದ ಅವಧಿಗೆ ಹೋಗುತ್ತದೆ. ಈ ವಿಧಾನವು ಮುದ್ರಿಕೆಗಳನ್ನು ತಯಾರಿಸಲು ಸುಯೋಗ್ಯ ವಿಧಾನವಾಗಿದ್ದು ಹೆಚ್ಚಾಗಿ ರತ್ನದ ಕೆತ್ತನೆಗೆ ಸಂಬಂಧಿಸಿದುದಾಗಿದೆ ರತ್ನದ ಕಲ್ಲಿನ ಮೇಲೆ ಆಕೃತಿಗಳು ಇಲ್ಲವೆ ಬೇರೆ ಬೇರೆ


ರಚನೆಗಳನ್ನು ಹಳ್ಳ ಕೆರೆದು ರಚಿಸಲಾಗುತ್ತದೆ. ಹೀಗೆ ಹಳ್ಳಕೊರೆದು ತಯಾರಿಸಿದ ಕಲ್ಲಿನ ಮೇಲೆ ಮೇಣವನ್ನೊತ್ತಿ ತೆಗೆದಾದ ಉಬ್ಬುಚಿತ್ರದ ಮಾದರಿಯಾಗಿ (ಮೇಣದ ಮೇಲೆ ಮೂಡಿದ ಚಿತ್ರವು) ಕಾಣಿಸುತ್ತದೆ. ಎಚಿಂಗ್ಸ್‌ನಂಥ ಗ್ರಾಫಿಕ್ ವಿಧಾನಗಳಲ್ಲಿಯೂ ಇಂಪ್ಯಾಲ್ಯೋ ವಿಧಾನದ ಮುದ್ರಣ ರೀತಿಯನ್ನೇ ಬಳಸಲಾಗುತ್ತದೆ.

ಎನ್‌ಗ್ರೇವಿಂಗ್ (Engraving)

ಸಾಮಾನ್ಯವಾಗಿ ತಾಮ್ರ ಇಲ್ಲವೆ ಉಕ್ಕಿನ ಫಲಕಗಳ ಮೇಲೆ ಗ್ರೇವರ್ ಅಥವಾ ಬ್ಯುರಿನ್ ಎಂಬ ಮೊನಚಾದ ಉಪಕರಣದಿಂದ ರೇಖೆಗಳನ್ನು ಕೊರೆದು "ಎನ್‌ಗ್ರೇವ್" ಮಾಡುವ ವಿಧಾನದಿಂದ ಮುದ್ರಣಗಳನ್ನು ತೆಗೆಯುವ ರೀತಿಯನ್ನು ಎನ್‌ಗ್ರೇವಿಂಗ್ ಇಲ್ಲವೆ ಕೊರೆತದ ಚಿತ್ರಕಲೆ ಎಂದು ಕರೆಯಲಾಗುತ್ತದೆ. ಇದನ್ನೇ ರೇಖಾ ಕೊರೆತ ಎಂದೂ ಹೇಳಲಾಗುತ್ತದೆ. ಹೀಗೆ ತಯಾರಿಸಿದ ಪಡಿಯಚ್ಚಿನಿಂದ ಮುದ್ರಣ ಶಾಯಿಯನ್ನು ಬಳಿದು ಬೇಕಾದ ಸಂಖ್ಯೆಯ ಪ್ರತಿಗಳನ್ನು ತೆಗೆಯಲು ಸಾಧ್ಯವಾಗುತ್ತದೆ. ಬೇರೆ ಬೇರೆ ಟೋನ್(ವಿನ್ಯಾಸ)ಗಳಿಗಾಗಿ ರೇಖೆಗಳನ್ನು ತಕ್ಕಂತೆ ಎಳೆಯಬೇಕಾಗುತ್ತದೆ. ೧೯ನೇ ಶತಮಾನದಲ್ಲಿ ಛಾಯಾಚಿತ್ರ ವಿಧಾನವು ಶೋಧವಾಗುವವರೆಗೆ ಮುದ್ರಣ ಪ್ರತಿಗಳನ್ನು ತಯಾರಿಸಲು ಎನ್‌ಗ್ರೇವಿಂಗ್ ಪದ್ಧತಿಯೇ ಪ್ರಧಾನ ಪದ್ಧತಿಯಾಗಿದ್ದಿತು.

ಎಚಿಂಗ್ (Etching)

ಎಚಿಂಗ್ ಪದವು 'to eat' ಎಂಬ ಹಳೆಯ ಜರ್ಮನ್ ಪದದಿಂದ ಬಂದುದಾಗಿದೆ ಯಾಕೆಂದರೆ ತಾಮ್ರ ಇಲ್ಲವೆ ಸತುವಿನ ಮೇಲೆ ಚಿತ್ರಿಸಿದ ಚಿತ್ರದ ರೇಖೆಗಳನ್ನು ತೆಳುವಾದ ನೈಟ್ರಿಕ್ ಆಮ್ಲವು ತಿಂದು ಹಾಕುತ್ತದೆ. ಉಜ್ಜಿ ನಯಗೊಳಿಸಿದ ಫಲಕದ ಮೇಲೆ ಆಮ್ಲವನ್ನು ನಿರೋಧಿಸುವ ಗುಣವುಳ್ಳ ಮೇಣವನ್ನು ತೆಳುವಾಗಿ ಲೇಪಿಸಿ, ಲೋಹದ ಉಪಕರಣದ ಮೊನೆಯಿಂದ ಅದರ ಮೇಲೆ ರೇಖೆಗಳನ್ನು ಎಳೆದು ಮೇಣವು ಉದುರಿ ಹೋಗುವಂತೆ-ಎಳೆಯಲಾಗುತ್ತದೆ. ಹೀಗೆ ಗೆರೆಗಳನ್ನು ಎಳೆದಾಗ ಮೇಣವು ಉದುರಿ ಹೋದ ಸ್ಥಳದಲ್ಲಿ ಫಲಕವು ಬಯಲಿಗೆ ಬೀಳುತ್ತದೆ. ನಂತರ ಫಲಕವನ್ನು ಆಮ್ಲ ತುಂಬಿದ ಹರವಾದ ತಟ್ಟೆಯೊಂದರಲ್ಲಿ ಮುಳುಗಿಸಿದಾಗ ಬಯಲಿಗೆ ಬಿದ್ದ ಫಲಕವನ್ನ ಆಮ್ಲವು ಆಕ್ರಮಿಸಿ ತಿನ್ನ ತೊಡಗುತ್ತದೆ. ಕೆಲವು ನಿಮಿಷಗಳ ನಂತರ ಫಲಕವನ್ನು ಮೇಲಕ್ಕೆ ತೆಗೆದು ಆಮ್ಲವನ್ನು ಪ್ರತಿರೋಧಿಸುವ ವಾರ್ನಿಷ್‌ಅನ್ನು ಸವರಲಾಗುತ್ತದೆ. ನಂತರ ಫಲಕವನ್ನು ಮತ್ತೊಮ್ಮೆ ಆಮ್ಲದಲ್ಲಿ ಮುಳುಗಿಸಿದಾಗ ಇನ್ನುಳಿದ ರೇಖೆಗಳನ್ನೂ ಆಮ್ಲವು ತಿಂದು ಹಾಕುವದರಿಂದ ರೇಖೆಗಳು ಆಳವಾಗಿಯೂ ಅಗಲವಾಗಿಯೂ ಮುದ್ರಣವು ದಟ್ಟವಾದ ರೇಖೆಗಳಿಂದ ಕೂಡಿದುದಾಗಿರುವಂತೆ ಮಾಡಲಾಗುತ್ತದೆ. ಇದೇ ಪದ್ಧತಿಯಿಂದ (Slopping out) ಹೆಚ್ಚು ಹೆಚ್ಚಾಗಿ ಫಲಕವನ್ನು ಆಮ್ಲದಲ್ಲಿ ಅದ್ದಿ ಕಲಾವಿದನು ತನಗೆ ಬೇಕಾದ ಅಥವಾ ಇಚ್ಛಿಸಿದ ವಿನ್ಯಾಸಗಳನ್ನು ಪಡೆದುಕೊಳ್ಳುತ್ತಾನೆ.



೩೯) ಚಂದ್ರನಾಥ ಆಚಾರ್ಯ

ಡ್ರಾಯ್‌ಪಾಯಿಂಟ್ (Dry Point)

ಈ ತಂತ್ರವೂ ಸಹ ಎಚಿಂಗ್ ತಂತ್ರವನ್ನೇ ಹೋಲುತ್ತಿದ್ದರೂ ಇದರಲ್ಲಿ ರೇಖೆಗಳನ್ನು ಆಳವಾಗಿ ಕೊರೆಯಲು ಆಮ್ಲವನ್ನು ಬಳಸುವುದಿಲ್ಲ. ಬದಲಾಗಿ ಲೋಹದ ಮೊನಚು ಉಪಕರಣದಿಂದ ತಾಮ್ರ ಇಲ್ಲವೆ ಸತುವಿನ ನಯವಾದ ಫಲಕದ ಮೇಲೆ ನೇರವಾಗಿ ರೇಖೆಗಳನ್ನು ಕೊರೆಯಲಾಗುತ್ತದೆ. ಈ ರೇಖೆಗಳನ್ನು ಫಲಕದಲ್ಲಿ ಆಳವಾಗಿಯೂ ತರಕಾಗಿಯೂ ಇರುವಂತೆ ಕೊರೆಯಲು ಉಕ್ಕು ಇಲ್ಲವೇ ವಜ್ರದ ಉಪಕರಣ ಮೊನೆಯಿಂದ ರೆಂಟೆಯ ಸಾಲುಗಳಂತೆ ಎಳೆಯಲಾಗುತ್ತದೆ ಈ ಉಪಕರಣವನ್ನು ಪೆನ್ನಿನಂತೆಯೇ ಉಪಯೋಗಿಸಲಾಗುತ್ತದೆ. ಉಪಕರಣದಿಂದ ಎಳೆದ ರೇಖೆಯಗುಂಟ ತರಕಲಾದ ತುದಿಯು ಉಂಟಾಗುತ್ತದೆಯಲ್ಲದೆ ಡ್ರಾಯ್ ಪಾಯಿಂಟಿನ ಕೋಮಲ ಗುಣಧರ್ಮವನ್ನುಂಟುಮಾಡುತ್ತದೆ. ಇಂಥ ಫಲಕಗಳಿಂದ ಬಹುಳವೆಂದರೆ ಮೂವತ್ತು ಮುದ್ರಣ ಪ್ರತಿಗಳನ್ನು ತೆಗೆಯಬಹುದಾಗಿದೆ. ಪುನಃ ಪುನಃ ಮುದ್ರಣದ ಒತ್ತಡಕ್ಕೊಳಗಾದ ಫಲಕದಲ್ಲುಂಟಾಗುತ್ತದೆ. ಈ ವಿಧಾನವು ಕ್ರಿ.ಶ. ೧೫ನೆಯ ಶತಮಾನದಿಂದಲೂ ಬಳಕೆಯಲ್ಲಿದೆ.

ಅಕ್ವಾಟಿಂಟ್ (Aquatint)

ರಾಳವನ್ನೊಳಗೊಂಡ ದ್ರಾವಣವನ್ನು ತಾಮ್ರದ ಫಲಕದ ಮೇಲೆ ಬಳಿದು ಅದರ

ಮೇಲೆ ನೈಟ್ರಿಕ್ ಆಮ್ಲದ ಸಹಾಯದಿಂದ ಚಿತ್ರ ಕೊರೆಯುವ ಅಕ್ವಾಟಿಂಟ್ ವಿಧಾನವೂ ಒಂದು ಎನ್‌ಗ್ರೇವಿಂಗ್ ಪದ್ಧತಿಯಾಗಿರುತ್ತದೆ. ಈ ವಿಧಾನವು ೧೮ನೆಯ ಶತಮಾನದ ಮಧ್ಯದಲ್ಲಿ ಶೋಧಿಸಲ್ಪಟ್ಟಿದೆ. ಅಕ್ವಾಟಿಂಟ್ ವಿಧಾನವು ಸೊಗಸಾದ ವರ್ಣ ವಿನ್ಯಾಸದ ಹರವನ್ನು ರೂಪಿಸುತ್ತದೆಯಲ್ಲದೇ ಕುಂಚದಿಂದ ಎಳೆದ ರೇಖನ(Drawing) ಇಲ್ಲವೆ ಜಲವರ್ಣದ ಚಿತ್ರಗಳನ್ನು ಹೋಲುತ್ತದೆ. ಲೋಹ ಫಲಕದ ಮೇಲೆ ಆಮ್ಲವನ್ನು ಪ್ರತಿಭಟಿಸುವ ರಾಳವನ್ನು ಸಿಂಪಡಿಸಲಾಗುತ್ತದೆ. ಹೀಗೆ ರಾಳವನ್ನು ಸಿಂಪಡಿಸಿದ ಫಲಕವನ್ನು ಕಾಯಿಸುವುದರಿಂದ ರಾಳವು ಕರಗಿ ಒಂದುಗೂಡುತ್ತದೆ. ಆಮ್ಲದಲ್ಲಿ ಮುಳುಗಿಸಿದಾಗ ರಾಳದ ಸಣ್ಣ ಸಣ್ಣ ಕಣಗಳ ಮಧ್ಯದ ಭಾಗವನ್ನು ಆಮ್ಲವು ಕಡಿದು ಹಾಕಿ ಫಲಕದಲ್ಲಿ ಒಂದುಗೂಡಿದ ನಯವಾದ ಮೇಲ್ಮೈಯನ್ನು ಸೃಷ್ಟಿಸುತ್ತದೆ. ಮುದ್ರಣದ ನಕ್ಷೆಯನ್ನು ಇಂಥ ನಯವಾದ ಫಲಕದ ಮೇಲೆ ಆಮ್ಲವನ್ನು ಪ್ರತಿಭಟಿಸುವ ವಾರ್ನಿಷ್‌ನಿಂದ ಚಿತ್ರಿಸಲಾಗುತ್ತದೆ. ಈ ತಂತ್ರವನ್ನು ಹೆಚ್ಚಾಗಿ ಜಲವರ್ಣ ಚಿತ್ರಗಳ ಮುದ್ರಣ ಪ್ರತಿಗಳನ್ನು ತೆಗೆಯುವದಕ್ಕಾಗಿ ಉಪಯೋಗಿಸುತ್ತಾರೆ. ಅಲ್ಲದೇ ಈ ತಂತ್ರವನ್ನು ಗೋಯಾ ಮತ್ತು ಡೇಗಾರಂಥ ಕಲಾವಿದರು ಸ್ವೋಪಜ್ಞ ರಚನಾತ್ಮಕ ತಂತ್ರವನ್ನಾಗಿ ಉಪಯೋಗಿಸಿಕೊಂಡಿದ್ದರು.

ಮೆಜೋಟಿಂಟ್ (Mezzotint)

ತಾಮ್ರದ ಇಲ್ಲವೇ ಉಕ್ಕಿನ ಫಲಕದ ಮೇಲ್ಮೈಯನ್ನು ಒಂದೇ ಸಮನಾದ ತರಕಲುಗಳನ್ನು ಮಾಡಿ ಬೆಳಕಿನ ಮತ್ತು ನೆಳಲುಗಳ ಭಾಗಗಳನ್ನು ತೋರಿಸಲು ಆಯಾ ಭಾಗಗಳನ್ನು ನಯಗೊಳಿಸಿ ಹೊಳಪು ಕೊಟ್ಟು ಅಥವಾ ಹಾಗೆಯೇ ಒರಟಾಗಿ ಬಿಟ್ಟು, ಛಾಯಾವ್ಯತ್ಯಾಸಗಳನ್ನುಂಟು ಮಾಡಿ ಚಿತ್ರಕೊರೆಯುವ ವಿಧಾನವನ್ನು ಮೆಜೋಟಿಂಟ್ ಎಂದು ಕರೆಯುತ್ತಾರೆ. ಹೀಗೆ ಕೊರೆದ ಚಿತ್ರದ ಮುದ್ರಣದ ಪ್ರತಿಯನ್ನೂ ಸಹ ಮೆಜೋಟಿಂಟ್ ಎಂದೇ ಕರೆಯುತ್ತಾರೆ. ಈ ವಿಧಾನದಲ್ಲಿ ತಾಮ್ರ ಇಲ್ಲವೇ ಉಕ್ಕಿನ ಫಲಕದ ಮೇಲೆ ರೇಖೆಗಳನ್ನು ಎಳೆಯಲು ನೂರಾರು ಹರಿತವಾದ ಹಲ್ಲುಗಳುಳ್ಳ ರಾಕರ್(Rocker) ಹಾಗೂ ಗೀಚು ಹಾಕುವ ಸ್ಕೇಪರ್(Scraper) ಎಂಬ ಉಪಕರಣಗಳನ್ನು ಬಳಸುತ್ತಾರೆ. ಈ ಪದ್ಧತಿಯು ಕ್ರಿ. ಶ. ೧೭ನೆಯ ಶತಮಾನದ ಮಧ್ಯದಲ್ಲಿ ನೆದರ್‌ಲ್ಯಾಂಡ್ಸ್‌ನಲ್ಲಿ ಶೋಧಿಸಲ್ಪಟ್ಟು ಕೂಡಲೆ ಇಂಗ್ಲೆಂಡ್‌ಗೂ ಪ್ರಸಾರವಾಯಿತಲ್ಲದೇ ಅಲ್ಲಿ ಭಾವಚಿತ್ರಗಳ ಮುದ್ರಣ ಪ್ರತಿಗಳನ್ನು ತಯಾರಿಸುವ ಪ್ರಸಿದ್ಧಿಯ ಪರಾಕಾಷ್ಠೆಯ ಪದ್ಧತಿಯಾಗಿ ಅಭಿವೃದ್ಧಿಗೊಂಡಿತು. ೧೯ನೆಯ ಶತಮಾನದಲ್ಲಿ ಛಾಯಾಚಿತ್ರಣವು ಅಭಿವೃದ್ಧಿಗೊಂಡಂತೆ ಮೆಜೋಟಿಂಟ್ ವಿಧಾನವು ಕ್ರಮೇಣ ನಾಮಾವಶೇಷವಾಗತೊಡಗಿತು.

ಮರದ ಕೊರೆತದ ಹಾಗೂ ಕತ್ತರಿಸಿದ ಪಡಿಯಚ್ಚುಗಳು (Wood-engraving and Woodcuts)

ಮರದ ಹಲಗೆಯಲ್ಲಿ ಮುದ್ರಣದ ಅಚ್ಚುಗಳನ್ನು ತಯಾರಿಸುವ ಕಲೆಯು ಪುರಾತನ ಕಲೆಯಾಗಿದೆ. ಉಬ್ಬು ರೇಖೆಗಳುಂಟಾಗುವಂತೆ ಮರದ ಹಲಗೆಯನ್ನು ಕೊರೆದು ಪಡಿಯಚ್ಚನ್ನು ತಯಾರಿಸಿ ಮುದ್ರಣಶಾಯಿಯನ್ನು ಅದರ ಮೇಲೆ ಸವರಿ

ಕಾಗದದ ಮೇಲೆ ಒತ್ತಿದಾಗ ಮುದ್ರಣ ಚಿತ್ರ ತಯಾರಾಗುತ್ತದೆ. ಈ ಪದ್ಧತಿಯು ಸಾದೃಶ್ಯ ಕೈಗಾರಿಕೆಗಳೆನಿಸಿದ ಮರದ ಕೆತ್ತನೆ ಹಾಗೂ ಮರವನ್ನು ಕಡಿದು ತಯಾರಿಸುವ ಅಥವಾ ಉಡ್ ಎನ್ಗ್ರೇವಿಂಗ್ ಮತ್ತು ಉಡ್‌ಕಟ್ ಪಡಿಯಚ್ಚುಗಳೆರಡಕ್ಕೂ ಸಂಬಂಧಿಸಿದುದಾಗಿದೆ. ವುಡ್‌ಎನ್ಗ್ರೇವಿಂಗ್‌ಗೂ ವುಡ್‌ಕಟ್‌ಗೂ ವ್ಯತ್ಯಾಸವಿದೆ. ಎರಡೂ ವಿಧಾನಗಳಲ್ಲಿಯೂ ಕೆತ್ತನೆಗೆ ಬಳಸುವ ಉಪಕರಣಗಳೂ ಮರಗಳೂ ಬೇರೆ ಬೇರೆಯಾಗಿರುತ್ತವೆ. ಉಡ್‌ಕಟ್‌ಗಾಗಿ ಪೇರು ಅಥವಾ ಚೆರಿ ಮರದ ಹಲಗೆಗಳನ್ನು ಬಳಸಿದರೆ ಉಡ್‌ಎನ್ಗ್ರೇವಿಂಗ್‌ಗಾಗಿ ಗಟ್ಟಿಯಾದ ಬಾಕ್ಸ್‌ಮರದ ಹಲಗೆಗಳನ್ನು ಬಳಸಲಾಗುತ್ತದೆ ಉಡ್‌ಕಟ್‌ಗಾಗಿ ಹರಿತವಾದ ಚಾಕುವನ್ನು ಬಳಸಿದರೆ ಉಡ್‌ಎನ್ಗ್ರೇವಿಂಗ್‌ಗಾಗಿ ಗ್ರೇವರ್ ಅಥವಾ ಬ್ಯುರಿನ್ ಎಂಬ ತ್ರಿಕೋನಾಕಾರದ ಮೊನೆಯುಳ್ಳ ಉಪಕರಣವನ್ನು ಬಳಸಲಾಗುತ್ತದೆ.

ಉಡ್‌ಕಟ್ ವಿಧನಾವು ಬಹಳ ಹಿಂದಿನ ಕಾಲದಿಂದಲೂ ಬಳಕೆಯಲ್ಲಿದ್ದ ವಿಧಾನವಾಗಿದೆ. ಕ್ರಿ.ಶ. ೯ನೆಯ ಶತಮಾನದಲ್ಲಿ ಚೀನೀಯರು ಈ ವಿಧಾನವನ್ನು ಬಳಸುತ್ತಿದ್ದರು. ಕ್ರಿ.ಶ. ೧೪ನೆಯ ಶತಮಾನದಲ್ಲಿ ಯುರೋಪಿನಲ್ಲಿ ಈ ವಿಧಾನವನ್ನು ಬಳಸಿ ಇಸ್ಪೀಟು ಎಲೆಗಳನ್ನು ಮುದ್ರಿಸಲೂ ಉಡ್‌ಕಟ್ ಪಡಿಯಚ್ಚುಗಳನ್ನು ಬಳಸುತ್ತಿದ್ದರೂ ಕ್ರಿ.ಶ.೧೫ನೆಯ ಶತಮಾನದವರೆಗೂ ಎಲ್ಲೆಡೆಗೂ ಈ ವಿಧಾನದ ಪ್ರಸಾರವಾಗಲಿಲ್ಲ. ಕ್ರಿ.ಶ. ೧೫ನೆಯ ಶತಮಾನದಲ್ಲಿ ಪ್ರಾಮುಖ್ಯವಾಗಿ ಜರ್ಮನಿಯ ಅನೇಕ ಕಲಾವಿದರು ಉಡ್‌ಕಟ್ ನಕ್ಷೆಗಳನ್ನು ತಯಾರಿಸುತ್ತಿದ್ದರೂ ಕತ್ತರಿಸುವ ಕೆಲಸವನ್ನು ನಿಪುಣ ಕುಶಲತೆಗಾರಿಕೆ ಮಾಡುತ್ತಿದ್ದರೇ ಹೊರತು ಕಲಾವಿದರಲ್ಲ. ಮುಂದೆ ಉಡ್‌ಕಟ್ ವಿಧಾನದಲ್ಲಿ ಸುಪ್ರಸಿದ್ಧರಾಗಿದ್ದ ಆಲ್‌ಬ್ರೆಟ್ ಡೂರರ್(Albert Durer) ಮತ್ತು ಹಾನ್ಸ್ ಹೋಲ್ಬೀನ್(Hans Holbein)ರು ಧಾರ್ಮಿಕ ಹಾಗೂ ನೈತಿಕ ವಸ್ತುಗಳ ಚಿತ್ರಗಳ ಸರಣಿಗಳನ್ನೇ ಚಿತ್ರಿಸಿದರು. ಡೂರರ್ ಕ್ರೈಸ್ತನ ಜೀವನ ಮತ್ತು ಯಾತನೆ"ಗಳ ಚಿತ್ರಸರಣಿ, ಹೋಲ್ಬೀನನ "ಮೃತ್ಯುನರ್ತನ"(Dance of Death)ಗಳ ಸರಣಿ ಚಿತ್ರಗಳು ಅತ್ಯುತ್ತಮ ಉದಾಹರಣೆಗಳಾಗಿವೆ. ಕ್ರಿ.ಶ. ೧೬ನೆಯ ಶತಮಾನದಲ್ಲಿ ಅದ್ಭುತವಾದ ಉಡ್‌ಕಟ್ ಕಲಾಕೃತಿಗಳು ರಚನೆಯಾದ ನಂತರ ಕ್ರಮೇಣ ತನ್ನ ಘನತೆಯನ್ನೂ ಜನಪ್ರಿಯತೆಯನ್ನೂ ಕಳೆದುಕೊಳ್ಳತೊಡಗಿತು. ಕ್ರಿ.ಶ. ೧೭ನೆಯ ಶತಮಾನದ ಔಷಧೀಯ ಸಸ್ಯಗಳ ಪುಸ್ತಕಗಳ ಉಡ್‌ಕಟ್ ಚಿತ್ರಗಳು ಅಲಂಕಾರಯುಕ್ತವಾಗಿದ್ದರೂ ಕೆಲವು ಚಿತ್ರಗಳು ಅಪಕ್ವ ಕೃತಿಗಳಾಗಿವೆ. ೧೮ನೆಯ ಶತಮಾನದ ಕೃತಿಗಳು ಹೆಚ್ಚಾಗಿ ಅಲಂಕಾರಯುಕ್ತವಾದವುಗಳಾಗಿವೆ.

ಕ್ರಿ. ಶ. ೧೮ ಮತ್ತು ೧೯ನೆಯ ಶತಮಾನಗಳಲ್ಲಿ ಜಪಾನದಲ್ಲಿ ಅತೀ ಅಗ್ಗದ ಉಡ್‌ಕಟ್ ಕೃತಿಗಳನ್ನು ರಚಿಸಲಾಗಿದ್ದು ಇವು ವರ್ಣಗಳಲ್ಲಿ ಅಸಂಖ್ಯ ಸಂಖ್ಯೆಯಲ್ಲಿ ಮುದ್ರಿಸಲ್ಪಟ್ಟಿವೆ; ಬಹುತರವಾಗಿ ಈ ಕೃತಿಗಳು ಪ್ರಾಮಾಣಿಕ ಕುಶಲ ಕಲೆಗಾರರು ರಚಿಸಿದವುಗಳಾಗಿವೆಯಲ್ಲದೆ ಮುಖ್ಯವಾಗಿ ನಿಸರ್ಗದ ರಮಣೀಯ ಚಿತ್ರಗಳು ನಟರ ಮತ್ತು ಚಹದ ಅಂಗಡಿಗಳ ಅಂದಗಾತಿಯರು, ಹಾಗೂ ದಿನ ನಿತ್ಯದ ಜೀವನದ

ಸನ್ನಿವೇಶಗಳನ್ನೊಳಗೊಂಡವುಗಳಾಗಿವೆ. ಯುರೋಪಿನ ಅನೇಕ ಮಹಾನ್ ಕಲಾವಿದರು ಈ ಕೃತಿಗಳಿಂದ ಸ್ಫೂರ್ತಿಗೊಂಡರು. ೧೭ನೆಯ ಶತಮಾನದ ಕೊನೆಯಲ್ಲಿ ಲೋಹಗಳ ಕೆತ್ತನೆ ಅಥವಾ ಎನ್‌ಗ್ರೇವಿಂಗ್ ವಿಧಾನದ ಶೋಧವಾದ ಪ್ರಯುಕ್ತ ಉಡ್‌ಕಟ್ ವಿಧಾನವು ಕ್ಷೀಣವಾಯಿತು. ೧೮ನೆಯ ಶತಮಾನದ ಕೊನೆಯಲ್ಲಿ ಮರದ ಕೆತ್ತನೆಯ (ಉಡ್ ಎನ್‌ಗ್ರೇವಿಂಗ್) ಶೋಧವಾಗಿ ನಯಗಾರಿಕೆಯಲ್ಲಿ ಉಡ್‌ಕಟ್ ವಿಧಾನವನ್ನು ಹಿಮ್ಮೆಟ್ಟಿಸಿತು.

ಕ್ರಿ.ಶ. ೧೮ನೆಯ ಶತಮಾನದ ಕೊನೆಯಲ್ಲಿ ಇಂಗ್ಲೀಷ್ ಕೆತ್ತನೆ ಕಲಾವಿದ ಥಾಮಸ್ ಬೆವಿಕ್(Thomos Bewik)ನು ಮರದ ಕೆತ್ತನೆಗೆ ಯಾವ ವಿಧಾನವೂ ಮೀರಿ ಹೋಗದಂತಹ ಘನತೆಯನ್ನು ತಂದುಕೊಟ್ಟನು. ಅವನು ಪಕ್ಷಿಗಳನ್ನು ಕುರಿತ ಹಾಗೂ ಪ್ರಾಣಿಗಳನ್ನು ಕುರಿತ ಪುಸ್ತಕಗಳಿಗೆ ಮತ್ತು ಮಕ್ಕಳ ಪುಸ್ತಕಗಳಿಗೆ ಹಾಗೂ ನೀತಿಕತೆಗಳಿಗೆ ಸಂದರ್ಭ ಚಿತ್ರಗಳನ್ನು ರಚಿಸಿದನು. ಬೆವಿಕ್‌ನು ತನ್ನ ಚಿತ್ರಗಳ ಪ್ರಮುಖ ರೇಖೆಗಳ ಕೆತ್ತನೆ ಮಾಡಿದ್ದರಿಂದ ಕಪ್ಪು ಹಿನ್ನೆಲೆಯಲ್ಲಿ ಮುದ್ರಿತವಾದ ಬಿಳಿಬಣ್ಣವು ಎದ್ದು ಕಾಣುವಂತಿವೆಯಾದ್ದರಿಂದ ಕಪ್ಪು `ಮೇಲ್ಮೈಯ ಮೇಲೆ ಬಿಳಿ ವರ್ಣದಿಂದ ನೇರವಾಗಿ ಪೆನ್ನಿಲಿನ ಬದಲಾಗಿ ಗ್ರೇವರನ್ನು ಉಪಯೋಗಿಸಿ ನೇರವಾಗಿ ಚಿತ್ರಿತವಾದ ಚಿತ್ರಗಳಾಗಿ ಕಾಣಿಸುತ್ತವೆ. ೧೯ನೆಯ ಶತಮಾನದಲ್ಲಿ ಮುದ್ರಣ ಪ್ರತಿರೂಪ ಪದ್ಧತಿ(Process Reproduction)ಯು ಶೋಧವಾದ ನಂತರ ಉಡ್‌ಎನ್‌ಗ್ರೇವಿಂಗ್ ಪದ್ಧತಿ ಕೇವಲ ಚಿತ್ರಲೇಖನಗಳ ಪ್ರತಿರೂಪಗಳನ್ನು ತೆಗೆಯುವ ಒಂದು ವ್ಯವಹಾರವಾಗಿ ಉಳಿಯಿತು.

೧೯ನೆಯ ಶತಮಾನದಲ್ಲಿ ಕ್ಷೀಣಿಸುತ್ತಲಿದ್ದ ಉಡ್‌ಎನ್‌ಗ್ರೇವಿಂಗ್ ೨೦ನೆಯ ಶತಮಾನದಲ್ಲಿ ಮತ್ತೆ ಪುಸ್ತಕಗಳಲ್ಲಿನ ಸಂದರ್ಭ ಚಿತ್ರಗಳಿಗಾಗಿ ಜನಪ್ರಿಯವಾಗ ತೊಡಗಿತು. ಕಲಾವಿದರು ಸೀಮಿತಿ ಉಪಕರಣಗಳಲ್ಲಿಯೇ ತಮ್ಮ ಕೃತಿಯ ಪರಿಣಾಮವನ್ನು ಮಾತ್ರ ಚಿಂತಿಸದೇ ಸಮಗ್ರ ಪುಸ್ತಕದ ಮುದ್ರಣದ ಪರಿಣಾಮದತ್ತ ದೃಷ್ಟಿಯನ್ನು ಹಾಯಿಸಿದ ಪ್ರಯುಕ್ತ ಉತ್ತಮೋತ್ತಮವಾದ ಉಡ್ ಎನ್‌ಗ್ರೇವಿಂಗ್ ಕಲಾಕೃತಿಗಳ ರಚನೆಯಾಯಿತು.

ರೇಷ್ಮೆ ಜವನಿಕಾ ಮುದ್ರಣ ಅಥವಾ ಸೆರಿಗ್ರಫಿ (Serigraphy)

ರೇಷ್ಮೆ ಜವನಿಕಾ ಮುದ್ರಣ ಕಲೆಯು ಅಥವಾ ಸೆರಿಗ್ರಫಿಯು ಎನ್‌ಗ್ರೇವಿಂಗ್‌ಗಿಂತ ಭಿನ್ನವಾಗಿದೆ. ಕಾಗದ ಇಲ್ಲವೇ ಬಣ್ಣವನ್ನು ಹೀರಿಕೊಳ್ಳದ ರಾಳದ ಮುಸುಕು(Stencil)ಗಳನ್ನು ಅತ್ಯುತ್ತಮವಾದ ರೇಷ್ಮೆ ಬಟ್ಟೆಯ ಮೇಲಿಟ್ಟು ಕುಂಚದಿಂದ ಬಣ್ಣವನ್ನು ಮುಸುಕಿನ ಮೇಲೆ ಲೇಪಿಸಿದಾಗ ಮುಸುಕು ಇಲ್ಲದ ಭಾಗದಿಂದ ಬಣ್ಣವು ತೂರಿಕೊಂಡು ಒಳಕ್ಕಿಳಿದು ರೇಷ್ಮೆ ಬಟ್ಟೆಯನ್ನು ವ್ಯಾಪಿಸಿಕೊಳ್ಳುತ್ತದೆ. ಈ ಮುಸುಕುಗಳಲ್ಲಿಯೇ ಕಲಾವಿದನು ಚಿತ್ರಿಸಲಿರುವ ಕಲಾಕೃತಿಗಳ ರೇಖೆಗಳನ್ನು ಕತ್ತರಿಸಿಕೊಳ್ಳಬೇಕಾದುದೇ ರೇಷ್ಮೆ ಜವನಿಕಾ ಮುದ್ರಣದ ಪ್ರಮುಖ ತತ್ವವಾಗಿದೆ. ಹೀಗೆ ಒಂದಾದ ನಂತರ ಇನ್ನೊಂದರಂತೆ ಅನೇಕ ಮುಸುಕುಗಳನ್ನು ಬಳಸಿ ಬಹುವರ್ಣ ಕಲಾಕೃತಿಯನ್ನು ರಚಿಸಬಹುದಾಗಿದೆ.



೪೦) ಎನ್. ಮರಿಶಾಮಾಚಾರ್

ರೇಷ್ಮೆ ಜವನಿಕಾ ಮುದ್ರಣಕ್ಕಾಗಿ ಮುಸುಕುಗಳು ಸಿದ್ಧವಾದ ನಂತರ ಅವುಗಳ ಮುದ್ರಣಗಳನ್ನು ತೆಗೆಯಲು ಬುದ್ಧಿವಂತ ಕಲಾವಿದರೇ ಬೇಕೆಂದೇನಿಲ್ಲ ಇತ್ತೀಚಿನ ವರುಷಗಳಲ್ಲಿ ಅಮೇರಿಕ ಮತ್ತು ಯುರೋಪಿನಲ್ಲಿ ಈ ತಂತ್ರದ ಬಳಕೆಯು ವ್ಯಾಪಕವಾಗಿ ಅಭಿವೃದ್ಧಿಗೊಂಡು ಕಲಾವಿದರಿಂದ ಕಲಾಕೃತಿಗಳ ರಚನೆಯಾಯಿತಲ್ಲದೇ ಅತಿ ಸುಲಭದ ಬೆಲೆಯಲ್ಲಿ ಮಾರಾಟ ಮಾಡಲೂ ಸಾಧ್ಯವಾಯಿತು. ಈ ಮುದ್ರಣ ಕೃತಿಗಳು ಕಲಾವಿದರ ಮೂಲಕೃತಿಯಂತೆಯೂ ಕಲ್ಲಚ್ಚಿನಿಂದ ಮುದ್ರಣಗೊಂಡ ಉತ್ತಮ ಕೃತಿಗಳಂತೆಯೂ ಕಾಣುತ್ತಿದ್ದರೂ ಸುಲಭ ಬೆಲೆಯಲ್ಲಿ ಮಾರಾಟಕ್ಕೆ ಅನುಕೂಲವಾಯಿತು. ರೇಷ್ಮೆ ಜವನಿಕಾ ಮುದ್ರಣದಲ್ಲಿ ಆಕಸ್ಮಿಕವಾದ ತಪ್ಪುಗಳನ್ನು ಮುಸುಕುಗಳಲ್ಲಿ ತಿದ್ದಿಕೊಂಡು ವರ್ಣ ಸಾಂದ್ರತೆಯಲ್ಲಿ ಹೆಚ್ಚು ಕಡಿಮೆ ಮಾಡಿಕೊಳ್ಳುವ ಅವಕಾಶವಿರುವುದರಿಂದ ಈ ತಂತ್ರವು ಹೆಚ್ಚು ಜನಪ್ರಿಯವಾಯಿತೆಂದು ಹೇಳಬಹುದು.

ಕಲಾ ಪ್ರಪಂಚದ ಐತಿಹಾಸಿಕ ಮಹತ್ವಪೂರ್ಣ ಘಟನೆಗಳು ಒಂದು ಹಿನ್ನೋಟ

ಕ್ರಿಸ್ತಪೂರ್ವ ೮೦೦೦ ದಿಂದ ಕ್ರಿಸ್ತಪೂರ್ವ ೭೦೦೦ದ ಅವಧಿಯಲ್ಲಿ ಏಷ್ಯದಲ್ಲಿ ಸುಣ್ಣದ ಗಾರೆ ಮತ್ತು ಕಲ್ಲುಗಳ ಮೇಲೆ ವರ್ಣಚಿತ್ರಗಳ ರಚನೆ ಜೆರಿಕೊದಲ್ಲಿ ತಲೆಬುರುಡೆಯ ಮೇಲೆ ಸುಣ್ಣದ ವಿಶಿಷ್ಟ ಗುಣಧರ್ಮಗಳ ರಚನೆ.

ಕ್ರಿಸ್ತಪೂರ್ವ ೭೦೦೦- ೬೦೦೦ದ ಅವಧಿಯಲ್ಲಿ ಏಷ್ಯದ ಮಧ್ಯ ಪೂರ್ವ ಪ್ರದೇಶಗಳಲ್ಲಿ ಕೋಟೆಗಳ ರಚನೆ, ಭಿತ್ತಿ ಚಿತ್ರ ರಚನೆ ಮತ್ತು ಚಿಕ್ಕ ಗಾತ್ರದ ಪ್ರತಿಮೆಗಳ ರಚನೆ.

ಕ್ರಿಸ್ತಪೂರ್ವ ೩೦೦೦ ಕ್ಕೂ ಮೊದಲು ಯುರೋಪಿನ ಮಾಲ್ಟಾದಲ್ಲಿ ಪ್ರಪ್ರಥಮವಾಗಿ ಗುರುತಿಸಲ್ಪಟ್ಟ ಕಲ್ಲಿನ ದೇವಾಲಯಗಳ ನಿರ್ಮಾಣ.

ಕ್ರಿಸ್ತಪೂರ್ವ ೨೭೦೦ರ ಸುಮಾರಿಗೆ ಈಜಿಪ್ಟ್‌ನಲ್ಲಿ ಪಿರಮಿಡ್‌ಯುಗದ ಪ್ರಾರಂಭ. ಸುಮಾರು ಕ್ರಿಸ್ತಪೂರ್ವ ೨೫೬೦ರ ವೇಳೆಗ 'ಗೀಝಾ'ದಲ್ಲಿ ಪಿರಾಮಿಡ್‌ಗಳು ಮತ್ತು ಸಿಂಹನಾರಿ (ಸ್ಫಿಂಕ್ಸ್)ಗಳ ನಿರ್ಮಾಣ.

ಕ್ರಿಸ್ತಪೂರ್ವ ೨೩೭೧-೨೩೧೬ರ ವೇಳೆಗೆ ಏಷ್ಯದಲ್ಲಿ ಅಕ್ಕೇಡಿಯನ್ ಪ್ರತಿಮೆಗಳು ಮತ್ತು ಕಂಚಿನ ಪ್ರತಿಮೆಗಳ ರಚನೆ.

ಕ್ರಿಸ್ತಪೂರ್ವ ೨೧೦೦ರಲ್ಲಿ ಏಷ್ಯದ ಊರ್(Ur) ಎಂಬಲ್ಲಿ ಪ್ರಥಮ ಝಿಗ್ಗುರಾಪ್ ಕಟ್ಟಡದ ನಿರ್ಮಾಣ.

ಕ್ರಿಸ್ತಪೂರ್ವ ೧೭೯೨-೧೭೫೦ರಲ್ಲಿ ಏಷ್ಯದ ಬ್ಯಾಬಿಲೋನದ ಅರಮನೆಗಳು ಮತ್ತು ದೇವಾಲಯಗಳ ನಿರ್ಮಾಣ

ಕ್ರಿಸ್ತಪೂರ್ವ ೧೬೫೦- ೧೫೯೦ರಲ್ಲಿ ಯುರೋಪಿನ ನೋಸೋಸ್(Knossos) ಮತ್ತು ಫೈಸ್ಟೋಸ್ (Phaistos)ಗಳಲ್ಲಿ ಕ್ರೀಟನ್(Cretan) ಅರಮನೆಗಳು ಕಟ್ಟಲ್ಪಟ್ಟವು.

ಕ್ರಿಸ್ತಪೂರ್ವ ೧೫೪೦ - ೧೩೩೦ರ ಅವಧಿಯಲ್ಲಿ ಈಜಿಪ್ಟಿನ ನೂತನ ಸಾಮ್ರಾಜ್ಯ ಸಂಸ್ಕೃತಿಯಿಂದಾಗಿ ಅರಸರ ಕೊಳದಲ್ಲಿ ಸಮಾಧಿಗಳೂ ಲಕ್ಸರ್(Luxor), ಕಾರ್ನಾಕ್(Karnak) ಮತ್ತು ಅಬು ಸಿಂಪೆಲ್(Abu Simpel)ಗಳಲ್ಲಿ ದೇವಾಲಯಗಳೂ ಕಟ್ಟಿಸಲ್ಪಟ್ಟವು.

ಕ್ರಿಸ್ತಪೂರ್ವ ೯೦೦ರ ಸುಮಾರಿಗೆ ಆಫ್ರಿಕಾದ ನಾಕ್ ಸಂಸ್ಕೃತಿಯು ಮಧ್ಯ ನೈಜಿರಿಯದಲ್ಲಿ ಕುಂಭ(Pottery) ಕಲೆಯನ್ನು ಸೃಷ್ಟಿಸಿತು.

ಕ್ರಿಸ್ತಪೂರ್ವ ೮೮೪-೮೫೯ರಲ್ಲಿ ಏಷ್ಯದ ನಿಮ್ರೂದ್(Nimrud)ನ ಅಸ್ಸೀರಿಯನ್ ಅರಮನೆಯಲ್ಲಿ ಉಬ್ಬುಶಿಲ್ಪ(Relief Sculpture)ಗಳ ರಚನೆ

ಕ್ರಿಸ್ತಪೂರ್ವ ೮೦೦ರ ಸುಮಾರಿಗೆ ಆಫ್ರಿಕದ ಕುಶ್, ಸುಡಾನ್‌ಗಳ ನೂಬಿಯನ್ ಸಾಮ್ರಾಜ್ಯದಲ್ಲಿ ಅರಸರ ಗೋರಿಗಳ ಮತ್ತು ಪಿರಾಮಿಡ್‌ಗಳ ನಿರ್ಮಾಣ

ಕ್ರಿಸ್ತಪೂರ್ವ ೬೫೦ರಲ್ಲಿ ಯುರೋಪಿನಲ್ಲಿ ಭವ್ಯವಾದ ಗ್ರೀಕ್ ಪ್ರತಿಮಾ ನಿರ್ಮಾಣ ಕಲೆಯ ಪ್ರಾರಂಭ.

ಕ್ರಿಸ್ತಪೂರ್ವ ೬೦೦ರಲ್ಲಿ ಬ್ಯಾಬಿಲೋನ್ ನಗರವನ್ನು ಪುನಃ ಕಟ್ಟಲಾಯಿತಲ್ಲದೇ ತೂಗಾಡುವ ತೋಟಗಳನ್ನು ಮತ್ತು ಬಾಬೆಲ್ ಝಿಗ್ಗುರಾಟ್‌ನ ಗೋಪುರವನ್ನೂ ನಿರ್ಮಿಸಲಾಯಿತು.

ಕ್ರಿಸ್ತಪೂರ್ವ ೬೦೦ - ೩೦೦ರ ಅವಧಿಯಲ್ಲಿ ಎತ್ರುಸ್ಕನ್ನರು ಸಮಾಧಿ ಭವನಗಳಲ್ಲಿ ಭಿತ್ತಿಚಿತ್ರಗಳ ರಚನೆಯನ್ನು ಪ್ರಾರಂಭಿಸಿದರು.

ಕ್ರಿಸ್ತಪೂರ್ವ ೪೪೮ - ೪೩೮ರಲ್ಲಿ ಯುರೋಪಿನ ಅಥೆನ್ಸ್‌ನಲ್ಲಿ ಗ್ರೀಕ್ ವಾಸ್ತುಶಿಲ್ಪಿಯಿಂದ ಇಕ್ಟಿನಸ್(Ictinus)ನಿಂದ ಕಟ್ಟಲ್ಪಟ್ಟ ಪಾರ್ಥೆನಾನ್(Parthenon) ಕಟ್ಟಡದಲ್ಲಿ ಶಿಲ್ಪ ಫಿಡಿಯಾಸ್(Phydias)ನಿಂದ ರಚಿತವಾದ ಪ್ರತಿಮೆಗಳೂ ತುಂಬಿದ್ದವು.

ಕ್ರಿಸ್ತಪೂರ್ವ ೩೦೦ರವೇಳೆಯ ಸುಮಾರಿಗೆ ಆಫ್ರಿಕದ ಈಜಿಪ್ಟಿನ ಉತ್ತರದ ಕರಾವಳಿಯಲ್ಲಿರುವ ಅಲೆಕ್ಸಾಂಡ್ರಿಯದಲ್ಲಿ ವಸ್ತು ಪ್ರದರ್ಶನಾಲಯದ ಪ್ರತಿಷ್ಠಾಪನೆ.

ಕ್ರಿಸ್ತಪೂರ್ವ ೧೧೦ ರಿಂದ ಭಾರತದಲ್ಲಿ ಬೌದ್ಧ ಕಲೆಯು ಪ್ರಸಾರಗೊಂಡಿತು.

ಕ್ರಿಸ್ತಶಕ ೨೫೦ರಿಂದ ಮಧ್ಯ ಅಮೇರಿಕೆಯಲ್ಲಿ ಮಯನ್ ಪಿರಮಿಡ್‌ಗಳೂ ದೇವಾಲಯಗಳೂ ಕಟ್ಟಲ್ಪಟ್ಟವು.

ಕ್ರಿಸ್ತಶಕ ೩೨೦ ರಿಂದ ಕ್ರಿಸ್ತಶಕ ೫೫೦ರ ವರೆಗೆ ಆಳಿದ ಭಾರತದ ಗುಪ್ತ ಅರಸರ ಕಾಲದಲ್ಲಿ ಭಾರತೀಯ ಶ್ರೇಷ್ಠತೆಯ ಕಲೆಯ ಪ್ರಾರಂಭ.

ಕ್ರಿಸ್ತಶಕ ೫೩೦ರ ಸುಮಾರಿಗೆ ಉತ್ತರ ಯುರೋಪಿನಲ್ಲಿ ಅಲಂಕಾರಯುಕ್ತ ಹಸ್ತಪ್ರತಿಗಳ (Illuminated manuscripts)ನಿರ್ಮಾಣ. ರವೆನಾ ಮತ್ತು ಕಾನ್ಸ್ಟಾಂಟಿನೋಪಲ್‌ಗಳಲ್ಲಿ ಮೊಜಾಯಿಕ್ಸ್ ಮತ್ತು ಭಿತ್ತಿಚಿತ್ರಗಳ ಬೈಜಂಟಾಯಿನ್ ಕಲೆಯ ಪ್ರಸಾರ. ಕ್ರಿಸ್ತಶಕ ೫೩೨ - ೫೩೭ರಲ್ಲಿ ಕಾನ್ಸ್ಟಾಂಟಿನೋಪಲ್‌ನಲ್ಲಿ ಸಂತ ಸೋಫಿಯಾ ಚರ್ಚ್ ನಿರ್ಮಾಣ.

ಕ್ರಿಸ್ತಶಕ ೬೧೮ರ ಸುಮಾರಿಗೆ ಚೈನಾದಲ್ಲಿ ಟಾಂಗ್ ಅರಸರ ಆಳ್ವಿಕೆಯ ಕಾಲದಲ್ಲಿ ಚೀನಿಯರು ಮಾನವಾಕೃತಿಗಳುಳ್ಳ ವರ್ಣಚಿತ್ರಗಳನ್ನು ರಚಿಸಿದರು.

ಕ್ರಿಸ್ತಶಕ ೬೪೫ - ೭೮೪ರ ಅವಧಿಯಲ್ಲಿ ಜಪಾನೀ ಶ್ರೇಷ್ಠತಮ ಕಲೆಯು ಚೀನೀ ಶೈಲಿಯ ಅನುಕರಣೆಯನ್ನು ಅನುಸರಿಸತೊಡಗಿತು.

ಕ್ರಿಸ್ತಶಕ ೯೦೦ರ ಸುಮಾರಿಗೆ ಅಮೇರಿಕೆಯ ಬೆಟನ್ ಇಲ್ಸಾ "ಮಯನ್ ಪಟ್ಟಣದ ಜೀರ್ಣೋದ್ಧಾರ.

ಕ್ರಿಸ್ತಶಕ ೯೧೨ರ ಸುಮಾರಿಗೆ ಸ್ಪೇನಿನ ಮೂರನೆಯ ಕಲೀಫನಾದ ಅಬ್ದುರ್ರಹಮಾನ ಮತ್ತು ಅವನ ಉತ್ತರಾಧಿಕಾರಿಗಳ ಅವಧಿಯಲ್ಲಿ 'ಕೋರ್ಡೋಬಾ' ಮೂರಿಷ್ ಸಾಂಸ್ಕೃತಿಕ ಕೇಂದ್ರವಾಗಿ ಅಭಿವೃದ್ಧಿಗೊಂಡಿತು.

ಕ್ರಿಸ್ತಶಕ ೧೦೦೦ - ೧೨೦೦ ರ ಸುಮಾರಿಗೆ ಇಟಾಲಿ ಮತ್ತು ಫ್ರಾನ್ಸ್‌ಗಳಲ್ಲಿ ರೋಮನೆಸ್ಕ್ ವಾಸ್ತುಶಿಲ್ಪಕಲೆಯ ಪ್ರಗತಿ.

ಕ್ರಿಸ್ತಶಕ ೧೦೬೩ - ೭೩ರಲ್ಲಿ ವೇನೀಸ್ ನಗರದಲ್ಲಿ ಸಂತ-ಮಾರ್ಕ್‌ನ ಅರಮನೆಯನ್ನು ಬೈಜಂಟಾಯಿನ್ ಶೈಲಿಯಲ್ಲಿ ಕಟ್ಟಲಾಯಿತು.

ಕ್ರಿಸ್ತಶಕ ೧೧೦೦ರ ಸುಮಾರಿಗೆ ಪಶ್ಚಿಮ ಆಫ್ರಿಕೆಯ ಟಿಂಬುಕ್ಟು ನಗರವು ಸಾಂಸ್ಕೃತಿಕ ಕೇಂದ್ರವಾಗಿ ಪರಿವರ್ತಿತವಾಯಿತು.

ಕ್ರಿಸ್ತಶಕ. ೧೧೪೪ರಲ್ಲಿ ಪ್ಯಾರಿಸಿನ ಹೊರ ಭಾಗದಲ್ಲಿ ಸಂತ ಡೆನಿಸ್‌ನ ಕ್ರೈಸ್ತಮಠದ ಬೆನೆಡಿಕ್ಟಾಯಿನ್ ಆರಾಧನಾಗೃಹವು ಕಟ್ಟಲ್ಪಟ್ಟಿದ್ದು ಇದು ಗೋತಿಕ್ ವಾಸ್ತುಶೈಲಿಯ ಪ್ರಪ್ರಥಮ ಉದಾಹರಣೆಯಾಗಿದೆ.

ಕ್ರಿಸ್ತಶಕ ೧೩೦೫-೧೩೦೮ರಲ್ಲಿ ಇಟಾಲಿಯನ್ ವರ್ಣಚಿತ್ರಕಾರ ಗಿಯೋಟ್ಟೋ (೧೨೬೭- ೧೩೩೭) ಪಡುವಾ(Padua)ದಲ್ಲಿ ಕನ್ಯಾಮಾತೆ(Virigin) ಹಾಗೂ ಕ್ರೈಸ್ತನ ಜೀವನ ಚರಿತ್ರೆಗಳಿಗೆ ಸಂಬಂಧಿಸಿದ ಭಿತ್ತಿಚಿತ್ರಗಳನ್ನು ರಚಿಸಿದನು. ಈ ಚಿತ್ರಗಳು ವಾಸ್ತವ ಪಂಥದ ಪ್ರಾರಂಭಿಕ ಕುರುಹುಗಳಾಗಿವೆಯಲ್ಲದೇ ಪುನರುತ್ಥಾನದ ಪ್ರಾರಂಭದ ದ್ಯೋತಕಗಳೂ ಆಗಿವೆ.

ಕ್ರಿಸ್ತಶಕ ೧೪೦೧ -೫೨ ರಲ್ಲಿ ಇಟಾಲಿಯನ್ ಶಿಲ್ಪಕಲಾವಿದ ಲೋರೆಂಝೋ ಘಿಂಬರ್ಟಿ (Lorenzo Ghiberti)ಯು ಫ್ಲಾರೆನ್ಸಿನ ಜ್ಞಾನಸ್ನಾನ ಶಾಲೆಯ ಬಾಗಿಲುವಾಡಕ್ಕೆ ಕಂಚಿನ ಕೃತಿಗಳನ್ನು ರಚಿಸಿದನು.

ಕ್ರಿಸ್ತಶಕ ೧೪೨೦-೩೬ರಲ್ಲಿ ಇಟಾಲಿಯನ್ ವಾಸ್ತುಶಿಲ್ಪ ಫಿಲಿಪ್ಪೊ ಬ್ರೂನೆಲೆಷಿ(Filippo Brunellechi)ಯು ಫ್ಲಾರೆನ್ಸಿನ ಬಿಷಪ್ಪಿನ ಮುಖ್ಯ ಆರಾಧನಾ ಮಂದಿರದ ಗುಮ್ಮಟವನ್ನು ಕಟ್ಟಿದನು. ಪುನರುತ್ಥಾನದ ಪ್ರಧಾನ ವಿಕಾಸದ ಪ್ರಾರಂಭ. ಇದೇ ಅವಧಿಯಲ್ಲಿ ಬ್ರೂನೆಲೆಷಿಯು ಯಥಾದರ್ಶನ (Perspective) ಪದ್ಧತಿಯನ್ನೂ ಅಭಿವೃದ್ಧಿಗೊಳಿಸಿದನು.

ಕ್ರಿಸ್ತಶಕ ೧೪೩೦ರಿಂದ ಫ್ಲೆಮಿಷ್ ಕಲಾವಿದ ಜಾನ್‌ವಾನ್ ಆಯಿಕ್‌ನು ಫ್ಲ್ಯಾಂಡರ್ಸ್‌ನಲ್ಲಿ ತೈಲವರ್ಣ ಚಿತ್ರಕಲಾ ತಂತ್ರದಲ್ಲಿ ಪ್ರಾವೀಣ್ಯತೆಯನ್ನು ತಂದುಕೊಟ್ಟನು.

ಕ್ರಿಸ್ತಶಕ ೧೪೩೦-೩೫ರಲ್ಲಿ ಇಟಾಲಿಯನ್ ಶಿಲ್ಪಕಲಾವಿದ ಡೋನಾಟೆಲ್ಲೋ (೧೩೮೬-೧೪೬೬) ಡೇವಿಡ್‌ನ ಪ್ರಪ್ರಥಮ ನಗ್ನಸ್ಮಾರಕ ಶಿಲ್ಪವನ್ನು ರಚಿಸಿದನು.

ಕ್ರಿಸ್ತಶಕ ೧೪೮೦- ೮೫ ರಲ್ಲಿ ಇಟಾಲಿಯನ್ ವರ್ಣಚಿತ್ರಕಲಾವಿದ ಸ್ಯಾಂಡ್ರೋ ಬಾಟ್ಟಿಶೆಲ್ಲಿ(Sandro Botticelli)ಯಿಂದ (೧೪೪೫-೧೫೧೦) ವಿಶ್ವವಿಖ್ಯಾತ "ರತಿಜನನ"(Birth of Venus) ಚಿತ್ರದ ರಚನೆ.

ಕ್ರಿಸ್ತಶಕ ೧೪೯೭ರಲ್ಲಿ ಲಿಯೋನಾರ್ಡೋ ಡ ವಿಂಚಿ(Leonardo da Vinci) (೧೪೫೧-೧೫೧೯)ಯಿಂದ "ಕೊನೆಯ ರಾತ್ರಿಯೂಟ"(Last Supper) ಚಿತ್ರದ ರಚನೆ.

ಕ್ರಿಸ್ತಶಕ ೧೫೦೧-೪ರಲ್ಲಿ ವಿಶ್ವವಿಖ್ಯಾತ ಶಿಲ್ಪಿ, ವರ್ಣಚಿತ್ರಕಾರ ಹಾಗೂ ವಾಸ್ತುಶಿಲ್ಪಿಯಾದ ಮೈಕೆಲೆಂಜಲೋನಿಂದ ಡೇವಿಡ್ ಪ್ರತಿಮೆಯ ನಿರ್ಮಾಣ.

ಕ್ರಿಸ್ತಶಕ ೧೫೦೨ರಲ್ಲಿ ಲಿಯೋನಾರ್ಡೋ ಡ ವಿನ್ಸಿಯಿಂದ ಮೋನಾಲಿಸಾ ಚಿತ್ರದ ರಚನೆ.

ಕ್ರಿಸ್ತಶಕ ೧೫೦೫ರಲ್ಲಿ ರೋಮದಲ್ಲಿ ನೂತನ ಸಂತ ಪೀಟರನ ಚರ್ಚ್ ವಾಸ್ತುಶಿಲ್ಪಿ ಡೋನಾಟೋ ಬ್ರಮಾಂಟೆ(Donato Bramante) (೧೪೪೪-೧೫೧೪)ಯಿಂದ ಪ್ರಾರಂಭಿಸಲ್ಪಟ್ಟು ಕ್ರಿ.ಶ. ೧೬೫೫ರಲ್ಲಿ ಸಂಪೂರ್ಣಗೊಂಡಿತು.

ಕ್ರಿಸ್ತಶಕ ೧೫೦೭ರ ಸುಮಾರಿಗೆ ಇಟಾಲಿಯನ್ ವರ್ಣಚಿತ್ರ ಕಲಾವಿದ ಜಾರ್ಜಿಯೋನ (Georgione)(೧೪೭೫-೧೫೧೦)ನಿಂದ ಪಾಶ್ಚಿಮಾತ್ಯರ ಪ್ರಾಚೀನ ನಿಸರ್ಗ ಚಿತ್ರವೆಂದು(Landscape) ಪರಿಗಣಿಸಲ್ಪಟ್ಟ 'ಬಿರುಗಾಳಿ' (Tempect) ಚಿತ್ರದ ರಚನೆ.

ಕ್ರಿಸ್ತಶಕ ೧೫೦೮ರಿಂದ ವರ್ಣಚಿತ್ರಕಾರ ಹಾಗೂ ವಾಸ್ತುಶಿಲ್ಪಿಯಾದ ರಾಫೆಲ್(Raphael) (೧೪೮೩-೧೫೨೦)ನು ವ್ಯಾಟಿಕನ್‌ನಲ್ಲಿ ಧರ್ಮಗುರು ಪೋಪನ ಕೊಠಡಿಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಿದನು.

ಕ್ರಿಸ್ತಶಕ ೧೫೦೮-೧೨ರಲ್ಲಿ ಸಿಸ್ಟೈನ್ ಅರಮನೆಯ ಆರಾಧನಾ ಮಂದಿರದಲ್ಲಿ ಮೈಕೆಲೆಂಜಲೋನಿಂದ ಭಿತ್ತಿಚಿತ್ರಗಳ ರಚನೆ

ಕ್ರಿಸ್ತಶಕ ೧೫೧೦ ರಿಂದ ವೆನೆಷಿಯನ್ ಪುನರುಜ್ಜೀವನನದ ಪರಮೋಚ್ಚ ಸ್ಥಿತಿಯ ಕಾಲ ಟಿಷ್ಯನ್(Titian), ವೆರೋನೀಸ್(Veronese) ಮತ್ತು ಟಿಂಟೋರೆಟೋ(Tiutoretto) ಮುಂತಾದ ಅಗ್ರಗಣ್ಯ ವರ್ಣಚಿತ್ರಕಾರರು ಇದೇ ಅವಧಿಯಲ್ಲಿದ್ದವರು.

ಕ್ರಿಸ್ತಶಕ ೧೫೫೦ರಲ್ಲಿ ಇಟಾಲಿಯನ್ ವರ್ಣಚಿತ್ರ ಕಲಾವಿದನೂ ಸಾಹಿತಿಯೂ ಆದ ಜಾರ್ಜಿಯೋ ವಸರಿ(Georgio Vasari)ಯಿಂದ ಅತ್ಯುತ್ತಮ ವರ್ಣಚಿತ್ರಕಾರರ, ಶಿಲ್ಪಿಗಳ ಹಾಗೂ ವಾಸ್ತುಶಿಲ್ಪಿಗಳ ಜೀವನ ಚರಿತ್ರೆಗಳ ಪ್ರಕಟಣೆ

ಕ್ರಿಸ್ತಶಕ ೧೬೩೦ರಿಂದ ರೋಮದಲ್ಲಿ ಬ್ಯಾರೋಕ್ ಕಲೆಯ ಹರಡುವಿಕೆ.

ಕ್ರಿಸ್ತಶಕ ೧೬೪೦-೬೦ರಲ್ಲಿ ಫ್ರೆಂಚ್ ವರ್ಣಚಿತ್ರಕಲಾವಿದ ಕ್ಲಾಡ್(Claude)ನು ತನ್ನ ಪ್ರಭಾವಶಾಲೀ ಕಾವ್ಯಾತ್ಮಕ ಶೈಲಿಯಲ್ಲಿ ಪರಿಣತಿಯಿಂದ ಪ್ರಥಮವರ್ಗದ ನಿಸರ್ಗಚಿತ್ರ(Landscapes)ಗಳನ್ನು ರಚಿಸಿದನು.

ಕ್ರಿಸ್ತಶಕ ೧೬೪೨ ಡಚ್ ವರ್ಣಚಿತ್ರಕಲಾವಿದ ರೆಂಬ್ರಾಡ್ಟ್ ವಾನ್‌ರಿನ್(Rembrandt Van Rijn)ನಿಂದ 'ರಾತ್ರಿಕಾವಲು'(Night-watch) ಕೃತಿಯ ರಚನೆ.

ಕ್ರಿಸ್ತಶಕ ೧೭೩೫ರಲ್ಲಿ ಇಂಗ್ಲಿಷ್ ವರ್ಣಚಿತ್ರಕಲಾವಿದ ವಿಲಿಯಂ ಹೋಗಾರ್ಥ್(William Hogarth)ನಿಂದ "ರೇಕ್‌ಸ್ ಪ್ರೋಗ್ರೆಸ್" ಕೃತಿಯ ರಚನೆ .

ಕ್ರಿಸ್ತಶಕ ೧೮೧೫-೮೩ರ ಅವಧಿಯಲ್ಲಿ ಇಂಗ್ಲಿಷ್ ವಾಸ್ತುಶಿಲ್ಪಿ ಜಾನ್‌ನಾಷ್(John Nash)ನು ಬ್ರೈಟನ್ ಕ್ರೀಡಾಮಂಟಪ(Brighton Pavilion)ವನ್ನು ಪ್ರಭುತ್ವ ಶೈಲಿಯಲ್ಲಿ ನಿರ್ಮಿಸಿದನು.

ಕ್ರಿಸ್ತಶಕ ೧೮೧೮-೩೦ ಜಪಾನೀ ವರ್ಣಚಿತ್ರಕಲಾವಿದ ಹೋಕುಸಾಯಿ(Hokusai) ತನ್ನ ಅತ್ಯುತ್ತಮ ಕಲಾಕೃತಿಗಳನ್ನು ರಚಿಸಿದನು.

ಕ್ರಿಸ್ತಶಕ ೧೮೨೦ರಲ್ಲಿ ಇಂಗ್ಲಿಷ್ ವರ್ಣಚಿತ್ರಕಾರ ಜಾನ್ ಕಾನ್ಸ್‌ಟೇಬಲ್(John Constable) (೧೭೭೬-೧೮೩೭)ನಿಂದ "ದ ಹೇವೇನ್" ಕೃತಿಯ ಸೃಷ್ಟಿ.

ಕ್ರಿಸ್ತಶಕ ೧೮೪೮ "ರಾಫೆಲ್ ಪೂರ್ವ ಶೈಲಿಯ(Pre Raphalite Brotherhood) ಕಲಾವಿದರ ಐಕೀಕೃತ ಸಂಘವನ್ನು ಜಾನ್ ಎವರೆಟ್ ಮಿಲಿಯಾಸ್(John Everette Milias) ಮತ್ತು ಡಾಂಟೆ ಗೆಬ್ರಿಯಲ್ ರಾಸೆಟಿ(Dante Gabriel Rosetti) ಅವರು ಲಂಡನ್ನಿನಲ್ಲಿ ಪ್ರಾರಂಭಿಸಿದರು.

ಕ್ರಿಸ್ತಶಕ ೧೮೫೧ರಲ್ಲಿ ಇಂಗ್ಲೀಷ್ ವಾಸ್ತುಶಿಲ್ಪಿಯಾದ ಸರ್ ಜೋಸೆಫ್ ಪ್ಯಾಕ್ಸ್‌ಟನ್(Sir Joseph Paxton)ನಿಂದ ರೂಪಿತವಾದ ಲಂಡನ್ನಿನ ಕ್ರಿಸ್ಟಲ್ ಅರಮನೆಯಲ್ಲಿ ಬೃಹತ್ ಪ್ರಮಾಣದ ಪ್ರದರ್ಶನ.

ಕ್ರಿಸ್ತಶಕ ೧೮೬೩ರಲ್ಲಿ ಫ್ರೆಂಚ್ ವರ್ಣಚಿತ್ರಕಲಾವಿದ ಮಾನೆ(Manet) (೧೮೩೨-೮೩)ಯಿಂದ ಅಪನಿಂದೆಗೆ ಗುರಿಯಾದ ಪ್ರದರ್ಶನ

ಕ್ರಿಸ್ತಶಕ ೧೮೭೪ರಲ್ಲಿ ಸಮಷ್ಟಿಪರಿಣಾಮ ಪಂಥ(Impressionist)ದ ಕಲಾಕೃತಿಗಳ ಪ್ರಪ್ರಥಮ ಪ್ರದರ್ಶನವನ್ನು ಪ್ಯಾರಿಸ್‌ನಲ್ಲಿ ಏರ್ಪಡಿಸಲಾಯಿತು.

ಕ್ರಿಸ್ತಶಕ ೧೮೭೮ರ ಅವಧಿಯನ್ನು ಕಂಚಿನ ಯುಗವೆಂದು ಪರಿಗಣಿಸಲಾಗಿದೆ. ಫ್ರೆಂಚ್ ಶಿಲ್ಪಕಲಾವಿದ ಆಗಸ್ಟ್ ರೋಡಿನ್(Auguste Radin)ನ ಬಹುತೇಕ ಕೃತಿಗಳ ಪ್ರದರ್ಶನ

ಕ್ರಿಸ್ತಶಕ ೧೮೮೪-೬ ರಲ್ಲಿ ಫ್ರೆಂಚ್ ವರ್ಣಚಿತ್ರಕಾರ ಜಾರ್ಜಸ್ ಸ್ಯೂರಾತ್(Georges Seurat) "ಲಾ ಗ್ರಾಂಡೆ ಜಟೆ(La grande Jatte) ನಡುಗಡ್ಡೆಯಲ್ಲಿ ರವಿವಾರದ ಮಧ್ಯಾಹ್ನ" ಚಿತ್ರದ ರಚನೆ "ಪಾಯಿಂಟಲಿಜಂ"(Pointilism) ಪಂಥವನ್ನು ಅಭಿವೃದ್ಧಿಗೊಳಿಸಿದನು.

ಕ್ರಿಸ್ತಶಕ ೧೮೮೫ -೧೮೮೭ ಸಿಝಾನೆಯಿಂದ ಮೊಂಟ್ ಸೇಂಟ್ ವ್ಹಿಕ್ಟೋಯಿರ್‌ದ ಸರಣಿ ಚಿತ್ರಗಳ ರಚನೆ.

ಕ್ರಿಸ್ತಶಕ ೧೮೯೩ ನಾರ್ವೆಯ ವರ್ಣಚಿತ್ರ ಕಲಾವಿದ ಎಡ್ವರ್ಡ್ ಮುಂಚ್(Edvard Munch) (೧೮೬೩-೧೯೪೪)ನಿಂದ ಚೀತ್ಕಾರ'(The Cry) ಚಿತ್ರದ ರಚನೆ.

ಕ್ರಿಸ್ತಶಕ ೧೯೦೫ರಲ್ಲಿ 'ಅನಾಗರೀಕ ಪಂಥ'(Fanvist)ದ ಉದಯ

ಕ್ರಿಸ್ತಶಕ ೧೯೦೭ರಲ್ಲಿ ಸ್ಪೇನ ಕಲಾವಿದ ಪ್ಯಾಬ್ಲೋ ಪಿಕಾಸೋ(Pablo Picasso) (೧೮೮೧-೧೯೭೪)ನಿಂದ "ಲೆಸ್ ಡೆಮಾಯಿಸೆಲಸ್ ಡಿ' ಆಯಿಗ್ನನ್"(Les Demoiselles D' Auignon) ಚಿತ್ರದ ರಚನೆ ಘನಾಕೃತಿ ಪಂಥ(Cubist)ದ ಚಳವಳಿಯ ಪ್ರಾರಂಭ.

ಕ್ರಿಸ್ತಶಕ ೧೯೧೩ರಲ್ಲಿ ಯುರೋಪಿನ ಆಧುನಿಕ ಕಲೆಯನ್ನು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ಪರಿಚಯಿಸಲಾಯಿತು. ಇದೇ ಅವಧಿಯಲ್ಲಿ ಇಂಗ್ಲೀಷ್ ವಾಸ್ತುಶಿಲ್ಪಿ ಸರ್ ಎಡ್ವಿನ್ ಲ್ಯುಟ್ಯೇನ್ಸ್(Sir Edvin Lutyens)ನು ಭಾರತದ ನವದೆಹಲಿಯಲ್ಲಿ ರಾಜಪ್ರತಿನಿಧಿ(Victory)ಯ ಮನೆಯ ನಕ್ಷೆಯನ್ನು ಸಿದ್ಧಪಡಿಸಲು ಪ್ರಾರಂಭಿಸಿದನು.

ಕ್ರಿಸ್ತಶಕ ೧೯೧೫ರಲ್ಲಿ 'ಡಾಡಾ' ಪಂಥದ ಮೂಲಸ್ವರೂಪ ಚಳವಳಿ ಹಿಂದಿನ ಸರ್ವಮಾನ್ಯ ಕಲಾತ್ಮಕ ಮೌಲ್ಯಗಳನ್ನು ಕೈಬಿಟ್ಟು ಪ್ರಾರಂಭವಾದ ಈ ಪಂಥ ಜೂರಿಚ್ ಮತ್ತು ಸ್ವಿಝರ್‌ಲಂಡ್‌ಗಳಲ್ಲಿ ಫ್ರೆಂಚ್‌ಕವಿಯಾದ ಟ್ರಿಸ್ಟನ್ ಝಾರ್(Tristan Tzar) (೧೮೯೬-೧೯೬೩)ನಿಂದ ಉಗಮಿಸಿತು. ಈ "ಡಾಡಾಪಂಥ"ದಿಂದಲೇ "ಸರ್‍ರಿಯಲಿಜಂ" ಪಂಥದ ಆವಿಷ್ಕಾರವಾಯಿತು.

ಕ್ರಿಸ್ತಶಕ ೧೯೨೪ರಲ್ಲಿ 'ಸರ್‍ರಿಯಲಿಜಂ'(Surrealist) ಪಂಥದ ಉದಯ ಮಾರ್ಕ್‌ಛಗಲ್ಲ್ (Marc Chagall), ಸಾಲ್ವಡಾರ್ ಡಾಲಿ(Solvadar Dali), ಮ್ಯಾಕ್ಸ್ ಅರೆಸ್ಟ್ ಅವರಿಂದ ಈ ಶೈಲಿಯ ಉತ್ಕರ್ಷವಾಯಿತು.

ಕ್ರಿಸ್ತಶಕ ೧೯೩೭ರಲ್ಲಿ ಪ್ಯಾಬ್ಲೋ ಪಿಕಾಸೋನಿಂದ ಸ್ಪೇನದ ನಾಗರಿಕ ಯುದ್ಧದಲ್ಲಿ ಜರ್ಮನ್ ಫಿರಂಗಿಗಳಿಂದ ಗೆರ್ನಿಕಾ ಎಂಬ ನಗರ ಧ್ವಂಸಗೊಂಡಾಗ ಯಾತನೆಯ ಪ್ರತಿಕ್ರಿಯೆಗಳನ್ನು ಬಿಂಬಿಸುವ ವಿಶ್ವವಿಖ್ಯಾತ 'ಗೆರ್ನಿಕಾ(Guernica) ಚಿತ್ರದ ನಿರ್ಮಾಣ.

ಕ್ರಿಸ್ತಶಕ ೧೯೪೫ರ ನಂತರ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಅಮೂರ್ತ ಭಾವಪ್ರಕಟಣಾಪಂಥ(Abstract Expressionist) ಬೆಳವಣಿಗೆ.

ಕ್ರಿಸ್ತಶಕ ೧೯೫೬ರ ನಂತರ ಉತ್ತರ ಅಮೇರಿಕೆಯಲ್ಲಿ ಪಾಪ್ ಕಲೆ(Pop Art)ಯ ಪ್ರಾರಂಭ.

ಗ್ರಂಥ ಋಣ

1 ಕನ್ನಡ ವಿಶ್ವಕೋಶ ಸಂಪುಟ ೫ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ

2 ಅವಲೋಕನ, ಕನ್ನಡ ವಿಶ್ವ ಸಮ್ಮೇಳನದ ಸ್ಮಾರಕ ಗ್ರಂಥ

3 ಕರ್ನಾಟಕ ಪರಂಪರೆ ಸಂಪುಟ ೨

4 ಸಂಸ್ಕೃತಿಯ ವಿಶ್ವರೂಪ ಅ. ನ. ಕೃ.

5 ಭಾರತೀಯ ಕಲಾ ಪರಂಪರೆ ಸಂ. ಅ. ನ. ಕೃ.

6 ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಡಾ|| ಎಲ್. ತಿಪ್ಪೇರುದ್ರಸ್ವಾಮಿ

7 ಚಿತ್ರಕಲಾ ಪರಿಚಯ. ವಿ. ಟಿ. ಕಾಳೆ.

8 A Social, Cultural and Economic History of India, by P.N. Chopra, B. N. Puri, M. N. Das

9 South Indian Studies by H. M. Nayak and B. R. Gopal

10 The Classical Age History and Culture of the Indian People by R. C. Majumdar

11 Art of the World Stone age

12 Art of the world India by Hermann Geotz

13 Indian Painting byy Philip S. Rawson

14 Great Ages of Man History of World Cultures

15 Oxford Junior Encyclopedia 'The Arts'

16 Young Students Learning and Library

17 Oxford Children's Encyclopedia

18 Reader's Digest Book of Facts

19 Oxford Illustrated Encyclopedia the Arts

20 Time life library of Art Series (The World of Artists)

21 Encyclopedia of Britanica

22 Dictionary of Art and Artists by Peter and Linda Murray